ಹುಬ್ಬಳ್ಳಿ
ಬುಧವಾರ, 18 ಫೆಬ್ರವರಿ 2026
ಸಂಪುಟ 15, ಸಂಚಿಕೆ 331, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಛತ್ತೀಸ್‌ಗಢ: 22 ನಕ್ಸಲರ ಶರಣಾಗತಿ | 02
ಮಾ.19: ಅಯೋಧ್ಯೆಗೆ ರಾಷ್ಟ್ರಪತಿ | 02
ಟಿ20 ವಿಶ್ವಕಪ್‌ನಿಂದ ಆಸೀಸ್ ಔಟ್ | 09

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಶತಭಿಷೆ

ದಿನದ ಮಾತು

ನಮಗೆ ಇಷ್ಟವಾದುದನ್ನು ನಾವು ಸುಲಭವಾಗಿ ನಂಬುತ್ತೇವೆ.
▲ಲೋಕೋಕ್ತಿ

ಸ್ವರ್ಗ ಮತ್ತು ನರಕ ಲೋಕಗಳ ಕಲ್ಪನೆಯ ಹಿಂದಿನ ವಿಚಾರಗಳು

ಪದ ಸಂಚಲನ
◆ ಡಾ. ವಿಶ್ವನಾಥ ಸುಂಕಸಾಳ
◆ ಪುಟ 6

ಕಿರುಸುದ್ದಿ

ಬಾಂಗ್ಲಾ ಪ್ರಧಾನಿ ಆಗಿ ರೆಹಮಾನ್ ಪ್ರಮಾಣ

◆ **ಢಾಕಾ:** ಬಾಂಗ್ಲಾದ ನೂತನ ಪ್ರಧಾನಿಯಾಗಿ, ಮಾಜಿ ಪ್ರಧಾನಿ ಖಲೀದಾ ಜಿಯಾ ಅವರ ಪುತ್ರ, ಬಿಎನ್‌ಪಿ ನಾಯಕ ತಾರೀಖ್ ರೆಹಮಾನ್ ಮಂಗಳವಾರ



ಪ್ರಮಾಣವಚನ ಸ್ವೀಕರಿಸಿದರು. ಈ ಮೂಲಕ ಮುಹಮದ್ ಯೂನುಸ್ ನೇತೃತ್ವದ ಮಧ್ಯಂತರ ಸರಕಾರದಲ್ಲಿ ಕಳೆದ 18 ತಿಂಗಳು ಮೇರೆಮೀರಿದ್ದ ಅಲ್ಪಸಂಖ್ಯಾತ ಹಿಂದುಗಳ ಹತ್ಯೆಸಹಿತ ಹಿಂಸಾಚಾರ, ಅರಾಜಕತೆ, ರಾಜಕೀಯ ಅಸ್ಥಿರತೆಗೆ ಕೊನೆ ಬಿದ್ದಂತಾಗಿದೆ. ಬಾಂಗ್ಲಾದೇಶದ ಉನ್ನತ ರಾಜಕೀಯ ಮತ್ತು ಮಿಲಿಟರಿ ಅಧಿಕಾರಿಗಳ ಉಪಸ್ಥಿತಿಯಲ್ಲಿ, ಜತಿಯಾ ಸಂಸತ್‌ನ ಸೌತ್ ಪ್ಲಾಜಾದ ತೆರೆದ ಜಾಗದಲ್ಲಿ ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ, ಭಾರತದ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಭಾರತವನ್ನು ಪ್ರತಿನಿಧಿಸಿದ್ದರು. ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಜತೆಗಿದ್ದರು. ➡ಪುಟ 9

ರಾಹುಲ್ ವಿರುದ್ಧದ ಪ್ರಕರಣ ರದ್ದುಗೊಳಿಸಿದ ಹೈ

◆ **ಬೆಂಗಳೂರು:** ಕರ್ನಾಟಕ ವಿಧಾನಸಭೆ ಚುನಾವಣೆಗೂ ಮುನ್ನ ಅಂದಿನ ಬಿಜೆಪಿ ಸರ್ಕಾರದ ವಿರುದ್ಧ ಸರಣಿ ಆರೋಪಗಳನ್ನು ಮಾಡಿ ಕಾಂಗ್ರೆಸ್ ಜಾಹೀರಾತು ನೀಡಿದ್ದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಆರೋಪದ ಕುರಿತು ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ದಾಖಲಿಸಿದ್ದ ಮಾನಹಾನಿ ಪ್ರಕರಣವನ್ನು ಹೈಕೋರ್ಟ್ ಮಂಗಳವಾರ ರದ್ದುಪಡಿಸಿದೆ.
◆ ಪುಟ 9

ತಂತ್ರಜ್ಞಾನ ಬಲಪಡಿಸಲು ಫ್ರಾನ್ಸ್ ಸಚಿವ ಜತೆ ಚರ್ಚೆ

◆ ಪುಟ 3

ಭೂಕಬಳಿಕೆಯಲ್ಲಿ ಸರಕಾರವೇ ಮುಂದು: ಛಲವಾದಿ

◆ ಪುಟ 3



ಸ್ಮಾರ್ಟ್ ದೇಶಕ್ಕಾಗಿ ಸರ್ವಂ ಕಾಜಿ ಗ್ಲಾಸ್

◆ ಪುಟ 2
ಸುದ್ದಿ ಸಮಗ್ರ

ಉಭಯ ದೇಶಗಳ ಮಧ್ಯೆ ವಿಶೇಷ ವ್ಯೂಹಾತ್ಮಕ ಪಾಲುದಾರಿಕೆ | ವಾರ್ಷಿಕ 15 ಶತಕೋಟಿ ವ್ಯವಹಾರ

ಭಾರತ-ಫ್ರಾನ್ಸ್ ಹೂಡಿಕೆ ಬಂಧ

◆ **ಹೊಸದಿಲ್ಲಿ:** ಭಾರತ ಮತ್ತು ಫ್ರಾನ್ಸ್ ದೇಶಗಳು ಮಂಗಳವಾರ 'ವಿಶೇಷ ಜಾಗತಿಕ ವ್ಯೂಹಾತ್ಮಕ ಪಾಲುದಾರಿಕೆ'ಯನ್ನು ಹೊಂದುವ ಮೂಲಕ ತಮ್ಮ ಬಾಂಧವ್ಯಗಳನ್ನು ಇನ್ನಷ್ಟು ಎತ್ತರಕ್ಕೇರಿಸಿಕೊಂಡಿದ್ದು, ಈ ಮೂಲಕ ಉಭಯ ದೇಶಗಳ ನಡುವೆ ರಕ್ಷಣೆ, ವ್ಯಾಪಾರ ಮತ್ತು ನಿರ್ಣಾಯಕ ಖನಿಜಗಳಂತಹ ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರಕ್ಕೆ ವಿಶೇಷ ಆದ್ಯತೆ ನೀಡಲು ನಿರ್ಧರಿಸಲಾಗಿದೆ.

ಜಾಗತಿಕ ಭೌಗೋಳಿಕ ರಾಜಕೀಯ ಪ್ರಕ್ಷುಬ್ಧತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ಸವಾಲನ್ನು ಎದುರಿಸುವ ನಿಟ್ಟಿನಲ್ಲಿ 'ಜಾಗತಿಕ ಸ್ಥಿರತೆಯ ಶಕ್ತಿ'ಯಾಗಿ ತಮ್ಮ ದ್ವಿಪಕ್ಷೀಯ ಬಾಂಧವ್ಯ ಗಟ್ಟಿಗೊಳಿಸುವುದಾಗಿ ಭಾರತ ಮತ್ತು ಫ್ರಾನ್ಸ್ ಘೋಷಿಸಿವೆ. ಇದೇ



ವೇಳೆ, ಉಭಯ ದೇಶಗಳು 21 ಮಹತ್ವದ ಒಪ್ಪಂದಗಳಿಗೆ ಸಹಿ ಹಾಕಿದ್ದು, ವಾರ್ಷಿಕವಾಗಿ 15 ಬಿಲಿಯನ್ ಡಾಲರ್ ವ್ಯವಹಾರ ನಡೆಸುವ ಬೃಹತ್ ಒಪ್ಪಂದಗಳು ಇವಾಗಿವೆ.

ಇವು ನಿರ್ಣಾಯಕ ಖನಿಜಗಳು, ರಕ್ಷಣೆ, ಉನ್ನತ ತಂತ್ರಜ್ಞಾನ, ನವೀಕರಿಸಬಹುದಾದ ಇಂಧನ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿನ ಸಹಕಾರವನ್ನು ವರ್ಧಿಸುವ ಒಪ್ಪಂದಗಳಾಗಿವೆ. ಈ ಪೈಕಿ ಒಂದು ರಕ್ಷಣಾ ಸಹಕಾರ ಮತ್ತು ಭಾರತ್ ಇಲೆಕ್ಟ್ರಾನಿಕ್ ಲಿಮಿಟೆಡ್ ಮತ್ತು ಫ್ರೆಂಚ್ ರಕ್ಷಣಾ ದೈತ್ಯ ಸಾಫ್ರಾನ್ ನಡುವಣ ಜಂಟಿ ಉದ್ಯಮವೊಂದಕ್ಕೆ ಸಂಬಂಧಿಸಿದ್ದಾಗಿದೆ. ಈ ಯೋಜನೆಯಡಿ ಹ್ಯಾಮ್ಮರ್ ಕ್ಷಿಪಣಿಗಳನ್ನು ಭಾರತದಲ್ಲೇ ಉತ್ಪಾದಿಸಲು ಅವಕಾಶವಾಗಲಿದೆ. ಹಾಗೆಯೇ ಭಾರತೀಯ ಸೇನೆ ಮತ್ತು ಫ್ರಾನ್ಸ್‌ನ ಭೂ ಸೇನಾ ವ್ಯವಸ್ಥೆಗಳಲ್ಲಿ ಪರಸ್ಪರ ಅಧಿಕಾರಿಗಳನ್ನು ನಿಯೋಜಿಸುವ ಪ್ರತ್ಯೇಕ ಒಪ್ಪಂದವೊಂದಕ್ಕೂ ಸಹಿ ಮಾಡಲಾಯಿತು. ರಕ್ಷಣಾ ಸಂಗ್ರಹ, ಕೃತಕ ಬುದ್ಧಿಮತ್ತೆ, ಸ್ವಚ್ಛ ಇಂಧನ, ವ್ಯಾಪಾರ ಪಾಲುದಾರಿಕೆ ಸೇರಿವೆ. ಇಂಡೋ-ಫ್ರಾನ್ಸ್ ಸೆಂಟರ್ ಫಾರ್ ಎಐ ಇನ್ ಹೆಲ್ತ್, ಇಂಡೋ-ಫ್ರಾನ್ಸ್ ಸೆಂಟರ್ ಫಾರ್ ಡಿಜಿಟಲ್ ಸೈನ್ಸ್ ಅಂಡ್ ಟೆಕ್ನಾಲಜಿ, ನ್ಯಾಷನಲ್ ಸೆಂಟರ್ ಆಫ್ ಅಲಯನ್ಸ್ ಫಾರ್ ಸ್ಕಿಲ್ಲಿಂಗ್ ಇನ್ ಏರೋನ್ಯಾಟಿಕ್ಸ್‌ಗಳಿಗೂ ಉಭಯ ನಾಯಕರು ಈ ಸಂದರ್ಭ ಚಾಲನೆ ನೀಡಿದರು. ಮ್ಯಾಕ್ರಾನ್ 3 ದಿನಗಳ ಭಾರತ ಭೇಟಿಗಾಗಿ ಮುಂಬೈಗೆ ಆಗಮಿಸಿದ್ದು, ಅಲ್ಲೇ ಉಭಯ ನಾಯಕರು ಮಾತುಕತೆ ನಡೆಸಿದರು. ಜಗತ್ತು ಪ್ರಕ್ಷುಬ್ಧತೆ, ಅನಿಶ್ಚಿತತೆ ಎದುರಿಸುತ್ತಿರುವ ಈ ಸನ್ನಿವೇಶದಲ್ಲಿ ಭಾರತ-ಫ್ರಾನ್ಸ್‌ಗಳ ಪಾಲುದಾರಿಕೆಯು ಜಾಗತಿಕ ಸ್ಥಿರತೆಗಾಗಿ ಇರುವ ಶಕ್ತಿಯಾಗಲಿದೆ. ➡ಪುಟ 9



ಭಾರತ ಫ್ರಾನ್ಸ್‌ನ ಅತ್ಯಂತ ವಿಶ್ವಾಸಾರ್ಹ ಪಾಲುದಾರ

ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್ ಮಾತನಾಡಿ, ಭಾರತವು ಫ್ರಾನ್ಸ್‌ನ ಅತ್ಯಂತ ವಿಶ್ವಾಸಾರ್ಹ ಪಾಲುದಾರರಲ್ಲೊಂದಾಗಿದೆ. ನಮ್ಮ ಈ ಬಾಂಧವ್ಯ ರಾಫೇಲ್ ಯುದ್ಧ ವಿಮಾನಗಳಿಂದ ಹಿಡಿದು ಸಬ್‌ಮೆರೀನ್‌ಗಳವರೆಗೆ ನಮ್ಮ ರಕ್ಷಣಾ ಸಹಕಾರವನ್ನು ವಿಸ್ತರಿಸಿಕೊಳ್ಳುತ್ತಿದ್ದೇವೆ ಎಂದರು. ➡ಪುಟ 9

ಭಾರತ-ಯುರೋಪ್ ನಂಟಿಗೆ 2026 ಟರ್ನಿಂಗ್ ಪಾಯಿಂಟ್

ಭಾರತ-ಫ್ರಾನ್ಸ್ ಪಾಲುದಾರಿಕೆಗೆ ಮಿತಿಗಳಿಲ್ಲ. ಇದು ಆಳಸಮುದ್ರಗಳಿಂದ ಹಿಡಿದು ಅತ್ಯುನ್ನತ ಪರ್ವತೀಯ



ವ್ಯವಸ್ಥೆಯವರೆಗೆ ತಲುಪಬಹುದಾಗಿದೆ ಎಂದು ಮೋದಿ ಮಾರ್ಮಿಕವಾಗಿ ಹೇಳಿದರು. ರಷ್ಯಾ-ಉಕ್ರೇನ್ ಸಂಘರ್ಷ ಮತ್ತು ಪಶ್ಚಿಮ ಏಷ್ಯಾ ಹಾಗೂ ಇಂಡೋ-ಪೆಸಿಫಿಕ್‌ನಲ್ಲಿನ ಸನ್ನಿವೇಶವನ್ನು ಪ್ರಸ್ತಾವಿಸಿ, ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಕಾನೂನಿನ ಆಡಳಿತ ಮತ್ತು ಬಹುಧ್ರುವೀಯ ಜಗತ್ತಿನ ವ್ಯವಸ್ಥೆಯಲ್ಲಿ ನಂಬಿಕೆ ಹೊಂದಿದ್ದೇವೆ. ಎಲ್ಲ ಕಡೆ ಶಾಂತಿ ಸ್ಥಾಪನೆಯೆಡೆಗೆ ನಮ್ಮ ಕಾಳಜಿ, ಸಹಕಾರ ಇರುತ್ತದೆ. ಹಾಗೆಯೇ ಭಯೋತ್ಪಾದನೆಯ ಪಿಡುಗನ್ನು ಅದರ ಎಲ್ಲ ರೂಪ ಮತ್ತು ಅಭಿವ್ಯಕ್ತಿಗಳಲ್ಲಿ ನಿರ್ಮೂಲನೆಗೊಳಿಸುವಲ್ಲೂ ನಮ್ಮೀ ಹಂಚಿಕೆಯ ಬದ್ಧತೆ ಆಗಿದೆ. ಭಾರತ-ಯುರೋಪ್ ಬಾಂಧವ್ಯಕ್ಕೆ 2026 ಟರ್ನಿಂಗ್ ಪಾಯಿಂಟ್ ಆಗಿದ್ದು, ಇದಕ್ಕೆ ಭಾರತ- ಯುರೋಪ್ ನಡುವಣ ಮುಕ್ತ ವ್ಯಾಪಾರ ಒಪ್ಪಂದ ಮತ್ತು ಇಂದಿನ ಒಪ್ಪಂದಗಳೇ ಸಾಕ್ಷಿ ಎಂದರು ಮೋದಿ. ಈ ಸಂದರ್ಭ 'ಭಾರತ-ಫ್ರಾನ್ಸ್ ಈಯರ್ ಆಫ್ ಇನ್ನೋವೇಶನ್' ಯೋಜನೆಗೂ ಚಾಲನೆ ನೀಡಲಾಯಿತು.

ಜಾಗತಿಕವಾಗಿ ಭಾರತ ಎಐ ಸೂಪರ್‌ಪವರ್ ಆಗಲಿ

◆ **ಹೊಸದಿಲ್ಲಿ:** 2047ರ ವೇಳೆಗೆ ಭಾರತವು ಜಾಗತಿಕವಾಗಿ ಟಾಪ್-3 ಕೃತಕ ಬುದ್ಧಿಮತ್ತೆ (ಎಐ) ಸೂಪರ್ ಪವರ್

ಪ್ರಧಾನಿ ನರೇಂದ್ರ ಮೋದಿ ಆಶಯ, ಮಾನವ ಕೇಂದ್ರಿತ ಎಐ ಅಭಿವೃದ್ಧಿಗೆ ಒತ್ತು



ರಾಷ್ಟ್ರಗಳಲ್ಲಿ ಒಂದಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ದೃಢವಾದ ಆಶಯ ವ್ಯಕ್ತಪಡಿಸಿದರು. ರಾಷ್ಟ್ರ ರಾಜಧಾನಿಯಲ್ಲಿ ಆರಂಭವಾದ ಇಂಡಿಯಾ ಎಐ ಇಂಪ್ಯಾಕ್ಟ್ ಸಮ್ಮಿಟ್ 2026 ಸಂದರ್ಭ ಎಎನ್‌ಐಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ಸರ್ವಜನ ಹಿತಾಯ, ಸರ್ವಜನ ಸುಖಾಯ ಮಂತ್ರದಡಿ ಮಾನವ-ಕೇಂದ್ರಿತ ಎಐ ಅಭಿವೃದ್ಧಿಯ ಅಗತ್ಯವನ್ನು ಒತ್ತಿಹೇಳಿದರು. ಎಐನ ಲಾಭಗಳು ಕೆಲವರಿಗೆ ಮಾತ್ರ ಸೀಮಿತವಾಗದೇ, ಗ್ರಾಮ-ನಗರ, ಭಾಷಾ-ಸಾಮಾಜಿಕ ಎಲ್ಲ ವರ್ಗಗಳಿಗೂ ತಲುಪಬೇಕು ಎಂದರು. ◆ ವಿಶೇಷ ಪುಟ 2

ಕೋಲಾರದಲ್ಲಿ ಹೆಲಿಕಾಪ್ಟರ್ ಜೋಡಣಾ ಘಟಕಕ್ಕೆ ಸಚಿವ ರಾಜನಾಥ್ ಸಿಂಗ್ ಚಾಲನೆ

ಶೀಘ್ರದಲ್ಲೇ ಭಾರತ ಅತಿದೊಡ್ಡ ರಫ್ತುದಾರ



◆ **ಕೋಲಾರ:** ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಮಂಗಳವಾರ ಸಂಜೆ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಹಾಗೂ ಫ್ರಾನ್ಸ್‌ನ ಏರ್‌ಬಸ್ ಸಹಯೋಗದ ದೇಶದ ಮೊಟ್ಟ ಮೊದಲ ಹೆಲಿಕಾಪ್ಟರ್ ಜೋಡಣಾ ಘಟಕಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಆತ್ಮ ನಿರ್ಭರ್ ಯೋಜನೆಗಳ ಮೂಲಕ ಮಧ್ಯಮ ಹಾಗೂ ಸ್ಟಾರ್ಟ್ ಅಪ್ ಕೈಗಾರಿಕಾ ಘಟಕಗಳು ಸಾವಿರಾರು ಸಂಖ್ಯೆಯಲ್ಲಿ ಆರಂಭವಾಗಿದ್ದು, ರಕ್ಷಣಾ ಕ್ಷೇತ್ರದಲ್ಲಿ ಭಾರತವು ಅತಿ ದೊಡ್ಡ ರಫ್ತುದಾರ ದೇಶವಾಗಿ ಹೊರಹೊಮ್ಮುತ್ತಿದೆ ಎಂದರು.

> ನಮ್ಮ ಹೆಲಿಕಾಪ್ಟರ್ ಜೋಡಣಾ ಘಟಕದ ಮೊಟ್ಟ ಮೊದಲ ಹೆಲಿಕಾಪ್ಟರ್ 2027ರಲ್ಲಿ ಹಾರಾಟ ನಡೆಸಲಿದೆ.
> ■ ಸುಕರನ್ ಸಿಂಗ್, ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ವ್ಯವಸ್ಥಾಪಕ ನಿರ್ದೇಶಕ

ಏರೋಸ್ಪೇಸ್ ಕ್ಷೇತ್ರದಲ್ಲಿ ಸ್ವದೇಶಿ ಬೇಡಿಕೆಗಳನ್ನು ಈಡೇರಿಸುವುದರ ಜೊತೆಗೆ ಜಾಗತಿಕವಾಗಿ ಹಲವು ರಾಷ್ಟ್ರಗಳ ಬೇಡಿಕೆಗಳನ್ನು ಈಡೇರಿಸುವುದು ದೇಶದ ಗುರಿಯಾಗಿದೆ ಎಂದು ತಿಳಿಸಿದರು. ಸಾರ್ವಜನಿಕ ಉದ್ದಿಮೆಗಳ ಮೂಲಕವೇ ರಕ್ಷಣಾ ಕ್ಷೇತ್ರದ ಅಗತ್ಯಗಳನ್ನು ಪೂರೈಕೆ ಮಾಡಿಕೊಳ್ಳಲಾಗುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಖಾಸಗಿ ಸಂಸ್ಥೆಗಳು ರಕ್ಷಣಾ ಕ್ಷೇತ್ರಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸುತ್ತಿರುವುದು ಗಮನಾರ್ಹವಾಗಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು. ➡ಪುಟ 9

ಅಮಾನತು ಮಾಡುವಂತೆ ಚು. ಆಯುಕ್ತರಿಗೆ ಕೆಪಿಸಿಸಿ ಆಗ್ರಹ

ಬಿಎಲ್‌ಒಗಳಿಂದ ಮತಪಟ್ಟಿ ಅಕ್ರಮ

◆ **ಬೆಂಗಳೂರು:** ಮತಗಟ್ಟೆ ಅಧಿಕಾರಿಗಳು (ಬಿಎಲ್‌ಒ-ಬ್ಲಾಕ್ ಲೆವಲ್ ಆಫಿಸರ್) ಮತಪಟ್ಟಿ ಪರಿಷ್ಕರಣೆಯಲ್ಲಿ ಅಕ್ರಮ ಎಸಗುತ್ತಿದ್ದಾರೆ. ನಕಲಿ ಮತಗಳನ್ನು ಸೇರಿಸಿರುವ ಬಿಎಲ್‌ಒಗಳನ್ನು ಅಮಾನತುಗೊಳಿಸುವಂತೆ ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ನಾಯಕರ ನಿಯೋಗ ಮಂಗಳವಾರ ರಾಜ್ಯ ಚುನಾವಣಾ ಆಯೋಗದ ಆಯುಕ್ತರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದೆ.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಡಿ.ಕೆ. ಶಿವಕುಮಾರ್, ಬಿಎಲ್‌ಒಗಳು ಮತಪಟ್ಟಿಯಲ್ಲಿ ಅಕ್ರಮ ಎಸಗುತ್ತಿದ್ದಾರೆ. ಕಳೆದ ಬಾರಿ ಒಂದು ಕುಟುಂಬದ ಮತಗಳನ್ನು ಬೇರೆ ಬೇರೆ ಬೂತ್‌ಗಳಿಗೆ ಸೇರಿಸಲಾಗಿತ್ತು. ಮ್ಯಾಪಿಂಗ್ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಹೀಗಾಗಿ ಬಿಎಲ್‌ಒಗಳ ಜತೆಗೆ ರಾಜಕೀಯ ಪಕ್ಷಗಳ ಬಿಎಲ್‌ಎ(ಬ್ಲಾಕ್ ಲೆವಲ್ ಅಸಿಸ್ಟಂಟ್)ಗಳನ್ನು ಕರೆದುಕೊಂಡು ಹೋಗಿ ಪರಿಷ್ಕರಣೆ ಮಾಡಬೇಕು ಎಂದು ಒತ್ತಾಯಿಸಿದರು. ➡ಪುಟ 9



ಹೊಸದಾಗಿ ಮ್ಯಾಪಿಂಗ್ ಮಾಡಿ ಮತದಾರರ ಪಟ್ಟಿ ಸಿದ್ಧಪಡಿಸಿ

ನಾವು ಸ್ಥಳೀಯ ಸಂಸ್ಥೆ ಚುನಾವಣೆ ನಡೆಸುವ ಜವಾಬ್ದಾರಿಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ನೀಡಿದ್ದು, ಅವರು ತಮ್ಮ ಕೆಲಸ ಮಾಡುತ್ತಿದ್ದಾರೆ. ಹಿಂದೆ ಇದ್ದ ಮತದಾರರ ಪಟ್ಟಿ ಸರಿಯಿಲ್ಲ. ಮತ್ತೊಮ್ಮೆ ಮ್ಯಾಪಿಂಗ್ ಮಾಡಿ ಮತದಾರರ ಪಟ್ಟಿ ಸಿದ್ಧಪಡಿಸಲಿ. ➡ಪುಟ 9

ಫೆ.28ರಿಂದ ದ್ವಿತೀಯ ಪಿಯು, ಮಾ.18ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ

ಪಿಯು, ಎಸ್ಸೆಸ್ಸೆಲ್ಸಿ ವೇಳಾಪಟ್ಟಿ ಪ್ರಕಟ

◆ **ಬೆಂಗಳೂರು:** ಪ್ರಸಕ್ತ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ವೇಳಾಪಟ್ಟಿ ಪ್ರಕಟವಾಗಿದ್ದು, ಈ ವರ್ಷ ದ್ವಿತೀಯ ಪಿಯುಸಿ ಪರೀಕ್ಷೆಗೆ 7,10,363 ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 9,02,889 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ.

ಮಂಗಳವಾರ ನೃಪತುಂಗ ರಸ್ತೆಯ ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ, ಫೆ.28ರಿಂದ ಮಾ.17ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ-1 ಹಾಗೂ ಮಾ.18 ರಿಂದ ಏ.2 ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1 ಆರಂಭವಾಗಲಿದ್ದು, ಸುಗಮವಾಗಿ ಪರೀಕ್ಷೆ ನಡೆಯುವ ಉದ್ದೇಶದಿಂದ ಜಿಲ್ಲಾಧಿಕಾರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಪೊಲೀಸರೊಂದಿಗೆ ಸಭೆ ನಡೆಸಿ, ಅಂತಿಮ ತಯಾರಿ ಮಾಡಿಕೊಳ್ಳಲಾಗಿದೆ. ➡ಪುಟ 9



ಉಚಿತ ಸಾರಿಗೆ ಸೌಲಭ್ಯ

ವಿದ್ಯಾರ್ಥಿಗಳು ಯಾವುದೇ ತೊಂದರೆಯಿಲ್ಲದೆ ಪರೀಕ್ಷಾ ಕೇಂದ್ರಗಳನ್ನು ತಲುಪುವ ಉದ್ದೇಶದಿಂದ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಅವಧಿಯಲ್ಲಿ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಹಾಲ್ ಟಿಕೆಟ್ ತೋರಿಸಿ ಉಚಿತ ಪ್ರಯಾಣ ಸೌಲಭ್ಯ ಪಡೆಯಬಹುದಾಗಿದೆ. ➡ಪುಟ 9


ಅಪ್ರಾಪ್ತ ಯುವಕರಿಂದ ಕೃತ್ಯ | ಇಬ್ಬರು ಪೊಲೀಸ್ ವಶಕ್ಕೆ

ಹಿಂದುಗಳ ಮನೆ ಮೇಲೆ ಕಲ್ಲು ತೂರಾಟ

◆ **ಚಿಕ್ಕಮಗಳೂರು:** ನಗರದ ವಿಜಯಪುರ ಬಡಾವಣೆಯ ತಿಲಕ್ ಪಾರ್ಕ್ ಬಳಿ ಹಿಂದುಗಳ ಮನೆ ಮೇಲೆ ಮುಸ್ಲಿಂ ಹುಡುಗರು ಕಲ್ಲು ತೂರಿದ ಘಟನೆಯಿಂದ ಸೋಮವಾರ ರಾತ್ರಿ ನಗರ ಪ್ರಕ್ಷುಬ್ಧಗೊಂಡಿತ್ತು. ಕಲ್ಲು ತೂರಿದ ಇಬ್ಬರನ್ನು ಸ್ಥಳೀಯರೇ ಹಿಡಿದು ಥಳಿಸಿ ಪೊಲೀಸರಿಗೊಪ್ಪಿಸಿದ್ದರು. ಘಟನೆ ಖಂಡಿಸಿ ಹಿಂದುಪರ ಮುಖಂಡರು ಸಮುದಾಯದ ನೂರಾರು ಜನರು ಬಸವನಹಳ್ಳಿ ಪೊಲೀಸ್ ಠಾಣೆ ಬಳಿ ಜಮಾಯಿಸಿ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಇದೇ ವೇಳೆ ಮತ್ತೊಂದು ಕೋಮಿನ ಜನರು ಠಾಣೆಗೆ ಧಾವಿಸಿ ಹಲ್ಲೆ ನಡೆಸಿದ ಹಿಂದು ಯುವಕರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ➡ಪುಟ 9



ಕಲ್ಲು ತೂರಲ್ಪಟ್ಟ ನಗರದ ಸುಧಾ ಅವರ ಮನೆಗೆ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷ ಜಸಂತಾ ಅನಿಲ್ ಕುಮಾರ್ ಅವರ ನೇತೃತ್ವದ ತಂಡ ಭೇಟಿ ನೀಡಿ ಮನೆಯವರಿಗೆ ಧೈರ್ಯ ತುಂಬಿದರು.



ಇ-ಆಡಳಿತ ಕ್ರಮ | ಹಿಂದುಳಿದ ವರ್ಗಗಳ 5 ವರ್ಷ ಅವಧಿಯ ಅರ್ಜಿ

4 ಲಕ್ಷ ವಿದ್ಯಾರ್ಥಿವೇತನ ಅರ್ಜಿ ಅನರ್ಹ

▶ ನಂದಿನಿ ಎನ್.

◆ **ಬೆಂಗಳೂರು:** ಕಳೆದ ಐದು ವರ್ಷಗಳಲ್ಲಿ ಹಿಂದುಳಿದ ವರ್ಗಗಳ ಇಲಾಖೆ ವತಿಯಿಂದ ನೀಡುತ್ತಿರುವ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿದವರ ಪೈಕಿ ಬರೋಬ್ಬರಿ ನಾಲ್ಕು ಲಕ್ಷಕ್ಕೂ ಹೆಚ್ಚಿನ ಅರ್ಜಿಗಳು ವಿವಿಧ ಕಾರಣಗಳಿಗಾಗಿ ಅನರ್ಹಗೊಳಿಸಲಾಗಿದೆ ಎಂದು ಇಲಾಖೆ ತಿಳಿಸಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿವೇತನ ಕಾರ್ಯಕ್ರಮಗಳನ್ನು ಇ-ಆಡಳಿತ ಇಲಾಖೆಯು ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡುತ್ತಿದೆ. ಇವುಗಳನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಕಾರ್ಯಕ್ರಮಗಳ ಅಡಿಯಲ್ಲಿ ವಿದ್ಯಾರ್ಥಿಗಳ ಆಧಾರ್ ಸಂಖ್ಯೆಗೆ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತಿದೆ.

ಶುಲ್ಕ ಮರುಪಾವತಿಗೆ ಕ್ರಮ: ಕಳೆದ 5 ವರ್ಷಗಳಲ್ಲಿ ಶುಲ್ಕ ಮರು ಪಾವತಿ ಕಾರ್ಯಕ್ರಮದಲ್ಲಿ ಬಾಕಿ ಇರುವ ವಿದ್ಯಾರ್ಥಿಗಳಿಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ಶುಲ್ಕ ಮರು ಪಾವತಿ ಮಾಡಲು ಇಲಾಖೆ ಕ್ರಮ ವಹಿಸಿದೆ. ಹೀಗಾಗಿ ಹಿಂದಿನ ವರ್ಷಗಳಲ್ಲಿ ಬಾಕಿ ಇದ್ದ 1,26,202 ಅರ್ಹ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕೆ 133.44 ಕೋಟಿ ರೂ.ಗಳ ಶುಲ್ಕ ಮರು ಪಾವತಿ ಮಾಡಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕ್ರಮ ವಹಿಸಿದೆ. ➡ಪುಟ 9



ವಿದ್ಯಾರ್ಥಿವೇತನ ವಿಳಂಬಕ್ಕೆ ಕಾರಣ


ಇಲಾಖೆಯಿಂದ ನೀಡುವ ವಿದ್ಯಾರ್ಥಿವೇತನ ವಿಳಂಬಕ್ಕೆ ಹಲವು ಕಾರಣಗಳಿವೆ.

1. ವಿದ್ಯಾರ್ಥಿಗಳ ಶೈಕ್ಷಣಿಕ ದತ್ತಾಂಶದಲ್ಲಿರುವ ಹೆಸರಿಗೂ ಹಾಗೂ ಆಧಾರ್‌ನಲ್ಲಿರುವ ಹೆಸರಿಗೂ ವ್ಯತ್ಯಾಸವಿರುತ್ತದೆ.
2. ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಿರುವುದಿಲ್ಲ.
3. ವಿಶ್ವವಿದ್ಯಾಲಯಗಳಿಂದ ಶೈಕ್ಷಣಿಕ ದತ್ತಾಂಶ ಹಂಚಿಕೊಂಡಿರುವುದಿಲ್ಲ.
4. ಹೈಕೋರ್ಟ್ ಆದೇಶದಂತೆ 2023-24 ಮತ್ತು 2024-25ನೇ ಸಾಲುಗಳಿಗೆ ಆರ್ಥಿಕ ವರ್ಷ ಮುಕ್ತಾಯವಾದ ನಂತರವೂ ಅರ್ಜಿ ಸ್ವೀಕರಿಸಿರುವುದು.

ಸಚಿವ ಮಹದೇವಪ್ಪ ಹೇಳಿಕೆಗೆ ಡಿಕೆಶಿ, ಡಿಕೆಸು ತೀಕ್ಷ್ಣ ಪ್ರತಿಕ್ರಿಯೆ

ಕಟ್ಟಾ ಕಾಂಗ್ರೆಸಿಗರು ನಿಯತ್ತಿರುವವರು

◆ **ಬೆಂಗಳೂರು:** ನಾಯಕತ್ವ ಬದಲಾವಣೆ ಕುರಿತು ಮಾರ್ಮಿಕವಾಗಿ ಮಾತನಾಡಿರುವ ಸಚಿವ ಎಚ್.ಸಿ. ಮಹದೇವಪ್ಪ ಹೇಳಿಕೆಗೆ ಡಿ.ಕೆ. ಸಹೋದರರು ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ. ಮಹದೇವಪ್ಪ ಅವರು ಯಾರನ್ನು ಉಲ್ಲೇಖಿಸಿ ಈ ರೀತಿ ಹೇಳಿದ್ದಾರೆ ಎಂಬ ಮಾಹಿತಿ ಇಲ್ಲ. ಕಟ್ಟಾ ಕಾಂಗ್ರೆಸಿಗರು



ನಿಯತ್ತಿರುವವರು. ಕಟ್ಟಾ ಕಾಂಗ್ರೆಸಿಗರು ಋಣ ತೀರಿಸುವ ವ್ಯಕ್ತಿತ್ವ ಹೊಂದಿರುವವರು ಎಂದು ಪ್ರತಿಕ್ರಿಯಿಸಿದ್ದಾರೆ. ಬೇರೆಯವರು ನಮ್ಮ ಋಣ ತೀರಿಸುತ್ತಾರೋ ಇಲ್ಲವೋ ಗೊತ್ತಿಲ್ಲ, ಕಟ್ಟಾ ಕಾಂಗ್ರೆಸ್ಸಿಗರು ಋಣ ತೀರಿಸದೆ ಇರುವವರಲ್ಲ ಎಂದು ಡಿ.ಕೆ.ಸುರೇಶ್ ಹೇಳಿದ್ದಾರೆ.

ಸಮಯ ಬಂದಾಗ ತಿಳಿಯುತ್ತದೆ-ಡಿಸಿಎಂ: ನಾಯಕತ್ವ ವಿಚಾರವಾಗಿ ಈ ಹಿಂದೆ ಹೇಳಿರುವಂತೆ ನಾನು, ಸಿಎಂ, ಹೈಕಮಾಂಡ್ ಎಲ್ಲರೂ ಸೇರಿ ತೆಗೆದುಕೊಂಡಿರುವ ತೀರ್ಮಾನ. ➡ಪುಟ 9

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,60,000** (2,68,000) ಅಪರಂಜಿ ಚಿನ್ನ: **1,54,200** (1,55,440) ಆಭರಣ ಚಿನ್ನ: **1,41,350** (1,43,400) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **83,450** (173↑) ಎನ್‌ಎಸ್‌ಇ **25,725** (42↑)

$1 = ₹90.65

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ಇಂದು

ಹುಬ್ಬಳ್ಳಿ: ನಗರ ವಿಭಾಗದ ವ್ಯಾಪ್ತಿಯ ಉಪ ವಿಭಾಗ-2ರ ವ್ಯಾಪ್ತಿಯಲ್ಲಿ ತುರ್ತು ನಿರ್ವಹಣಾ ಕಾರ್ಯದ ನಿಮಿತ್ತ ಫೆ.18 ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಅಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆ ವರೆಗೆ ಮಂಟೂರು ಮುಖ್ಯ ರಸ್ತೆ, ಬ್ಯಾಳಿ ಪ್ಲಾಟ್, ಅಹಮ್ಮದ ನಗರ, ಮಿಲ್ಲತ ನಗರ, ಭಾರತಿನಗರ, ಕಸ್ತೂರಿಬಾಯಿ ನಗರ, ಎಫ್.ಸಿ.ಐ ಗೋಡೌನ್, ಮೈತ್ರಾ ಕಾಲೋನಿ, ನ್ಯಾಷನಲ್ ಟೌನ್. ಗುಂಜಾಲ್ ಪ್ಲಾಟ್, ಟಿಪ್ಪು ನಗರ, ಭಾಗಾರಪೇಟ, ಸದಾಶಿವ ನಗರ, ಶ್ರೀರಾಮ ನಗರ, ಕೆಇಬಿ ಸೊಸೈಟಿ ಪ್ಲಾಟ್, ಲಿಂಬುವಾಲಾ ಪ್ಲಾಟ್, ಶಿವಾಜಿ ಪ್ಲಾಟ್ , ಜನ್ನತ್ ನಗರ, ಕಲ್ಮೇಶ್ವರ ನಗರ,ಇಸ್ಲಾಂಪುರ, ಎನ್.ಎ. ನಗರ, ಅಲ್ತಾಫ್ ಪ್ಲಾಟ್ , ಇಸ್ಲಾಂಪುರ, ಕಾದ್ರಿಯ ಟೌನ್, ಇಬ್ರಾಹಿಂಪುರ ,ಕೊಪ್ಪಳ ಫ್ಯಾಕ್ಟರಿ , ಗೌಸಿಯಾ ನಗರ, ಗೌಸಿಯ್ ಟೌನ್ , ಕೊಳೆಕಾರ್ ಪ್ಲಾಟ್, ಸದರ ಸೋಫಾ , ಬ್ಯಾಹಟ್ಟಿ ಪ್ಲಾಟ್ , ಕಟಕರ್ ಓಣಿ, ಅಕ್ಕಿ ಪೇಟೆ, ಜಂಗ್ಲಿ ಪೇಟೆ, ಹಿರೇಪೇಟೆ ಕೃಷ್ಣಾಪುರ ಓಣಿ (1,2 ಕ್ರಾಸ್) ಇಸ್ಲಾಂಪುರನಲ್ಲಿ ಬರುವ ಎಲ್ಲ ಅವಲಕ್ಕಿ ಫ್ಯಾಕ್ಟರಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹೆಸ್ಕಾಂ ತಿಳಿಸಿದೆ.

ಯಾತ್ರೆ ಇಂದು

ಹುಬ್ಬಳ್ಳಿ: ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ್ ಉಳ್ಳಾಗಡ್ಡಿಮಠ ನೇತೃತ್ವದ ನುಡಿದಂತೆ ನಡೆದ ಕಾಂಗ್ರೆಸ್ ಯಾತ್ರೆ ಅಂಗವಾಗಿ ಫೆ.18 ರಂದು ಸಂಜೆ 5.15 ಗಂಟೆಗೆ ಅಕ್ಷಯ ಪಾರ್ಕ್ ಹತ್ತಿರದ ಪ್ರಿಯದರ್ಶಿನಿ ಕಾಲೋನಿ ಉದ್ಯಾನವನದಿಂದ ತುಳಜಾಭವಾನಿ ದೇವಸ್ಥಾನ ವರೆಗೆ ಯಾತ್ರೆ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರ್ಕಾರದ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ಪಾಲಗೊಳ್ಳಲಿದ್ದಾರೆ. ಪಾಲಿಕೆ ಸದಸ್ಯ ಸಂದೀಲ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಕಾಂಗ್ರೆಸ್ ಅಲ್ತಾಫ್ ಹಳ್ಳೂರ್ ಸೇರಿದಂತೆ ಪಾಲಿಕೆ ಸದಸ್ಯರು, ವಿವಿಧ ನಿಗಮ ಮಂಡಳಿಯ ನಿರ್ದೇಶಕರು, ಮುಂಚೂಣಿ ಘಟಕದ ಪದಾಧಿಕಾರಿಗಳು ಉಪಸ್ಥಿತರಿರಲಿದ್ದಾರೆ.

ಫೆ.20ಕ್ಕೆ ಸರ್ವಜ್ಞ ಜಯಂತಿ

ಧಾರವಾಡ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸಂತಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮ ಫೆ.20ರಂದು ಬೆಳಗ್ಗೆ 11ಕ್ಕೆ ನಗರದ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ ಹಮ್ಮಿಕೊಂಡಿದೆ.

ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಉದ್ಘಾಟಿಸಲಿದ್ದು, ಶಾಸಕ ಅರವಿಂದ ಬೆಲ್ಲದ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಸಭಾಪತಿ ಬಸವರಾಜ ಹೊರಟ್ಟಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಆದರ್ಶ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ನಂದೀಶ ಕಾಖಂಡಕಿ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಶಿಕ್ಷಣಕ್ಕೆ ಒತ್ತು ನೀಡಿ

ಧಾರವಾಡ: ವಿಶಿಷ್ಟಚೇತನ ಮಕ್ಕಳು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುವ ಜೊತೆಗೆ ಸರ್ಕಾರದ ಸೌಲಭ್ಯಗಳನ್ನು ಸದ್ಬಳಕೆಕೊಂಡು ಸಮಾಜದ ಮುಖ್ಯ ವಾಹಿನಿಗೆ ಬರಬೇಕು ಎಂದು ಶಿಕ್ಷಣ ಇಲಾಖೆಯ ಬಿಇಒ ಆರ್.ಆರ್.ಸದಲಗಿ ಸಲಹೆ ನೀಡಿದರು.

ನಗರದ ಸರ್ಕಾರಿ ಶಿಕ್ಷಕಿಯರ ತರಬೇತಿ ಸಂಸ್ಥೆಯಲ್ಲಿ ಮಂಗಳವಾರ ನಡೆದ ತಾಲೂಕು ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ವಿಶಿಷ್ಟಚೇತನ ಮಕ್ಕಳ ಸಬಲೀಕರಣಕ್ಕೆ ಶಾಲೆ-ಸಮುದಾಯ ಪಾತ್ರ ಕಾರ್ಯಗಾರ ಉದ್ಘಾಟಿಸಿ ಮಾತನಾಡಿದರು. ವಿಶಿಷ್ಟಚೇತನ ಮಕ್ಕಳಲ್ಲೂ ಬಹಳಷ್ಟು ಪ್ರತಿಭಾವಂತರಿದ್ದು, ಅವರಿಗೆ ಸೂಕ್ತ ಮಾರ್ಗದರ್ಶನ, ತರಬೇತಿ ಜೊತೆಗೆ ತಿಳುವಳಿಕೆ ನೀಡಬೇಕಿದೆ. ಅಂದಾಗ ಮಾತ್ರ ದಿವ್ಯಾಂಗರು ಕೂಡ ಸರ್ವ ರಂಗದಲ್ಲೂ ಯಶಸ್ಸು ಸಾಧಿಸಲಿದ್ದಾರೆ ಎಂದರು. ವೈದ್ಯೆ ಡಾ.ಸುಜಾತಾ ನಾಯಕ, ಕ್ಷೇತ್ರ ಸಮನ್ವಯಾಧಿಕಾರಿ ಕುಮಾರ ಕೆ.ಎಫ್. ಮಾತನಾಡಿದರು. ಫೋರ್ಥ್ ವೇವ್ ಫೌಂಡೇಶನ್ ಅಧ್ಯಕ್ಷ ಬಸವರಾಜ ಮ್ಯಾಗೇರಿ, ಪುಷ್ಪಾ ಮಾನೆ, ಗೋಪಾಲ ಹೊನ್ನಳ್ಳಿ, ಟಿಸಿಡಬ್ಲ್ಯು ಪ್ರಾಚಾರ್ಯ ಡಾ.ರವಿಕುಮಾರ ಬಾರಾಟಾಕ್ಕೆ, ಅಕ್ಷತಾ ಪೂಜಾರ, ಲಕ್ಷ್ಮೀ ಮಾಳಗಿ, ಪ್ರಭಾವತಿ ಕವಳಿ ಇತರರಿದ್ದರು.

ರಾಮಕೃಷ್ಣ ನಿಧನ



ಹುಬ್ಬಳ್ಳಿ: ವಿಶ್ವ ಕಲ್ಯಾಣದ ಸೇವೆಯಲ್ಲಿ ತಮ್ಮ ಪ್ರತಿ ಶ್ವಾಸ, ಸಂಕಲ್ಪ, ಸರ್ವಸ್ವವನ್ನೂ ಸಮರ್ಪಿಸಿದ ಹುಬ್ಬಳ್ಳಿಯ ಈಶ್ವರೀಯ ವಿಶ್ವ ವಿದ್ಯಾಲಯದ ಶಿವ ಸಮರ್ಪಿತ ರಾಜಯೋಗಿ ಬ್ರಹ್ಮಕುಮಾರ ರಾಮಕೃಷ್ಣ ಅಣ್ಣನವರು (80) ಶಿವೈಕ್ಯರಾದರು. ಅವರು ಹಲವು ದಿನಗಳಿಂದ ವಯೋಸಹಜ ಶಾರೀರಿಕ ಅಸ್ವಸ್ಥತೆಯ ಕಾರಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಸುಮಾರು 40 ವರ್ಷಗಳಿಂದ ಈಶ್ವರೀಯ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ನಿಧನಕ್ಕೆ ಹುಬ್ಬಳ್ಳಿ ವಲಯದ ಸಮಸ್ತ ಸಮರ್ಪಿತ ಶಿಕ್ಷಕಿ ಸೋದರಿಯರು, ಸಮರ್ಪಿತ ಅಣ್ಣಂದಿರು ಹಾಗೂ ಸಹಸ್ರಾರು ದೈವಿ ಸೋದರ-ಸೋದರಿಯರು ನಮನ ಸಲ್ಲಿಸಿದ್ದಾರೆ.

ಗುರುಸಿದ್ದಯ್ಯ ಹಿರೇಮಠ



ಹುಬ್ಬಳ್ಳಿ: ತಾಲೂಕಿನ ಬೊಮ್ಮಸಮುದ್ರದ ವೀರಶೈವ ಸಮಾಜದ ಹಿರಿಯ ಗುರುಸಿದ್ದಯ್ಯ ಚನ್ನಬಸಯ್ಯ ಹಿರೇಮಠ (80) ಸೋಮವಾರ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಬಳಗವಿದೆ.



ಧಾರವಾಡ: ಇಲ್ಲಿನ ಕರ್ನಾಟಕ ಕಾಲೇಜು ಆವರಣದಲ್ಲಿ ಫೆ.22ರಂದು ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಶ್ವಾನ ಪ್ರದರ್ಶನ, ಪೆಟ್ ಫ್ಯಾಶನ್ ಶೋ ಹಾಗೂ ಬೀದಿ ಮರಿಗಳ ದತ್ತು ಪಡೆಯುವ ಕಾರ್ಯಕ್ರಮದ ಬಿತ್ತಿಪತ್ರವನ್ನು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಬಿಡುಗಡೆಗೊಳಿಸಿದರು.

ನಿರಂತರ ಅಧ್ಯಯನದಿಂದ ಸಾಧನೆ ಸಾಧ್ಯ: ಕೋನರಡ್ಡಿ

ನವಲಗುಂದ: ನಗರದ ಸರ್ಕಾರಿ ಉರ್ದು ಪ್ರೌಢಶಾಲೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಹಾಗೂ 2024-25 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ ಜರುಗಿತು. ಈ ವೇಳೆ ಶಾಸಕ ಎನ್.ಎಚ್. ಕೋನರಡ್ಡಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಿರಂತರ ಅಧ್ಯಯನದಿಂದ ಉತ್ತಮ ಸಾಧ್ಯ ಎಂದರು. ಬಿಇಒ ಉಮೇಶ ಬೊಮ್ಮಕ್ಕನವರ ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯಲ್ಲಿ ಉರ್ದು ಮಾಧ್ಯಮದಲ್ಲಿ ದ್ವಿತೀಯ ಹಾಗೂ ತಾಲೂಕಿನಲ್ಲಿ ಪ್ರಥಮ ಸ್ಥಾನವನ್ನು ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಿದರು. ಎಸ್.ಡಿ.ಎಂ.ಸಿ ಅಧ್ಯಕ್ಷ ಖಾಜೇಸಾಬ್ ಹಂಚಿನಾಳ ಎಸ್‌ಎಸ್‌ಎಲ್‌ಸಿಯಲ್ಲಿ ತಾಲೂಕಿಗೆ ದ್ವಿತೀಯ ಸ್ಥಾನ ಪಡೆದ ರುಕ್ಸಾನಾ ಖಾಜೇಬಂದೆನವಾಜ ಕಲಬುರ್ಗಿ ವಿದ್ಯಾರ್ಥಿನಿಗೆ 2.5 ಗ್ರಾಂ ಬಂಗಾರದ ಚೈನ್ ಅನ್ನು ಬಹುಮಾನವಾಗಿ ನೀಡಿದರು. ವಿದ್ಯಾರ್ಥಿನಿ ತೆಹರೀನ ಖಾಜಿ ಹಾಗೂ ತೃತೀಯ ಸ್ಥಾನ ಪಡೆದ ಸಾದಿಯಾ ಆದೋಡಿಗೆ ಕ್ರಮವಾಗಿ 4100 ಹಾಗೂ 3100 ರೂ.ಗಳ ನಗದು ಬಹುಮಾನ ನೀಡಿದರು. ತಾಕಸಾಪ ಅಧ್ಯಕ್ಷ ಎ. ಬಿ. ಕೊಪ್ಪದ, ಎಸ್.ಡಿ.ಎಂಸಿ ಸದಸ್ಯರಾದ ರಿಯಾಜಅಹ್ಮದ ನಾಶಿಪುಡಿ, ದಾದಾಪೀರ ಬೇಪಾರಿ, ಅಂಜುಮನ್ ಅಧ್ಯಕ್ಷರಾದ ಅಲ್ಲಾಸಾಬ ಕಲಕುಟ್ಟಿ, ಶಿರಾಜ ಧಾರವಾಡ, ಹುಸೇನಸಾಬ ಜಮಖಾನ, ಮೋದಿನಸಾಬ ಶಿರೂರ ಮೆಹಬೂಬಸಾಬ ಶಬಾಸಖಾನ, ಅಮ್ಮದಉಲ್ಲಾ ಮಕಾನದಾರ, ಶೈನಾಜಬಿ ಜಮಾದಾರ, ರಜಿಯಾಬಾನು ದೇವರಿಡು, ಮೈನುದ್ದಿನ ಧಾರವಾಡ, ಅಕೀಲ ಮಕಾನದಾರ, ಮಹುಮದ ಶಿರಾಜ ಶಿರಕೋಳ, ಶಿರಾಜ ಧಾರವಾಡ, ಶರೀಫಸಾಬ ಕಲಬುರ್ಗಿ, ಮುಖ್ಯೋಪಾಧ್ಯಾಯ ಆನಂದ ಭೋವಿ ಇತರರಿದ್ದರು.



ನವಲಗುಂದ: ನಗರದ ಸರ್ಕಾರಿ ಉರ್ದು ಪ್ರೌಢ ಶಾಲೆ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಹಾಗೂ 2024-25 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ ಜರುಗಿತು.

ಸಂಚಾರ ನಿಯಮ ಉಲ್ಲಂಘನೆ | ವರ್ಷಕ್ಕೆ ಮೂರು ಬಾರಿ ಹರಾಜು

ಆರ್‌ಟಿಒ: 111 ವಾಹನಗಳ ಹರಾಜು

▸ ವಿಜಯಕುಮಾರ ಬೆಳ್ಳೇರಿಮಠ



ಹುಬ್ಬಳ್ಳಿ: ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನಿರಂತರ ಕಾರ್ಯಾಚರಣೆ ನಡೆಯುತ್ತಿದ್ದಾರೆ. 2025 ರಲ್ಲಿ 120ಕ್ಕೂ ಹೆಚ್ಚು ವಾಹನಗಳ ಜಪ್ತಿ ಮಾಡಿದ್ದು, ಅದರಲ್ಲಿ 111 ವಾಹನಗಳ ಹಾರಜು ಮಾಡಿ 25,88,500 ರೂ. ಆದಾಯ ಸಂಗ್ರಹಿಸಿದ್ದಾರೆ. ಒಂದೇ ವರ್ಷದಲ್ಲಿ ಮೂರು ಬಾರಿ ಹರಾಜು ಪ್ರಕ್ರಿಯೆ ನಡೆಸಿ ದಾಖಲೆ ಮಾಡಿದ ಹೆಗ್ಗಳಿಕೆಗೆ ಧಾರವಾಡ ಪೂರ್ವ ವಿಭಾಗದ ಪ್ರಾದೇಶಿಕ ಸಾರಿಗೆ ಕಚೇರಿ ಪಾತ್ರವಾಗಿದೆ.

ಸದೃಢ ಪ್ರಮಾಣ ಪತ್ರ(ಫಿಟ್‌ನೆಸ್ ಸರ್ಟಿಫಿಕೆಟ್) ಇಲ್ಲದಿರುವುದು, ವಿಮೆ, ವಾಯು ಮಾಲಿನ್ಯ, ಶಬ್ದ ಮಾಲಿನ್ಯ, ವಾಹನ ಪರವಣಿಗೆ ಇಲ್ಲದಿರುವ ಸೇರಿದಂತೆ ಮೋಟರು ವಾಹನ ಕಾಯ್ದೆ ಉಲ್ಲಂಘಿಸುವ ವಾಹನಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ. ಇಷ್ಟಾದರೂ ಸಂಚಾರ ನಿಯಮ ಉಲ್ಲಂಘನೆಗೆ ಕಡಿವಾಣ ಹಾಕಲು ಸಾಧ್ಯವಾಗದಿರುವುದು ದುರಾದೃಷ್ಟ ಸಂಗತಿ.

2021 ರಲ್ಲಿ 61 ವಾಹನಗಳ ಹರಾಜು ಮಾಡಲಾಗಿದ್ದು, 9.77ಲಕ್ಷ ರೂ. ಆದಾಯ ಸಂಗ್ರಹಿಸಲಾಗಿದೆ. 2022 ರಲ್ಲಿ 40 ವಾಹನಗಳ ಹರಾಜು ಪ್ರಕ್ರಿಯೆ ಮಾಡಲಾಗಿದ್ದು, 5.42 ಲಕ್ಷ ಹಾಗೂ 2023 ರಲ್ಲಿ 17 ವಾಹನ, 4.74 ಲಕ್ಷ ರೂ. ಆದಾಯ ಸಂಗ್ರಹವಾಗಿದೆ. ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳ ವಿರುದ್ಧ ನಿರಂತರ ಕಾರ್ಯಾಚರಣೆ ನಡೆಸಲಾಗುತ್ತಿದೆ. ಜಪ್ತಿ ಮಾಡಿದ ವಾಹನಗಳನ್ನು ಅಗತ್ಯ ದಾಖಲೆಗಳನ್ನು ನೀಡಿ 7 ದಿನಗಳಲ್ಲಿ ಬಿಡಿಸಿಕೊಳ್ಳಲು ಅವಕಾಶ ನೀಡಲಾಗುತ್ತದೆ. ಬಹುತೇಕರು ದಾಖಲೆಗಳನ್ನು ಹೊಂದಿರುವುದಿಲ್ಲ, ಅಂತಹ ವಾಹನಗಳನ್ನು ಕಾನೂನಿನ ಪ್ರಕಾರ ನ್ಯಾಯಾಲಯದ ಅನುಮತಿ ಪಡೆದು ಹರಾಜು ಪ್ರಕ್ರಿಯೆ ನಡೆಸಲಾಗುತ್ತದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಯೊಬ್ಬರು ತಿಳಿಸಿದರು.

» ಹೊರ ರಾಜ್ಯಗಳಲ್ಲಿ ನೋಂದಣಿಯಾದ ವಾಹನಗಳು ಜಿಲ್ಲೆಯಲ್ಲಿ ಓಡಾಡುತ್ತಿದ್ದು, ಅಂತಹ ವಾಹನಗಳು ಕರ್ನಾಟಕದಲ್ಲಿ ನೋಂದಣಿಯಾಗದೆ ಇದ್ದಲ್ಲಿ ಅವುಗಳ ಸೀಜ್(ಮುಟ್ಟುಗೋಲು)

» ಮಹಾರಾಷ್ಟ್ರ, ಗೋವಾ ಹಾಗೂ ಇತರ ರಾಜ್ಯಗಳಲ್ಲಿ ತೆರಿಗೆ ಕಡಿಮೆ ಇದ್ದು, ಅಲ್ಲಿಂದ ವಾಹನಗಳನ್ನು ಖರೀದಿಸಿ ನೋಂದಣಿ ಮಾಡಿಕೊಂಡು ನಮ್ಮ ರಾಜ್ಯಗಳಲ್ಲಿ ವಾಹನಗಳು ಓಡಾಡುತ್ತಿವೆ

» ಅಂತಹ ವಾಹನಗಳು ರಾಜ್ಯದಲ್ಲಿ ನೋಂದಣಿ ಕಡ್ಡಾಯ

289 ವಾಹನ ಜಪ್ತಿ

ಧಾರವಾಡ ಪೂರ್ವ ವಿಭಾಗದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು 2023ರಿಂದ 2026 ರ ವರೆಗೆ 1632 ಪ್ರಕರಣಗಳನ್ನು ದಾಖಲಿಸಿಕೊಂಡು 8,39,02745 ರೂ. ದಂಡ ವಸೂಲಿ ಮಾಡಿದ್ದಾದ್ದು, 289 ವಾಹನಗಳ ಜಪ್ತಿ ಮಾಡಿದ್ದಾರೆ.

ನಿಯಮ ಉಲ್ಲಂಘನೆ ಸಲ್ಲ

ಸರಕು ವಾಹನಗಳು, ಆಟೋ ರೀಕ್ಷಾ, ಹೊರರಾಜ್ಯ ಖಾಸಗಿ ಬಸ್, ಮ್ಯಾಕ್ಸಿ ಕ್ಯಾಬ್‌ಗಳು, ಸರಕು ವಾಹನಗಳು, ಓಮ್ನಿ ಬಸ್, ಸರ್ಕಾರಿ ವಾಹನಗಳ ಮೇಲೆಯೂ ಕಾರ್ಯಾಚರಣೆ ಕೈಗೊಳ್ಳುವ ಮೂಲಕ ಪ್ರಕರಣ ದಾಖಲಿಸಿ, ದಂಡ ವಿಧಿಸಲಾಗುತ್ತಿದೆ. ಆಟೋ ರಿಕ್ಷಾ ಚಾಲಕರು ಹೆಚ್ಚಿನ ಪ್ರಯಾಣಿಕರ, ಸರಕು ವಾಹನ ಮಾಲೀಕರು ಜಾಸ್ತಿ ವಸ್ತುಗಳನ್ನು ವಾಹನದಲ್ಲಿ ಹಾಕುವಂತಿಲ್ಲ. ಅಂತವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಧಾರವಾಡ ಪೂರ್ವ ವಿಭಾಗ ಪ್ರಾದೇಶಿಕ ಸಾರಿಗೆ ಅಧಿಕಾರಿ ಶ್ರೀಕಾಂತ ಬಡಿಗೇರ ತಿಳಿಸಿದರು.

ಇಂದಿನಿಂದ ಛತ್ರಪತಿ ಶಿವಾಜಿ ಜಯಂತ್ಯುತ್ಸವ



ಧಾರವಾಡ: ಮರಾಠಾ ವಿದ್ಯಾಪ್ರಸಾರಕ ಮಂಡಳದ ವತಿಯಿಂದ ಛತ್ರಪತಿ ಶಿವಾಜಿ ಮಹಾರಾಜರ 399ನೇ ಜಯಂತ್ಯುತ್ಸವ ಫೆ.18 ಮತ್ತು 19ರಂದು ಮಂಡಳದ ಆವರಣದಲ್ಲಿ ಹಮ್ಮಿಕೊಂಡಿದೆ ಎಂದು ಮಂಡಳದ ಅಧ್ಯಕ್ಷ ಮನಹೋರ ಮೋರೆ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಫೆ.18ರ ಬೆಳಗ್ಗೆ 9 ಗಂಟೆಗೆ ರಕ್ತದಾನ ಶಿಬಿರ, ಸಂಜೆ 4 ಗಂಟೆಗೆ ರಂಗೋಲಿ ಸ್ಪರ್ಧೆ, ಫೆ.19ರಂದು ಬೆಳಗ್ಗೆ 11 ಗಂಟೆಗೆ ಚಿಕ್ಕಮಕ್ಕಳಿಂದ ವೇಷಭೂಷಣ ಸ್ಪರ್ಧೆ ಏರ್ಪಡಿಸಲಾಗಿದೆ. ಫೆ.19ರ ಬೆಳಗ್ಗೆ 6ಕ್ಕೆ ಗಣ ಹೋಮ, ಬೆಳಗ್ಗೆ 8.30ಕ್ಕೆ ಜಯಂತ್ಯುತ್ಸವ ಸಮಿತಿಯ ಅಧ್ಯಕ್ಷ ಮೋಹನ ಖೇಮಕರ ಗೌರವ ಉಪಸ್ಥಿತಿಯೊಂದಿಗೆ ಮಂಡಳದ ಅಧ್ಯಕ್ಷ ಮನೋಹರ ಮೋರೆ ಅವರು, ಭಗವಾ ಧ್ವಜಾರೋಹಣ ನೆರವೇರಿಸಲಿದ್ದಾರೆ ಎಂದು ಹೇಳಿದರು.

ಬೆಳಗ್ಗೆ 9ಕ್ಕೆ ಶಿವಾಜಿ ವೃತ್ತದಲ್ಲಿ ಕೇಂದ್ರ ಆಹಾರ ಇಲಾಖೆ ಸಚಿವ ಪ್ರಹ್ಲಾದ್ ಜೋಶಿ ಛತ್ರಪತಿ ಶಿವಾಜಿ ಮಹಾರಾಜರ ಪುತ್ಥಳಿಗೆ ಮಾಲಾರ್ಪಣೆ, ಭಗವಾ ಧ್ವಜಾರೋಹಣ ನೆರವೇರಿಸಲಿದ್ದು, ಮಂಡಳದ ಕಾರ್ಯಾಧ್ಯಕ್ಷ ಸುನೀಲ ಮೋರೆ ಪಾಲ್ಗೊಳ್ಳಲಿದ್ದಾರೆ ಎಂದರು.

ಬೆಳಗ್ಗೆ 9ಕ್ಕೆ ಶಾಸಕರಾದ ಅರವಿಂದ ಬೆಲ್ಲದ, ವಿನಯ ಕುಲಕರ್ಣಿ, ಪಾಲಿಕೆ ಸದಸ್ಯ ಡಾ.ಮಯೂರ ಮೋರೆ, ಶಂಕರ ಶೇಳಕೆ, ಪ್ರಕಾಶ ಘಾಟಗೆ, ಪಿಟಿಎಸ್ ಪ್ರಾಚಾರ್ಯ ಮಹಾದೇವಪ್ಪ ಯಾದವಾಡ ಶಿವಾಜಿ ಪುತ್ಥಳಿಗೆ ಮಾಲಾರ್ಪಣೆ ಮಾಡಲಿದ್ದಾರೆ. ಬೆಳಗ್ಗೆ 10ಕ್ಕೆ ಮುತ್ತೈದೆಯರಿಂದ ಬಾಲಶಿವಾಜಿ ತೊಟ್ಟಿಲು ಸೇವೆ ಮತ್ತು ಬಾಲಶಿವಾಜಿ ನಾಮಕರಣದ ಬಳಿಕ ಬೆಳಗ್ಗೆ 11ಕ್ಕೆ ಜಿಲ್ಲಾಡಳಿತ ಮತ್ತು ಕನ್ನಡ-ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ನಡೆಯಲಿದೆ. ಮಧ್ಯಾಹ್ನ 3ಕ್ಕೆ ವಾದ್ಯ ಮೇಳದೊಂದಿಗೆ ಛತ್ರಪತಿ ಶಿವಾಜಿ ಮಹಾರಾಜರ ಭವ್ಯ ಮೆರವಣಿಗೆಗೆ ಉಸ್ತುವಾರಿ ಸಚಿವ ಸಂತೋಷ ಲಾಡ್, ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷೆ ಶಿವಲೀಲಾ ಕುಲಕರ್ಣಿ ಚಾಲನೆ ನೀಡಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಉತ್ಸವ ಸಮಿತಿ ಅಧ್ಯಕ್ಷ ಮೋಹನ ಖೇಮಕರ, ಮಂಡಳದ ಕಾರ್ಯಾಧ್ಯಕ್ಷ ಸುನೀಲ ಮೋರೆ, ಗೌರವ ಕಾರ್ಯದರ್ಶಿ ರಾಜು ಬಿರಜೆನವರ, ಸಹಕಾರ್ಯದರ್ಶಿ ರಾಜು ಕಾಳೆ, ನಿರ್ದೇಶಕರಾದ ಸುಭಾಷ ಶಿಂಧೆ, ಮಲ್ಲೇಶಪ್ಪ ಶಿಂಧೆ, ಶಿವಾಜಿ ಸೂರ್ಯವಂಶಿ, ಮಹೇಶ ಶಿಂಧೆ ಇದ್ದರು.

ಅಳ್ನಾವರ ಅಭಿವೃದ್ಧಿಗೆ ನೀಲನಕ್ಷೆ ರೂಪಿಸಿ: ಸ್ನೇಹಲ್

ಧಾರವಾಡ / ಅಳ್ನಾವರ: ಅಳ್ನಾವರ ತಾಲೂಕಿಗೆ ಮೂಲ ಸೌಕರ್ಯಗಳ ಉನ್ನತೀಕರಣಕ್ಕೆ ಆದ್ಯತೆ ನೀಡುವ ಜೊತೆ ಸಮಗ್ರ ಅಭಿವೃದ್ಧಿಗೆ ನೀಲನಕ್ಷೆ ರೂಪಿಸಲು ಜಿಲ್ಲಾಧಿಕಾರಿ ಸ್ನೇಹಲ್ ರಾಯಮಾನೆ ಸೂಚಿಸಿದರು.

ಅಳ್ನಾವರ ಪಟ್ಟಣದ ಉಮಾಮಹೇಶ್ವರ ಭವನದಲ್ಲಿ ಮಂಗಳವಾರ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ, ಅಭಿವೃದ್ಧಿಗೆ ಇಲಾಖೆಗಳ ಸಮನ್ವಯ ಬಹಳಷ್ಟು ಅತ್ಯಗತ್ಯ. ಅಳ್ನಾವರ ತಾಲೂಕಿನ ಅಭಿವೃದ್ಧಿಗೆ ವಿವಿಧ ಕಾಮಗಾರಿ ಪ್ರಗತಿಯಲ್ಲಿದ್ದು, ಅವುಗಳ ವೇಗ ಹೆಚ್ಚಿಸಲು ಸೂಚಿಸಲಾಗಿದೆ. ಅಳ್ನಾವರ ಪಟ್ಟಣದ ಹಿರೇಕರೆ ಒತ್ತುವರಿ ತೆರವುಗೊಳಿಸಬೇಕು. ಕೆರೆಯ ಅಂಗಳದ ಬೆಳೆದ ಅಂತರಗಂಗೆ ಮತ್ತು ಮುಳ್ಳಿನ ಗಿಡಗಂಟೆಗಳನ್ನು ತೆಗೆದು ಸ್ವಚ್ಛಗೊಳಿಸುವಂತೆ ನಿರ್ದೇಶನ ನೀಡಿದರು. ಹಿರೇಕರೆಯ ಪ್ರದೇಶವನ್ನು ಜನರಿಗೆ ಅನುಕೂಲವಾಗುವಂತೆ ಅಭಿವೃದ್ಧಿಪಡಿಸಬೇಕು. ನೀರು ಸಂಗ್ರಹ ಸಾಮರ್ಥ್ಯ ಹೆಚ್ಚಿಸುವ ಜೊತೆಗೆ ಪರಿಸರ ಸಂರಕ್ಷಣೆಗೂ ಆದ್ಯತೆ ಸಹ ನೀಡುವಂತೆ ಹೇಳಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು, ಸಿಬ್ಬಂದಿ ಕೊರತೆ ನೀಗಿಸಲು ಶೀಘ್ರದಲ್ಲೇ ವೈದ್ಯರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿ, ಗ್ರಾಮೀಣ ಜನರಿಗೆ ಆರೋಗ್ಯ ಸೇವೆ ಕೂಡ ನೀಡುವುದಾಗಿ ಹೇಳಿದರು. ಜನರಿಂದ ಬಂದ ಅಹವಾಲು ಇಲಾಖೆವಾರು ವಿಂಗಡಿಸಿ, ಸಂಬಂಧಪಟ್ಟ ಅಧಿಕಾರಿಗೆ ಸ್ಪಷ್ಟ ನೀಡಿ ನೀಡುವುದಾಗಿ ಹೇಳಿ, ನಿಗದಿತ ಅವಧಿಯಲ್ಲಿ ಉತ್ತರ ಮತ್ತು ಕ್ರಮವೂ ಕೈಗೊಳ್ಳಲು ಸೂಚಿಸಿದರು. ಅಳ್ನಾವರ ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ ನಾಗರಿಕರು, ಕುಡಿಯುವ ನೀರು, ರಸ್ತೆ, ಆಸ್ಪತ್ರೆ ಸೌಲಭ್ಯ, ಭೂದಾಖಲೆ, ಮನೆ ಹಂಚಿಕೆ, ವಿದ್ಯುತ್ ಸಮಸ್ಯೆಗಳ ಬಗ್ಗೆ ಮನವಿ ಸಲ್ಲಿಸಿದರು. ಅಳ್ನಾವರ ಪ್ರಭಾರ ತಹಶೀಲ್ದಾರ್ ಡಾ. ಡಿ.ಎಚ್.ಹೂಗಾರ, ಹನುಮಂತ ಕೊಚ್ಚರಗಿ, ಸಂಪತಕುಮಾರ ಒಡೆಯರ, ಗುರು ಸುಣಗಾರ, ಡಾ. ಕೆ.ಎನ್.ತನುಜಾ, ಸಂತೋಷ ತಳಕಲ್ಲ ಇತರರಿದ್ದರು.

> ಅಳ್ನಾವರ ಪಟ್ಟಣದ ಹಿರೇಕರೆ ವ್ಯಾಪ್ತಿ, ಗಡಿ ಹಾಗೂ ಭೂದಾಖಲೆ ಮರುಪರಿಶೀಲಿಸಿ ನಿಖರ ವರದಿ ನೀಡಬೇಕು. ಗ್ರಾಮಸ್ಥರಿಗೆ ಹಾಗೂ ಕೃಷಿಕರಿಗೆ ಅನುಕೂಲವಾಗುವಂತೆ ಕರೆ ಪ್ರದೇಶ ಅಭಿವೃದ್ಧಿಪಡಿಸಬೇಕು.
> ■ ಸ್ನೇಹಲ್ ಆರ್., ಜಿಲ್ಲಾಧಿಕಾರಿ



200ರಿಂದ250 ಆಟೋ ರಿಕ್ಷಾಗಳ ಉಚಿತ ಸೇವೆಗೆ ಚಾಲನೆ



ಹುಬ್ಬಳ್ಳಿ: ಉತ್ತರ ಕರ್ನಾಟಕ ಆಟೋರಿಕ್ಷಾ ಚಾಲಕರ ಸಂಘದ ಸಯೋಗದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಸಿದ್ಧಾರೂಢ ಅಜ್ಜನವರ ಜಾತ್ರೆಯ ಸಂದರ್ಭದಲ್ಲಿ 200 ರಿಂದ 250 ಆಟೋರಿಕ್ಷಾಗಳ ಉಚಿತ ಸೇವೆಗೆ ಆಟೋರಿಕ್ಷಾ ಚಾಲಕರ ಸಂಘದ ರಾಜ್ಯಾಧ್ಯಕ್ಷ ಶೇಕರಯ್ಯ ಮಠಪತಿ, ಹುಬ್ಬಳ್ಳಿ ಧಾರವಾಡ ಟ್ರಾಫಿಕ್ ಡಿಸಿಪಿ ರವಿಶ್ ಸಿಆರ್, ಮಹಾನಗರ ಪಾಲಿಕೆ ಸದಸ್ಯ ನಾಗರಾಜ್ ಗೌರಿ, ವಿಎಕೆ ಫೌಂಡೇಶನ್ ಅಧ್ಯಕ್ಷ ವೆಂಕಟೇಶ್ ಕಾಟವೆ ಚಾಲನೆ ನೀಡಿದರು.

ಇಂಡಿ ಪಂಪ್ ಹತ್ತಿರದ ಬಾಬಾ ಸಾಹೇಬ್ ಅಂಬೇಡ್ಕರ್ ಕ್ರೀಡಾಂಗಣದಿಂದ ಆರಂಭವಾದ ಈ ಸೇವೆ ಭಕ್ತರ ಅನುಕೂಲಕ್ಕಾಗಿ ಕೈಗೊಳ್ಳಲಾದ ಮಹತ್ವದ ಉಪಕ್ರಮವಾಗಿದೆ ಎಂದು ರಾಜ್ಯಾಧ್ಯಕ್ಷ ಶೇಖರಯ್ಯ ಮಠಪತಿ ತಿಳಿಸಿದರು.

ಇದೇ ವೇಳೆ ಮಾತನಾಡಿದ ವಿಎಕೆ ಫೌಂಡೇಶನ್ ಅಧ್ಯಕ್ಷ ವೆಂಕಟೇಶ್ ಕಾಟವೆ ಅವರು, ಸಿದ್ಧಾರೂಢ ಅಜ್ಜನವರ ಜಾತ್ರೆ ಕೇವಲ ಒಂದು ಆಚರಣೆ ಮಾತ್ರವಲ್ಲ, ಅದು ಭಕ್ತಿ, ಸೇವೆ ಮತ್ತು ಮಾನವೀಯತೆಯ ಸಂದೇಶವನ್ನು ಸಾರುವ ಮಹೋತ್ಸವವಾಗಿದೆ.

ಈ ಪವಿತ್ರ ಸಂದರ್ಭದಲ್ಲಿ ಆಟೋರಿಕ್ಷಾ ಚಾಲಕರ ಸಂಘದ ಸಹಕಾರದಿಂದ ಉಚಿತ ಸೇವೆಯನ್ನು ಪ್ರಾರಂಭಿಸಿರುವುದು ಸಮಾಜದಲ್ಲಿ ಪರಸ್ಪರ ಸೇವಾ ಮನೋಭಾವವನ್ನು ಹೆಚ್ಚಿಸುವ ಕಾರ್ಯವಾಗಿದೆ. ಭಕ್ತರು ಯಾವುದೇ ತೊಂದರೆಯಿಲ್ಲದೆ ದೇವರ ದರ್ಶನ ಪಡೆಯಲು ಈ ಸೇವೆ ನೆರವಾಗಲಿದೆ. ಸೇವೆಯೇ ಸತ್ಯ ಧರ್ಮ ಎಂಬ ಅಜ್ಜನವರ ಸಂದೇಶವನ್ನು ನಾವು ಎಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇಂತಹ ಸಮಾಜಮುಖಿ ಕಾರ್ಯಗಳಿಗೆ ಸದಾ ನಾವು ಬೆಂಬಲವಾಗಿ ನಿಲ್ಲುತ್ತೇವೆ. ಈ ಉಪಕ್ರಮ ಭಕ್ತರ ಮನಗಳಲ್ಲಿ ಸಂತೋಷ ಮತ್ತು ಕೃತಜ್ಞತೆಯನ್ನು ಮೂಡಿಸಿ, ಜಾತ್ರೆಯ ಸಾರ್ಥಕತೆಯನ್ನು ಇನ್ನಷ್ಟು ಹೆಚ್ಚಿಸಿದೆ ಎಂದರು.

ಯುವ ಕರ್ನಾಟಕ ವೇದಿಕೆಯ ಧಾರವಾಡ ಜಿಲ್ಲಾ ಅಧ್ಯಕ್ಷ ಮಂಜುನಾಥ್ ಎರಗಂಬಳಿಮಠ, ಮತ್ತು ಮುರುಳಿ ಇಂಗಳಹಳ್ಳಿ , ಮಹಾವೀರ್ ಬಿಲಾನ್ ಗುರು, ಬೆಟಗೇರಿ ತಾಜುದ್ದೀನ್ ಮತ್ತು ಯಲ್ಲಾ ನಿಲ್ದಾಣದ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

ಕುಬಿಹಾಳ ಗ್ರಾಮದಲ್ಲಿ ರಂಗಮಂದಿರ ಕಾಮಗಾರಿಗೆ ಭೂಮಿಪೂಜೆ



ಕುಂದಗೋಳ: ತಾಲೂಕಿನ ಕುಬಿಹಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಅನುದಾನ ಅಡಿಯಲ್ಲಿ ನಿರ್ಮಾಣ ವಾಗಲಿರುವ ರಂಗಮಂದಿರ ಕಾಮಗಾರಿಗೆ ಶಾಸಕ ಎಂ.ಆರ್. ಪಾಟೀಲ ಭೂಮಿಪೂಜೆ ನೆರವೇರಿದರು.

ಈ ಸಂದರ್ಭದಲ್ಲಿ ಬಿಜೆಪಿ ತಾಲೂಕಾಧ್ಯಕ್ಷ ನಾಗನಗೌಡ ಸಾತ್ಮಾರ, ಕೆಸಿಸಿ ಬ್ಯಾಂಕ್ ನಿರ್ದೇಶಕ ಉಮೇಶ ಹೆಬಸೂರ, ಎಸ್‌ಡಿಎಂಸಿ ಅಧ್ಯಕ್ಷ ಮಾದೇಗೌಡ ಸಾತ್ಮರ, ಮುಖಂಡರಾದ ಭರಮಣ್ಣ ಮುಗಳಿ, ರವಿಗೌಡ ಪಾಟೀಲ, ಬಸವರಾಜ ದೇಶಪಾಂಡೆ, ವಿರೂಪಾಕ್ಷಪ್ಪ ಸಂಶಿ, ಫಕೀರಯ್ಯ ಎತ್ತಿನಮನಿ, ಶಂಕರಗೌಡ ಮುದಿಗೌಡ್ರ, ಸಂತೋಷ ಮಲ್ಲಿಗವಾಡ, ಗ್ರಾಪಂ ಅಭಿವೃದ್ಧಿ ಅಧಿಕಾರಿ ಗಿರೀಶ ಅಮರಗೊಂಡ, ಶಿಕ್ಷಕರು, ವಿದ್ಯಾರ್ಥಿಗಳು, ಗ್ರಾಮಸ್ಥರು ಇದ್ದರು.

ಹಳೆ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ



ಧಾರವಾಡ: ನಗರದ ಜನತಾ ಶಿಕ್ಷಣ ಸಮಿತಿಯ ಡಾ.ವೀರೇಂದ್ರ ಹೆಗ್ಗಡೆ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ಆ್ಯಂಡ್ ರಿಸರ್ಚ್ ಭವನದಲ್ಲಿ ಎಂಬಿಎ ಹಳೆಯ ವಿದ್ಯಾರ್ಥಿಗಳ ಸ್ನೇಮ ಸಮ್ಮಿಲನ 'ಸಮನ್ವಿತಿ' ಅತ್ಯಂತ ಯಶಸ್ವಿಯಾಗಿ ಜರುಗಿತು.

ಟೈ-ಹುಬ್ಬಳ್ಳಿ ಅಧ್ಯಕ್ಷ ಗಿರೀಶ ಮಾನೆ ಮಾತನಾಡಿ, ಹಳೆಯ ವಿದ್ಯಾರ್ಥಿಗಳು ವಿದ್ಯಾ ಸಂಸ್ಥೆಯೊಂದಿಗೆ ಬಾಂಧವ್ಯ ಹೊಂದಿ, ಅದರ ಶ್ರೇಯೋಭಿವೃದ್ಧಿಗೆ ಶ್ರಮಿಸಲು ಹೇಳಿದರು.

ಜೆಎಸ್ಸೆಸ್ ಐ.ಇ.ಆರ್. ನಿರ್ದೇಶಕಿ ಡಾ.ಜ್ಯೋತಿ ಹಳ್ಳದ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಕರ್ತವ್ಯದ ಜೊತೆಗೆ ಆಕರ್ಷಕ ವ್ಯಕ್ತಿತ್ವ ರೂಪಿಸಿಕೊಂಡು, ಇತರರಿಗೆ ಮಾದರಿಯಾಗಲು ಹೇಳಿದರು. ಜೆಎಸ್ಸೆಸ್ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಉದ್ಘಾಟಿಸಿದರು. ನಿರ್ದೇಶಕ ಡಾ.ಸುನೀಲಕುಮಾರ 'ಸಮನ್ವತಿ' ಬಗ್ಗೆ ಪರಿಚಯ ಮಾಡಿದರು. ಹಳೆಯ ವಿದ್ಯಾರ್ಥಿಗಳು ಅನಿಸಿಕೆ ಹಂಚಿಕೊಂಡರು. ನಿರ್ವಹಣಾ ಕ್ಷೇತ್ರಗಳಾದ ಮಾರ್ಕೆಟಿಂಗ್, ಮಾನವ ಸಂಪನ್ಮೂಲ, ಹಣಕಾಸು, ಉದ್ಯಮಶೀಲತೆ ವಿದ್ಯಮಾನಗಳ ಕುರಿತು ಗುಂಪು ಚರ್ಚೆಗಳು ನಡೆದವು. ಸಮ್ಮಿಲನದಲ್ಲಿ 2008ರಿಂದ ಈವರೆಗಿನ ವಿವಿಧ ಬ್ಯಾಚ್‌ಗಳ ಸುಮಾರು 125ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ರಚನಾ ನಿರೂಪಿಸಿದರು. ಡಾ. ಪೂಜಾ ಐನಾಪೂರ ವಂದಿಸಿದರು.

'ಶಿವಾಮೃತ' ಸಂಗೀತ, ಸಾಂಸ್ಕೃತಿಕ ಕಾರ್ಯಕ್ರಮ



ಕುಂದಗೋಳ: ಯುವಕರಲ್ಲಿ ಆತ್ಮಸ್ಥೈರ್ಯ, ಆಧ್ಯಾತ್ಮ, ಭಕ್ತಿ ಹಾಗೂ ಜನಪರ ಕಾರ್ಯಕ್ರಮಗಳ ಮೂಲಕ ನಿರಾಮಯ ಫೌಂಡೇಶನ್ ಜನಮನ ಗೆಲ್ಲುತ್ತಿದೆ ಎಂದು ಕಲ್ಯಾಣಪುರದ ಅಭಿನವ ಬಸವಣ್ಣಜ್ಜನವರು ಹೇಳಿದರು.

ಪಟ್ಟಣದ ಶಂಭುಲಿಂಗೇಶ್ವರ ದೇವಸ್ಥಾನದ ಸಮೀಪ ಮಹಾಶಿವರಾತ್ರಿ ಅಂಗವಾಗಿ ನಿರಾಮಯ ಫೌಂಡೇಶನ್ ಆಯೋಜಿಸಿದ್ದ 'ಶಿವಾಮೃತ' ಸಂಗೀತ, ಸಾಂಸ್ಕೃತಿಕ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಜ್ಞಾನವೇ ಜೀವನದ ದೀಪ. ಜ್ಞಾನೋದಯವಾದಾಗ ದಾನವೂ ಜೀವನದ ಸಾರ್ಥಕ ಕ್ಷಣವಾಗಬೇಕು ಎಂದರು.

ಶಿವಮೊಗ್ಗದ ಕಗ್ಗ ನಟೇಶ್ ಮಾತನಾಡಿ, ಶಿವಾಮೃತವು ನಿರಾಕಾರ, ನಿರ್ಗುಣ ತತ್ವದ ಸಾಕಾರತೆಯ ಪ್ರತಿರೂಪ. ನಮಗೆಲ್ಲವನ್ನೂ ನೀಡಿದ ಪ್ರಕೃತಿಗೆ ಕೃತಜ್ಞರಾಗಿರಬೇಕು ಎಂದರು. ಯೋಗ ಶಿಕ್ಷಕ ವಿನಾಯಕ ತಳಗೇರಿ ಮಾತನಾಡಿ, ಯೋಗವೇ ಮನಸ್ಸಿನ ದಿವ್ಯೌಷಧಿ. ಶಿವರಾತ್ರಿ ಜಾಗರಣೆ ಮತ್ತು ಉಪವಾಸಗಳು ದೇಹ, ಮನಸ್ಸಿನ ಸಮತೋಲನಕ್ಕೆ ಸಹಕಾರಿ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಬಾಳಿಕಾಯಿ, ಯುವ ಸಮೂಹಕ್ಕೆ ಪ್ರೇರಣೆಯಾದ ಕಾರ್ಯಗಳನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ. ವಿವಿಧ ಕ್ಷೇತ್ರಗಳ ಸಾಧಕರು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಸೇವೆ ಸಲ್ಲಿಸುತ್ತಿರುವುದೇ ಈ ನೆಲದ ಶಕ್ತಿ ಎಂದರು.

ಅಹೋರಾತ್ರಿ ಜರುಗಿದ ಕಾರ್ಯಕ್ರಮದಲ್ಲಿ ಹರ್ಲಾಪೂರದ ಸಾಂಬಯ್ಯ ಹಿರೇಮಠ ಕಲಾತಂಡದ ಜಾನಪದ ಗೀತೆ, ಪ್ರಕಾಶ್ ಹಾಗೂ ಪಂಚಾಕ್ಷರಯ್ಯ ಸಹೋದರರ ಭಕ್ತಿ ಸಂಗಮ, ಅಲ್ಲಿಕೇರಿಯ ಬಸವೇಶ್ವರ ಸಾಂಸ್ಕೃತಿಕ ಸಂಘದ ಜೋಗತಿ ನೃತ್ಯ, ಶಿರೂರಿನ ಯಲ್ಲಪ್ಪ ತಳವಾರಿಂದ ಗವಾಯಿ ಗೀತೆ, ಶ್ರೀಧರ ಮಾಂಡ್ರೆ, ಸುಭೇಂದ್ರ ಮನ್ನಾಡ ಹಾಗೂ ಸಮರ್ಥ ಪಾಟೀಲ್ ತಂಡದಿಂದ ಹಿಂದೂಸ್ತಾನಿ ಸಂಗೀತ, ಪಲ್ಲವಿ ಅವರ ಭರತನಾಟ್ಯ, ಕಗ್ಗ ನಟೇಶ್ ಅವರ ಜನಪದ ಶೈಲಿಯ ವಿಮರ್ಶೆ ಮತ್ತು ಸಂದೇಶ ಹುಟಗಿ ತಂಡದಿಂದ ಗಿಟಾರ್ ಮೂಲಕ ಶಿವಸ್ತುತಿ ಸಂಗೀತ ಗಮನ ಸೆಳೆದವು. ಭಾನುವಾರ ಸಂಜೆ 7ರಿಂದ ಸೋಮವಾರ ಬೆಳಗಿನ 7ರವರೆಗೆ ನಿರಂತರ ಜಾಗರಣೆ ನಡೆಯಿತು. ಸೇವೆ ಸಲ್ಲಿಸಿದ ಕಲಾವಿದರು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರನ್ನು ಸನ್ಮಾನಿಸಲಾಯಿತು. ಎ.ಸಿ. ಪಾಲಿ ಗುರೂಜಿ, ಅರವಿಂದ ಕಟಗಿ, ಸಿ.ಎಂ. ಕಾಳೆ, ಶ್ರೀಕಾಂತ ಕಲಾಲ, ರಾಜು ಶಿವಳ್ಳಿ, ರಾಜು ಕೊಪ್ಪದ, ಹನಮಂತಗೌಡ ಪಾಟೀಲ, ಹೇಮನಗೌಡ ಬಸನಗೌಡ್ರ, ರಾಜು ಪುಟ್ಟಣ್ಣವರ, ಮಲ್ಲಿಕಾರ್ಜುನ ಕುನ್ನೂರ, ಮಹಾದೇವಪ್ಪ ಬಮ್ಮಸಮುದ್ರ, ಜ್ಯೋತಿಬಾ ಶಿಂಧೆ, ಶಿವಾನಂದ ಕಟಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಸಂಸ್ಥೆಯ ಅಧ್ಯಕ್ಷ ಗುರು ಬನ್ನಿಕೊಪ್ಪ ಕಾರ್ಯಕ್ರಮ ನಿರೂಪಿಸಿದರು.

ವಿವಿಧ ಅಭಿವೃದ್ಧಿ ಕೆಲಸಗಳಿಗೆ ಅನುದಾನ



ನವಲಗುಂದ: ನಾನು ಹೇಳಿ ಕೆಲಸ ಮಾಡಲ್ಲ, ಕೆಲಸ ಮಾಡಿ ಹೇಳುತ್ತೇನೆ. ಏನಾದರೂ ತಪ್ಪಿದ್ದರೆ ನನಗೆ ನೇರವಾಗಿ ಹೇಳಿ. ವಿರೋಧ ಪಕ್ಷದವರು ಟೀಕೆ ಮಾಡಿದಾಗ ತಲೆಕೆಡಿಸಿಕೊಳ್ಳಬಾರದು. ಸರ್ವಧರ್ಮದವರಿಗೆ ಸಮಾನತೆ ದೃಷ್ಟಿಕೋನ ಇಟ್ಟುಕೊಂಡು ವಿವಿಧ ಅಭಿವೃದ್ಧಿ ಕೆಲಸಗಳಿಗೆ 25 ಕೋಟಿ ರೂ.ಗೂ ಹೆಚ್ಚಿನ ಅನುದಾನ ನೀಡಿದ್ದೇನೆ ಎಂದು ಶಾಸಕ ಎನ್. ಎಚ್. ಕೋನರಡ್ಡಿ ಹೇಳಿದರು.

ಅವರು ಸೋಮವಾರ ಕೃಷಿ ಕಚೇರಿಯ ಎದುರಗಡೆ ನೂತನ ಅಂಜುಮನ್ ಕಚೇರಿ ಉದ್ಘಾಟಿಸಿ ಮಾತನಾಡಿ, ಶಾದಿ ಮಹಲ್ ಆಧುನೀಕರಣಕ್ಕೆ ಈಗಾಗಲೇ ಸಿಎಂ ಸಿದ್ದರಾಮಯ್ಯ ಅವರು ಶಂಕುಸ್ಥಾಪನೆ ಮಾಡಿದ್ದಾರೆ. ರಮಜಾನ್ ಹಬ್ಬದಲ್ಲಿ ಕಾಮಗಾರಿ ಕಾರ್ಯಾರಂಭ ಮಾಡಲಾಗುವುದು ಎಂದರು. ಹಿಂದೂ ಸಮಾಜಕ್ಕೆ 9 ಕೋಟಿ, ಮುಸ್ಲಿಂ ಸಮಾಜಕ್ಕೆ 7.25ಕೋಟಿ, ಕುರುಬ ಸಮಾಜ 4 ಕೋಟಿ ಸೇರಿದಂತೆ ಇತರೇ ಸಮಾಜಗಳಿಗೆ 25 ಕೋಟಿ ಅನುದಾನ ಕೊಡಲಾಗಿದೆ ಎಂದರು.

ಅಂಜುಮನ್ ಸಂಸ್ಥೆಯ ಗೌರವ ಅಧ್ಯಕ್ಷ ಅಮಾನುಲ್ಲಾ ಖಾಜಿ, ಅಂಜುಮನ್ ಅಧ್ಯಕ್ಷ ಅಲ್ಲಾಸಾಬ್ ಕಲಕುಟ್ರಿ, ಅನ್ವರ ಮುಲಿಮನಿ, ರಿಯಾಜ್ ನಾಶಿಪುಡಿ, ಶಿರಾಜ್ ಧಾರವಾಡ, ಕಾಶೀಮಸಾಬ್ ಅಲ್ಲಿಬಾಯಿ, ಸುಭಾನ್ ಬೇಪಾರಿ, ಮೈನುದ್ದಿನ ಧಾರವಾಡ, ಅಬ್ಬು ಕುನ್ನಿಭಾವಿ, ಶಬ್ಬೀರ್ ಧಾರವಾಡ, ಬಾಬರ್ ದಫೇದಾರ, ಅಕೀರ್ ಮಕಾನದಾರ್, ಉಸ್ಮಾನ್ ಬಬರ್ಚಿ, ಅಬ್ಬಾಸಲಿ ದೇವರಿಡು, ರಿಯಾಜ್ ಪೀರಜಾದೆ ಇತರರಿದ್ದರು.

ಎಲ್ಲರಿಗಾಗಿ ಎಲ್ಲೆಡೆ ಎಐ



ಭಾರತದಲ್ಲಿ ಇದೇ ಮೊದಲ ಬಾರಿಗೆ ಕೃತಕ ಬುದ್ಧಿಮತ್ತೆ ಕುರಿತ ಜಾಗತಿಕ ಶೃಂಗಸಭೆ ನಡೆಯುತ್ತಿದ್ದು, ಇದರ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು, ಎಎನ್‌ಐ ಸುದ್ದಿಸಂಸ್ಥೆ ಜತೆಗೆ ಮಾತನಾಡಿದ್ದಾರೆ. ಸರ್ವಜನ ಹಿತಾಯ, ಸರ್ವಜನ ಸುಖಾಯ ಧ್ಯೇಯ ವಾಕ್ಯದೊಂದಿಗೆ ಇದು ನಡೆಯುತ್ತಿದ್ದು, ಹೊಸ ಯುಗಕ್ಕಾಗಿ ಭಾರತದ ದೃಷ್ಟಿಕೋನವನ್ನು ಎಲ್ಲರ ಮುಂದೆ ಪ್ರಧಾನಿಗಳು ಎತ್ತಿ ತೋರಿಸಿದ್ದಾರೆ. ಕೃತಕ ಬುದ್ಧಿಮತ್ತೆಯು ಆಳವಾಗಿ ಮಾನವ ಕೇಂದ್ರಿತ ಜಾಗತಿಕ ಅಭಿವೃದ್ಧಿಯನ್ನು ವೇಗಗೊಳಿಸಬೇಕು ಎಂದು ಕರೆ ನೀಡಿದ್ದಾರೆ. ಸಂದರ್ಶನದ ಪೂರ್ಣ ಪಾಠ ಇಲ್ಲಿದೆ.

“ಪ್ರಧಾನಿ ನರೇಂದ್ರ ಮೋದಿ ಸಂದರ್ಶನ”

2047ರ ದೃಷ್ಟಿಕೋನದ ಬಗ್ಗೆ ಹಂಚಿಕೊಂಡ ಪ್ರಧಾನಿ

- 2047 ದೃಷ್ಟಿ: ಭಾರತವು ಜಾಗತಿಕವಾಗಿ ಟಾಪ್-3 ಎಐ ಸೂಪರ್‌ಪವರ್ ರಾಷ್ಟ್ರಗಳಲ್ಲಿ ಒಂದಾಗಬೇಕು.
- ಮಾನವ-ಕೇಂದ್ರಿತ ಎಐ: 'ಸರ್ವಜನ ಹಿತಾಯ, ಸರ್ವಜನ ಸುಖಾಯ' ಮಂತ್ರದಡಿ ಎಐ ಅಭಿವೃದ್ಧಿ, ತಂತ್ರಜ್ಞಾನವು ಮಾನವಕುಲಕ್ಕೆ ಸೇವೆ ಸಲ್ಲಿಸಬೇಕು.
- ಎಲ್ಲರ ಒಳಗೊಂಡ ಬೆಳವಣಿಗೆ: ಎಐ ಲಾಭಗಳು ಕೆಲವರಿಗೆ ಮಾತ್ರವಲ್ಲ, ಗ್ರಾಮ-ನಗರ, ಭಾಷಾ-ಸಾಮಾಜಿಕ ಎಲ್ಲ ವರ್ಗಗಳಿಗೆ ತಲುಪಬೇಕು.
- ಪ್ರಮುಖ ಕ್ಷೇತ್ರಗಳಲ್ಲಿ ಎಐ ಬಳಕೆ: ಆರೋಗ್ಯ, ಶಿಕ್ಷಣ, ಕೃಷಿ, ಸಾರ್ವಜನಿಕ ವ್ಯವಸ್ಥೆಗಳು, ಪಾರಂಪರಿಕ ಸಂರಕ್ಷಣೆ ಕ್ಷೇತ್ರಗಳಲ್ಲಿ ಎಐ ಪರಿಣಾಮ.
- ಎಐ ಪೂರ್ವಾಗ್ರಹ ಸವಾಲು: ಭಾಷಾ-ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರತಿಬಿಂಬಿಸುವ ದತ್ತಸಂಚಯಗಳ ಅಗತ್ಯದ ಬಗ್ಗೆ ಒತ್ತಿ ಹೇಳಿದ ಮೋದಿ.
- ಡಿಪಿಐ+ಎಐ ಮಾದರಿ: ಆಧಾರ್, ಯುಪಿಐ ಮುಂತಾದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಎಐ ಜೊತೆ ಸೇರಿ ಆಡಳಿತವನ್ನು ಪರಿಣಾಮಕಾರಿ ಮಾಡಬಹುದು.
- ಯುವಜನರಿಗೆ ಸಂದೇಶ: ಎಐ ಉದ್ಯೋಗಗಳನ್ನು ಅಳಿಸುವುದಿಲ್ಲ; ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ. ಸ್ಕಿಲ್ಲಿಂಗ್, ರಿ-ಸ್ಕಿಲ್ಲಿಂಗ್ ಮುಖ್ಯ.
- ಆತ್ಮನಿರ್ಭರ ಎಐ: ಭಾರತವು ಎಐ ಬಳಕೆದಾರ ಮಾತ್ರವಲ್ಲ, ಎಐ ಸೃಷ್ಟಿಕರ್ತ ರಾಷ್ಟ್ರವಾಗಬೇಕು.

ಎಐ ಅಪಾಯದ ಬಗ್ಗೆ ಜಾಗೃತಿ

ಕೃತಕ ಬುದ್ಧಿಮತ್ತೆಯ ಪಕ್ಷಪಾತ ಮತ್ತು ಮಿತಿಗಳ ಬಗ್ಗೆ ಕಳವಳಗಳು ಆಳವಾಗಿ ಪ್ರಸ್ತುತವಾಗಿವೆ. ಎಐ ಅಳವಡಿಕೆಯು ವೇಗಗೊಳ್ಳುತ್ತಿದ್ದಂತೆ ಅಪಾಯಗಳು ಸಹ ಎದುರಾಗುತ್ತವೆ. ಎಐ ವ್ಯವಸ್ಥೆಗಳು ಅಜಾಗರೂಕತೆಯಿಂದ ಲಿಂಗ, ಭಾಷೆ ಮತ್ತು ಸಾಮಾಜಿಕ-ಆರ್ಥಿಕ ಹಿನ್ನೆಲೆಗೆ ಸಂಬಂಧಿಸಿದ ಪಕ್ಷಪಾತಗಳನ್ನು ಶಾಶ್ವತಗೊಳಿಸಬಹುದು. ಎಐ ಇಂಪ್ಯಾಕ್ಟ್ ಶೃಂಗಸಭೆ 2026 ವಿವಿಧ ರೀತಿಯ ಕಂಪನಿಗಳನ್ನು ಒಟ್ಟುಗೂಡಿಸುತ್ತಿದೆ. ಪಕ್ಷಪಾತಗಳು ಮತ್ತು ಕೃತಕ ಬುದ್ಧಿಮತ್ತೆಯ ಮಿತಿಗಳಂತಹ ವಿಷಯಗಳ ಬಗ್ಗೆ ಜಾಗತಿಕ ಜಾಗೃತಿ ಮೂಡಿಸುತ್ತಿದೆ. ಇದು ಜಾಗತಿಕ ಸಹಕಾರದ ಅಗತ್ಯವಿರುವ ವಿಷಯವಾಗಿದೆ.
ನಿರ್ದಿಷ್ಟವಾಗಿ ಭಾರತಕ್ಕೆ ಸಂಬಂಧಿಸಿದಂತೆ, ನಾವು ವಿಶಿಷ್ಟ ಸವಾಲುಗಳು ಮತ್ತು ಅವಕಾಶಗಳನ್ನು ಎದುರಿಸುತ್ತಿದ್ದೇವೆ. ನಮ್ಮ ವೈವಿಧ್ಯತೆ – ಭಾಷಾ, ಸಾಂಸ್ಕೃತಿಕ, ಪ್ರಾದೇಶಿಕ – ಎಂದರೆ ಎಐ ಪಕ್ಷಪಾತವು ಪಾಶ್ಚಿಮಾತ್ಯ ಸಂದರ್ಭಗಳಲ್ಲಿ ಸ್ಪಷ್ಟವಾಗದ ರೀತಿಯಲ್ಲಿ ಪ್ರಕಟವಾಗಬಹುದು. ಪ್ರಾಥಮಿಕವಾಗಿ ಇಂಗ್ಲಿಷ್ ಡೇಟಾ ಅಥವಾ ನಗರ ಸಂದರ್ಭಗಳಲ್ಲಿ ತರಬೇತಿ ಪಡೆದ ಎಐ ವ್ಯವಸ್ಥೆಯು ಗ್ರಾಮೀಣ ಬಳಕೆದಾರರಿಗೆ ಅಥವಾ ಪ್ರಾದೇಶಿಕ ಭಾಷೆಗಳನ್ನು ಮಾತನಾಡುವವರಿಗೆ ಕಳಪೆ ಪ್ರದರ್ಶನ ನೀಡಬಹುದು. ಸಕಾರಾತ್ಮಕ ಬೆಳವಣಿಗೆಯೆಂದರೆ ಭಾರತವು ಇದನ್ನು ಹೆಚ್ಚು ವ್ಯವಸ್ಥಿತವಾಗಿ ಪರಿಹರಿಸಲು ಪ್ರಾರಂಭಿಸಿದೆ. ಭಾರತದ ಬಹುತ್ವವನ್ನು ಪ್ರತಿನಿಧಿಸುವ ವೈವಿಧ್ಯಮಯ ಡೇಟಾಸೆಟ್‌ಗಳನ್ನು ರಚಿಸುವತ್ತ ಹೆಚ್ಚಿನ ಗಮನವನ್ನು ನಾವು ನೋಡುತ್ತಿದ್ದೇವೆ. ಪ್ರಾದೇಶಿಕ ಭಾಷೆಗಳಲ್ಲಿ ಎಐ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವುದು ಮತ್ತು ಭಾರತೀಯ ಶೈಕ್ಷಣಿಕ ಸಂಸ್ಥೆಗಳು ಮತ್ತು ಟೆಕ್ ಕಂಪನಿಗಳಲ್ಲಿ ನ್ಯಾಯಸಮ್ಮತ ಮತ್ತು ಪಕ್ಷಪಾತದ ಬಗ್ಗೆ ಹೆಚ್ಚುತ್ತಿರುವ ಸಂಶೋಧನೆಯನ್ನು ನಾವು ನೋಡುತ್ತಿದ್ದೇವೆ.

ಗ್ಲೋಬಲ್ ಸೌತ್‌ಗೆ ಭಾರತದ ಕಾಣಿಕೆ

ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಪ್ರಯಾಣವು ಗ್ಲೋಬಲ್ ಸೌತ್‌ಗೆ ನಿರ್ಣಾಯಕ ಮತ್ತು ಪ್ರಾಯೋಗಿಕ ಪಾಠಗಳನ್ನು ನೀಡುತ್ತದೆ. ಆಧಾರ್, ಯುಪಿಐ ಮತ್ತು ಇತರ ಡಿಜಿಟಲ್ ಸಾರ್ವಜನಿಕ ವೇದಿಕೆಗಳಲ್ಲಿನ ನಮ್ಮ ಯಶಸ್ಸು ಆಕಸ್ಮಿಕವಲ್ಲ. ಇದು ಕೆಲವು ಪುನರಾವರ್ತಿಸಬಹುದಾದ ತತ್ವಗಳಿಂದ ಹುಟ್ಟಿಕೊಂಡಿದೆ. ಮೊದಲನೆಯದಾಗಿ, ನಾವು ಡಿಜಿಟಲ್ ಮೂಲಸೌಕರ್ಯವನ್ನು ಸಾರ್ವಜನಿಕ ಒಳಿತಾಗಿ ನಿರ್ಮಿಸಿದ್ದೇವೆಯೇ ಹೊರತು ಸ್ವಾಮ್ಯದ ವೇದಿಕೆಯಾಗಿ ಅಲ್ಲ. ಎರಡನೆಯದಾಗಿ, ನಾವು ಮೊದಲ ದಿನದಿಂದಲೇ ಪ್ರಮಾಣ ಮತ್ತು ಸೇರ್ಪಡೆಗಾಗಿ ವಿನ್ಯಾಸಗೊಳಿಸಿದ್ದೇವೆ. ನಮ್ಮ ವ್ಯವಸ್ಥೆಗಳು 1.4 ಬಿಲಿಯನ್ ಜನರಿಗಾಗಿ ಕೆಲಸ ಮಾಡುತ್ತವೆ. ಕೃತಕ ಬುದ್ಧಿಮತ್ತೆಯು ಕಲ್ಯಾಣ ಗುರಿಯನ್ನು ಸುಧಾರಿಸಬಹುದು, ವಂಚನೆ ಪತ್ತೆಹಚ್ಚುವಿಕೆಯನ್ನು ಬಲಪಡಿಸಬಹುದು, ಮೂಲಸೌಕರ್ಯಗಳ ಮುನ್ಸೂಚಕ ನಿರ್ವಹಣೆಯನ್ನು ಸಕ್ರಿಯಗೊಳಿಸಬಹುದು, ನಗರ ಯೋಜನೆಯನ್ನು ಬೆಂಬಲಿಸಬಹುದು ಮತ್ತು ಸಾರ್ವಜನಿಕ ವ್ಯವಸ್ಥೆಗಳಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸಬಹುದು.



ಎಐ ಸೃಷ್ಟಿಕರ್ತನಾಗಿ ಭಾರತ ಮುಂದೆ

ಭಾರತವು ಎಐ ಪವರ್ ಹೌಸ್ ಆಗಲು ಪ್ರತಿಭೆ ಮತ್ತು ಉದ್ಯಮಶೀಲತೆಯ ಶಕ್ತಿಯನ್ನು ಹೊಂದಿದೆ. ಇದು ಕೇವಲ ಗ್ರಾಹಕರಾಗಿ ಮಾತ್ರವಲ್ಲ, ಸೃಷ್ಟಿಕರ್ತನಾಗಿಯೂ ಮುಂದಿದೆ. ನಮ್ಮ ಸ್ಟಾರ್ಟ್‌ಅಪ್‌ಗಳು, ಸಂಶೋಧನಾ ಸಂಸ್ಥೆಗಳು ಮತ್ತು ಟೆಕ್ ಪರಿಸರ ವ್ಯವಸ್ಥೆಯು ಉತ್ಪಾದನೆಯನ್ನು ಹೆಚ್ಚಿಸುವ, ಆಡಳಿತವನ್ನು ಸುಧಾರಿಸುವ ಮತ್ತು ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಎಐ ಪರಿಹಾರಗಳನ್ನು ನಿರ್ಮಿಸಬಹುದು. ನಮ್ಮ ಯುವಕರು ರೈತರು, ಎಂಎಸ್‌ಎಂಇಗಳು, ಮಹಿಳಾ ಉದ್ಯಮಿಗಳು ಮತ್ತು ತಳಮಟ್ಟದ ನವೋದ್ಯಮಿಗಳಿಗಾಗಿ ವಿನ್ಯಾಸಗೊಳಿಸಲಾದ ಭಾರತೀಯ ವಾಸ್ತವತೆಗಳಿಗೆ ಕೃತಕ ಬುದ್ಧಿಮತ್ತೆ ಪರಿಹಾರಗಳನ್ನು ನಿರ್ಮಿಸಬಹುದು ಎಂಬ ವಿಶ್ವಾಸ ನನಗಿದೆ. ಕೇಂದ್ರ ಬಜೆಟ್ 2026-27 ಈ ದೃಷ್ಟಿಕೋನವನ್ನು ಬಲಪಡಿಸುತ್ತದೆ. ಇದು ಡೇಟಾ ಕೇಂದ್ರಗಳು ಮತ್ತು ಕ್ಲೌಡ್ ಮೂಲಸೌಕರ್ಯಕ್ಕೆ ಬೆಂಬಲವನ್ನು ವಿಸ್ತರಿಸುತ್ತದೆ, ದೇಶೀಯ ಕಂಪ್ಯೂಟ್ ಸಾಮರ್ಥ್ಯವನ್ನು ಬಲಪಡಿಸುತ್ತದೆ. ಇಂಡಿಯಾಎಐ ಚೌಕಟ್ಟಿನ ಅಡಿಯಲ್ಲಿ, ನವೋದ್ಯಮಗಳು ಮತ್ತು ಸಂಶೋಧನಾ ಸಂಸ್ಥೆಗಳಿಗೆ ಹೆಚ್ಚಿನ ಕಾರ್ಯಕ್ಷಮತೆಯ ಕೃತಕ ಬುದ್ಧಿಮತ್ತೆ ಕಂಪ್ಯೂಟ್ ಸಂಪನ್ಮೂಲಗಳಿಗೆ ಪ್ರವೇಶದೊಂದಿಗೆ ಬೆಂಬಲ ನೀಡಲಾಗುತ್ತಿದೆ. ಸೆಮಿಕಂಡಕ್ಟರ್ ಉತ್ಪಾದನೆ, ಎಲೆಕ್ಟ್ರಾನಿಕ್ಸ್ ಪಿಎಲ್‌ಐ, ಎಐ ಸೆಂಟರ್ಸ್ ಆಫ್ ಎಕ್ಸಲೆನ್ಸ್ ಮತ್ತು ಡಿಜಿಟಲ್ ಕೌಶಲ್ಯಕ್ಕೆ ನಿರಂತರ ಉತ್ತೇಜನವು ಹಾರ್ಡ್‌ವೇರ್ ಮತ್ತು ಮಾನವ ಬಂಡವಾಳದ ಅಡಿಪಾಯವನ್ನು ಬಲಪಡಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ನಾವು ಕೇವಲ ಪ್ರತಿಭೆಗಳನ್ನು ಪೋಷಿಸುತ್ತಿಲ್ಲ, ಆದರೆ ಎಐ ಕ್ರಾಂತಿಯಲ್ಲಿ ಭಾಗವಹಿಸುವುದರಿಂದ ಅದನ್ನು ರೂಪಿಸಲು ಭಾರತವು ಸಾಗಲು ಅಗತ್ಯವಾದ ಮೂಲಸೌಕರ್ಯ, ನೀತಿ ಪರಿಸರ ವ್ಯವಸ್ಥೆ ಮತ್ತು ಕೌಶಲ್ಯಗಳ ನೆಲೆಯನ್ನು ನಾವು ನಿರ್ಮಿಸುತ್ತಿದ್ದೇವೆ.

ಎಲ್ಲರಿಗೂ ಕಲ್ಯಾಣ, ಎಲ್ಲರ ಸಂತೋಷ

ಇಂದು ಕೃತಕ ಬುದ್ಧಿಮತ್ತೆ ನಾಗರಿಕತೆಯ ತಿರುವಿನ ಹಂತದಲ್ಲಿದೆ. ಇದು ಅಭೂತಪೂರ್ವ ರೀತಿಯಲ್ಲಿ ಮಾನವ ಸಾಮರ್ಥ್ಯವನ್ನು ವಿಸ್ತರಿಸಬಹುದು. ಆದರೆ ಮಾರ್ಗದರ್ಶನ ನೀಡದಿದ್ದರೆ ಅದು ಅಸ್ತಿತ್ವದಲ್ಲಿರುವ ಸಾಮಾಜಿಕ ಅಡಿಪಾಯಗಳನ್ನು ಸಹ ಪರೀಕ್ಷಿಸಬಹುದು. ಮಾರ್ಗದರ್ಶಿ ಮನೋಭಾವ, ಸರ್ವಜನ ಹಿತಾಯ, ಸರ್ವಜನ ಸುಖಾಯ ಎಂಬ ಭಾರತದ ನಾಗರಿಕತೆಯ ತತ್ವಶಾಸ್ತ್ರವನ್ನು ಈ ಶೃಂಗಸಭೆ ಪ್ರತಿಬಿಂಬಿಸುತ್ತದೆ. ತಂತ್ರಜ್ಞಾನದ ಅಂತಿಮ ಗುರಿ 'ಎಲ್ಲರಿಗೂ ಕಲ್ಯಾಣ, ಎಲ್ಲರ ಸಂತೋಷ' ಆಗಿರಬೇಕು. ತಂತ್ರಜ್ಞಾನವು ಮಾನವೀಯತೆಗೆ ಸೇವೆ ಸಲ್ಲಿಸಲು ಅಸ್ತಿತ್ವದಲ್ಲಿದೆಯೇ ಹೊರತು ಅದನ್ನು ಬದಲಾಯಿಸಲು ಅಲ್ಲ. ಈ ಶೃಂಗಸಭೆಯನ್ನು ಜನತೆ, ಭೂಗ್ರಹ ಮತ್ತು ಪ್ರಗತಿಯ ಸುತ್ತ ರೂಪಿಸಲಾಗಿದೆ. ಎಐ ವ್ಯವಸ್ಥೆಗಳು ವಿಶ್ವಾದ್ಯಂತ ಸಮಾಜಗಳಲ್ಲಿ ಉತ್ಪತ್ತಿಯಾಗುವ ಜ್ಞಾನ ಮತ್ತು ಡೇಟಾವನ್ನು ಸೆಳೆಯುತ್ತವೆ. ಆದ್ದರಿಂದ, ಎಐನ ಪ್ರಯೋಜನಗಳನ್ನು ಎಲ್ಲರಿಗೂ ಹರಡಬೇಕೆಂದು ನಾವು ಬಯಸುತ್ತೇವೆ.

ಎಲ್ಲರಿಗೂ ಧ್ವನಿ

ಗ್ಲೋಬಲ್ ಸೌತ್ ಎಂದೇ ಗುರುತಿಸಲಾಗಿರುವ ಭಾರತದಲ್ಲಿ ಆಯೋಜಿಸಲಾದ ಮೊದಲ ಜಾಗತಿಕ ಕೃತಕ ಬುದ್ಧಿಮತ್ತೆ ಶೃಂಗಸಭೆಯಾಗಿ ಎಲ್ಲರ ಧ್ವನಿಗಳಿಗೆ ವೇದಿಕೆ ಕಲ್ಪಿಸುವ ಕೆಲಸ ಮಾಡುತ್ತಿದೆ. ಕೃತಕ ಬುದ್ಧಿಮತ್ತೆ ಆಡಳಿತ, ಅಂತರ್ಗತ ಡೇಟಾಸೆಟ್‌ಗಳು, ಹವಾಮಾನ ಮುನ್ಸೂಚನೆಗಳು, ಕೃಷಿ ಉತ್ಪಾದಕತೆ, ಸಾರ್ವಜನಿಕ ಆರೋಗ್ಯ ಮತ್ತು ಬಹುಭಾಷಾ ಪ್ರವೇಶವು ನಮಗೆ ಬಾಹ್ಯ ಸಮಸ್ಯೆಗಳಲ್ಲ, ಬದಲಾಗಿ ಅವು ಕೇಂದ್ರಬಿಂದುವಾಗಿವೆ. ನಮ್ಮ ದೃಷ್ಟಿ ಸ್ಪಷ್ಟವಾಗಿದ್ದು, ಕೃತಕ ಬುದ್ಧಿಮತ್ತೆಯು ಆಳವಾಗಿ ಮಾನವ ಕೇಂದ್ರಿತವಾಗಿ ಜಾಗತಿಕ ಅಭಿವೃದ್ಧಿಯನ್ನು ವೇಗಗೊಳಿಸಬೇಕು.

ವಿಕಸಿತ ಭಾರತ 2047

ವಿಕಸಿತ ಭಾರತ 2047ರ ಗುರಿ ಸಾಧನೆಗೆ ಎಐ ಪೂರಕವಾಗಿ ಕೆಲಸ ಮಾಡುತ್ತದೆ. ಈ ನಿಟ್ಟಿನಲ್ಲಿ ಒಂದು ಕಾರ್ಯತಂತ್ರ ಮತ್ತು ಎಚ್ಚರಿಕೆಯ ನಿಟ್ಟಿನಲ್ಲಿ ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಳ್ಳುವತ್ತ ಮುಂದಡಿ ಇಟ್ಟಿದ್ದೇವೆ. ಇದು ಸಂಪೂರ್ಣವಾಗಿ ಹೊಸ ಆರ್ಥಿಕ ಅವಕಾಶಗಳನ್ನು ಸೃಷ್ಟಿಸುವಾಗ ಎದುರಾಗುವ ಆಳವಾದ ಅಭಿವೃದ್ಧಿ ಸವಾಲುಗಳನ್ನು ಬಗೆಹರಿಸಲು ಸಹಾಯ ಮಾಡುತ್ತದೆ.
ಆರೋಗ್ಯ ರಕ್ಷಣೆಯಲ್ಲಿ ಕೃತಕ ಬುದ್ಧಿಮತ್ತೆ ಈಗಾಗಲೇ ಪರಿಣಾಮವನ್ನು ಬೀರುತ್ತಿದೆ. ಪ್ರಾಥಮಿಕ ಮತ್ತು ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಕ್ಷಯ, ಮಧುಮೇಹ ರೆಟಿನೋಪತಿ, ಅಪಸ್ಮಾರ ಮತ್ತು ಇತರ ಅನೇಕ ಕಾಯಿಲೆಗಳನ್ನು ಮುಂಚಿತವಾಗಿ ಪತ್ತೆಹಚ್ಚುವ ಕೃತಕ ಬುದ್ಧಿಮತ್ತೆ ಆಧಾರಿತ ಪರಿಹಾರಗಳನ್ನು ನಾವು ನೋಡುತ್ತಿದ್ದೇವೆ.
ಶಿಕ್ಷಣದಲ್ಲಿ ಭಾರತೀಯ ಭಾಷೆಗಳಲ್ಲಿ ಎಐ ಚಾಲಿತ ವೈಯಕ್ತಿಕಗೊಳಿಸಿದ ಕಲಿಕೆಯ ವೇದಿಕೆಗಳು ಗ್ರಾಮೀಣ ಮತ್ತು ಸರ್ಕಾರಿ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಕಸ್ಟಮೈಸ್ ಮಾಡಿದ ಶೈಕ್ಷಣಿಕ ಬೆಂಬಲವನ್ನು ಪಡೆಯಲು ಸಹಾಯ ಮಾಡುತ್ತಿವೆ.
ಸಾವಿರಾರು ಹಳ್ಳಿಗಳಲ್ಲಿ 36 ಲಕ್ಷ ಮಹಿಳಾ ಹೈನುಗಾರರನ್ನು ತಲುಪಲು ಅಮುಲ್ ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಳ್ಳುತ್ತಿದೆ. ಜಾನುವಾರುಗಳ ಆರೋಗ್ಯ ಮತ್ತು ಉತ್ಪಾದಕತೆಯ ಬಗ್ಗೆ ಗುಜರಾತಿ ಭಾಷೆಯಲ್ಲಿ ನೈಜ-ಸಮಯದ ಮಾರ್ಗದರ್ಶನವನ್ನು ಒದಗಿಸುತ್ತಿದೆ. ತಳಮಟ್ಟದ ಮಹಿಳಾ ಉತ್ಪಾದಕರನ್ನು ಸಬಲೀಕರಣಗೊಳಿಸುತ್ತಿದೆ. ಕೃಷಿಯಲ್ಲಿ ಭಾರತ್ ವಿಸ್ತಾರ್ ಕೃತಕ ಬುದ್ಧಿಮತ್ತೆಯನ್ನು ಬೆಳೆ ಸಲಹೆ, ಮಣ್ಣಿನ ವಿಶ್ಲೇಷಣೆ ಮತ್ತು ಹವಾಮಾನ ಮುನ್ಸೂಚನೆಯನ್ನು ಸಂಯೋಜಿಸುವ ಗುರಿಯನ್ನು ಹೊಂದಿದೆ. ಇದು ರೈತರಿಗೆ ಉತ್ತಮ, ಸ್ಥಳೀಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ. ಪರಂಪರೆಯ ಸಂರಕ್ಷಣೆಯಲ್ಲಿಯೂ ಸಹ, ಕೃತಕ ಬುದ್ಧಿಮತ್ತೆಯು ಪ್ರಾಚೀನ ಹಸ್ತಪ್ರತಿಗಳ ಡಿಜಿಟಲೀಕರಣ ಮತ್ತು ವ್ಯಾಖ್ಯಾನವನ್ನು ಸಕ್ರಿಯಗೊಳಿಸುತ್ತಿದೆ, ಭಾರತದ ನಾಗರಿಕತೆಯ ಜ್ಞಾನ ವ್ಯವಸ್ಥೆಗಳನ್ನು ಅನ್ಲಾಕ್ ಮಾಡುತ್ತಿದೆ.
ಕೃತಕ ಬುದ್ಧಿಮತ್ತೆಯ ವಿಭಜನೆಗಳು ಗಾಢವಾಗುತ್ತಿರುವ ಬಗ್ಗೆ ಜಗತ್ತು ಚಿಂತಿಸುತ್ತಿರುವ ಸಮಯದಲ್ಲಿ, ಭಾರತವು ಅದನ್ನು ವಿಭಜನೆಗಳನ್ನು ಕರಗಿಸಲು ಬಳಸುತ್ತಿದೆ. ಪ್ರತಿ ಹಳ್ಳಿ, ಪ್ರತಿ ಜಿಲ್ಲೆ ಮತ್ತು ಪ್ರತಿಯೊಬ್ಬ ನಾಗರಿಕರಿಗೆ ಆರೋಗ್ಯ ರಕ್ಷಣೆ, ಶಿಕ್ಷಣ ಮತ್ತು ಆರ್ಥಿಕ ಅವಕಾಶವನ್ನು ತಲುಪಿಸಲು ನಾವು ಇದನ್ನು ಸಮರ್ಥ ಸಾಧನವನ್ನಾಗಿ ಮಾಡುತ್ತಿದ್ದೇವೆ.





ತಂತ್ರಜ್ಞಾನದ ರಚನೆ

ಆತ್ಮನಿರ್ಭರ ಭಾರತದತ್ತ ನಮ್ಮ ಪ್ರಯಾಣವು ಮೂಲಭೂತ ತತ್ವದ ಮೇಲೆ ನಿರ್ಮಿಸಲ್ಪಟ್ಟಿದೆ. ಭಾರತವು ತಂತ್ರಜ್ಞಾನವನ್ನು ಬಳಸುವುದು ಮಾತ್ರವಲ್ಲದೆ ಅದನ್ನು ರಚಿಸಬೇಕು. ಆತ್ಮನಿರ್ಭರ ಭಾರತದಲ್ಲಿ ಕೃತಕ ಬುದ್ಧಿಮತ್ತೆಗಾಗಿ ನನ್ನ ದೃಷ್ಟಿಕೋನವು ಸ್ವಾಯತ್ತತೆ, ಒಳಗೊಳ್ಳುವಿಕೆ ಮತ್ತು ನಾವೀನ್ಯತೆ ಎಂಬ ಮೂರು ಸ್ತಂಭಗಳ ಮೇಲೆ ನಿಂತಿದೆ. ಕೃತಕ ಬುದ್ಧಿಮತ್ತೆ ಬಳಕೆಯಲ್ಲಿ ಮಾತ್ರವಲ್ಲದೆ ಸೃಷ್ಟಿಯಲ್ಲೂ ಭಾರತವು ಜಾಗತಿಕವಾಗಿ ಅಗ್ರ ಮೂರು ಎಐ ಸೂಪರ್ ಪವರ್ ಗಳಲ್ಲಿ ಒಂದಾಗಬೇಕು ಎಂಬುದು ನನ್ನ ದೃಷ್ಟಿಕೋನವಾಗಿದೆ. ನಮ್ಮ ಕೃತಕ ಬುದ್ಧಿಮತ್ತೆ ಮಾದರಿಗಳನ್ನು ವಿಶ್ವಾದ್ಯಂತ ನಿಯೋಜಿಸಲಾಗುವುದು, ಅವರ ಸ್ಥಳೀಯ ಭಾಷೆಗಳಲ್ಲಿ ಶತಕೋಟಿ ಜನರಿಗೆ ಸೇವೆ ಸಲ್ಲಿಸಲಾಗುವುದು. ನಮ್ಮ ಎಐ ಸ್ಟಾರ್ಟ್‌ಅಪ್‌ಗಳು ನೂರಾರು ಶತಕೋಟಿ ಮೌಲ್ಯವನ್ನು ಹೊಂದಿರುತ್ತವೆ. ಲಕ್ಷಾಂತರ ಉತ್ತಮ-ಗುಣಮಟ್ಟದ ಉದ್ಯೋಗಗಳನ್ನು ಸೃಷ್ಟಿಸುತ್ತವೆ. ನಮ್ಮ ಕೃತಕ ಬುದ್ಧಿಮತ್ತೆ ಚಾಲಿತ ಸಾರ್ವಜನಿಕ ಸೇವೆಗಳನ್ನು ಜಾಗತಿಕವಾಗಿ ದಕ್ಷ, ಸಮಾನ ಆಡಳಿತದ ಮಾನದಂಡಗಳಾಗಿ ಅಧ್ಯಯನ ಮಾಡಲಾಗುತ್ತದೆ.

ಎಐನಿಂದ ಐಟಿ ವಲಯಕ್ಕೆ ಶಕ್ತಿ

ಕೃತಕ ಬುದ್ಧಿಮತ್ತೆ ಮಾರುಕಟ್ಟೆಯಿಂದಾಗಿ ಭಾರತದ ಐಟಿ ವಲಯವು 2030ರ ವೇಳೆಗೆ 400 ಬಿಲಿಯನ್ ಡಾಲರ್‌ಗೆ ತಲುಪಬಹುದು ಎಂದು ತೋರಿಸುತ್ತದೆ. ಇದು ಕೃತಕ ಬುದ್ಧಿಮತ್ತೆ ಶಕ್ತಗೊಂಡ ಹೊರಗುತ್ತಿಗೆ ಮತ್ತು ಡೊಮೇನ್-ನಿರ್ದಿಷ್ಟ ಯಾಂತ್ರೀಕೃತಗೊಂಡ ಹೊಸ ಅಲೆಗಳಿಂದ ಪ್ರೇರಿತವಾಗಿದೆ. ಮೂಲಭೂತ ಬದಲಾವಣೆಯೆಂದರೆ ಎಐ ಐಟಿ ವಲಯವನ್ನು ಬದಲಾಯಿಸುತ್ತಿಲ್ಲ, ಅದು ಅದನ್ನು ಪರಿವರ್ತಿಸುತ್ತಿದೆ. ಸಾಮಾನ್ಯ-ಉದ್ದೇಶದ ಎಐ ಸಾಧನಗಳು ವ್ಯಾಪಕವಾಗಿದ್ದರೂ, ಎಂಟರ್‌ಪ್ರೈಸ್ ಗ್ರೇಡ್ ಎಐ ಅಳವಡಿಕೆಯು ಇನ್ನೂ ನಿರ್ದಿಷ್ಟ ಕ್ಷೇತ್ರಗಳಲ್ಲಿ ಕೇಂದ್ರೀಕೃತವಾಗಿದೆ. ಸಂಕೀರ್ಣ ವ್ಯವಹಾರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಹಾಲಿ ಐಟಿ ಸಂಸ್ಥೆಗಳು ನಿರ್ಣಾಯಕ ಪಾತ್ರ ವಹಿಸುತ್ತಿವೆ. ಬಲವಾದ ಭಾರತೀಯ ಕೃತಕ ಬುದ್ಧಿಮತ್ತೆ ಪರಿಸರ ವ್ಯವಸ್ಥೆಯನ್ನು ಸಕ್ರಿಯಗೊಳಿಸಲು, ಸರ್ಕಾರವು ಇಂಡಿಯಾ ಎಐ ಮಿಷನ್ ಅನ್ನು ಕೇಂದ್ರೀಕರಿಸಿದ ಸಮಗ್ರ ಕಾರ್ಯತಂತ್ರದೊಂದಿಗೆ ಪ್ರತಿಕ್ರಿಯಿಸಿದೆ. ನಾವು ಈಗಾಗಲೇ ಜಿಪಿಯುಗಳ ನಮ್ಮ ಆರಂಭಿಕ ಗುರಿಯನ್ನು ಮೀರಿದ್ದೇವೆ ಮತ್ತು ಸ್ಟಾರ್ಟ್‌ಅಪ್‌ಗಳು ಹಾಗೂ ಉದ್ಯಮಗಳಿಗೆ ವಿಶ್ವದರ್ಜೆಯ ಎಐ ಮೂಲಸೌಕರ್ಯಕ್ಕೆ ಕೈಗೆಟುಕುವ ಪ್ರವೇಶವನ್ನು ಒದಗಿಸಲು ನಾವು ಬದ್ಧರಾಗಿದ್ದೇವೆ.
ನಮ್ಮ ಉದ್ಯೋಗಿಗಳನ್ನು ಉದ್ಯಮ-ಸಂಬಂಧಿತ ಕೃತಕ ಬುದ್ಧಿಮತ್ತೆ ಪರಿಣತಿಯೊಂದಿಗೆ ಸಜ್ಜುಗೊಳಿಸಲು ನಾವು ಆರೋಗ್ಯ ರಕ್ಷಣೆ, ಕೃಷಿ, ಶಿಕ್ಷಣ ಮತ್ತು ಸುಸ್ಥಿರ ನಗರಗಳಲ್ಲಿ ನಾಲ್ಕು ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಿದ್ದೇವೆ. ಕೌಶಲ್ಯಕ್ಕಾಗಿ ಐದು ರಾಷ್ಟ್ರೀಯ ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಿದ್ದೇವೆ. ನಮ್ಮ ಐಟಿ ವಲಯವು ಕೇವಲ ಸೇವಾ ವಿತರಣೆಯಲ್ಲಿ ಮಾತ್ರವಲ್ಲದೆ ಭಾರತ ಮತ್ತು ಜಗತ್ತಿಗೆ ಕೆಲಸ ಮಾಡುವ ಎಐ ಉತ್ಪನ್ನಗಳು, ವೇದಿಕೆಗಳು ಮತ್ತು ಪರಿಹಾರಗಳನ್ನು ನಿರ್ಮಿಸುವಲ್ಲಿ ಮುಂಚೂಣಿಯಲ್ಲಿರಬೇಕೆಂದು ನಾವು ಬಯಸುತ್ತೇವೆ.



ಎಐ ಬಳಕೆ ಜವಾಬ್ದಾರಿ

ತಂತ್ರಜ್ಞಾನವು ಒಂದು ಶಕ್ತಿಶಾಲಿ ಸಾಧನವಾಗಿದ್ದು, ಮಾನವ ಉದ್ದೇಶದ ಶಕ್ತಿಗೆ ಪೂರಕವಾಗಿದೆ. ಅದು ಒಳ್ಳೆಯದಕ್ಕಾಗಿ ಒಂದು ಶಕ್ತಿಯಾಗುವುದನ್ನು ಖಚಿತಪಡಿಸಿಕೊಳ್ಳುವುದು ನಮಗೆ ಬಿಟ್ಟದ್ದು. ಕೃತಕ ಬುದ್ಧಿಮತ್ತೆಯು ಮಾನವ ಸಾಮರ್ಥ್ಯಗಳನ್ನು ಹೆಚ್ಚಿಸಬಹುದಾದರೂ, ನಿರ್ಧಾರ ತೆಗೆದುಕೊಳ್ಳುವ ಅಂತಿಮ ಜವಾಬ್ದಾರಿ ಯಾವಾಗಲೂ ಮಾನವರ ಮೇಲಿರಬೇಕು. ಪ್ರಪಂಚದಾದ್ಯಂತ, ಎಐ ಅನ್ನು ಹೇಗೆ ಬಳಸಬೇಕು ಮತ್ತು ನಿಯಂತ್ರಿಸಬೇಕು ಎಂಬುದರ ಕುರಿತು ಸಮಾಜಗಳು ಚರ್ಚಿಸುತ್ತಿವೆ. ಬಲವಾದ ಸುರಕ್ಷತಾ ಕ್ರಮಗಳು ನಿರಂತರ ನಾವೀನ್ಯತೆಯೊಂದಿಗೆ ಸಹಬಾಳ್ವೆ ನಡೆಸಬಹುದು ಎಂದು ತೋರಿಸುವ ಮೂಲಕ ಭಾರತವು ಈ ಸಂವಾದವನ್ನು ರೂಪಿಸಲು ಸಹಾಯ ಮಾಡುತ್ತಿದೆ. ಇದಕ್ಕಾಗಿ, ಕೆಲವು ಮೂಲಭೂತ ತತ್ವಗಳ ಮೇಲೆ ನಿರ್ಮಿಸಲಾದ ಕೃತಕ ಬುದ್ಧಿಮತ್ತೆಯ ಜಾಗತಿಕ ಒಪ್ಪಂದದ ಅಗತ್ಯವಿದೆ. ಇವುಗಳಲ್ಲಿ ಪರಿಣಾಮಕಾರಿ ಮಾನವ ಮೇಲ್ವಿಚಾರಣೆ, ವಿನ್ಯಾಸದ ಸುರಕ್ಷತೆ, ಪಾರದರ್ಶಕತೆ ಮತ್ತು ಡೀಪ್ ಫೇಕ್ಸ್, ಅಪರಾಧ ಮತ್ತು ಭಯೋತ್ಪಾದಕ ಚಟುವಟಿಕೆಗಳಿಗೆ ಕೃತಕ ಬುದ್ಧಿಮತ್ತೆ ಬಳಕೆಯ ಮೇಲೆ ಕಟ್ಟುನಿಟ್ಟಾದ ನಿಷೇಧಗಳು ಸೇರಿರಬೇಕು.

ಭದ್ರತಾ ಕಾಳಜಿಗಳು

2025ರ ಜನವರಿಯಲ್ಲಿ ಇಂಡಿಯಾ ಎಐ ಸುರಕ್ಷತಾ ಸಂಸ್ಥೆಯನ್ನು ಪ್ರಾರಂಭಿಸುವುದರೊಂದಿಗೆ, ದೇಶವು ಎಐ ವ್ಯವಸ್ಥೆಗಳ ನೈತಿಕ, ಸುರಕ್ಷಿತ ಮತ್ತು ಜವಾಬ್ದಾರಿಯುತ ನಿಯೋಜನೆಯನ್ನು ಉತ್ತೇಜಿಸಲು ಮೀಸಲಾದ ಕಾರ್ಯವಿಧಾನವನ್ನು ರಚಿಸಿತು. ಕೃತಕ ಬುದ್ಧಿಮತ್ತೆ ಹೆಚ್ಚು ಮುಂದುವರಿದಂತೆ, ನಮ್ಮ ಜವಾಬ್ದಾರಿಯ ಪ್ರಜ್ಞೆ ಬಲಗೊಳ್ಳಬೇಕು. ಸ್ಥಳೀಯ ಅಪಾಯಗಳು ಮತ್ತು ಸಾಮಾಜಿಕ ವಾಸ್ತವಗಳ ಮೇಲೆ ಅದರ ಗಮನವು ಭಾರತದ ವಿಧಾನವನ್ನು ವಿಶಿಷ್ಟವಾಗಿಸುತ್ತದೆ. ರಾಷ್ಟ್ರೀಯ ಭದ್ರತಾ ಕಾಳಜಿಗಳು ಮತ್ತು ಮಹಿಳೆಯರನ್ನು ಗುರಿಯಾಗಿಸುವ ಡೀಪ್‌ಫೇಕ್‌ಗಳು, ಮಕ್ಕಳ ಸುರಕ್ಷತಾ ಅಪಾಯಗಳು ಮತ್ತು ವೃದ್ಧರ ಮೇಲೆ ಪರಿಣಾಮ ಬೀರುವ ಬೆದರಿಕೆಗಳು ಸೇರಿದಂತೆ ದುರ್ಬಲ ಗುಂಪುಗಳಿಗೆ ಹಾನಿಯನ್ನು ಪರಿಗಣಿಸುತ್ತದೆ. ಡೀಪ್‌ಫೇಕ್ ವಿಡಿಯೊಗಳ ಉಲ್ಬಣದಿಂದಾಗಿ ಈ ಸುರಕ್ಷತಾ ಕ್ರಮಗಳ ತುರ್ತುಸ್ಥಿತಿ ಎಲ್ಲರಿಗೂ ಸ್ಪಷ್ಟವಾಗುತ್ತಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ, ಕೃತಕ ಬುದ್ಧಿಮತ್ತೆಯಿಂದ ಉತ್ಪತ್ತಿಯಾಗುವ ವಿಷಯವನ್ನು ವಾಟರ್ ಮಾರ್ಕ್ ಮಾಡುವ ಮತ್ತು ಹಾನಿಕಾರಕ ಸಂಶ್ಲೇಷಿತ ಮಾಧ್ಯಮವನ್ನು ತೆಗೆದುಹಾಕುವ ನಿಯಮಗಳನ್ನು ಭಾರತ ಪ್ರಕಟಿಸಿತು. ವಿಷಯ ಸುರಕ್ಷತೆಗಳ ಜೊತೆಗೆ, ಡಿಜಿಟಲ್ ವೈಯಕ್ತಿಕ ಡೇಟಾ ಸಂರಕ್ಷಣಾ ಕಾಯ್ದೆಯು ಡಿಜಿಟಲ್ ಪರಿಸರ ವ್ಯವಸ್ಥೆಯಲ್ಲಿ ಡೇಟಾ ರಕ್ಷಣೆ ಮತ್ತು ಬಳಕೆದಾರರ ಹಕ್ಕುಗಳನ್ನು ಬಲಪಡಿಸುತ್ತದೆ. ಭಾರತದ ಬದ್ಧತೆ ಜಾಗತಿಕವಾಗಿ ವಿಸ್ತರಿಸಿದೆ. ಗಡಿಯುದ್ದಕ್ಕೂ ಸುರಕ್ಷತೆ ಮತ್ತು ಉತ್ತರದಾಯಿತ್ವವನ್ನು ಖಚಿತಪಡಿಸಿಕೊಳ್ಳಲು ವಾಯುಯಾನ ಮತ್ತು ಹಡಗುಗಳಲ್ಲಿ ಜಾಗತಿಕ ಮಾನದಂಡಗಳಿರುವಂತೆಯೇ, ಜಗತ್ತು ಕೃತಕ ಬುದ್ಧಿಮತ್ತೆಯ ಸಾಮಾನ್ಯ ತತ್ವಗಳು ಮತ್ತು ಮಾನದಂಡಗಳತ್ತ ಕೆಲಸ ಮಾಡಬೇಕು.

ಯುವಕರ ಕಳವಳ

ಉದ್ಯೋಗ ಮಾರುಕಟ್ಟೆಯಲ್ಲಿ ಕೃತಕ ಬುದ್ಧಿಮತ್ತೆ ಆಧಾರಿತ ಅಡೆತಡೆಗಳ ಬಗ್ಗೆ ನಮ್ಮ ಯುವಕರ ಕಳವಳವನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅದಕ್ಕಾಗಿಯೇ ನಾವು ಕೃತಕ ಬುದ್ಧಿಮತ್ತೆ ಚಾಲಿತ ಭವಿಷ್ಯಕ್ಕಾಗಿ ನಮ್ಮ ಜನರಿಗೆ ಕೌಶಲ್ಯ ಮತ್ತು ಮರು-ಕೌಶಲ್ಯಕ್ಕಾಗಿ ಹೂಡಿಕೆ ಮಾಡುತ್ತಿದ್ದೇವೆ. ಸರ್ಕಾರವು ವಿಶ್ವದ ಅತ್ಯಂತ ಮಹತ್ವಾಕಾಂಕ್ಷೆಯ ಕೌಶಲ್ಯ ಯೋಜನೆಗಳಲ್ಲಿ ಒಂದನ್ನು ಪ್ರಾರಂಭಿಸಿದೆ. ನಾವು ಇದನ್ನು ಭವಿಷ್ಯದ ಸಮಸ್ಯೆಯಾಗಿ ಸಮೀಪಿಸುತ್ತಿಲ್ಲ, ಆದರೆ ನಾವು ಅದನ್ನು ಪ್ರಸ್ತುತ ಅನಿವಾರ್ಯವೆಂದು ಪರಿಗಣಿಸುತ್ತಿದ್ದೇವೆ. ನಾನು ಕೃತಕ ಬುದ್ಧಿಮತ್ತೆಯನ್ನು ಒಂದು ಶಕ್ತಿ ವೃದ್ಧಿಯಾಗಿ ನೋಡುತ್ತೇನೆ. ಇದು ವೈದ್ಯರು, ಶಿಕ್ಷಕರು ಮತ್ತು ವಕೀಲರು ದೊಡ್ಡ ಗುಂಪಿನ ಜನರನ್ನು ತಲುಪಲು ಸಹಾಯ ಮಾಡುತ್ತದೆ. ತಂತ್ರಜ್ಞಾನದಿಂದಾಗಿ ಕೆಲಸ ಕಣ್ಮರೆಯಾಗುವುದಿಲ್ಲ ಎಂದು ಇತಿಹಾಸವು ತೋರಿಸಿದೆ. ಅದರ ಸ್ವರೂಪವು ಬದಲಾಗುತ್ತದೆ ಮತ್ತು ಹೊಸ ರೀತಿಯ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಕೆಲವು ಉದ್ಯೋಗಗಳನ್ನು ಮರು ವ್ಯಾಖ್ಯಾನಿಸಬಹುದಾದರೂ, ಡಿಜಿಟಲ್ ರೂಪಾಂತರವು ಭಾರತದ ಆರ್ಥಿಕತೆಗೆ ಹೊಸ ಟೆಕ್ ಉದ್ಯೋಗಗಳನ್ನು ಸೇರಿಸುತ್ತದೆ. ಶತಮಾನಗಳಿಂದ, ನಾವೀನ್ಯತೆ ಮತ್ತು ತಾಂತ್ರಿಕ ಕ್ರಾಂತಿಗಳು ಉದ್ಯೋಗಗಳನ್ನು ತೆಗೆದುಹಾಕುತ್ತವೆ ಎಂಬ ಭಯವಿತ್ತು. ಆದರೂ ನಾವೀನ್ಯತೆ ಸಂಭವಿಸಿದಾಗಲೆಲ್ಲಾ ಹೊಸ ಅವಕಾಶಗಳು ಹೊರಹೊಮ್ಮುತ್ತವೆ ಎಂದು ಇತಿಹಾಸವು ನಮಗೆ ಕಲಿಸುತ್ತದೆ. ಎಐ ಯುಗದಲ್ಲೂ ಇದು ನಿಜವಾಗಿರುತ್ತದೆ. ಈ ಬದಲಾವಣೆಗೆ ಹೊಂದಿಕೊಳ್ಳಲು ಭಾರತ ಈಗಾಗಲೇ ಸಜ್ಜಾಗಿದೆ.

ರಾಹುಲ್ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆಗೂ ಮುನ್ನ ಅಂದಿನ ಬಿಜೆಪಿ ಸರ್ಕಾರದ ವಿರುದ್ಧ ಸರಣಿ ಆರೋಪಗಳನ್ನು ಮಾಡಿ ಕಾಂಗ್ರೆಸ್ ಜಾಹೀರಾತು ನೀಡಿದ್ದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಆರೋಪದ ಕುರಿತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ದಾಖಲಿಸಿದ್ದ ಮಾನಹಾನಿ ಪ್ರಕರಣವನ್ನು ಹೈಕೋರ್ಟ್ ಮಂಗಳವಾರ ರದ್ದುಪಡಿಸಿದೆ.

ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸಂಜ್ಞೆ (ಕಾಗ್ನಿಜೆನ್ಸ್) ಪರಿಗಣಿಸಿ ರುವ ಆದೇಶ ರದ್ದತಿ ಕೋರಿ ರಾಹುಲ್ ಗಾಂಧಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ.ಎಸ್.ಸುನೀಲ್ ದತ್‌ಯಾದವ್ ಅವರ ಏಕಸದಸ್ಯ ಪೀಠ ಪುರಸ್ಕರಿಸಿದೆ. ವಿಚಾರಣಾಧೀನ ನ್ಯಾಯಾಲಯದಲ್ಲಿನ ಪ್ರಕ್ರಿಯೆ ಮುಂದುವರಿಕೆಯು ಕಾನೂನು ಪ್ರಕ್ರಿಯೆಯ ದುರ್ಬಳಕೆಯಾಗ ಲಿದೆ. ಹೀಗಾಗಿ, 4ನೇ ಆರೋಪಿ ರಾಹುಲ್ ಗಾಂಧಿ ವಿರುದ್ಧದ ಪ್ರಕ್ರಿಯೆ ಬದಿಗೆ ಸರಿಸಲಾಗಿದೆ ಎಂದು ನ್ಯಾಯಾಲಯ ಆದೇಶಿಸಿತು. ರಾಹುಲ್ ಗಾಂಧಿ ಪ್ರತಿನಿಧಿಸಿದ್ದ ಅಡ್ವೋಕೇಟ್ ಜನರಲ್ ಶಶಿಕಿರಣ್‌ಶೆಟ್ಟಿ ಅವರು ರಾಹುಲ್ ರಿಟ್ವೀಟ್ ಮಾಡಿರುವುದಕ್ಕೆ ಯಾವುದೇ ದಾಖಲೆಯನ್ನು ಬಿಜೆಪಿ ಸಲ್ಲಿಸಿಲ್ಲ, ಅದನ್ನು ಎಷ್ಟು ಜನ ನೋಡಿದ್ದಾರೆ ಮತ್ತು ಅದರಿಂದ ಮಾನಹಾನಿಯಾಗಿದೆಯೇ ಎಂಬುದಕ್ಕೆ ಯಾವುದೇ ಮಾಹಿತಿ ಇಲ್ಲ.

ತಾರಾ ಪ್ರಚಾರಕರ ಪಟ್ಟಿಯಲ್ಲಿ 40 ಮಂದಿ ಇದ್ದರು ಎಂದು ಹೇಳುವ ಬಿಜೆಪಿಯು ಅವರನ್ನೆಲ್ಲಾ ದಾವೆಯಲ್ಲಿ ಪ್ರತಿವಾದಿಗಳನ್ನಾಗಿ ಏಕೆ ಮಾಡಿಲ್ಲ? ರಾಹುಲ್ ಉಪಾಧ್ಯಕ್ಷರಾಗಿದ್ದಾರೆ ಎಂಬುದರ ಮೇಲೆ ಇಡೀ ದೂರು ನಿಂತಿದೆ. ಆದರೆ, ಆ ಸಂದರ್ಭದಲ್ಲಿ ರಾಹುಲ್ ಉಪಾಧ್ಯಕ್ಷರಾಗಿರಲೇ ಇಲ್ಲ. ರೀಟ್ವೀಟ್ ಮಾಡುವುದು ಮಾನಹಾನಿಯಾಗು ತ್ತದೆಯೇ ಎಂಬ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದೆ. ಹಾಲಿ ಪ್ರಕರಣದಲ್ಲಿ ರಾಹುಲ್ ಅವರು ರೀಟ್ವೀಟ್ ಮಾಡಿಲ್ಲ ಎಂದಿದ್ದರು.

ಜಾಹೀರಾತಿನಲ್ಲಿ ಬಿಜೆಪಿಯ ಹೆಸರನ್ನೇ ಉಲ್ಲೇಖಿಸಿಲ್ಲ, ಸರ್ಕಾರವನ್ನು ಅದರಲ್ಲಿ ಉಲ್ಲೇಖಿಸಲಾಗಿದೆ. ಮುಖ್ಯಮಂತ್ರಿ, ಮಂತ್ರಿ ಆಗಿ ಹೋಗುತ್ತಾರೆ. ಆದರೆ, ಸರ್ಕಾರ ಯಾವಾಗಲೂ ಇರುತ್ತದೆ. ಸರ್ಕಾರವನ್ನು ವಿರೋಧಿಸಿದ ಮಾತ್ರಕ್ಕೆ ರಾಜಕೀಯ ಪಕ್ಷವೊಂದು ದಾವೆ ಹೂಡಲಾಗದು. ಹೀಗಾದಲ್ಲಿ ಸರ್ಕಾರದ ವಿರುದ್ಧ ಟೀಕೆ ಮಾಡುವುದು ಅಪರಾಧವಾಗಲಿದೆ ಎಂದಿದ್ದರು.



ಭಾರತದಲ್ಲಿನ ಅಮೆರಿಕನ್ ರಾಯಭಾರಿ ಸರ್ಜಿಯೊ ಗೋರ್ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕೃತ ನಿವಾಸ ಕಾವೇರಿಯಲ್ಲಿ ಸೌಹಾರ್ದ ಭೇಟಿಯಾಗಿ ಹೂಗುಚ್ಛ ನೀಡಿದರು.

ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ ಶರಣ್ಯ, ಅಜ್ಞಾವರ ಪ್ರಥಮ

ಬೆಂಗಳೂರು: ಸಮರ್ಥ ಭಾರತ ಮತ್ತು ದಿ ಮಿಥಿಕ್ ಸೊಸೈಟಿ ಸಹಯೋಗದೊಂದಿಗೆ 12ನೇ ವರ್ಷದ ಬಿ ಗುಡ್, ಡು ಗುಡ್ ಅಭಿಯಾನದ ನಿಮಿತ್ತ, ನವಭಾರತದ ಕುರಿತು ಸ್ವಾಮಿ ವಿವೇಕಾನಂದರ ಚಿಂತನೆಗಳು ವಿಷಯದ ಕುರಿತು ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ –2026ರಲ್ಲಿ ಸುಳ್ಯದ ಶರಣ್ಯ. ಎಸ್. ಅಜ್ಞಾವರ ಪ್ರಥಮ ಸ್ಥಾನ ಪಡೆದಿದ್ದಾಳೆ.

ನವಭಾರತದ ಕುರಿತು ಸ್ವಾಮಿ ವಿವೇಕಾನಂದರ ಚಿಂತನೆಗಳು ವಿಷಯದ ಕುರಿತು ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ –2026ರಲ್ಲಿ ಸುಳ್ಯದ ಶರಣ್ಯ. ಎಸ್.ಅಜ್ಞಾವರ ಪ್ರಥಮ ಸ್ಥಾನ ಪಡೆದಿದ್ದು, ಬೆಂಗಳೂರಿನ ಭೂಮಿಕಾ. ಎಚ್.ಕೆ ದ್ವಿತೀಯ ಸ್ಥಾನ ಹಾಗೂ ದಾವಣಗೆರೆಯ ಅನುಷಾ ಜಿ.ಪಿ ತೃತೀಯ ಸ್ಥಾನ ಪಡೆದಿದ್ದಾಳೆ.

20 ಸಮಾಧಾನಕರ ಬಹುಮಾನಗಳು: ತುಮಕೂರಿನ ಅಶೋಕ ಎಲ್. ಚಿಕ್ಕನಾಯಕನ ಹಳ್ಳಿ, ಯಾದಗಿರಿಯ ಸಂಜಯ್, ಬೆಳಗಾವಿಯ ಕಾವೇರಿ ಎಂ. ಹೆಗಡೆ, ಬೆಂಗಳೂರಿನ ನಿಸರ್ಗ ಎಚ್.ಜಿ, ಹಾಸನದ ನಿಸರ್ಗ, ಮೈಸೂರಿನ ಚೇನಿಕಾ ಪೂವಣ್ಣ ಜೆ, ಉಡುಪಿಯ ಅರುಣ, ಬೆಂಗಳೂರಿನ ಪ್ರಿಯಾ ಎಸ್., ಬೆಂಗಳೂರಿನ ಯಶಸ್ವಿನಿ ಕೆ.ಟಿ, ಮೈಸೂರಿನ ಮಹಾಲಕ್ಷ್ಮಿ ಎಂ, ಕಲಘಟಗಿಯ ಶೋಭಾ ಶಂಕರ ಗೌಡ ಪಾಟೀಲ್, ಉತ್ತರ ಕನ್ನಡದಡ ಸಂಜನಾ ನಾಯ್, ಮಂಗಳೂರಿನ ನಾಗಿಣಿ ಎಸ್.ಪಡೀಲ್, ವಿಜಯಪುರದ ಪೂಜಾ ಮಹಾದೇವ ಸಾರವಾಡ ಇಂಡಿ, ದಾವಣಗೆರೆಯ ರೇಣುಕಾ ಎನ್, ಉತ್ತರ ಕನ್ನಡದ ವಿನುತಾ ಪ್ರಕಾಶ್ ನಾಯಕ, ಬೆಂಗಳೂರಿನ ರೂಪಶ್ರೀ ಡಿ, ಕಲಬುರಗಿಯ ವಿಜಯಲಕ್ಷ್ಮಿ ಎನ್, ದಾವಣಗೆರೆಯ ಪ್ರತೀಕ್ಷಾ ಪಾಟೀಲ್ ಪಿ.ಎ.ಚನ್ನಗಿರಿ ಹಾಗೂ ಕಪ್ಪಳದ ಅಪರ್ಣ ಸಂಕ್ಲಾಪುರ್ ಸೇರಿದಂತೆ ಒಟ್ಟು 20 ಜನರಿಗೆ ಸಮಾಧಾನಕರ ಬಹುಮಾನ ನೀಡಲಾಗಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕನೇಜಿ

ಭಾರತದ ಪ್ರಧಾನಿ ನರೇಂದ್ರ ಮೋದಿ ಅದ್ಭುತ ವ್ಯಕ್ತಿ, ನನ್ನ ಆತ್ಮೀಯ ಸ್ನೇಹಿತ. ಅವರ ಬಗ್ಗೆ ನನಗೆ ತುಂಬ ಗೌರವವಿದೆ – ಟ್ರಂಪ್

– ಅದು ಅರ್ಧ ಸತ್ಯ, ಭಯವೂ ಇದೆ ಎಂಬುದು ಉಳಿದ ಅರ್ಧ ಸತ್ಯ!

ದಿನ ಭವಿಷ್ಯ

ಮೇಷ ಅನ್ಯರ ಮೆಚ್ಚಿಸಲು ಹೋಗದಿರಿ. ನಿಮ್ಮ ಕಾರ್ಯ ನಿಷ್ಠೆಯಿಂದ ಮಾಡಿ. ಹಣದ ವಿಚಾರ ತಲೆಬೇನೆ ತಂದೀತು. ಖರ್ಚು ಕಡಿಮೆ ಮಾಡಿ.

ವೃಷಭ ಕೆಲಸದಲ್ಲಿ ಅಧಿಕ ಒತ್ತಡ. ತಾಳ್ಮೆಯ ವರ್ತನೆ ಅಗತ್ಯ. ಇತರರ ಪ್ರಲೋಭನೆಗೆ ಒಳಗಾಗಿ ಅಡ್ಡದಾರಿ ಹಿಡಿಯದಿರಿ. ಆರೋಗ್ಯ ಸಮಸ್ಯೆ.

ಮಿಥುನ ಕಾರ್ಯದಲ್ಲಿ ಪ್ರಗತಿ ಸಾಧಿಸಿದರೂ ನಿಮಗೆ ಮಾತ್ರ ತೃಪ್ತಿಯಿಲ್ಲ. ನಿಮ್ಮ ಮನಸ್ಸು ಬೇರೇನನ್ನೋ ಬಯಸುತ್ತದೆ. ಆರ್ಥಿಕ ಪ್ರಗತಿ ತೃಪ್ತಿದಾಯಕ.

ಕಟಕ ಒತ್ತಡ ನಿವಾರಣೆ. ಮನಸ್ಸಿಗೆ ನಿರಾಳತೆ. ಕೆಲವು ಬೆಳವಣಿಗೆ ಅದಕ್ಕೆ ಕಾರಣ. ಆಪ್ತರ ಜತೆ ಮಾತುಕತೆ ನೆಮ್ಮದಿ ತರಲಿದೆ. ಆರ್ಥಿಕ ಪ್ರಗತಿ ಉತ್ತಮ.

ಸಿಂಹ ಕೆಲ ವಿಷಯಗಳಲ್ಲಿ ನಿಮ್ಮ ನಿಲುವು ಬದಲಿಸುವ ಸನ್ನಿವೇಶ ಉಂಟಾದೀತು. ದುಡುಕಿನ ನಿರ್ಧಾರ ತಾಳದಿರಿ. ಎಲ್ಲರ ಜತೆ ಸೌಹಾರ್ದತೆ ಬೆಳೆಸಿ.

ಕನ್ಯಾ ನಿಮ್ಮ ಪಾಲಿಗೆ ವಿಶೇಷ ದಿನ. ಬಯಸಿದ ಬೆಳವಣಿಗೆ ಸಂಭವ. ಸಮಸ್ಯೆಯೊಂದು ನಿವಾರಣೆ, ಕೆಲಸ ಸುಲಲಿತ. ಧನಪ್ರಾಪ್ತಿ.

ತುಲಾ ಆರ್ಥಿಕ ಪ್ರಗತಿ ಉತ್ತಮ. ಆಪ್ತರ ಜತೆ ಭಿನ್ನಾಭಿಪ್ರಾಯ ಉಂಟಾದೀತು. ಸ್ನೇಹಿತ ನಿಮ್ಮ ವಿರೋಧಿಯಾಗಿ ಬದಲಾಗಬಹುದು.

ವೃಶ್ಚಿಕ ವಿವೇಕದಿಂದ ಕಾರ್ಯ ಎಸಗಿ. ಇಲ್ಲವಾದರೆ ಕೆಟ್ಟ ಫಲಿತಾಂಶ ಸಂಭವ. ಅನಿರೀಕ್ಷಿತ ಧನಲಾಭ. ಆಪ್ತ ಬಂಧು ಭೇಟಿ.

ಧನು ನಿಮ್ಮ ನಿರ್ಧಾರ ಬೇರೆಯವರ ಮೇಲೆ ಹೇರಬೇಡಿ. ಅದು ವಿರಸಕ್ಕೆ ಹೇತುವಾದೀತು. ಕೌಟುಂಬಿಕ ಶಾಂತಿಗೆ ಭಂಗ. ಆರ್ಥಿಕ ಕೊರತೆ.

ಮಕರ ಕೆಲಸದಲ್ಲಿ ತಪ್ಪು ಘಟಿಸದಂತೆ ಎಚ್ಚರ ವಹಿಸಿ. ಕೆಲವರು ಅದನ್ನೆ ಹಿಗ್ಗಿಸಬಹುದು. ಮಾನಕ್ಕೆ ಕುಂದು ತರುವ ಬೆಳವಣಿಗೆ ಸಂಭವಿಸಬಹುದು.

ಕುಂಭ ಹೊಸ ಪಾಠ ಕಲಿಯುವಂತಹ ಪ್ರಸಂಗ ಉಂಟಾದೀತು. ದೊಡ್ಡ ಬಿಕ್ಕಟ್ಟು ಎದುರಾದರೂ ಬಳಿಕ ಪರಿಹಾರ ಕಂಡು ನೆಮ್ಮದಿ ಉಂಟಾಗಲಿದೆ.

ಮೀನ ಮನಸ್ಸಿಗೆ ನಿರಾಳತೆ ತರುವಂತಹ ಬೆಳವಣಿಗೆ. ಕಾರ್ಯ ಸಾಫಲ್ಯ, ವಿರಸ ಮುಕ್ತಿ. ಅನಿರೀಕ್ಷಿತ ಖರ್ಚು ನಿಯಂತ್ರಣ. ಆತ್ಮೀಯ ಬಂಧು ಭೇಟಿ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 8,3,9,2

ಹಿಂದುಗಳ ಮನೆ ಮೇಲೆ ಕಲ್ಲು ತೂರಾಟ

ಪುಟ ೧➜ ಎರಡೂ ಗುಂಪುಗಳನ್ನು ಚದುರಿಸುವಲ್ಲಿ ಹೆಚ್ಚುವರಿ ಪೊಲೀಸ್ ಮುಖ್ಯಾಧಿಕಾರಿ ಜಯಕುಮಾರ್, ಸಿಬ್ಬಂದಿ ಹೈರಾಣಾದರು. ನಂತರ ಕಲ್ಲು ತೂರಿದ ಅಪ್ರಾಪ್ತ ಹುಡುಗರಿಬ್ಬರನ್ನೂ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಯಿತು. ಕಳೆದ ಒಂದು ವಾರದಿಂದ ಕಿಡಿಗೇಡಿಗಳ ಗುಂಪು ಮನೆಗಳ ಮೇಲೆ ಕಲ್ಲು ಎಸೆಯುವುದು ಮತ್ತು ಕಳೆದ 3 ದಿನಗಳಿಂದ ಹೆಣ್ಣು ಮಕ್ಕಳನ್ನು ಚುಡಾಯಿಸುವಂತಹ ಕೃತ್ಯಗಳಲ್ಲಿ ತೊಡಗಿದೆಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ದೂರು-ಪ್ರತಿ ದೂರು ದಾಖಲು: ಘಟನೆ ಸಂಬಂಧ ಮಂಗಳವಾರ ಮನೆ ಮಾಲೀಕರಾದ ಸುಧಾ ಅವರು ನೀಡಿದ ದೂರನ್ನಾಧರಿಸಿ ಇಬ್ಬರು ಅಪ್ರಾಪ್ತ ಮುಸ್ಲಿಂ ಹುಡುಗರ ವಿರುದ್ಧ ದೂರು ದಾಖಲಿಸಿದ್ದಾರೆ. ಹುಡುಗರು ನೀಡಿದ ದೂರನ್ನಾಧರಿಸಿ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಂತೋಷ್ ಕೋಟ್ಯಾನ್ ಹಾಗೂ ಬಜರಂಗದಳ ಮುಖಂಡ ಶ್ಯಾಂ ವಿ. ಗೌಡ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಸದ್ಯ ಹಲ್ಲೆಗೊಳಗಾದ ಹುಡುಗರಿಗೆ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ನಗರದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮುಂದುವರಿದಿದೆ.

> **ಬಿಜೆಪಿ ಮುಖಂಡ ಸಂತೋಷ್ ಕೋಟ್ಯಾನ್ ಮತ್ತು ಬಜರಂಗದಳದ ಶಾಮ್ ಅವರ ಮೇಲೆ ಪೊಲೀಸರು ಸುಖಾಸುಮ್ಮನೆ ಪ್ರಕರಣ ದಾಖಲಿಸಿದ್ದಾರೆ. ರಕ್ಷಣೆಗೆ ಬಂದವರ ಮೇಲೆ ಕೇಸ್ ಹಾಕಿ ಟಾರ್ಗೆಟ್ ಮಾಡಲಾಗುತ್ತಿದೆ. ಬಂಧಿತ ಯುವಕರೇ ಕಲ್ಲು ಹೊಡೆದಿದ್ದನ್ನು ಕಣ್ಣಾರೆ ಕಂಡಿದ್ದೇನೆ. ಅವರು ತಪ್ಪಿಸಿಕೊಳ್ಳಲು ಯತ್ನಿಸಿದಾಗ ನಾನೇ ಹಿಡಿದುಕೊಂಡಿದ್ದೇನೆ.**
> ■ ಇಕ್ಬಾಲ್, ಸ್ಥಳೀಯ ನಿವಾಸಿ

ಭಾರತದಲ್ಲಿ ಹಸಿರು ಹೈಡ್ರೋಜನ್ ಬೆಲೆ ಐತಿಹಾಸಿಕ ಕನಿಷ್ಠ ಮಟ್ಟಕ್ಕೆ
₹279 ಪ್ರತಿ ಕೆಜಿ ದರದಲ್ಲಿ ಲಭ್ಯ

ನವದೆಹಲಿ: ದೇಶದಲ್ಲಿ ಹಸಿರು ಹೈಡ್ರೋಜನ್ ಬೆಲೆ ಐತಿಹಾಸಿಕ ಮಟ್ಟಕ್ಕೆ ಇಳಿಕೆ ಕಂಡಿದೆ. ರೂ.279ರ ದರದೊಂದಿಗೆ ಭಾರತ ಹಸಿರು ಹೈಡ್ರೋಜನ್ ಕ್ಷೇತ್ರದಲ್ಲಿ ಹೊಸ ಜಾಗತಿಕ ಮಾನದಂಡ ಸ್ಥಾಪಿಸಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಘೋಷಿಸಿದರು.

ಮುಂಬೈಯಲ್ಲಿ ಮಂಗಳವಾರ ಆಯೋಜಿಸಿದ್ದ 'ಹವಾಮಾನ ಸಪ್ತಾಹ 2026 ಉದ್ದೇಶಿಸಿ ಮಾತನಾಡಿ, ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್ ಅಡಿಯಲ್ಲಿ ಹಸಿರು ಹೈಡ್ರೋಜನ್ ಬೆಲೆ ಪ್ರತಿ ಕೆಜಿಗೆ ರೂ.279 ಕನಿಷ್ಠ ಮಟ್ಟಕ್ಕೆ ಇಳಿದಿದೆ ಎಂದರು. ಸೂರ್ಯಘರ್ ಯೋಜನೆಯಡಿ ಭಾರತ ಪ್ರಸ್ತುತ 30 ಲಕ್ಷ ಮನೆಗಳಿಗೆ ಸೌರ ವಿದ್ಯುತ್ ಕಲ್ಪಿಸುವ ಮತ್ತೊಂದು ಮೈಲುಗಲ್ಲು ಸ್ಥಾಪಿಸಿದೆ. ಮನೆಗಳಿಗೆ ಸೌರ ಮೇಲ್ಛಾವಣಿ ಮೂಲಕ ಉಚಿತ ವಿದ್ಯುತ್ ಕಲ್ಪಿಸಿದೆ ಎಂದರು.

ಜಾಗತಿಕ ಹವಾಮಾನ ಸುಸ್ಥಿರತೆಯಲ್ಲಿ ಭಾರತ ಪ್ರಬಲ ಇಂಜಿನ್ ಆಗಿ ಕಾರ್ಯ ಸಾಧಿಸುತ್ತಿದ್ದು, ಪಿಎಂ ಸೂರ್ಯಘರ್ ಮತ್ತು 'ಪಿಎಂ ಕುಸುಮ್' ನಮ್ಮ ಸೌರ ಶಕ್ತಿಯ ಡಬಲ್ ಇಂಜಿನ್ ಆಗಿವೆ ಎಂದು ಪ್ರತಿಪಾದಿಸಿದರು. ಪಿಎಂಕುಸುಮ್ ಮತ್ತು ಪಿಎಂಸೂರ್ಯಘರ್ ಅಳವಡಿಕೆ ಮೂಲಕ, ರೈತರು ಮತ್ತು ಸಾಮಾನ್ಯ ಕುಟುಂಬಗಳು ಸಹ ದೇಶದ ಶುದ್ಧ ಇಂಧನ ಪರಿವರ್ತನೆ ಪ್ರಯಾಣದಲ್ಲಿ ಸಕ್ರಿಯರಾಗುತ್ತಿದ್ದಾರೆಂದು ಜೋಶಿ ಹೆಮ್ಮೆ ವ್ಯಕ್ತಪಡಿಸಿದರು.

ಹವಾಮಾನ ಕುರಿತ ಮೊದಲ ಸಮಾವೇಶ: ಭಾರತ ಇಂದು ಹವಾಮಾನ ಕುರಿತಾದ ಜಾಗತಿಕ ಸಪ್ತಾಹ, ಸಮಾವೇಶ ಆಯೋಜಿಸುವ ಮಟ್ಟಕ್ಕೆ ಬೆಳೆದಿದೆ. ಮುಂಬೈಯಲ್ಲಿ ಆಯೋಜಿಸಿರುವ ಇದು ಮೊದಲ ಜಾಗತಿಕ ದಕ್ಷಿಣ ಸಮಾವೇಶವಾಗಿದೆ. ಇದಕ್ಕಾಗಿ ಮಹಾರಾಷ್ಟ್ರ ತಂಡವನ್ನು ಅಭಿನಂದಿಸುತ್ತೇನೆ ಎಂದರು. ಕರ್ನಾಟಕ ಮತ್ತು ಮಹಾರಾಷ್ಟ್ರ ವಿಶೇಷವಾಗಿ ಆರ್ಥಿಕತೆಯ ಚಾಲಕವಾಗಿವೆ. ಆರ್ಥಿಕತೆ ಮತ್ತು ಬೆಳವಣಿಗೆಗೆ ಸಂಬಂಧಿಸಿದಂತೆ ಮಹಾರಾಷ್ಟ್ರ ತೆಗೆದುಕೊಳ್ಳುವ ಯಾವುದೇ ನಿರ್ಧಾರವನ್ನು ದೇಶವೇ ಅನುಸರಿಸುತ್ತದೆ. ಮುಂಬೈ ನಮ್ಮ ಆರ್ಥಿಕ ಚಟುವಟಿಕೆಯ ಪ್ರಮುಖ ಕೇಂದ್ರವಾಗಿದೆ ಎಂದರು.

ದೊಡ್ಡ ದೇಶವಾಗಿದ್ದರೂ ಭಾರತ ಈ ಹಿಂದೆ ಹವಾಮಾನ ಸಪ್ತಾಹ, ಹವಾಮಾನ ಸಮಾವೇಶ ಅಥವಾ ಸುಸ್ಥಿರ ಸಮಾವೇಶದಂತಹ ಕಾರ್ಯಕ್ರಮ ಆಯೋಜಿಸಿರಲಿಲ್ಲ. ಆದರೀಗ ಪ್ರಧಾನಿ ಮೋದಿ ಯವರ ಮಾರ್ಗದರ್ಶನದಲ್ಲಿ ಹವಾಮಾನ ಸುಸ್ಥಿರತೆಯಲ್ಲಿ ದೇಶದಲ್ಲೀಗ ಮಹತ್ತರ ಬದಲಾವಣೆ ಆಗುತ್ತಿದೆ ಎಂದು ಪ್ರತಿಪಾದಿಸಿದರು. ಪ್ರಧಾನಿ ಮೋದಿ ಅವರ ದೂರದೃಷ್ಟಿ, ನಾಯಕತ್ವದಲ್ಲಿ ಭಾರತ ಜಾಗತಿಕ ಹವಾಮಾನ ಸುಸ್ಥಿರತೆಯಲ್ಲಿ ನಿರ್ಣಾಯಕ ಹೆಜ್ಜೆಯಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದರು. ಈ ಹವಾಮಾನ ಸುಸ್ಥಿರತೆ ಸಮಾವೇಶದಲ್ಲಿ ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವೀಸ್ ಮತ್ತು ಸಚಿವರು ಉಪಸ್ಥಿತರಿದ್ದರು.



> **ಮಹಾರಾಷ್ಟ್ರದಲ್ಲಿ ಸೌರಶಕ್ತಿ ಒಂದು ಜನಾಂದೋಲನ ರೀತಿ ರೂಪಾಂತರಗೊಳ್ಳುತ್ತಿದೆ. ಪರಿಣಾಮ ಫಲಿತಾಂಶಗಳು ಗಮನಾರ್ಹವಾಗಿವೆ. ಮಹಾರಾಷ್ಟ್ರ ಇಂದು ಕೈಗಾರಿಕಾ ಮತ್ತು ಗೃಹಬಳಕೆ ವಿದ್ಯುತ್ ದರ ಅತ್ಯಂತ ಕಡಿಮೆ ಇರುವ ಭಾರತದ ಮೊದಲ ರಾಜ್ಯವಾಗಿ ನಿಂತಿದೆ. ಇದು ಭಾರತದ ಶುದ್ಧ ಇಂಧನ ಕ್ರಾಂತಿಗೆ ಸಾಕ್ಷಿಯಾಗಿದೆ.**
> ■ ಪ್ರಹ್ಲಾದ ಜೋಶಿ, ಕೇಂದ್ರ ಸಚಿವ

4 ಲಕ್ಷ ವಿದ್ಯಾರ್ಥಿವೇತನ ಅರ್ಜಿ ಅನರ್ಹ

ಪುಟ ೧➜ **ವಿದ್ಯಾರ್ಥಿವೇತನಕ್ಕೆ ವಿವಿಧ ಯೋಜನೆ:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗಾಗಿ ವಿವಿಧ ಯೋಜನೆಯಲ್ಲಿ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಇದರಲ್ಲಿ ಕೇಂದ್ರ ಪುರಸ್ಕೃತ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಅಲೆಮಾರಿ/ಅರೆ ಅಲೆಮಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಶುಲ್ಕ ಮರುಪಾವತಿ ಹಾಗೂ ವಿದ್ಯಾಸಿರಿ ಯೋಜನೆ. ಇದರಲ್ಲಿ 2025-26ನೇ ಸಾಲಿನಲ್ಲಿ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ಯಾವುದೇ ವಿದ್ಯಾರ್ಥಿ ವೇತನ ನೀಡಿಲ್ಲ. ಇದನ್ನು ಹೊರತುಪಡಿಸಿ ಉಳಿದ ಮೂರು ಯೋಜನೆಗಳಿಗೆ 379.03 ಕೋಟಿ ರೂ. ನೀಡಲಾಗಿದೆ.

ಐದು ವರ್ಷಗಳಲ್ಲಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿದವರು: ಕಳೆದ ಐದು ವರ್ಷಗಳಲ್ಲಿ ವಿದ್ಯಾರ್ಥಿವೇತನಕ್ಕಾಗಿ ಒಟ್ಟು 41,42,798 ಅರ್ಜಿ ಸಲ್ಲಿಕೆಯಾಗಿವೆ.



> **ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ಜಿಲ್ಲಾ/ತಾಲೂಕು ಮತ್ತು ವಿದ್ಯಾರ್ಥಿಗಳ ಲಾಗಿನ್‌ನಲ್ಲಿ ಅವಕಾಶ ನೀಡಲಾಗಿದೆ. ಅಲ್ಲದೆ, ಈ ಸಮಸ್ಯೆಗಳನ್ನು ಬಗೆಹರಿಸಿಕೊಂಡ ನಂತರ ಈ ವಿದ್ಯಾರ್ಥಿಗಳಿಗೆ ಪಾವತಿ ಮಾಡಲು ಕ್ರಮ ವಹಿಸಲಾಗುವುದು.**
> ■ ಶಿವರಾಜ ತಂಗಡಗಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ

ಆರ್ಥಿಕ ವರ್ಷ	ಸ್ವೀಕೃತ ಅರ್ಜಿಗಳು	ಅರ್ಹ ಅರ್ಜಿಗಳು	ಅನರ್ಹ ಅರ್ಜಿಗಳು
2021-22	9,96,557	9,87,273	9,284
2022-23	9,36,807	8,75,175	61,632
2023-24	8,04,148	7,40,010	64,138
2024-25	8,13,286	6,51,767	1,61,519
2025-26	5,92,000	4,83,591	1,08,049
ಒಟ್ಟು	41,42,798	37,37,816	4,04,622

ಪಿಯು, ಎಸ್ಸೆಸ್ಸೆಲ್ಸಿ ವೇಳಾಪಟ್ಟಿ ಪ್ರಕಟ

ಪುಟ ೧➜ ಎಲ್ಲ ಕೇಂದ್ರಗಳಲ್ಲಿ ವೆಬ್‌ಕಾಸ್ಟಿಂಗ್ ಇರಲಿದೆ ಎಂದರು. ದ್ವಿತೀಯ ಪಿಯುಸಿ ಪರೀಕ್ಷೆಗೆ 6,46,801 ಹೊಸಬರು, 50,540 ಪುನರಾವರ್ತಿತ ಮತ್ತು 13,022 ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಪರೀಕ್ಷೆಗೆ ಒಟ್ಟು 5,174 ಶಾಲೆ, ಕಾಲೇಜುಗಳು ನೋಂದಾಯಿಸಿದ್ದು, 1,217 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಫಲಿತಾಂಶವನ್ನು ಏ.7ರಂದು ಪ್ರಕಟಿಸಲಾಗುವುದು ಎಂದು ತಿಳಿಸಿದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 8,12,855 ಹೊಸಬರು, 62,845 ಪುನರಾವರ್ತಿತ ಮತ್ತು 27,189 ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಪರೀಕ್ಷೆಗೆ ಒಟ್ಟು 15,941 ಶಾಲೆಗಳು ನೋಂದಾಯಿಸಿಕೊಂಡಿದ್ದು, 2,871 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಏ.24ರಂದು ಫಲಿತಾಂಶ ಪ್ರಕಟಿಸಲಾಗುವುದು ಎಂದು ಮಾಹಿತಿ ನೀಡಿದರು. ವಿದ್ಯಾರ್ಥಿಗಳು ಪರೀಕ್ಷೆಯ ಬಗ್ಗೆ ಭಯಪಡುವ ಅಗತ್ಯವಿಲ್ಲ. ಈ ಹೊಸ ವ್ಯವಸ್ಥೆಯ ಅಡಿಯಲ್ಲಿ (ಮೂರು ಪರೀಕ್ಷೆಗಳು) ಒಂದು ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದರೂ, ಮುಂದಿನ ಪರೀಕ್ಷೆಯಲ್ಲಿ ಅಂಕ ಸುಧಾರಿಸಿಕೊಳ್ಳಲು ಮುಕ್ತ ಅವಕಾಶವಿದೆ. ಪರೀಕ್ಷೆ ನಡೆಯುವ ಎಲ್ಲ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಕುಡಿಯುವ ನೀರು ಮತ್ತು ಸುಗಮ ಸಾರಿಗೆ ವ್ಯವಸ್ಥೆ ಕಲ್ಪಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ಉಚಿತ ಸಾರಿಗೆ ಸೌಲಭ್ಯ

ಪುಟ ೧➜ ಖಾಸಗಿ ಬಸ್‌ಗಳಲ್ಲೂ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೆ ಉಚಿತ ಸೇವೆ ನೀಡುವಂತೆ ಕೋರಲಾಗುವುದು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಆಯುಕ್ತ ವಿಕಾಸ್ ಕಿಶೋರ್ ಸುರಳ್ಕರ್, ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕಿ ವಿದ್ಯಾಕುಮಾರಿ, ಪರೀಕ್ಷಾ ಮಂಡಳಿ ಅಧ್ಯಕ್ಷ ಪ್ರಕಾಶ್ ನಿಟ್ಟಾಳಿ ಮೊದಲಾದವರಿದ್ದರು.

ದ್ವಿತೀಯ ಪಿಯು ವೇಳಾಪಟ್ಟಿ

ಫೆ.28	ಕನ್ನಡ, ಅರೇಬಿಕ್
ಮಾ.2	ಭೂಗೋಳಶಾಸ್ತ್ರ, ಸಂಖ್ಯಾಶಾಸ್ತ್ರ, ಮನಃಶಾಸ್ತ್ರ
ಮಾ.3	ಇಂಗ್ಲಿಷ್
ಮಾ.4	ಸಂಸ್ಕೃತ
ಮಾ.5	ಇತಿಹಾಸ
ಮಾ.6	ಭೌತಶಾಸ್ತ್ರ
ಮಾ.7	ಐಚ್ಛಿಕ ಕನ್ನಡ, ಭೂಗರ್ಭಸಾಸ್ತ್ರ
ಮಾ.9	ರಸಾಯನಶಾಸ್ತ್ರ
ಮಾ.10	ಅರ್ಥಶಾಸ್ತ್ರ
ಮಾ.12	ಹಿಂದಿ
ಮಾ. 13	ರಾಜ್ಯಶಾಸ್ತ್ರ
ಮಾ.14	ಲೆಕ್ಕಶಾಸ್ತ್ರ, ಗಣಿತ
ಮಾ.16	ಸಮಾಜಶಾಸ್ತ್ರ, ಜೀವಶಾಸ್ತ್ರ
ಮಾ.17	ಹಿಂದೂಸ್ತಾನಿ ಸಂಗೀತ

ಎಸ್ಸೆಸ್ಸೆಲ್ಸಿ ವೇಳಾಪಟ್ಟಿ

ಮಾ.18	ಪ್ರಥಮ ಭಾಷೆ
ಮಾ.23	ವಿಜ್ಞಾನ, ರಾಜ್ಯಶಾಸ್ತ್ರ, ಸಂಗೀತ
ಮಾ.25	ದ್ವಿತೀಯ ಭಾಷೆ
ಮಾ.28	ಗಣಿತ, ಸಮಾಜಶಾಸ್ತ್ರ
ಮಾ.30	ತೃತೀಯ ಭಾಷೆ, ಎನ್‌ಎಸ್‌ಕ್ಯುಎಫ್
ಏ.1	ಅರ್ಥಶಾಸ್ತ್ರ
ಏ.2	ಸಮಾಜ ವಿಜ್ಞಾನ

ಬಿಎಲ್‌ಒಗಳಿಂದ ಮತಪಟ್ಟಿ ಅಕ್ರಮ

ಪುಟ ೧➜ ಮತದಾರರ ಪಟ್ಟಿ ಜತೆಗೆ, ಮನೆಗಳು ಹಾಗೂ ಮತಗಳ ಮ್ಯಾಪಿಂಗ್ ಆಗಬೇಕು. ಈ ಹಿನ್ನೆಲೆಯಲ್ಲಿ ಕಳೆದ ಚುನಾವಣೆಯಲ್ಲಿ ಕೆಲವು ಕ್ಷೇತ್ರಗಳು ಹಾಗೂ ಬೂತ್‌ಗಳಲ್ಲಿ ಆಗಿದ್ದ ಲೋಪಗಳನ್ನು ಸರಿಪಡಿಸಬೇಕು. ಈವರೆಗೂ ಮತದಾರರ ಪಟ್ಟಿಯಲ್ಲಿ ನಾವು ಕಂಡಿರುವ ಲೋಪದೋಷಗಳ ಮಾಹಿತಿ ನೀಡಿದ್ದೇವೆ. ಮತಗಳನ್ನು ಬೇರೆ ಬೂತ್‌ಗಳಿಗೆ ವಿಂಗಡಿಸುವುದು, ಅಲ್ಪಸಂಖ್ಯಾತರು, ಪರಿಶಿಷ್ಟರ ಮತಗಳನ್ನು ಅಕ್ರಮವಾಗಿ ತೆಗೆದಿರುವುದು, ನಕಲಿ ಮತಗಳನ್ನು ಸೇರಿಸಿರುವ ಬಿಎಲ್‌ಒಗಳನ್ನು ಅಮಾನತುಗೊಳಿಸುವುದು ಸೇರಿದಂತೆ ಕಾನೂನು ಚೌಕಟ್ಟಿನಲ್ಲಿ ಮತದಾರರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಮನವಿ ಸಲ್ಲಿಸಿದ್ದೇವೆ ಎಂದರು.

ರಾಜ್ಯ ಚುನಾವಣಾ ಆಯೋಗವು ಮುಂಬರುವ ಜಿಬಿಎಯ ಪಾಲಿಕೆಗಳ ಚುನಾವಣೆ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲಿದೆ. ಆಯೋಗವು ರಾಜ್ಯದಲ್ಲಿ ಈ ಹಿಂದೆ ನೀಡಲಾಗಿದ್ದ ಮತದಾರರ ಪಟ್ಟಿ ಆಧಾರವಾಗಿಟ್ಟುಕೊಂಡು ಪರಿಷ್ಕರಣೆ ಮಾಡುತ್ತಿದೆ. ಜಿಬಿಎ ವ್ಯಾಪ್ತಿಯಲ್ಲಿ ಬಿಡುಗಡೆಯಾಗಿರುವ ಮತದಾರರ ಕರಡು ಪಟ್ಟಿಯಲ್ಲಿ ಕೆಲವು ಲೋಪಗಳಿದ್ದು, ಸರಿಪಡಿಸುವಂತೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು. ರಾಜ್ಯ ಚುನಾವಣಾ ಆಯೋಗದ ಕಚೇರಿಯಲ್ಲಿ ಆಯುಕ್ತ ಜಿ.ಎಸ್. ಸಂಗ್ರೇಶಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದು, ನಿಯೋಗದಲ್ಲಿ ಸಚಿವರಾದ ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್, ಶಾಸಕರಾದ ರಿಜ್ವಾನ್ ಅರ್ಷದ್ ಮತ್ತಿತರರು ಇದ್ದರು.

ಹೊಸದಾಗಿ ಮ್ಯಾಪಿಂಗ್ ಮಾಡಿ ಮತದಾರರ ಪಟ್ಟಿ ಸಿದ್ಧಪಡಿಸಿ

ಪುಟ ೧➜ ಯಾರಿಗೆ ಮತದಾನ ಮಾಡುವ ಅರ್ಹತೆ ಇದೆಯೋ ಅವರಿಗೆ ಮತದಾನದ ಹಕ್ಕು ನೀಡಲಿ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.



> **ಮುಂದಿನ ದಿನಗಳಲ್ಲಿ ಜಿಬಿಎ ಸೇರಿದಂತೆ ಸ್ಥಳೀಯ ಸಂಸ್ಥೆ ಚುನಾವಣೆ ನಡೆಯಲಿದೆ. ಹೆಚ್ಚು ಕಮ್ಮಿಯಾದರೆ ರಾಜ್ಯ ಚುನಾವಣಾ ಆಯೋಗ ಮತ್ತು ಸರ್ಕಾರಕ್ಕೆ ಕೆಟ್ಟ ಹೆಸರು ಬರಲಿದೆ. ಅದಕ್ಕೆ ಮುನ್ನೆಚ್ಚರಿಕೆಯಾಗಿ ಆಯುಕ್ತರನ್ನು ಭೇಟಿ ಮಾಡಿ ಚರ್ಚೆ ಮಾಡಿದ್ದೇವೆ.**
> ■ ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಕಟ್ಟಾ ಕಾಂಗ್ರೆಸಿಗರು ನಿಯತ್ತಿರುವವರು

ಪುಟ ೧➜ ಈ ತೀರ್ಮಾನ ಏನು ಎಂಬುದು ಸಮಯ ಬಂದಾಗ ತಿಳಿಯುತ್ತದೆ. ಇದು ಕದ್ದುಮುಚ್ಚಿ ಮಾಡಿಕೊಂಡಿರುವ ಗುಟ್ಟು ವ್ಯವಹಾರವಲ್ಲ. ಸಿದ್ದರಾಮಯ್ಯ ಅವರೇ ಸಮಯ ಬಂದಾಗ ರಾಜ್ಯದ ಜನಕ್ಕೆ ಸಂದೇಶ ನೀಡುತ್ತಾರೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ನಾಯಕರ ಹೇಳಿಕೆ ಬಗ್ಗೆ ಸಿಎಂ ಹಾಗೂ ಹೈಕಮಾಂಡ್ ನಾಯಕರು ಕ್ರಮ ಕೈಗೊಳ್ಳುತ್ತಾರೆ. ನಾನು ಮಹದೇವಪ್ಪ ಹಾಗೂ ಬೇರೆಯವರಿಗೆ ಉತ್ತರ ನೀಡಲು ತಯಾರಿಲ್ಲ. ಅವರು ಬಹಳ ದೊಡ್ಡವರು. ಈಗ ಅವರೂ ನಮ್ಮ ಹೈಕಮಾಂಡ್ ಭಾಗವಾಗಿದ್ದಾರೆ. ಅವರ ಬಗ್ಗೆ ನಾನು ಏನನ್ನೂ ಮಾತನಾಡುವುದಿಲ್ಲ. ಈ ಬಗ್ಗೆ ಪಕ್ಷವೇ ತೀರ್ಮಾನ ಮಾಡಲಿ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು.

ಒಳಮೀಸಲಾತಿ ಅನುಮೋದನೆಗೆ ಮನವಿ

ಬೆಂಗಳೂರು: ಒಳಮೀಸಲಾತಿ ಮಸೂದೆಯನ್ನು ಅಂಗೀಕರಿಸಿ ಅನುಮೋದನೆ ನೀಡುವಂತೆ ಒತ್ತಾಯಿಸಿ ಸಚಿವರಾದ ಕೆ.ಎಚ್. ಮುನಿಯಪ್ಪ ಹಾಗೂ ಆರ್.ಬಿ. ತಿಮ್ಮಾಪುರ ನೇತೃತ್ವದಲ್ಲಿ ಶಾಸಕರ ನಿಯೋಗ ಮಂಗಳವಾರ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. ಸುಪ್ರೀಂ ಆದೇಶದಂತೆ ವಿಧಾನಸಭೆ ಮತ್ತು ವಿಧಾನಪರಿಷತ್‌ನಲ್ಲಿ ಸುದೀರ್ಘ ಚರ್ಚೆಯ ಮೂಲಕ ಒಳಮೀಸಲಾತಿ ಮಸೂದೆ ಪಾಸ್ ಆಗಿದ್ದು, ಮಸೂದೆಯನ್ನು ಅಂಗೀಕರಿಸಿ ಅನುಮೋದನೆ ನೀಡಿದರೆ ಪರಿಶಿಷ್ಟ ಪಂಗಡದ 101 ಜಾತಿಗಳಿಗೆ ಅನುಕೂಲವಾಗಿದೆ ಎಂದು ಮನವಿ ಮಾಡಿದರು.

ಭಾರತ-ಫ್ರಾನ್ಸ್ ಹೂಡಿಕೆ ಬಂಧ

ಪುಟ ೧➜ ನಾವು ಫ್ರಾನ್ಸ್‌ನ ತಜ್ಞತೆ ಮತ್ತು ಭಾರತದ ಪ್ರಮಾಣವನ್ನು ಸಂಯೋಜನೆಗೊಳಿಸುತ್ತಿದ್ದೇವೆ. ಉಭಯ ದೇಶಗಳು ಅತ್ಯಂತ ವಿಶಿಷ್ಟ ಬಾಂಧವ್ಯ ಹಂಚಿಕೊಂಡಿದ್ದು, ಫ್ರಾನ್ಸ್ ಭಾರತದ ಅತ್ಯಂತ ಹಳೆಯ ವ್ಯೂಹಾತ್ಮಕ ಪಾಲುದಾರರಲ್ಲೊಂದಾಗಿದೆ ಎಂದು ಪ್ರಧಾನಿ ಮೋದಿಯವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅತ್ಯುನ್ನತ ಮಟ್ಟದಲ್ಲಿ ಹಾರಬಲ್ಲ ವಿಶ್ವದ ಏಕೈಕ ಹೆಲಿಕಾಪ್ಟರ್ ಎಚ್-125!: ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್ ಅವರ ಜತೆಗೂಡಿ, ನಾವು ಈ ವ್ಯೂಹಾತ್ಮಕ ಪಾಲುದಾರಿಕೆಗೆ ಅಭೂತಪೂರ್ವ ಆಳ ಮತ್ತು ಶಕ್ತಿ ತುಂಬಿದ್ದೇವೆ. ಈ ನಂಬಿಕೆ ಮತ್ತು ಹಂಚಿಕೆಯ ದೃಷ್ಟಿಕೋನದಲ್ಲಿ ಇಂದು ನಾವು ನಮ್ಮ ಬಾಂಧವ್ಯವನ್ನು 'ವಿಶೇಷ ಜಾಗತಿಕ ವ್ಯೂಹಾತ್ಮಕ ಪಾಲುದಾರಿಕೆ'ಯಾಗಿ ಎತ್ತರಿಸಿದ್ದೇವೆ. ಈ ಪಾಲುದಾರಿಕೆ ಕೇವಲ ವ್ಯೂಹಾತ್ಮಕವಷ್ಟೇ ಆಗಿರದೆ, ಇಂದಿನ ಪ್ರಕ್ಷುಬ್ಧತೆಯ ಸನ್ನಿವೇಶದಲ್ಲಿ ಇದು ಜಾಗತಿಕ ಸ್ಥಿರತೆಯ ಪಾಲುದಾರಿಕೆಯಾಗಿ ಮತ್ತು ಜಾಗತಿಕ ಪ್ರಗತಿಯ ಶಕ್ತಿಯಾಗಿ ಮೂಡಿಬಂದಿದೆ ಎಂದು ವಿಶ್ಲೇಷಿಸಿದ ಮೋದಿಯವರು, ಎಚ್-125 ಹೆಲಿಕಾಪ್ಟರ್‌ಗಳ ಜೋಡಣಾ ವ್ಯವಸ್ಥೆ ಭಾರತದಲ್ಲಿ ಸ್ಥಾಪನೆಗೊಳ್ಳುತ್ತಿರುವುದನ್ನು ಈ ವಿಶ್ವಾಸದ ದ್ಯೋತಕ ಎಂದರು. ಈ ಎಚ್-125 ಹೆಲಿಕಾಪ್ಟರ್ ಮೌಂಟ್ ಎವರೆಸ್ಟ್ (ಗೌರಿಶಂಕರ)ನಂತಹ ಅತ್ಯುನ್ನತ ಪರ್ವತೀಯ ಪ್ರದೇಶಗಳಲ್ಲೂ ಹಾರಾಟ ನಡೆಸಬಲ್ಲ ವಿಶ್ವದ ಏಕೈಕ ಹೆಲಿಕಾಪ್ಟರ್ ಆಗಿದ್ದು, ಇದನ್ನು ಈಗ ವಿಶ್ವದೆಲ್ಲೆಡೆಗೆ ರಫ್ತು ಮಾಡಲೂ ಅವಕಾಶವಿದೆ ಎಂದು ಪ್ರಧಾನಿ ಹೇಳಿದರು.

ಭಾರತ ಫ್ರಾನ್ಸ್‌ನ ಅತ್ಯಂತ ವಿಶ್ವಾಸಾರ್ಹ ಪಾಲುದಾರ

ಪುಟ ೧➜ ಭಾರತ ಮತ್ತು ಫ್ರಾನ್ಸ್‌ಗಳು ಕಾನೂನು ಆಡಳಿತದಲ್ಲಿ ದೃಢವಾದ ನಂಬಿಕೆ ಹೊಂದಿರುವ ದೇಶಗಳಾಗಿದ್ದು, ಕಳೆದ ಕೆಲವು ವರ್ಷಗಳಲ್ಲಿ ಇದನ್ನು ನಾವು ಸಾಬೀತುಪಡಿಸಿದ್ದೇವೆ. ಭಯೋತ್ಪಾದನೆಯ ಪಿಡುಗನ್ನು ಹತ್ತಿಕ್ಕಲು ನಾವು ಒಂದಾಗಿ ಕೆಲಸ ಮಾಡಲಿದ್ದೇವೆ ಎಂದರು.

ಶೀಘ್ರದಲ್ಲೇ ಭಾರತ ಅತಿದೊಡ್ಡ ರಫ್ತುದಾರ

ಪುಟ ೧➜ ದೇಶದ ಮೊಟ್ಟ ಮೊದಲ ಎಚ್125 ಹೆಲಿಕಾಪ್ಟರ್ ಘಟಕವನ್ನು 1000 ಕೋಟಿ ಬಂಡವಾಳದೊಂದಿಗೆ ಆರಂಭಿಸಲಾಗುತ್ತಿದೆ. ಇದರಿಂದ ಮೂಲ ಸೌಕರ್ಯಗಳ ಜೊತೆಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗವಕಾಶಗಳು ಯುವ ಸಮುದಾಯಕ್ಕೆ ವಿಫುಲವಾಗಿ ಸಿಗಲಿದೆ. ಮುಂಬರುವ ದಿನಗಳಲ್ಲಿ ರಕ್ಷಣಾ ಕ್ಷೇತ್ರಕ್ಕೆ ಅಗತ್ಯವಿರುವ ಸಿ295 ಮಾದರಿಯ ಹೆಲಿಕಾಪ್ಟರ್‌ಗಳನ್ನು ಹಾಗೂ ಏಕ ಇಂಜಿನ್ ಹೆಲಿಕಾಪ್ಟರ್‌ಗಳ ಉತ್ಪಾದನೆಯಲ್ಲಿ ಟಾಟಾ ಸಂಸ್ಥೆಯ ಸಹಭಾಗಿತ್ವ ಮೆಚ್ಚುಗೆಗೆ ಪಾತ್ರವಾಗಲಿದೆ ಎಂದು ಹೇಳಿದರು. ಫ್ರಾನ್ಸ್ ದೇಶದೊಂದಿಗೆ ಭಾರತವು ಸಾಕಷ್ಟು ಒಪ್ಪಂದಗಳನ್ನು ಮಾಡಿಕೊಳ್ಳುವ ಮೂಲಕ ವಿವಿಧ ಕ್ಷೇತ್ರಗಳಲ್ಲಿ ಮೂಲ ಸೌಕರ್ಯಗಳ ಅಗತ್ಯಗಳನ್ನು ಪೂರೈಕೆ ಮಾಡಲು ಸಿದ್ಧವಾಗಿದೆಯೆಂದು ತಿಳಿಸಿದರು. ಫ್ರಾನ್ಸ್ ರಕ್ಷಣಾ ಸಚಿವೆ ಕ್ಯಾಥರೀನ್ ವೌಟ್ರಿನ್ ಮಾತನಾಡಿ, ಕೇವಲ ಎರಡು ವರ್ಷಗಳ ಪ್ರಯತ್ನದ ಫಲವಾಗಿ ಈ ಹೆಲಿಕಾಪ್ಟರ್ ಜೋಡಣಾ ಘಟಕವನ್ನು ಆರಂಭಿಸಲಾಗುತ್ತಿದೆ. ಈ ರೀತಿಯ ಅನೇಕ ಘಟಕಗಳನ್ನು ಭಾರತ ದೇಶದ ಸಹಭಾಗಿತ್ವದಲ್ಲಿ ಆರಂಭಿಸಲಾಗುವುದು. ಈಗಾಗಲೇ ಭಾರತದಲ್ಲಿ 295 ಕ್ಕೂ ಹೆಚ್ಚು ಯೋಜನೆಗಳು ಸಾಕಾರಗೊಳ್ಳುತ್ತಿವೆ. ಇದು ಆರ್ಥಿಕವಾಗಿ ಮಾತ್ರವಲ್ಲದೆ ಕೈಗಾರಿಕೆಗಳ ಉನ್ನತೀಕರಣಕ್ಕೂ ಸಹಕಾರಿಯಾಗಿದೆ ಎಂದು ಶ್ಲಾಘಿಸಿದರು. ರಾಜ್ಯ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಭಾರತ ಹಾಗೂ ಫ್ರಾನ್ಸ್ ದೇಶಗಳ ರಕ್ಷಣಾ ಅಧಿಕಾರಿಗಳು, ಸಂಸದ ಎಂ.ಮಲ್ಲೇಶ್ ಬಾಬು, ಬಿಜೆಪಿ ಜಿಲ್ಲಾಧ್ಯಕ್ಷ ಓಂಶಕ್ತಿ ಚಲಪತಿ ಮೊದಲಾದವರು ಕಾರ್ಯಕ್ರಮದಲ್ಲಿದ್ದರು.

ನಾಗರಿಕ ವಿಮಾನ ಯಾನ: ಭಾರತಕ್ಕೆ 3ನೇ ಸ್ಥಾನ

ದೇಶದಲ್ಲಿ ರಕ್ಷಣೆ ಹಾಗೂ ನಾಗರೀಕ ವಿಮಾನ ಯಾನ ಕ್ಷೇತ್ರಗಳು ಒಂದೇ ಸೈಕಲ್‌ನ ಎರಡು ಗಾಲಿಗಳಂತೆ ಅಭಿವೃದ್ಧಿ ಪಡಿಸಲಾಗುತ್ತಿದೆ. ಎರಡು ಕ್ಷೇತ್ರಗಳನ್ನು ಸಮಾನ ಗಾತ್ರದಲ್ಲಿ ಅಭಿವೃದ್ಧಿಪಡಿಸಲು ಇತ್ತೀಚೆಗೆ ನರೇಂದ್ರ ಮೋದಿ ನೇತೃತ್ವದ ಸರಕಾರವು ಮಂಡಿಸಿರುವ ಬಜೆಟ್ ಪೂರಕ ಹಾಗೂ ಪ್ರೋತ್ಸಾಹದಾಯಕವಾಗಿದೆ ಎಂದು ನಾಗರೀಕ ವಿಮಾನಯಾನ ಸಚಿವ ಕೆ.ಆರ್. ನಾಯ್ಡು ತಿಳಿಸಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೇಕ್ ಇನ್ ಇಂಡಿಯಾ ಮೂಲಕ ವಿಶ್ವವನ್ನು ರೂಪಿಸುವಲ್ಲಿ ದೇಶವು ಅಪಾರವಾದ ಕೊಡುಗೆಗಳನ್ನು ನೀಡಲಾರಂಭಿಸಿದೆ. ಫ್ರಾನ್ಸ್‌ನೊಂದಿಗೆ 100 ಮಿಲಿಯನ್ ಯೂರೋ ಬಂಡವಾಳದೊಂದಿಗೆ ಆರಂಭಿಸಲಾಗುತ್ತಿರುವ ವೇಮಗಲ್ ಹೆಲಿಕಾಪ್ಟರ್ ಘಟಕವು 2047 ರವರೆಗಿನ ಜಾಗತಿಕ ಪೂರೈಕೆಗಳಿಗೆ ತಕ್ಕನಾಗಿದೆ. ಕಳೆದ 11 ವರ್ಷಗಳಲ್ಲಿ ದೇಶವು ನಾಗರೀಕ ವಿಮಾನ ಯಾನ ಕ್ಷೇತ್ರದಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ 10 ಸ್ಥಾನದಿಂದ 3 ಸ್ಥಾನಕ್ಕೆ ಜಿಗಿದಿದೆ. ಮುಂದಿನ 20 ವರ್ಷಗಳಲ್ಲಿ ದಕ್ಷಿಣ ಏಷ್ಯಾದಲ್ಲಿ 500 ಏಕ ಇಂಜಿನ್ ಹೆಲಿಕಾಪ್ಟರ್‌ಗಳಿಗೆ ಬೇಡಿಕೆ ಬರಲಿದ್ದು, ಇದರಿಂದ ಇತರೇ ದೇಶಗಳ ವೈಮಾನಿಕ ಅಗತ್ಯ ಪೂರೈಸಲು ರಫ್ತು ಬೇಡಿಕೆಯನ್ನು ದೇಶವು ಈಡೇರಿಸಲಿದೆ ಎಂದು ಸಚಿವ ನಾಯ್ಡು ತಿಳಿಸಿದರು.

ಬಾಂಗ್ಲಾ ಪ್ರಧಾನಿ ಆಗಿ ರೆಹಮಾನ್ ಪ್ರಮಾಣ

ಪುಟ ೧➜ ಅಧ್ಯಕ್ಷ ಮೊಹಮದ್ ಶಹಾಬುದ್ದೀನ್, ದೀರ್ಘಕಾಲೀನ ಸಂಪ್ರದಾಯಗಳಿಗೆ ತಿಲಾಂಜಲಿ ರೂಪದಲ್ಲಿ, ಬಂಗಾಭವನ್‌ಗೆ ಬದಲು ಸೌತ್ ಪ್ಲಾಜ಼ಾದಲ್ಲಿ 60 ವರ್ಷ ವಯಸ್ಸಿನ ತಾರೀಖ್ ರೆಹಮಾನ್‌ಗೆ ಪ್ರತಿಜ್ಞಾವಿಧಿ ಬೋಧಿಸಿದರು. ಕಾನೂನು ಪ್ರಕಾರವಾಗಿ ಶ್ರದ್ಧೆಯಿಂದ ಪ್ರಧಾನಿ ಹುದ್ದೆಯ ಕರ್ತವ್ಯ ನಿಭಾಯಿಸುವುದಾಗಿ ಹೊಸ ಪ್ರಧಾನಿ ರೆಹಮಾನ್ ಪ್ರಮಾಣ ಮಾಡಿದರು.

ಶಾಸಕರ ಸ್ವಂತ ಖರ್ಚಿನಲ್ಲಿ ವಿದೇಶ ಪ್ರವಾಸಕ್ಕೆ ಅನುಮತಿ ಅನಗತ್ಯ

ಹಾವೇರಿ: ಸರ್ಕಾರದಿಂದ ಶಾಸಕರು ವಿದೇಶ ಪ್ರವಾಸಕ್ಕೆ ಹೊರಟರೆ ನಮ್ಮ ಅನುಮತಿ ಪಡೆದುಕೊಂಡು ಹೋಗಬೇಕಾಗುತ್ತದೆ. ಆದರೆ, ಕೆಲ ಶಾಸಕರು ತಮ್ಮ ವೈಯಕ್ತಿಕ ಹಣ ಖರ್ಚು ಮಾಡಿಕೊಂಡು ಹೋದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 5 ಜನ ಎಂಎಲ್‌ಸಿ ಸೇರಿದಂತೆ ಒಟ್ಟಾರೆ 22 ಜನ ಅಸೆಂಬ್ಲಿ ಸದಸ್ಯರು ವಿದೇಶ ಪ್ರವಾಸಕ್ಕೆ ಹೋಗುತ್ತಿದ್ದಾರೆಂದು



ಮಾಧ್ಯಮಗಳಲ್ಲಿ ನೋಡಿದ್ದೇನೆ. ಶಾಸಕರು ತಮ್ಮ ವೈಯಕ್ತಿಕ ದುಡ್ಡು ಖರ್ಚು ಮಾಡುಕೊಂಡು ಹೋಗುತ್ತಿದ್ದಲ್ಲಿ ಅದಕ್ಕೆ ಯಾವುದೇ ತಕರಾರು ಇಲ್ಲ. ಅವರು ಒಂದು ವೇಳೆ ಸರ್ಕಾರದಿಂದ ಹೋಗಬೇಕಾಗಿದ್ದರೆ ನಮ್ಮನ್ನು ಅನುಮತಿ ಕೇಳಬೇಕಾಗುತ್ತದೆ ಎಂದು ತಿಳಿಸಿದರು.

ಸದ್ಯ ಭೋಜೇಗೌಡ ಎಂಬುವವರು ದಕ್ಷಿಣ ಆಫ್ರಿಕಾಗೆ ಹೊರಟಿರುವ ಬಗ್ಗೆ ನಮ್ಮನ್ನ ಅನುಮತಿ ಕೇಳಿದ್ದಾರೆ. ಹೀಗಾಗಿ ನಾವೂ ಕಾರ್ಯದರ್ಶಿಗೆ ಕಡತ ಮಂಡಿಸಿ ನೋಡಿಕೊಳ್ಳಲು ಸೂಚನೆ ನೀಡಿದ್ದೇನೆ. ಈ ಬಗ್ಗೆ ಫೈಲ್ ಬಂದ ಮೇಲೆ ತೀರ್ಮಾನ ಮಾಡುತ್ತೇನೆ ಎಂದರು. ಜನಗಣಮನ ಮೊದಲು ವಂದೇ ಮಾತರಂ ಹೇಳಬೇಕು ಎಂಬ ಆದೇಶದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಅದು ಕೇಂದ್ರದ ನಿರ್ಧಾರ ಆಗಿದೆ. ಅದರ ಬಗ್ಗೆ ನಾವೇನು ಹೇಳೋಕೆ ಹೋಗುವುದಿಲ್ಲ ಎಂದರು.

ನನೆಗುದಿಗೆ ಬಿದ್ದಿರುವ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಕುರಿತು ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲಿ ಸುಮಾರು 29 ಸಾವಿರ ಹುದ್ದೆಗಳು ಶಿಕ್ಷಣ ಇಲಾಖೆಯಲ್ಲಿ ಖಾಲಿ ಇವೆ. ಶಿಕ್ಷಕರಿಲ್ಲದೇ ಪಾಠ ಪ್ರವಚನ ಹೇಗೆ ನಡೆಯಬೇಕು. ಸಂಬಂಧಿಸಿದ ಸಚಿವರ ಜತೆಗೂ ಮಾತನಾಡುತ್ತೇನೆ. ಬರುವ ಅಧಿವೇಶನದಲ್ಲಿ ವಿಶೇಷ ಸಭೆ ಕರೆದು ಚರ್ಚಿಸಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಎಂದು ಹೇಳಿದರು.



ಬೆಳಗಾವಿಯಲ್ಲಿ ಅಕ್ಕ ಪಡೆ ವಾಹನಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಂಗಳವಾರ ಚಾಲನೆ ನೀಡಿದರು.

ನಾಯಕತ್ವ ಬದಲಾವಣೆ ನಿರ್ಧಾರ ಹೈಕಮಾಂಡ್ ಪ್ರಕಟಿಸಲಿ: ಶಾಸಕ

ದಾವಣಗೆರೆ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇವತ್ತೇ ಮುಖ್ಯಮಂತ್ರಿ ಆಗಲಿ ಎನ್ನುವವರಲ್ಲಿ ನಾನೇ ಮೊದಲಿಗ. ಆದರೆ, ಅದೆಲ್ಲವನ್ನೂ ತೀರ್ಮಾನ ಮಾಡುವುದು ನಮ್ಮ



ಪಕ್ಷದ ಹೈಕಮಾಂಡ್. ಹಾಗಾಗಿ ಈ ವಿಚಾರದ ಬಗ್ಗೆ ಹೈಕಮಾಂಡ್ ಶೀಘ್ರವೇ ಸೂಕ್ತ ತೀರ್ಮಾನ ಕೈಗೊಳ್ಳಬೇಕು ಎಂದು ಚನ್ನಗಿರಿ ಶಾಸಕ ಬಸವರಾಜ ವಿ.ಶಿವಗಂಗಾ ಒತ್ತಾಯಿಸಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರ ಹಂಚಿಕೆ ಬಗ್ಗೆ ಈಗಾಗಲೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆಂದು ಡಿಸೆಂಬರ್‌ನಲ್ಲೇ ನಾನು ರಕ್ತದಲ್ಲಿ ಬರೆದು ಕೊಡುವುದಾಗಿ ಹೇಳಿದ್ದೆ. ಈಗಲೂ ಅದನ್ನೇ ಹೇಳುತ್ತೇನೆ. ನನ್ನ ಮಾತಿಗೆ ಬದ್ಧನಿದ್ದೇನೆ. ಅಧಿಕಾರ ಹಂಚಿಕೆ ಬಗ್ಗೆ ಹೈಕಮಾಂಡ್, ಸಿಎಂ ಸಿದ್ದರಾಮಯ್ಯನವರು ಸ್ಪಷ್ಟಪಡಿಸಬೇಕು. ಆಗ ನಾವು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡುವುದೂ ತಪ್ಪುತ್ತದೆ. ಆಗ ಯಾವುದೇ ಗೊಂದಲ ಸಹ ಇರುವುದಿಲ್ಲ ಎಂದರು. ಡಿಕೆಶಿ ಆಪ್ತ ಶಾಸಕರನ್ನು ಬೀದಿ ನಾಯಿಗೆ ಹೋಲಿಸಿರುವ ಡಾ.ಎಚ್.ಸಿ.ಮಹದೇವಪ್ಪ ಅಂತಹ ಪದ ಬಳಸಬಾರದು. ಅವರೂ ಶಾಸಕರೇ ತಾನೇ? ಶಾಸಕರನ್ನು ನಾಯಿಗೆ ಹೋಲಿಕೆ ಮಾಡಿದರೆ, ಹೀಗೆ ಹೋಲಿಕೆ ಮಾಡಿದವರೂ ಅದೇ ತಾನೇ? ಅದು ಡಿ.ಕೆ.ಶಿವಕುಮಾರ ಬಣ ಇರಬಹುದು, ಸಿದ್ದರಾಮಯ್ಯನವರ ಬಣ ಇರಬಹುದು. ಹಿರಿಯ ನಾಯಕರಾಗಿ ಹೀಗೆಲ್ಲಾ ಶಾಸಕರನ್ನು ನಾಯಿಗೆ ಹೋಲಿಕೆ ಮಾಡುವುದು ಸರಿಯಲ್ಲ ಎಂದರು.

> ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಚುನಾವಣೆ ವೇಳೆ ಶಾಮನೂರು ಶಿವಶಂಕರಪ್ಪನವರು ಇದೇ ತಮ್ಮ ಕೊನೆ ಚುನಾವಣೆ, ಮುಂದೆ ಮುಸ್ಲಿಮರಿಗೆ ಟಿಕೆಟ್ ನೀಡುವುದಾಗಿ ಹೇಳಿದ್ದನ್ನು ಕೇಳಿದ್ದೇನೆ.
> ■ ಬಸವರಾಜ ವಿ.ಶಿವಗಂಗಾ, ಚನ್ನಗಿರಿ ಶಾಸಕ

ಕಿರುಸುದ್ದಿ

ಹೈಕಮಾಂಡ್ ನಿರ್ಧಾರಕ್ಕೆ ಬದ್ಧ: ಲಕ್ಷ್ಮೀ ಹೆಬ್ಬಾಳ್ಕರ್

ಬೆಳಗಾವಿ: ಮುಖ್ಯಮಂತ್ರಿ ಬದಲಾವಣೆ ಕುರಿತಂತೆ ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧ. ರಾಜ್ಯದಲ್ಲಿ ಈ ವಿಚಾರ ಬಗ್ಗೆ ಚರ್ಚಿಸಿದರೆ ಅಕ್ಷಮ್ಯ ಅಪರಾಧ ಆಗುತ್ತದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು. ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಜಿಲ್ಲೆಯಲ್ಲಿ ಕುಡಿಯುವ ನೀರಿನ ಹಾಹಾಕಾರ ಪ್ರಾರಂಭವಾಗಿರುವ ವಿಚಾರದ



ಬಗ್ಗೆ ಪ್ರತಿಕ್ರಿಯಿಸಿ, ಬೆಳಗಾವಿ ಜಿಲ್ಲೆಯಲ್ಲಿ ವರ್ಷದ 9 ತಿಂಗಳು ಮಳೆಯಾದರೂ ಬೇಸಿಗೆ ವೇಳೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದೇ ಇರುತ್ತದೆ. ಈ ಬಾರಿ ಅಂತಹ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗುವುದು ಎಂದರು. ಹಿರೇಬಾಗೇವಾಡಿ ಗ್ರಾಮದಲ್ಲಿ ಬಸ್ ನಿಲ್ದಾಣದ ಅವಶ್ಯಕತೆ ಇದೆ. ಈಗಾಗಲೇ ಪ್ರಸ್ತಾವನೆಯೂ ಸಿದ್ಧಗೊಂಡಿದೆ. ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿದ್ದು, ಬಸ್ ನಿಲ್ದಾಣಕ್ಕೆ ಸೂಕ್ತ ಜಾಗದ ಕೊರತೆ ಕಾಡುತ್ತಿದೆ. ಶೀಘ್ರವೇ ಇದಕ್ಕೆ ಪರಿಹಾರ ಸಿಗಲಿದೆ. ಅಲ್ಲದೆ, ಬೆಳಗಾವಿ ಗ್ರಾಮೀಣ ತಾಲೂಕು ರಚನೆ ಬಗ್ಗೆಯೂ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಫೆ.21ರಂದು ಪುತ್ತಿಗೆ ಶ್ರೀಗಳಿಗೆ ಅಭಿನಂದನಾ ಕಾರ್ಯಕ್ರಮ

ಉಡುಪಿ: ಪುತ್ತಿಗೆ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಫೆ.21ರಂದು ಬೆಂಗಳೂರು ನಗರಕ್ಕೆ ಪುರಪ್ರವೇಶ ಮಾಡುವ ಹಿನ್ನಲೆಯಲ್ಲಿ ಶ್ರೀಗಳ ಅಭಿನಂದನಾ ಸಮಾರಂಭವನ್ನು ಸ್ವಾಗತ ಸಮಿತಿಯವರು ಬಸವನ ಗುಡಿಯ ಗೋವರ್ಧನ ಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದಾರೆ. ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಸಂಸದ ಪಿ.ಸಿ.ಮೋಹನ್, ಡಾ. ಮಂಜುನಾಥ್, ವಿದ್ವಾಂಸ ಡಾ. ಶ್ರೀ ವ್ಯಾಸನಕೆರೆ ಪ್ರಭಂಜನಾಚಾರ್ಯ, ಬಸವನಗುಡಿಯ



ಶಾಸಕ ಎಸ್. ರವಿ ಸುಬ್ರಹ್ಮಣ್ಯಂ ಸೇರಿ ಹಲವರಿರುತ್ತಾರೆ. ಸಂಜೆ 5 ಗಂಟೆಗೆ ಶ್ರೀಗಳನ್ನು ಗುರು ನರಸಿಂಹ ಸಭಾ ಭವನದಿಂದ ಭವ್ಯ ಮೆರವಣಿಗೆಯ ಮೂಲಕ ಬಸವನ ಗುಡಿಯ ಶ್ರೀ ಪುತ್ತಿಗೆ ಮಠದ ಗೋವರ್ಧನ ಕ್ಷೇತ್ರಕ್ಕೆ ಬರಮಾಡಿಕೊಳ್ಳಲಾಗುವುದು. ರಾತ್ರಿ 7 ಗಂಟೆಗೆ ಅಭಿನಂದನಾ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭದಲ್ಲಿ ವಿವಿಧ ಭಜನಮಂಡಳಿಯ ಮಾತೆಯರಿಂದ ಭಗವದ್ಗೀತಾ ಪಾರಾಯಣ ನಡೆಯಲಿದೆ ಹಾಗೂ ಶ್ರೀಗಳಿಂದ ಭಕ್ತರಿಗೆ ಕೋಟಿ ಗೀತಾ ಲೇಖನ ಯಜ್ಞದ ದೀಕ್ಷಾ ಸಮಾರಂಭ ನಡೆಯಲಿದೆ ಎಂದು ರಾಮಚಂದ್ರ ಉಪಾಧ್ಯಾಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೀಟು ಹಂಚಿಕೆ ಅವದಿ ವಿಸ್ತರಣೆ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಮೂರನೇ ಸುತ್ತಿನ ಸೀಟು ಹಂಚಿಕೆಗೆ ಬೆಂಗಳೂರಿನ ಪಾಲಿಕೆಗಳು ಸೇರಿದಂತೆ ಸರ್ಕಾರದ ಇತರೆ ಆಸ್ಪತ್ರೆಗಳಲ್ಲಿ ಸೇವಾ ನಿರತ ಅಭ್ಯರ್ಥಿಗಳಿಗೆ ಡಿಎನ್‌ಬಿ ಸೀಟುಗಳು ಲಭ್ಯವಿದ್ದು, ಹಂಚಿಕೆಗೆ ಪರಿಗಣಿಸುವಂತೆ ಸರ್ಕಾರ ಸೂಚಿಸಿರುವ ಹಿನ್ನೆಲೆಯಲ್ಲಿ ಇಚ್ಛೆ/ಆಯ್ಕೆ ದಾಖಲಿಸಲು ಫೆ.18 ರಂದು ಮಧ್ಯಾಹ್ನ 12 ಗಂಟೆವರೆಗೆ ದಿನಾಂಕ ವಿಸ್ತರಿಸಲಾಗಿದೆ. ಲಭ್ಯ ತಜ್ಞತೆಯ ಕೋರ್ಸ್‌ಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು, ಅವುಗಳಿಗೆ ಮಾತ್ರ ಸೇವಾ ನಿರತರು ಇಚ್ಛೆ/ಆಯ್ಕೆಗಳನ್ನು ದಾಖಲಿಸಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ತಿಳಿಸಿದ್ದಾರೆ. ಇಎಸ್‌ಐಸಿ, ಬೆಂಗಳೂರಿನ ಮಹಾನಗರ ಪಾಲಿಕೆಗಳು, ರಾಜ್ಯದ ಇತರೆ ಪಾಲಿಕೆಗಳ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರು ಸರ್ಕಾರಿ ಆಸ್ಪತ್ರೆಗಳಲ್ಲಿ ಡಿಎನ್‌ಬಿ ಸೀಟುಗಳ ಪ್ರವೇಶಕ್ಕೆ ಆಪ್ಷನ್ಸ್ ದಾಖಲಿಸಬಹುದು ಎಂದು ವಿವರಿಸಿದ್ದಾರೆ.

ಇಕೋ ಸಿಸ್ಟಂನಲ್ಲಿ ಮೂರನೇ ಸ್ಥಾನ: ಸಚಿವ ಎಂ.ಬಿ. ಪಾಟೀಲ್

ಡಿಫೆನ್ಸ್ ಕಾರಿಡಾರ್‌ಗೆ ಚಿಂತನೆ

ಕೋಲಾರ: ಕೋಲಾರ, ಬೆಂಗಳೂರು ಗ್ರಾಮಾಂತರ ಭಾಗದಲ್ಲಿ ಡಿಫೆನ್ಸ್ ಕಾರಿಡಾರ್ ಮಾಡಲು ಚಿಂತನೆ ನಡೆಸಲಾಗಿದೆ ಎಂದು ರಾಜ್ಯ ಬೃಹತ್ ಕೈಗಾರಿಕಾ ಸಚಿವ ಎಂಬಿ.ಪಾಟೀಲ್ ತಿಳಿಸಿದರು.

ತಾಲೂಕಿನ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಟಾಟಾ ಏರ್‌ಬಸ್ ಹೆಲಿಕ್ಯಾಪ್ಟರ್ ಎಚ್125 ಜೋಡಣಾ ಘಟಕದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅವರು, ರಕ್ಷಣಾ ಸಚಿವರಿಗೂ ಇದನ್ನು ನೆನಪಿಸಲಾಗುವುದು ಎಂದರು. ಟಾಟಾ ಏರ್‌ಬಸ್ ಹೆಲಿಕ್ಯಾಪ್ಟರ್ ಎಚ್125 ಜೋಡಣಾ ಘಟಕದ ಉದ್ಘಾಟನೆಯಾಗುತ್ತಿದೆ. ಭಾರತ, ಫ್ರಾನ್ಸ್‌ನ ಪ್ರಧಾನಿಗಳು, ರಾಜ್ಯವು ಜಾಗತಿಕ ಮಟ್ಟದಲ್ಲಿ ರಾಜ್ಯವು ಇಕೋ ಸಿಸ್ಟಂನಲ್ಲಿ ಮೂರನೇ ಸ್ಥಾನದಲ್ಲಿದೆ ಎಂದು ತಿಳಿಸಿದರು.

ಭಾರತದಲ್ಲಿ ಏರೋಸ್ಪೇಸ್ ಮತ್ತು ಡಿಫೆನ್ಸ್ ನಲ್ಲಿ ಶೇ.65 ರಷ್ಟು ಪಾತ್ರ ನಮ್ಮ ರಾಜ್ಯದ್ದು ಇದೆ. ಎಲ್ಲಾ ಏರೋಸ್ಪೇಸ್ ಮತ್ತು ಡಿಫೆನ್ಸ್ ನಮ್ಮಲ್ಲಿ ಸ್ಥಾಪನೆಯಾಗುತ್ತಿರುವುದು ಶ್ಲಾಘನೀಯ. ಬಹುತೇಕ ಕಂಪನಿಗಳು ಬಂದಿರುವುದರಿಂದ ನಾವು ಬೆಳೆಯುತ್ತಿದ್ದೇವೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದರು.

ಕೋಲಾರ, ಬೆಂಗಳೂರು ಗ್ರಾಮಾಂತರ ಭಾಗದಲ್ಲಿ ಡಿಫೆನ್ಸ್ ಕಾರಿಡಾರ್ ಮಾಡಲು ಚಿಂತನೆ ನಡೆಸಲಾಗಿದೆ. ರಕ್ಷಣಾ ಸಚಿವರಿಗೂ ನೆನಪಿಸಲಾಗುವುದು. ಈಗ ಉದ್ಘಾಟನೆಗೊಂಡಿರುವ ಟಾಟಾ ಹೆಲಿಕ್ಯಾಪ್ಟರ್ ಘಟಕದಲ್ಲಿ ಉದ್ಯೋಗ ಅವಕಾಶದ ಬಗ್ಗೆಯೂ ಚರ್ಚಿಸಲಾಗಿದ್ದು, ಸ್ಥಳೀಯರಿಗೆ ಅವಕಾಶ ಸಿಗಲಿದೆ. ಪ್ರಥಮ ಬಾರಿಗೆ ಹೆಲಿಕ್ಯಾಪ್ಟರ್ ಜೋಡಣೆ ಘಟಕ ಉದ್ಘಾಟನೆಯಾಗುತ್ತಿದೆ. ಟಾಟಾ ಅಡ್ವಾನ್ಸ್ ಮತ್ತು ಏರ್‌ಬಸ್ ಸಹಭಾಗಿತ್ವದಲ್ಲಿ ಕಂಪನಿ ಆರಂಭವಾಗಿದೆ. 15 ದಿನಕ್ಕೆ ಒಂದು ಹೆಲಿಕ್ಯಾಪ್ಟರ್ ತಯಾರು ಆಗಲಿದೆ.

ಮುಂದಿನ ದಿನಗಳಲ್ಲಿ ಹೆಚ್ಚಿಸಲಾಗುವುದು. ಕಳೆದ ಒಂದೂವರೆ ವರ್ಷಗಳಿಂದ ಇದನ್ನು ಫಾಲೋಅಪ್ ಮಾಡುತ್ತಿದ್ದೇವೆ. ರಾಜ್ಯಕ್ಕೆ ಪರಿಸರಕ್ಕೆ ಹೊಂದಿಕೊಂಡು ಈ ಕಂಪನಿ ಬಂದಿದ್ದು, ಇನ್ನಷ್ಟು ಕಂಪನಿಗಳು ಬರಲಿವೆ ಎಂದು ತಿಳಿಸಿದರು.



500 ಹೆಲಿಕಾಪ್ಟರ್ ತಯಾರಿಕೆ

ಫ್ರಾನ್ಸ್ ಮೂಲದ ಏರ್ ಬಸ್ ಮತ್ತು ಭಾರತದ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ (ಟಿಎಎಸ್ಎಲ್) ಜತೆಗೂಡಿ ಅಭಿವೃದ್ಧಿಪಡಿಸಿರುವ ದೇಶದ ಪ್ರಪ್ರಥಮ, ಖಾಸಗಿ ವಲಯದ ಹೆಲಿಕಾಪ್ಟರ್ ಜೋಡಣೆ ಘಟಕದಲ್ಲಿ ಮುಂದಿನ 20 ವರ್ಷಗಳಲ್ಲಿ ಎಚ್125 ದರ್ಜೆಯ 500 ಲಘು ಹೆಲಿಕಾಪ್ಟರ್ ಸಿದ್ಧವಾಗಲಿವೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ತಿಳಿಸಿದರು. ಮಂಗಳವಾರ ಕೋಲಾರ ಜಿಲ್ಲೆಯ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿನ ಕಂಪನಿ ಆವರಣದಲ್ಲಿ ನಡೆದ ನೂತನ ಘಟಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಈ ಘಟಕವು ರಾಜ್ಯದಲ್ಲಿ ಕಾರ್ಯಾರಂಭ ಮಾಡುತ್ತಿರುವುದು ಐತಿಹಾಸಿಕ ಸಾಧನೆಯಾಗಿ ಚಿರಸ್ಥಾಯಿಯಾಗಿ ಉಳಿಯಲಿದೆ ಎಂದ ಅವರು, ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯಲ್ ಮ್ಯಾಕ್ರೋನ್ ಅವರು ಮಹಾರಾಷ್ಟ್ರದ ಲೋಕಭವನದಿಂದ ವರ್ಚುಯಲ್ ಮೂಲಕ ಈ ಘಟಕವನ್ನು ಉದ್ಘಾಟಿಸಿರುವುದು ಹೆಮ್ಮೆಯ ವಿಷಯ ಎಂದರು.

ಶಾಲಾ ಮಾನ್ಯತಾ ನವೀಕರಣಕ್ಕೆ ಅವಧಿ ವಿಸ್ತರಣೆ: ಮಧು

ವಿದ್ಯಾರ್ಥಿಗಳಿಗೆ ಸಮಸ್ಯೆ ಇಲ್ಲ

ಬೆಂಗಳೂರು: ರಾಜ್ಯದಲ್ಲಿ ಶಾಲೆಗಳ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದಂತೆ ಮಾನ್ಯತೆ ನವೀಕರಣ ಆಗದ ಶಾಲೆಗಳಲ್ಲಿ



ವ್ಯಾಸಂಗ ಮಾಡುತ್ತಿರುವ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತಾ ನವೀಕರಣಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ಮಾ. 31ರ ತನಕ ವಿಸ್ತರಣೆ ಆಗಿರುವುದರಿಂದ ಈ ಅವಧಿಯಲ್ಲಿ ಶಾಲೆಗೆ ಮಾನ್ಯತೆಯಿದೆ ಎಂದೇ ಭಾವಿಸಲಾಗುತ್ತದೆ ಎಂದು ತಿಳಿಸಿದರು.

ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದಂತೆ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ನೇತೃತ್ವದ ಸದನ ಸಮಿತಿ ಅಧ್ಯಯನ ನಡೆಸುತ್ತಿದ್ದು, ಈ ಸಮಿತಿಯಿಂದ ಅಂತಿಮವಾಗಿ ಕೊಡುವ ವರದಿಯನ್ನು ನಾವು ಸ್ವೀಕರಿಸುತ್ತೇವೆ ಎಂದು ಮಾಹಿತಿ ನೀಡಿದರು. ರಾಜ್ಯದಲ್ಲಿ 12 ಸಾವಿರಕ್ಕೂ ಅಧಿಕ ಖಾಸಗಿ ಶಾಲೆಗಳಿದ್ದರೂ, ಸುಮಾರು 7 ಸಾವಿರ ಶಾಲೆಗಳು ಮಾತ್ರ ಅರ್ಜಿ ಸಲ್ಲಿಸಿವೆ. ಉಳಿದಂತೆ ಶಾಲೆಗಳು ಪುಟ್ಟಣ್ಣ ಸಮಿತಿಯ ವರದಿ ಸಲ್ಲಿಕೆಯಾದ ಬಳಿಕವೇ ನವೀಕರಣಕ್ಕೆ ಅರ್ಜಿ ಸಲ್ಲಿಸುವ ಉದ್ದೇಶ ಹೊಂದಿದೆ. ಇದೀಗ ಶಾಲೆಗಳ ಮಾನ್ಯತೆ ನವೀಕರಣಕ್ಕೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಿಸಿರುವುದರಿಂದ ಹಾಗೂ ಈ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಕ್ತಾಯಗೊಳ್ಳುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಶಾಲಾ ಮಾನ್ಯತೆಯ ಸಮಸ್ಯೆ ಎದುರಾಗುವುದಿಲ್ಲ ಎಂದರು.

ಅಧಿಕಾರಿ ನೇಮಕ

ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ತಪ್ಪು ಮಾಹಿತಿಯ ವಿರುದ್ಧ ಶಿಕ್ಷಣ ಇಲಾಖೆ ಕಟ್ಟುನಿಟ್ಟಿನ ನಿಗಾ ವಹಿಸಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನೆಪತ್ರಿಕೆಯನ್ನು ಸೋರಿಕೆ ಮಾಡುವವರ ವಿರುದ್ಧ ಕೂಡಲೇ ಕಠಿಣ ಕ್ರಮ ಕೈಗೊಳ್ಳಲು ರಾಜ್ಯ ಮಟ್ಟದಲ್ಲಿ ನೋಡಲ್ ಅಧಿಕಾರಿಯೊಬ್ಬರನ್ನು ನೇಮಿಸುತ್ತಿದ್ದೇವೆ. ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿಯೂ ದೂರು ನೀಡಲು ಸೂಚಿಸಲಾಗಿದೆ ಎಂದು ಮಧು ಬಂಗಾರಪ್ಪ ತಿಳಿಸಿದರು.

> ಪಿಯುಸಿ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಅನುತ್ತೀರ್ಣಗೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿದೆ. ಪರೀಕ್ಷೆಯ ಭಯ ಹೋಗಲಾಡಿಸಲು ವಿದ್ಯಾರ್ಥಿಗಳಿಗೆ ಶಿಕ್ಷಕರ ನೇತೃತ್ವದಲ್ಲಿ ಸೂಕ್ತ ಮಾರ್ಗದರ್ಶನ ನೀಡಲು ಕ್ರಮ ಕೈಗೊಳ್ಳಲಾಗಿದೆ.
> ■ ಮಧು ಬಂಗಾರಪ್ಪ, ಸಚಿವ

ಭೂಕಬಳಿಕೆಯಲ್ಲಿ ಸರಕಾರವೇ ಮುಂದು: ನಾರಾಯಣಸ್ವಾಮಿ

ಬೆಂಗಳೂರು: ಸರ್ಕಾರವು ಕಾನೂನು ಉಲ್ಲಂಘಿಸಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿ ನಿರ್ಮಾಣಕ್ಕೆ ಮುಂದಾಗಿದೆ. ಭೂಕಬಳಿಕೆಯಲ್ಲಿ ಸರಕಾರವೇ ನಿರತವಾಗಿದೆ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ. ಇನ್ನೊಂದೆಡೆ ಛಲವಾದಿ ನಾರಾಯಣಸ್ವಾಮಿ ಅವರ ಈ ಆರೋಪಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, ಸರ್ಕಾರವು ಬಡವರಿಗೆ ಮನೆ ಕೊಡಬೇಕು, ಭೂರಹಿತರಿಗೆ ಭೂಮಿ ಕೊಡಬೇಕಿತ್ತು ಆದರೆ ಈ ಕೆಲಸವನ್ನು ಮಾಡುತ್ತಿಲ್ಲ, ತಾನೇ ಭೂಮಿ ಕಬಳಿಸುವ ಕೆಲಸ ಮಾಡುತ್ತಿದೆ ಎಂದು ದೂರಿದ್ದಾರೆ. ತಾಲೂಕು, ಜಿಲ್ಲೆ, ಮಂಡಲ, ಪಂಚಾಯಿತಿ ಹೀಗೆ ಎಲ್ಲ ಕಡೆ ನಿವೇಶನ ಪಡೆಯಲು ಅದಕ್ಕೆ ಅಧಿಕಾರ ಇಲ್ಲ, ಕಾನೂನು ಉಲ್ಲಂಘಿಸಿ ಅದು ಕಾಂಗ್ರೆಸ್ ಪಕ್ಷದ ಕಚೇರಿ ನಿರ್ಮಾಣಕ್ಕೆ ಲೀಸ್‌ಗೆ ಮುಧೋಳದಲ್ಲಿ ನಿವೇಶನ ಪಡೆಯಲು ಮುಂದಾಗಿತ್ತು. ಆದರೆ ಇಲಾಖೆಯು ಅದನ್ನು ತಿರಸ್ಕರಿಸಿತ್ತು ಎಂದು ಗಮನ ಸೆಳೆದರು.

ಬಿಜೆಪಿ ಚಾಣಕ್ಯ ವಿವಿ, ಆರ್‌ಎಸ್‌ಎಸ್ ಕಚೇರಿಗೆ ನೂರಾರು ಎಕರೆ ಕೊಟ್ಟಿಲ್ಲವೇ?:

ಕಾಂಗ್ರೆಸ್ ಭವನಗಳಿಗೆ ಸರ್ಕಾರಿ ಜಮೀನು ಬಳಸಿಕೊಳ್ಳಲಾಗುತ್ತಿದೆ ಎಂಬ ಬಿಜೆಪಿ ನಾಯಕರ ಆರೋಪದ ಬಗ್ಗೆ ಪ್ರತಿಕ್ರಿಯಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಖಂಡಿತವಾಗಿ ನಾವು ಕಾಂಗ್ರೆಸ್ ಭವನಗಳಿಗೆ ಸರ್ಕಾರಿ ಜಾಗ ಬಳಸಿಕೊಳ್ಳುತ್ತಿದ್ದೇವೆ. ನಾವು ಮಹಾತ್ಮಾ ಗಾಂಧಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷತೆಯ ಶತಮಾನೋತ್ಸವ ಹಿನ್ನೆಲೆಯಲ್ಲಿ 100 ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಮುಂದಾಗಿದ್ದೇವೆ. ನಾವು 5-10 ಸಾವಿರ ಚದರ ಅಡಿಗಳಷ್ಟು ಜಾಗವನ್ನು ಮಂಜೂರು ಮಾಡುತ್ತಿದ್ದೇವೆ ಎಂದರು. ಬಿಜೆಪಿ ಆಡಳಿತ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ 100ಕ್ಕೂ ಹೆಚ್ಚು ಕಡೆಗಳಲ್ಲಿ ವಿವಿಧ ಟ್ರಸ್ಟ್‌ಗಳ ಹೆಸರಿನಲ್ಲಿ ಜಾಗ ಪಡೆದಿದ್ದಾರೆ. ಚಾಣಕ್ಯ ವಿವಿಗೆ ನೀಡಿರುವ ಜಾಗ ಪ್ರತಿ ಎಕರೆಗೆ 10 ಕೋಟಿ ರೂಪಾಯಿ ಬೆಲೆಬಾಳುತ್ತದೆ ಎಂದರು.

ಹಿಂಡಲಗಾ ಜೈಲಿಗೆ ಡಿಜಿಪಿ ಭೇಟಿ

ಬೆಳಗಾವಿ: ರಾಜ್ಯದ ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಯ ನೂತನ ಡಿಜಿಪಿ ಅಲೋಕ್ ಕುಮಾರ್ ಮಂಗಳವಾರ



ದಿಢೀರ್ ಬೆಳಗಾವಿಯ ಹಿಂಡಲಗಾ ಜೈಲಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ರಾಜ್ಯದ ಜೈಲುಗಳ ಅಕ್ರಮಗಳು ಹಾಗೂ ಕೈದಿಗಳಿಗೆ ರಾಜಾತಿಥ್ಯದ ವಿಚಾರವಾಗಿ ಹಾದಿ ಬೀದಿಯಲ್ಲಿ ಚರ್ಚೆಯಾಗುತ್ತಿದ್ದು, ಡಿಜಿಪಿ ಅಲೋಕ್ ಕುಮಾರ್ ಅವರು ಕಾರಾಗೃಹ ಇಲಾಖೆಯ ಡಿಜಿಪಿಯಾಗಿ ಕಾರ್ಯಭಾರ ವಹಿಸಿಕೊಂಡ ನಂತರ ಮೊದಲ ಬಾರಿಗೆ ಹಿಂಡಲಗಾ ಜೈಲಿಗೆ ಖುದ್ದು ಭೇಟಿ ನೀಡಿ ವಸ್ತುಸ್ಥಿತಿ ಪರಿಶೀಲಿಸಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಜ್ಯದ ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಯ ನೂತನ ಡಿಜಿಪಿಯಾಗಿ ಅಧಿಕಾರ ವಹಿಸಿಕೊಂಡ ನಂತರ ನಾನು ಮೊದಲ ಬಾರಿಗೆ ಬೆಳಗಾವಿಯ ಹಿಂಡಲಗಾ ಜೈಲಿಗೆ ಭೇಟಿ ಕೊಟ್ಟಿದ್ದೇನೆ. ಬೆಂಗಳೂರು ಪರಪ್ಪನ ಅಗ್ರಹಾರ ಬಿಟ್ಟರೆ ಬೆಳಗಾವಿ ಹಿಂಡಲಗಾ ಜೈಲಿನಲ್ಲಿ ದೊಡ್ಡ, ದೊಡ್ಡ ಆರೋಪಿಗಳು ಇಲ್ಲಿ ಇರುವುದರಿಂದ ಇಲ್ಲಿ ಹೆಚ್ಚು ಮಹತ್ವ ನೀಡಲಾಗುತ್ತಿದೆ ಎಂದರು.

ಹಿಂಡಲಗಾ ಜೈಲು ಹಳೆ ಕಟ್ಟಡವಾಗಿದ್ದರಿಂದ ಅನೇಕ ಸಮಸ್ಯೆಗಳು ಎದುರಾಗುತ್ತಿದೆ. ಈಚೆಗೆ ಹೊರಗಡೆಯಿಂದ ಜೈಲಿನೊಳಗೆ ಗಾಂಜಾ ಹಾಗೂ ಮೊಬೈಲ್ ಸೇರಿದಂತೆ ಸಿಮ್ ಕಾರ್ಡ್‌ಗಳನ್ನು ಎಸೆಯಲಾಗುತ್ತಿದೆ. ಈ ಜೈಲು ಮುಖ್ಯ ರಸ್ತೆಗೆ ಹೊಂದಿಕೊಂಡಿರುವುದರಿಂದ ಜೈಲಿನೊಳಗಿರುವ ಕೈದಿಗಳಿಗೆ ಎಲ್ಲ ವಸ್ತುಗಳನ್ನು ಎಸೆಯಲಾಗುತ್ತಿದೆ. ಇಂತಹ ಕೃತ್ಯಗಳಿಗೆ ಕಡಿವಾಣ ಹಾಕಲು ಅಧಿಕಾರಿಗಳಿಗೆ ಮಾಹಿತಿ ತಿಳಿಸಲಾಗಿದೆ ಎಂದರು.

ಜಾಮರ್ ಅಳವಡಿಸಿದರೂ ನೆಟ್‌ವರ್ಕ್: ಹಿಂಡಲಗಾ ಜೈಲಿನಲ್ಲಿ ಜಾಮರ್ ಅಳವಡಿಸಿದರೂ ಸಹ ಜೈಲಿನಲ್ಲಿ ಮೊಬೈಲ್ ನೆಟ್‌ವರ್ಕ್ ಬರುತ್ತಿದೆ. ಇದರಿಂದ ಜೈಲಿನಲ್ಲಿರುವ ಕೈದಿಗಳಿಗೆ ಅನುಕೂಲಕರವಾಗುತ್ತಿದೆ. ಇದನ್ನು ತಡೆಗಟ್ಟಲು ಅಧಿಕಾರಿಗಳು ಸೂಚನೆ ನೀಡಿದ್ದೇನೆ. ಅಲ್ಲದೇ ಜೈಲಿನ ಅಕ್ರಮಗಳೆಲ್ಲವೂ ಬಂದ್ ಆಗಲೇಬೇಕು. ಅಕ್ರಮಗಳಿಗೆ ಕೈಜೋಡಿಸಿದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಜೈಲಿನ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಖಡಕ್ ಎಚ್ಚರಿಕೆ ಕೊಟ್ಟರು.

> ಜೈಲಿನ ಸುತ್ತಮುತ್ತ ಸ್ವಚ್ಛತೆ ಕಾಪಾಡಬೇಕು. ಯಾವುದೇ ವಾಹನ ಬಂದರೂ ತಡೆದು ಪರಿಶೀಲಿಸಬೇಕು. ಆ ನಂತರವಷ್ಟೇ ಪ್ರವೇಶ ಕಲ್ಪಿಸಬೇಕು. ಜೈಲಿನಲ್ಲಿ ಮೊಬೈಲ್ ಬಳಸುತ್ತಿದ್ದರೆ ತಕ್ಷಣವೇ ಸಿಬ್ಬಂದಿ ವಶಕ್ಕೆ ಕೊಡಿ. ಕಲ್ಲಾಟ ಆಡಿದರೆ ಕಠಿಣ ಕ್ರಮ ಎದುರಿಸಲು ಸಜ್ಜಾಗಿ. ಇನ್ನು ಮುಂದೆ ಗಾಂಜಾ, ಬೀಡಿ, ಸಿಗರೇಟ್ ಸಿಗಲ್ಲ, ಎಲ್ಲಾ ಬಂದ್ ಆಗಬೇಕು.
> ■ ಅಲೋಕ್ ಕುಮಾರ್, ಡಿಜಿಪಿ

ತಂತ್ರಜ್ಞಾನ ಬಲಪಡಿಸಲು ಫ್ರಾನ್ಸ್ ಸಚಿವ ಜತೆ ಚರ್ಚೆ

ಬೆಂಗಳೂರು: ತಂತ್ರಜ್ಞಾನ ಮತ್ತು ನಾವೀನ್ಯತೆಯಲ್ಲಿ ಫ್ರಾನ್ಸ್ ಜೊತೆಗಿನ ಸಹಕಾರ ಬಲಪಡಿಸಲು ಮಾಹಿತಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಮಂಗಳವಾರ ಬೆಂಗಳೂರಿನಲ್ಲಿ ಫ್ರಾನ್ಸ್‌ನ



ಕೃತಕ ಬುದ್ಧಿಮತ್ತೆ ಮತ್ತು ಡಿಜಿಟಲ್ ವ್ಯವಹಾರ ಸಚಿವೆ ಆ್ಯನ್ ಲಿ ಹೆನಾಫ್ ಅವರನ್ನು ಭೇಟಿಯಾಗಿ ಚರ್ಚಿಸಿದರು.

ನಾವೀನ್ಯತೆ, ಕೌಶಲ, ಕೃತಕ ಬುದ್ಧಿಮತ್ತೆ (ಎಐ), ವೈಮಾಂತರಿಕ್ಷ ಮತ್ತು ರಕ್ಷಣಾ ಉತ್ಪಾದನೆ, ನವೋದ್ಯಮ ಮತ್ತು ಡಿಜಿಟಲ್ ಆಡಳಿತದಲ್ಲಿ ಪರಸ್ಪರ ಸಹಯೋಗ ವಿಸ್ತರಿಸುವ ಬಗ್ಗೆ ಸಭೆಯಲ್ಲಿ ಸಮಾಲೋಚನೆ ನಡೆಸಲಾಯಿತು. ಫ್ರಾನ್ಸ್‌ನಲ್ಲಿ ಕುಶಲ ಎಂಜಿನಿಯರ್‌ಗಳು, ತಂತ್ರಜ್ಞಾನ ವೃತ್ತಿಪರರು ಹೆಚ್ಚುತ್ತಿರುವ ಅಗತ್ಯದ ವಿವರಗಳನ್ನು ಹಂಚಿಕೊಂಡ ಫ್ರಾನ್ಸ್ ನಿಯೋಗವು ಪ್ರವರ್ಧಮಾನಕ್ಕೆ ಬರುತ್ತಿರುವ ತಂತ್ರಜ್ಞಾನಗಳಲ್ಲಿ ರಾಜ್ಯದ ಜೊತೆಗೆ ಕೆಲಸ ಮಾಡಲು ತೀವ್ರ ಆಸಕ್ತಿ ವ್ಯಕ್ತಪಡಿಸಿತು.

ಭಾರತದಲ್ಲಿ ಸೇವೆ ಹಾಗೂ ವಹಿವಾಟು ವಿಸ್ತರಿಸಲು ಉದ್ದೇಶಿಸಿರುವ ಫ್ರಾನ್ಸ್ ಕಂಪನಿಗಳಿಗೆ ಬೆಂಗಳೂರು ಮಹಾದ್ವಾರ ಆಗಲಿದೆ. ಪ್ಯಾರಿಸ್ ಕೂಡ ನಮ್ಮ ನವೋದ್ಯಮಗಳ ಪಾಲಿಗೆ ಫ್ರಾನ್ಸ್ ಮತ್ತು ಯುರೋಪ ಒಕ್ಕೂಟದ ಮಾರುಕಟ್ಟೆ ಪ್ರವೇಶಿಸಲು ಮಹಾದ್ವಾರ ಆಗಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸಚಿವೆ ಆ್ಯನ್ ಲಿ ಹೆನಾಫ್ ಅವರು ಮಾತನಾಡಿ, ಡಿಜಿಟಲ್ ಜಗತ್ತಿನಲ್ಲಿ ಮಕ್ಕಳ ರಕ್ಷಣೆಗೆ ಆದ್ಯತೆ ಹಾಗೂ ಸುರಕ್ಷತೆ ಬಲಪಡಿಸುವುದು ಸದ್ಯದ ತುರ್ತು ಅಗತ್ಯವಾಗಿದೆ. ತಂತ್ರಜ್ಞಾನವು ಸಮಾಜಕ್ಕೆ ಪ್ರಯೋಜನ ನೀಡುತ್ತದೆ ಎಂಬುದನ್ನು ಖಚಿತಪಡಿಸಿ ಕೊಳ್ಳಲು ನಾವೀನ್ಯತೆ ವಿಶ್ವಾಸಾರ್ಹ ಮತ್ತು ಕೃತಕ ಜಾಣ್ಮೆ ಕ್ಷೇತ್ರಗಳಲ್ಲಿ ನಾವು ಕರ್ನಾಟಕದ ಜೊತೆ ಸಹಯೋಗದಿಂದ ಕೆಲಸ ಮಾಡುವ ಅವಕಾಶಗಳನ್ನು ಎದುರು ನೋಡುತ್ತಿದ್ದೇವೆ ಎಂದರು.

ರಾಜ್ಯದಲ್ಲಿ ಮಾದಕ ದ್ರವ್ಯ ಜಾಲಕ್ಕೆ ಕಡಿವಾಣ: ಗೃಹ ಸಚಿವ ಡಾ.ಜಿ.ಪರಮೇಶ್ವರ್

ಕರಾವಳಿಯಲ್ಲಿ ಶಾಂತಿ ಸುವ್ಯವಸ್ಥೆ ಉತ್ತಮ

ಮಂಗಳೂರು: ಮಂಗಳೂರು ಸೇರಿದಂತೆ ಕರಾವಳಿಯಲ್ಲಿ ಶಾಂತಿ ಸುವ್ಯವಸ್ಥೆ ನೆಲೆಯೂರಿದೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ.

ಮಂಗಳೂರಿನಲ್ಲಿ ಮಂಗಳವಾರ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತ



ನಾಡಿ, ಡ್ರಗ್ಸ್ ಮಾಫಿಯಾಕ್ಕೆ ಕಡಿವಾಣ ಬಿದ್ದಿದೆ. ದ್ವೇಷ ಭಾವನೆಯಿಂದ ನಡೆಯುತ್ತಿದ್ದ ಕೊಲೆಯಂತಹ ಅಹಿತಕರ ಘಟನೆಗಳು ಕಡಿಮೆಯಾಗಿದ್ದು, ಜನತೆ ನೆಮ್ಮದಿಯಿಂದ ಬದುಕುವ ವಾತಾವರಣ ನಿರ್ಮಾಣವಾಗಿದೆ. ಕರಾವಳಿಯಲ್ಲಿ ಅಭಿವೃದ್ಧಿಗೆ ಪೂರಕ ವಾತಾವರಣ ನಿರ್ಮಾಣವಾಗಿದೆ ಎಂದರು.

ಈ ಹಿಂದೆ ಮಂಗಳೂರಿಗೆ ಬಂದಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಿಕೊಳ್ಳುವಂತೆ ಪೊಲೀಸ್ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದೆ. ಪೊಲೀಸರು ಕೂಡ ಮುತುವರ್ಜಿ ವಹಿಸಿ ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ. ಇದರಿಂದಾಗಿ ಮಾದಕ ದ್ರವ್ಯ ಜಾಲಕ್ಕೆ ಕಡಿವಾಣ ಬಿದ್ದಿದೆ. ಡ್ರಗ್ಸ್ ಪೆಡ್ಲರ್‌ಗಳ ಸಂಖ್ಯೆಯೂ ಕಡಿಮೆಯಾಗಿದೆ. ಶಾಲಾ ಕಾಲೇಜುಗಳಲ್ಲಿ ಮಕ್ಕಳಲ್ಲಿ ಡ್ರಗ್ಸ್ ವಿರುದ್ಧ ಜಾಗೃತಿ ಕಾರ್ಯ ನಿರಂತರ ಮುಂದುವರಿಯಬೇಕು. ಸ್ಥಳೀಯ ಪೊಲೀಸರು 15 ದಿನಕ್ಕೊಮ್ಮೆ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು. 4 ತಿಂಗಳಿಗೊಮ್ಮೆ ಶಾಲಾ ಆಡಳಿತ ಮಂಡಳಿಯೊಂದಿಗೆ ಸಭೆ ನಡೆಸುವಂತೆ ಸೂಚಿಸಿದ್ದೇನೆ ಎಂದರು.

ಚಿಕ್ಕಮಗಳೂರಿನಲ್ಲಿ ಮನೆಯೊಂದರ ಮೇಲೆ ಕಲ್ಲು ತೂರಾಟ ಘಟನೆಗೆ ಸಂಬಂಧಿಸಿ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ ಎಂದು ಗೃಹ ಸಚಿವರು ತಿಳಿಸಿದರು.

ಪೊಲೀಸರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಘಟನೆಯ ನಿಟ್ಟಿನಲ್ಲಿ ಕಾನೂನಾತ್ಮಕ ಕ್ರಮಕ್ಕೆ ಸೂಚಿಸಲಾಗಿದೆ. ಆ ಪ್ರಕಾರ ಪೊಲೀಸರು ಪಿಸಿಆರ್ ಆ್ಯಕ್ಟ್ ಅಡಿ ಪ್ರಕರಣ ದಾಖಲಿಸಿ ಕ್ರಮ ತೆಗೆದುಕೊಳ್ಳುತ್ತಾರೆ. ಮನೆಯ ಹೆಣ್ಣು ಮಗಳು ದಲಿತ ಸಮುದಾಯಕ್ಕೆ ಸೇರಿದವರು ಎಂದು ಗೊತ್ತಾಗಿದೆ ಎಂದರು.

ಎಚ್.ಸಿ ಮಹದೇವಪ್ಪ ದಲಿತ ಸಿ.ಎಂ ಹೇಳಿಕೆ ವಿಚಾರಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು, ಸಚಿವ ಮಹದೇವಪ್ಪ ಅವರ ಅಭಿಪ್ರಾಯ ಹೇಳಿದ್ದಾರೆ. ಅವರು ಸಿಎಂ ಆಗಲು ಸಮರ್ಥರಿದ್ದಾರೆ. ಯಾವುದೇ ಜವಾಬ್ದಾರಿ ಕೊಟ್ಟರೂ ನಿಭಾಯಿಸುವ ಸಾಮರ್ಥ್ಯ ಅವರಲ್ಲಿದೆ. ಅದಕ್ಕೆ ಅವರು ಆ ರೀತಿ ಹೇಳಿದ್ದಾರೆ. ಜನಸಮುದಾಯದಲ್ಲಿ ಕೆಲವರು ಅವರವರ ಲೀಡರ್ ಅಂತಾ ಆರಿಸಿಕೊಳ್ಳುತ್ತಾರೆ. ಜನ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅದನ್ನು ತಪ್ಪೆಂದು ನಾವು ಹೇಳುವುದಕ್ಕೆ ಆಗುವುದಿಲ್ಲ. ಏನೇ ಆದರೂ ಕೊನೆಗೆ ಕಾಂಗ್ರೆಸ್ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ. ಈಗ ದಲಿತ ಸಿಎಂ ಚರ್ಚೆಯೇ ಇಲ್ಲ ಎಂದರು. ಪ್ರಿಯಾಂಕ ಖರ್ಗೆ ಅವರು ಆರ್‌ಎಸ್‌ಎಸ್ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದರು.

ಅಂತಿಮ ವರದಿ ಎಸ್‌ಐಟಿ ನೀಡಿಲ್ಲ

ಧರ್ಮಸ್ಥಳ ಎಸ್‌ಐಟಿ ಪ್ರಕರಣದ ಕುರಿತ ಪ್ರಶ್ನೆಗೆ, ಅಂತಿಮ ವರದಿಯನ್ನು ಎಸ್‌ಐಟಿ ನೀಡಿ ಅದರ ವರದಿಯನ್ನು ಸರಕಾರಕ್ಕೆ ಸಲ್ಲಿಸುವ ಕೆಲಸ ಆಗಿಲ್ಲ. ಮಧ್ಯಂತರ ವರದಿ ಸಲ್ಲಿಕೆಯಾಗಿದ್ದು, ಅದನ್ನು ಸದನದಲ್ಲಿ ಬೇರೆಡೆಗಳಲ್ಲಿ ತಿಳಿಸಿದ್ದೇನೆ. ಆದರೆ ಅಂತಿಮ ವರದಿ ಬಂದ ಬಳಿಕ ಅದನ್ನು ಸರಕಾರ, ಕ್ಯಾಬಿನೆಟ್ ಮುಂದಿರಿಸಿ ಬಹಿರಂಗಗೊಳಿಸುವ ಕೆಲಸ ಮಾಡಲಿದ್ದೇವೆ. ಅದನ್ನು ಕೊಡುವವರೆಗೆ ನಾವು ಯಾವುದೇ ತೀರ್ಮಾನಕ್ಕೂ ಬರಲು ಸಾಧ್ಯವಿಲ್ಲ ಎಂದರು.

ಮಹಿಳೆ, ಅಪ್ರಾಪ್ತರ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣ

ಸಂತ್ರಸ್ತರ ಗೌಪ್ಯತೆ ಕಾಪಾಡಲು ಆದೇಶ

ಬೆಂಗಳೂರು: ಮಹಿಳೆಯರು, ಅಪ್ರಾಪ್ತರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಪ್ರಕರಣಗಳ ತನಿಖೆ ಹಾಗೂ



ನ್ಯಾಯಾಂಗ ಪ್ರಕ್ರಿಯೆಯಲ್ಲಿ ಸಂತ್ರಸ್ತರ ಗೌಪ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ. ಸಲೀಂ ಅವರು ಮಹತ್ವದ ಆದೇಶ ಹೊರಡಿಸಿದ್ದಾರೆ. ಸುಪ್ರೀಂ ನೀಡಿದ ನಿರ್ದೇಶನಗಳ ಅನ್ವಯ ಈ ಹೊಸ ಮಾರ್ಗಸೂಚಿಗಳನ್ನು ಜಾರಿಗೆ ತರಲಾಗಿದೆ.

ಹೆಸರು ಬಹಿರಂಗಪಡಿಸುವಂತಿಲ್ಲ: ಲೈಂಗಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರು ಅಥವಾ ಅಪ್ರಾಪ್ತರ ಹೆಸರು, ವಿಳಾಸ ಸೇರಿದಂತೆ ಅವರ ಗುರುತನ್ನು ಪತ್ತೆಹಚ್ಚಲು ಸಹಕಾರಿಯಾಗುವ ಯಾವುದೇ ವಿವರಗಳನ್ನು ಸಾರ್ವಜನಿಕವಾಗಿ ಅಥವಾ ಅಧಿಕೃತ ದಾಖಲೆಗಳಲ್ಲಿ ಬಹಿರಂಗಪಡಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ನಿಯಮವು ತನಿಖೆಯ ಎಲ್ಲಾ ಹಂತಗಳಿಗೂ ಅನ್ವಯವಾಗಲಿದೆ.

ಸಾಂಕೇತಿಕ ಹೆಸರಿನ ಬಳಕೆ: ದೂರು ಸ್ವೀಕರಿಸಿದ ಕೂಡಲೇ ಠಾಣಾಧಿಕಾರಿ ಅಥವಾ ತನಿಖಾಧಿಕಾರಿಯು ಸಂತ್ರಸ್ತೆಯ ಮೂಲ ಹೆಸರಿನ ಬದಲಿಗೆ ಒಂದು ಸಾಂಕೇತಿಕ ಹೆಸರನ್ನು ಬಳಸಬೇಕು. ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ನಲ್ಲಿಯೂ ಈ ಬದಲಾದ ಹೆಸರನ್ನೇ ನಮೂದಿಸಬೇಕು ಮತ್ತು ಅದರ ಪಕ್ಕದಲ್ಲೇ ಹೆಸರು ಬದಲಿಸಲಾಗಿದೆ ಎಂದು ಸ್ಪಷ್ಟವಾಗಿ ಉಲ್ಲೇಖಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಮುಚ್ಚಿದ ಲಕೋಟೆಯಲ್ಲಿ ದಾಖಲೆ ಸಲ್ಲಿಕೆ: ನ್ಯಾಯಾಲಯಕ್ಕೆ ಸಲ್ಲಿಸುವ ದೂರು ಪ್ರತಿ, ಸ್ಥಳ ಮಹಜರು ವರದಿ ಹಾಗೂ ದೋಷಾರೋಪ ಪಟ್ಟಿ ಸೇರಿದಂತೆ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಪ್ರಮುಖ ದಾಖಲೆಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವುದನ್ನು ಇನ್ನು ಮುಂದೆ ಕಡ್ಡಾಯಗೊಳಿಸಲಾಗಿದೆ.

ಸಾಮಾಜಿಕ ಸುರಕ್ಷತೆಗೆ ಆದ್ಯತೆ

ಅನೇಕ ಪ್ರಕರಣಗಳಲ್ಲಿ ಸಂತ್ರಸ್ತರ ಗುರುತು ಬಹಿರಂಗವಾಗುವುದರಿಂದ ಅವರು ಸಮಾಜದಲ್ಲಿ ಮುಜುಗರ ಮತ್ತು ಮಾನಸಿಕ ಕಿರುಕುಳ ಅನುಭವಿಸುತ್ತಿದ್ದರು. ಇದು ಅವರ ನ್ಯಾಯಾಂಗ ಹೋರಾಟದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿತ್ತು. ಸುಪ್ರೀಂಕೋರ್ಟ್‌ನ ಆಶಯದಂತೆ ಸಂತ್ರಸ್ತರಿಗೆ ಸಂಪೂರ್ಣ ಸುರಕ್ಷತೆ ಮತ್ತು ಘನತೆ ಒದಗಿಸಲು ಪೊಲೀಸ್ ಇಲಾಖೆ ಈ ಕಠಿಣ ಕ್ರಮ ಕೈಗೊಂಡಿದೆ. ತನಿಖಾಧಿಕಾರಿಗಳು ಈ ನಿಯಮ ಪಾಲನೆಯಲ್ಲಿ ಯಾವುದೇ ನಿರ್ಲಕ್ಷ್ಯ ವಹಿಸುವಂತಿಲ್ಲ ಎಂದು ಡಿಜಿಪಿ ಎಚ್ಚರಿಸಿದ್ದಾರೆ.

ಸಂಪಾದಕೀಯ

ಎಐನಿಂದ ಲಾಭಗಳೇ ಹೆಚ್ಚು

ಭಾರತ ಎಐ ಇಂಪ್ಯಾಕ್ಟ್ ಎಕ್ಸ್‌ಪೋ 2026 ಕೇವಲ ತಂತ್ರಜ್ಞಾನ ಪ್ರದರ್ಶನವಲ್ಲ; ಅದು ಭಾರತದ ಭವಿಷ್ಯದ ಆರ್ಥಿಕ, ಸಾಮಾಜಿಕ ಹಾಗೂ ಜ್ಞಾನಾಧಾರಿತ ದಿಕ್ಕಿನ ಘೋಷಣೆ. ಎಐ ಕ್ಷೇತ್ರದಲ್ಲಿ ಭಾರತದ ಉತ್ಸಾಹ, ಸಾಮರ್ಥ್ಯ ಹಾಗೂ ಜಾಗತಿಕ ಆಶಯಗಳು ಒಂದೇ ವೇದಿಕೆಯಲ್ಲಿ ಪ್ರತಿಫಲಿಸಿದ ಕ್ಷಣ ಇದು.

ಪ್ರಧಾನಿ ನರೇಂದ್ರ ಮೋದಿ ಉಲ್ಲೇಖಿಸಿದ ಆಲೋಚನೆ, ಹೊಸತನ ಮತ್ತು ಉದ್ದೇಶಗಳ ಸಂಗಮ ಎಂಬ ಮಾತುಗಳಲ್ಲಿ ಗಂಭೀರ ಅರ್ಥವಿದೆ. ಎಐ ಈಗ ಕೇವಲ ಉದ್ಯಮಗಳ ಸಾಧನವಲ್ಲ, ಅದು ಆಡಳಿತ, ಆರೋಗ್ಯ, ಕೃಷಿ, ಶಿಕ್ಷಣ ಸೇರಿದಂತೆ ಎಲ್ಲ ಕ್ಷೇತ್ರಗಳ ರೂಪಾಂತರದ ಕೇಂದ್ರಬಿಂದು. ಸ್ಟಾರ್ಟ್‌ಅಪ್‌ಗಳ ಸಕ್ರಿಯ ಹಾಜರಾತಿ ಭಾರತದಲ್ಲಿ ಆವಿಷ್ಕಾರಶೀಲತೆಯ ಚೇತನತೆಯನ್ನು ತೋರಿಸುತ್ತದೆ. ಆದರೆ, ಎಐ ವಿಸ್ತರಣೆ ಕೇವಲ ಅವಕಾಶಗಳ ಕಥೆಯಲ್ಲ; ಡೇಟಾ ಸುರಕ್ಷತೆ, ಉದ್ಯೋಗ ಬದಲಾವಣೆ, ಅಲ್ಗೊರಿದಮ್ ಪಾರದರ್ಶಕತೆ, ನೈತಿಕ ಬಳಕೆ ಇವುಗಳನ್ನು ನಿರ್ಲಕ್ಷಿಸುವುದಕ್ಕೆ ಅವಕಾಶವಿಲ್ಲ. ತಂತ್ರಜ್ಞಾನವು ವೇಗವಾಗಿ ಬೆಳೆಯುವಾಗ ನೀತಿ, ನಿಯಂತ್ರಣ ಹಾಗೂ ಜವಾಬ್ದಾರಿ ಅದಕ್ಕಿಂತ ವೇಗವಾಗಿ ಸಾಗಬೇಕು.



ಎಐ ಅನ್ನು ಜವಾಬ್ದಾರಿಯುತ ಮತ್ತು ಎಲ್ಲರನ್ನು ಒಳಗೊಂಡಂತೆ ಬಳಸುವ ಭಾರತದ ಬದ್ಧತೆ ಪ್ರಾಯೋಗಿಕ ಕ್ರಮಗಳಲ್ಲಿ ಕಾಣಬೇಕು. ನಗರಗಳಷ್ಟೇ ಅಲ್ಲ, ಗ್ರಾಮೀಣ ಭಾರತಕ್ಕೂ ಎಐ ಪ್ರಯೋಜನ ತಲುಪಬೇಕು. ತಂತ್ರಜ್ಞಾನವು ಅಸಮಾನತೆಯನ್ನು ಕಡಿಮೆ ಮಾಡಬೇಕೇ ಹೊರತು ಹೆಚ್ಚಿಸಬಾರದು. ಈ ಎಕ್ಸ್‌ಪೋ ನೀಡಿದ ಸಂದೇಶ ಸ್ಪಷ್ಟವಾಗಿದೆ. ಭಾರತ ಎಐ ಯಲ್ಲಿ ಕೇವಲ ಪಾಲ್ಗೊಳ್ಳುವ ದೇಶವಲ್ಲ, ಅದು ದಿಕ್ಕು ತೋರಿಸಲು ಸಿದ್ಧವಾಗಿರುವ ರಾಷ್ಟ್ರ. ಈಗ ಅಗತ್ಯವಿರುವುದು ದೃಢ ನೀತಿ, ನೈತಿಕ ಮಾರ್ಗದರ್ಶನ ಮತ್ತು ಮಾನವಕೇಂದ್ರಿತ ದೃಷ್ಟಿಕೋನ. ಎಐ ನಿಜವಾದ ಅರ್ಥದಲ್ಲಿ ಮಾನವ ಪ್ರಗತಿಗೆ ದಾರಿಯಾಗಲಿದೆ.

ಈ ಪ್ರದರ್ಶನದಲ್ಲಿ ಕೆಲವೊಂದು ಅಡಚಣೆಗಳು, ಗೊಂದಲಗಳು ಆಗಿವೆ. ಆದರೆ, ದೊಡ್ಡ ಪ್ರದರ್ಶನಗಳಲ್ಲಿ ಅಥವಾ ಕಾರ್ಯಕ್ರಮಗಳಲ್ಲಿ ಇಂಥ ಕೆಲವು ಘಟನೆಗಳು ನಡೆಯುವುದು ಸಾಮಾನ್ಯ. ಆದರೂ, ಇದಕ್ಕೆ ಪ್ರತಿಯಾಗಿ ಕೇಂದ್ರ ಐಟಿ ಸಚಿವ ಅಶ್ವಿನಿ ವೈಷ್ಣವ್ ಅವರು ಕ್ಷಮೆ ಕೇಳಿದ್ದಾರೆ. ಹೀಗಾಗಿ, ಇಂಥ ಸಂಗತಿಗಳನ್ನು ದೊಡ್ಡದು ಮಾಡುವುದರಲ್ಲಿ ಅರ್ಥವೇನಿಲ್ಲ. ಇಲ್ಲಿ ಒಂದು ವಿಷಯವನ್ನು ನೆನಪಿನಲ್ಲಿ ಇಡಬೇಕು. ಎಐ ವಿಚಾರದಲ್ಲಿ ಪಾಶ್ಚಿಮಾತ್ಯ ದೇಶಗಳು ಅಥವಾ ಅಮೆರಿಕ ಮತ್ತು ಚೀನಾದಂಥ ದೇಶಗಳನ್ನು ನಾವು ಗುರುತಿಸುತ್ತೇವೆ. ಭಾರತವನ್ನು ಗುರುತಿಸುವುದು ಯಾವಾಗ ಎಂಬ ಪ್ರಶ್ನೆಗೆ ಇಲ್ಲಿ ಉತ್ತರ ಸಿಕ್ಕಿದೆ. ಸರ್ವಂನಂಥ ಎಐ ಕಂಪನಿಗಳು ತಮ್ಮ ಸಾಧನಗಳು ಮತ್ತು ಸಾಧನೆಗಳನ್ನು ಇಲ್ಲಿ ಪ್ರದರ್ಶಿಸಿವೆ. ಅಷ್ಟೇ ಅಲ್ಲ, ಭಾರತದಲ್ಲೇ ತಯಾರಾದ ಹಲವಾರು ವೇದಿಕೆಗಳಿಗೆ ಇಲ್ಲಿ ಜಾಗತಿಕ ಸ್ಪರ್ಶ ಸಿಕ್ಕಿದೆ. ಈ ವಿಚಾರದಲ್ಲಿ ನಾವೇನೂ ಕಡಿಮೆ ಇಲ್ಲ ಎಂದು ಭಾರತೀಯರು ಜಗತ್ತಿಗೆ ತೋರಿದ್ದಾರೆ. ಮುಂದಿನ ದಿನಗಳಲ್ಲಿ ಎಐ ಅಪಾಯವನ್ನು ಮುಂದಿಟ್ಟುಕೊಂಡೇ, ಹೆಜ್ಜೆ ಇಡಬೇಕು. ನಮ್ಮ ಸುಧಾರಣೆಗಾಗಿ ಹೇಗೆ ಇದನ್ನು ಬಳಕೆ ಮಾಡಿಕೊಳ್ಳಬೇಕು ಎಂಬ ಅರಿವೂ ಮೂಡಬೇಕು. ಅದನ್ನು ಕೇಂದ್ರ ಸರ್ಕಾರ ಮಾಡುತ್ತಿದ್ದು, ಮುಂದಿನ ದಿನಗಳಲ್ಲೂ ಮಾಡಿಕೊಂಡು ಹೋಗಲಿದೆ ಎಂಬುದು ಸ್ಪಷ್ಟ.

ಹೃದಯ ಹೊಕ್ಕ ಮೂರು ವಸ್ತುಗಳು

ಸಂಚಿಂತ್ಯ ಸಂಚಿತ್ಯ ಜಗತ್ ಸಮಸ್ತಂ
ತ್ರಯಃ ಪದಾರ್ಥಾಃ ಹೃದಯಂ ಪ್ರವಿಷ್ಟಾಃ।
ಇಕ್ಷೋರ್ವಿಕಾರಾ ಮತಯಃ ಕವೀನಾಂ
ಮುಗ್ಧಾಂಗನಾಪಾಂಗತರಂಗಿತಾನಿ॥ –ಭೋಜಪ್ರಬಂಧ

ಪ್ರಪಂಚವನ್ನೆಲ್ಲ ಕುರಿತು ಪರ್ಯಾಲೋಚಿಸಿದಾಗ, ಮೂರು ವಸ್ತುಗಳು ಮಾತ್ರ ನನ್ನ ಹೃದಯವನ್ನು ಹೊಕ್ಕವು. ಒಂದು ಕಬ್ಬಿನ ಪರಿಣಾಮ (ಬೆಲ್ಲ, ಸಕ್ಕರೆ.... ಇತ್ಯಾದಿ), ಎರಡು ಕವಿಗಳ ಬುದ್ಧಿವೈಭವ, ಮೂರು ಯುವತಿಯರ ಕಡೆಗಣ್ಣಿನ ನೋಟದ ಚಾಪಲ್ಯ –ಎಂಬುದು ಶ್ಲೋಕಾರ್ಥ.

ಭಗವಂತನ ಸೃಷ್ಟಿ ಅತ್ಯಂತ ವಿಚಿತ್ರ. ಸೋಜಿಗ ಕೂಡ. ಎಷ್ಟೊಂದು ಬಗೆಯ ಸೃಷ್ಟಿ, ಒಂದರಂತೆ ಇನ್ನೊಂದಿಲ್ಲ. ಒಂದೊಂದೂ ಕೂಡ ವಿಶಿಷ್ಟ. ಎಷ್ಟೊಂದು ಬಗೆಯ ಚಿತ್ರ–ವಿಚಿತ್ರಗಳು ಮನುಷ್ಯನನ್ನು ಆಕರ್ಷಿಸುವುದಿಲ್ಲ! ಎಲ್ಲವೂ ಬೇಕೆನಿಸುತ್ತದೆ. ಎಲ್ಲವನ್ನೂ ಬಾಚಿಕೊಳ್ಳಬೇಕು ಅನ್ನಿಸುತ್ತದೆ.



ಇದು ಸಾಮಾನ್ಯ ಜನರ ಅನಿಸಿಕೆ. ಆದರೆ ಪ್ರಕೃತ ಶ್ಲೋಕ ರಚಿಸಿದ ಕವಿಯು ಪ್ರಪಂಚವನ್ನೆಲ್ಲ ಅವಲೋಕಿಸಿ, ಪರ್ಯಾಲೋಚಿಸಿದಾಗ ಮೂರು ವಸ್ತುಗಳು ಅಥವಾ ವಿಷಯಗಳು ಅವನ ಹೃದಯವನ್ನು ಹೊಕ್ಕವು ಎನ್ನುತ್ತಾನೆ. ಅವನ ಹೃದಯವನ್ನು ಪ್ರವೇಶಿಸಿ ನೆಲೆನಿಂತ ಆ ಮೂರು ವಿಷಯಗಳೆಂದರೆ ಕಬ್ಬಿನ ಪರಿಣಾಮಗಳು, ಕವಿಗಳ ಬುದ್ಧಿ ವೈಭವ ಹಾಗೂ ಯುವತಿಯರ ಕಡೆಗಣ್ಣ ನೋಟ. ಅಂದರೆ ಇಷ್ಟು ವಿಶಾಲವಾದ ಪ್ರಪಂಚದಲ್ಲಿ ಸೂಕ್ಷ್ಮಮತಿಯಾದ ಕವಿಯ ಅಂತರಂಗ ಪ್ರವೇಶಿಸಿದ್ದು ಈ ಮೂರೇ ವಸ್ತುಗಳೆಂದಾದರೆ ಅವುಗಳಲ್ಲಿ ಅಂತಹ ವಿಶೇಷತೆಯಿರಬೇಕಷ್ಟೆ!

ಮೊದಲನೆಯದು ಇಕ್ಷುವಿಕಾರ. ಇಕ್ಷು ಎಂದರೆ ಕಬ್ಬು. ಇದರ ವಿಕಾರವೆಂದರೆ ಇದರಿಂದ ಉಂಟಾಗಬಲ್ಲ ಪದಾರ್ಥಗಳಾದ ಸಕ್ಕರೆ, ಬೆಲ್ಲ, ಕಬ್ಬಿನ ರಸವನ್ನು ಕುದಿಸಿದಾಗ ಮಾದಕದ್ರವ್ಯಕ್ಕೆ ಪೂರಕವಾದ ಗೊಬ್ಬರದ ಅಂಶಗಳು.... ಇತ್ಯಾದಿ. ಕಬ್ಬಿನ ರಸಕ್ಕಾಗಲಿ, ಸಿಹಿಗೆ ಮೂಲಕಾರಣವಾದ ಸಕ್ಕರೆ, ಬೆಲ್ಲ... ಇತ್ಯಾದಿಗಳಿಗಾಗಲಿ ಮನಸೋಲದವರಿಲ್ಲ. ಇದು ಕಬ್ಬಿನದೇ ವಿಶೇಷ. ಇವುಗಳಿಗಾಗಿ ಪ್ರಪಂಚವೇ ಆಸೆಪಡುತ್ತದೆ. ಇದು ಕವಿಯ ಮೇಲೆ ಎಷ್ಟು ಪ್ರಭಾವ ಬೀರುತ್ತದೆ ಎಂಬುದನ್ನು ಇದು ತನ್ನ ಹೃದಯವನ್ನು ಹೊಕ್ಕಿತು ಎಂಬ ಮಾತೇ ತಿಳಿಸಿಕೊಡುತ್ತದೆ.

ಎರಡನೆಯದು ಕವಿಗಳ ಬುದ್ಧಿವೈಭವ. ಕವಿಯೆಂದರೆ ಕ್ರಾಂತದರ್ಶಿ. ರವಿ ಕಾಣದ್ದನ್ನೂ ಕಾಣುವ ಅಂತಃದೃಷ್ಟಿಯುಳ್ಳವ. ಕವಿ ಸಾಮಾನ್ಯರಂತೆ ಇದ್ದರೂ ಅವನು ನೋಡುವುದು ಸಾಮಾನ್ಯರಾರೂ ಕಾಣದ್ದನ್ನು, ಕಲ್ಪಿಸಿಕೊಳ್ಳುವುದು ಸಾಮಾನ್ಯರಿಗೆ ಎಟುಕದ್ದನ್ನು. ತನ್ನ ಅಭಿರುಚಿಗೆ ತಕ್ಕಂತೆ ಲೋಕವನ್ನೇ ಬದಲಾಯಿಸುವವ ಕವಿ. ಕವಿ ಕಲ್ಪನೆ ಅನ್ಯಾದೃಶವಾದದ್ದು. ಆದ್ದರಿಂದಲೇ ಕವಿ ವಿಶಿಷ್ಟ. ಕಾವ್ಯ ಕಲ್ಪನೆಮೈದಾಳಿರುವ ಭೋಜನಿಗೆ ಕವಿವೈಭವ ಮನಸ್ಸನ್ನು ಸೂರೆಗೊಂಡರೆ ಆಶ್ಚರ್ಯವೇನಲ್ಲ. ಕಥನದಲ್ಲಿ ಉತ್ಪ್ರೇಕ್ಷೆಯೂ ಇಲ್ಲ.

ಮೂರನೆಯದೇ ಸುಂದರಿಯರ, ಯುವತಿಯರ ಕಡೆಗಣ್ಣಿನ ನೋಟದ ಚಾಪಲ್ಯ. ಸುಂದರಿಯರ ಕುಡಿನೋಟಕ್ಕೆ ಮನಸೋತು ಎಂತೆಂಥಹ ಮಹಾತ್ಮರು ಅವರ ಹಿಂದೆ ಬಿದ್ದಿದ್ದಾರೆ. ಮಾದಕ ನೋಟ ಪಾಶವಿಲ್ಲದೇ ಬಂಧಿಸಬಲ್ಲದು. ಸೂಜಿಗಲ್ಲಿನಂತೆ ಎಂಥವರನ್ನೂ ಸೆಳೆಯಬಲ್ಲದು. ಮಾದಕನೋಟದ ಸುಳಿಯಲ್ಲಿ ಸಿಕ್ಕರೆ ಹೊರಬರುವುದೇ ಕಷ್ಟ. ಈ ಕಾರಣಕ್ಕಾಗಿಯೇ ಈ ಮೂರು ಭೋಜನ ಅಂತರಂಗವನ್ನು ಹೊಕ್ಕವು. ಇವುಗಳನ್ನು ಮೀರಿದ್ದು ಬೇರೊಂದಿಲ್ಲ ಎಂಬ ಅನುಭವವನ್ನು ನೀಡಿದವು. ಈ ರೀತಿ ಹೇಳುವ ಮೂಲಕ ಈ ಮೂರರ ಮಹಿಮೆಯನ್ನು ಕವಿಯು ಅನಾವರಣಗೊಳಿಸಿದ್ದಾನೆ.

ಸ್ವರ್ಗ ಮತ್ತು ನರಕಲೋಕಗಳ ಕಲ್ಪನೆಯ ಹಿಂದಿನ ವಿಚಾರಗಳು



ಸ್ವರ್ಗ-ನರಕಗಳ ಮೇಲಿನ ನಂಬಿಕೆ ಕೇವಲ ಸನಾತನಧರ್ಮದಲ್ಲಿಯಷ್ಟೇ ಅಲ್ಲ, ಬದಲಿಗೆ ಒಂದೇ ಗ್ರಂಥ, ಒಂದೇ ದೇವ ಎಂಬ ಕಟ್ಟುಪಾಡಿನ ರಿಲಿಜನ್‌ಗಳಲ್ಲೂ ಕೂಡ ಸ್ವರ್ಗ–ನರಕಗಳ ಕಲ್ಪನೆಯಿದೆ. ಸನಾತನ ಧರ್ಮದಲ್ಲಿ ಸ್ವರ್ಗ– ನರಕ ಕಲ್ಪನೆಯು ಬಹಳ ವಿಸ್ತೃತವಾದ ಹರಹುಳ್ಳದ್ದು. ಇದಕ್ಕೆ ಕರ್ಮಸಿದ್ಧಾಂತವೇ ಆಧಾರ. ಮಾಡಿದ ಪ್ರತಿಯೊಂದು ಕರ್ಮವೂ ಅದಕ್ಕೆ ತಕ್ಕುದಾದ ಫಲವೊಂದನ್ನು ಸೃಜಿಸುತ್ತದೆ ಮತ್ತು ಅದನ್ನು ಆಯಾ ಕರ್ಮದ ಕರ್ತೃವೇ ಅನುಭವಿಸಬೇಕಾಗುತ್ತದೆ ಎಂಬ ದೃಢನಂಬಿಕೆ ಇಲ್ಲಿದೆ. ತಾನು ಮಾಡಿದ ಕರ್ಮಕ್ಕನುಗುಣವಾಗಿಯೇ ಇಲ್ಲಿ ಮುಂದಿನ ಜನ್ಮವನ್ನೂ ತಿಳಿಸಲಾಗಿದೆ. ಕರ್ಮಗಳು ನಮಗೆಲ್ಲ ಗೊತ್ತಿರುವಂತೆ ಮೂರು ವಿಧವಾಗಿವೆ. ಸಂಚಿತಕರ್ಮ, ಪ್ರಾರಬ್ಧಕರ್ಮ ಮತ್ತು ಆಗಾಮಿಕರ್ಮ ಎಂಬುದಾಗಿ. ಸನಾತನ ಧರ್ಮವು ಈ ಜನ್ಮಪರಂಪರೆಯನ್ನು ಅನಾದಿಯೆಂದು ಅಂಗೀಕರಿಸಿದೆ. ಇದಕ್ಕೊಂದು ಆರಂಭವೆಂಬುದಿಲ್ಲ. ಆದರೆ ಮೋಕ್ಷವೆಂಬಲ್ಲಿ ಕೊನೆಯಾಗುತ್ತದೆ ಎಂಬುದು ಇದರ ಮುಖ್ಯಸಿದ್ಧಾಂತ.

ಅನಾದಿ ಪರಂಪರೆಯಾಗಿರುವುದರಿಂದ, ಹಿಂದಿನ ಎಲ್ಲ ಜನ್ಮಗಳಲ್ಲಿ ಒಟ್ಟಾದ ಮತ್ತು ಇದುವರೆಗೆ ಅನುಭವಿಸದೆ ಉಳಿದಿರುವ ಒಟ್ಟು ಕರ್ಮವನ್ನು ಸಂಚಿತಕರ್ಮವೆಂಬುದಾಗಿ ಗುರುತಿಸಲಾಗುತ್ತದೆ. ಆ ಕರ್ಮರಾಶಿಯಿಂದ ಸಜಾತೀಯವಾದ ಮತ್ತು ಉತ್ಕಟವಾದ ಕರ್ಮಗಳು ಒಂದುಗೂಡಿ ಒಂದು ನಿರ್ದಿಷ್ಟಜನ್ಮಪ್ರಾಪ್ತಿಗೆ ಕಾರಣವಾಗುತ್ತವೆ. ಅವು ಒಂದು ಶರೀರದ ಆಯುವಿಗೆ ಸೀಮಿತವಾಗಿರುತ್ತವೆ. ಇವು ಕೇವಲ ಅನುಭೋಗದಿಂದ ನಾಶವಾಗುವ ಕರ್ಮವಾಗಿವೆ ಮತ್ತು ಪ್ರಕೃತಶರೀರದ ಆರಂಭಕ್ಕೆ ಕಾರಣವಾಗಿರುವುದಷ್ಟೇ ಅಲ್ಲ, ಕರ್ಮಫಲವನ್ನು ಕೊಡಲು ಉದ್ಯುಕ್ತವಾಗಿರುವುದರಿಂದ ಅದನ್ನು ಪ್ರಾರಬ್ಧ ಕರ್ಮ ಎಂದು ಕರೆಯುತ್ತಾರೆ.

ಸಂಚಿತದಿಂದ ಆಯ್ದ ಪ್ರಾರಬ್ಧಕರ್ಮವನ್ನು ಈ ಶರೀರದಲ್ಲಿ ಅನುಭವಿಸುವ ಸಮಯದಲ್ಲಿಯೂ ನಾವು ಹಲವು ಕರ್ಮಗಳನ್ನು ಮಾಡುತ್ತಿರುತ್ತೇವೆ. ಒಂದು ಕ್ಷಣವೂ ಜೀವನು ನಿಷ್ಕ್ರಿಯನಾಗಿರಲು ಸಾಧ್ಯವಿಲ್ಲ. ಶುಭವೋ, ಅಶುಭವೋ ಯಾವುದಾದರೊಂದು ಕ್ರಿಯೆಯಲ್ಲಿ ತೊಡಗಿಯೇ ಇರುತ್ತಾನೆ. ಹೀಗೆ ಪ್ರಾರಬ್ಧದ ಅನುಭವದ ಅವಸ್ಥೆಯಲ್ಲಿ ಮತ್ತೆ ಹೊಸದಾಗಿ ಮಾಡಲ್ಪಡುವ ಕರ್ಮಗಳನ್ನು ಆಗಾಮಿ ಕರ್ಮವೆಂಬುದಾಗಿ ಕರೆಯಲಾಗುತ್ತದೆ. ಇದು ಹೋಗಿ ಮತ್ತೆ ಸಂಚಿತವನ್ನೇ ಸೇರಿಕೊಳ್ಳುತ್ತದೆ.

ಕರ್ಮದ ಫಲವನ್ನು ಯೋಗಶಾಸ್ತ್ರವು ಮೂರುವಿಧವಾಗಿ ವಿಭಜಿಸಿದೆ. ಅವೆಂದರೆ, ಶರೀರ (ಜಾತಿ), ಆಯುಸ್ಸು, ಭೋಗ ಎಂಬುದಾಗಿ. ಅರ್ಥಾತ್ ಆಯಾ ಜೀವನು ಕರ್ಮಕ್ಕನುಗುಣವಾಗಿ ಆತನ ಮುಂದಿನ ಜನ್ಮ, ಆತನ ಜೀವಿತಾವಧಿ ಮತ್ತು ಯಾವೆಲ್ಲ ರೀತಿಯ ಭೋಗವನ್ನು ಆತ ಅನುಭವಿಸಲಿಕ್ಕಿದೆ ಎಂಬುದು ನಿಶ್ಚಿತವಾಗುತ್ತದೆ. ಹೀಗೆ ಕರ್ಮಸಿದ್ಧಾಂತದ ಪ್ರಕಾರ ಪುನರ್ಜನ್ಮವೆಂಬುದಿದೆ ಮತ್ತು ಕರ್ಮವೇ ಈ ಜನ್ಮಪರಂಪರೆಗೆ ನಿರ್ಣಾಯಕವಾಗಿದೆ. ಈ ಕರ್ಮಗಳು ಮತ್ತೆ ಶುಭ, ಅಶುಭ ಮತ್ತು ಮಿಶ್ರವೆಂಬುದಾಗಿ ಮೂರು ವಿಧವಾಗಿವೆ. ಶುಭಕರ್ಮವು ಪುಣ್ಯಕರ್ಮವೆಂಬುದಾಗಿಯೂ, ಅಶುಭಕರ್ಮವು ಪಾಪಕರ್ಮವೆಂಬುದಾಗಿಯೂ, ಮಿಶ್ರವೆಂದರೆ ಪುಣ್ಯ–ಪಾಪಗಳ ಮಿಶ್ರಣವೆಂಬುದಾಗಿಯೂ ಲೋಕದಲ್ಲಿ ಪ್ರಸಿದ್ಧವಾಗಿದೆ.

ಯೋಗಶಾಸ್ತ್ರದಲ್ಲಿ ಇವನ್ನೇ ನಾಲ್ಕು ವಿಧವಾಗಿ ವಿಭಾಗಿಸಲಾಗಿದೆ. ಶುಕ್ಲ, ಕೃಷ್ಣ, ಶುಕ್ಲಕೃಷ್ಣ, ಅಶುಕ್ಲಾಕೃಷ್ಣ ಎಂಬುದಾಗಿ. ಅಶುಕ್ಲಾಕೃಷ್ಣವೆಂದರೆ ಅದು ಶುಭವೂ ಅಲ್ಲ, ಅಶುಭವೂ ಅಲ್ಲ, ಅವೆರಡರ ಮಿಶ್ರಣವೂ ಅಲ್ಲದ ಇನ್ನೊಂದು ಬಗೆ. ಅದು ಯೋಗಿಗಳಿಗೆ ದೊರಕುವಂಥದ್ದು ಮತ್ತು ಕೈವಲ್ಯಕ್ಕೆ ಅಬಾಧಕ ಮತ್ತು ಸಾಧಕವಾದಂಥದ್ದು. ಉಪನಿಷತ್ತು ಶುಭಕರ್ಮಗಳನ್ನು ಮಾಡಿದವರನ್ನು ರಮಣೀಯಚರಣರು ಎಂಬುದಾಗಿಯೂ, ಪಾಪಕರ್ಮಿಗಳನ್ನು ಕಪೂಯಚರಣರು ಎಂಬುದಾಗಿಯೂ ಕರೆಯುತ್ತದೆ. ಚರಣಶಬ್ದಕ್ಕೆ ಕರ್ಮವೆಂದರ್ಥ. ಅವೆರಡರ ಫಲವನ್ನೂ ಅದು ತಿಳಿಸಿದೆ. ಶುಭಕರ್ಮವನ್ನು ಮಾಡಿದವರು ಒಳ್ಳೆಯ ಯೋನಿಗಳನ್ನು, ಪಾಪಕರ್ಮವನ್ನು ಮಾಡಿದವರು ಕಪೂಯ (ನಿಕೃಷ್ಟ) ಯೋನಿಗಳನ್ನು ಹೊಂದುತ್ತಾರೆ ಎಂಬುದಾಗಿ. ಈ ಕರ್ಮಗಳು ಮತ್ತೆ ಕಾಯಿಕ, ವಾಚಿಕ ಮತ್ತು ಮಾನಸಿಕ ಎಂಬುದಾಗಿ ಮೂರು ವಿಧವಾಗಿವೆ. ದೇಹದಿಂದ ಮಾಡಲ್ಪಟ್ಟ ಕರ್ಮಗಳು ಕಾಯಿಕಕರ್ಮಗಳು, ಮನಸ್ಸಿನಿಂದ ಮಾಡಿದ ಶುಭಾಶುಭ ಚಿಂತನಾತ್ಮಕವಾದ ಕರ್ಮಗಳು ಮಾನಸಕರ್ಮಗಳು, ಮಾತಿನಿಂದ ಮಾಡಿದ ಕರ್ಮಗಳು ವಾಚಿಕಕರ್ಮಗಳೆಂಬುದು ಅವುಗಳ ವಿವರಣೆ. ಈ ಮೂರೂ ಕೂಡ ಕರ್ಮದ ಮಾಧ್ಯಮಗಳೇ ಆಗಿವೆ. ಹಾಗಾಗಿ ಕಾಯಿಕಪುಣ್ಯಕರ್ಮ, ಕಾಯಿಕ ಪಾಪಕರ್ಮ, ಕಾಯಿಕಮಿಶ್ರಕರ್ಮ, ಮಾನಸಿಕಪುಣ್ಯಕರ್ಮ, ಮಾನಸಿಕಪಾಪಕರ್ಮ, ಮಾನಸಿಕಮಿಶ್ರಕರ್ಮ, ವಾಚಿಕಪುಣ್ಯಕರ್ಮ, ವಾಚಿಕಪಾಪಕರ್ಮ, ವಾಚಿಕಮಿಶ್ರಕರ್ಮವೆಂಬುದಾಗಿ ಒಂಭತ್ತಾಗಿ ವಿಭಾಗಿಸಿ ತಿಳಿಸಿಕೊಳ್ಳಬಹುದು. ಈ ಎಲ್ಲ ವಿಧದ ಕರ್ಮಗಳೂ ಅದಕ್ಕೆ ತಕ್ಕುದಾದ ಫಲವನ್ನು ಕೊಡುತ್ತವೆ. ಪ್ರಾಯಃ ಆಯಾ ಮಾಧ್ಯಮದಿಂದ ಮಾಡಲ್ಪಟ್ಟ ಕರ್ಮಗಳು ಅದೇ ಮಾಧ್ಯಮದಲ್ಲಿಯೇ ಅನುಭವಿಸಬೇಕಾಗುತ್ತದೆ.



ಈ ಕರ್ಮಗಳು ಮತ್ತೆ ತೀವ್ರ, ಮಂದ ಮತ್ತು ಮಧ್ಯಮಕರ್ಮಗಳು ಎಂಬುದಾಗಿ ಮೂರು ವಿಧ. ಇವನ್ನು ಈ ಹಿಂದಿನ ಒಂಬತ್ತು ವಿಧದ ಕರ್ಮಗಳಿಗೆ ಅನ್ವಯಿಸಿಕೊಂಡರೆ ಇಪ್ಪತ್ತೇಳು ವಿಧದ ಕರ್ಮಗಳಾಗುತ್ತವೆ. ಯಾವುದು ತೀವ್ರಕರ್ಮವೋ ಅದು ಬೇಗ ಫಲಿಸುತ್ತದೆ. ಉಳಿದವು ಫಲದಾನಕ್ಕಾಗಿ ಪ್ರತೀಕ್ಷೆಯಲ್ಲಿರುತ್ತವೆ. ಒಟ್ಟಿನಲ್ಲಿ ಈ ಎಲ್ಲ ಕರ್ಮಗಳೂ ತಮಗೆ ತಕ್ಕುದಾದ ಫಲವನ್ನು ಕೊಡುತ್ತವೆ ಎಂಬುದಂತೂ ನಿಶ್ಚಿತ. ಈ ಕರ್ಮಗಳು ನಾಶವಾಗಲು ಇರುವ ದಾರಿ ಎರಡೇ ಎರಡು. ಒಂದೋ ಆಯಾ ಕರ್ಮಗಳ ಫಲವನ್ನು ಅನುಭವಿಸಿದಾಗ ಅವು ನಾಶವಾಗುತ್ತವೆ. ಆದರೆ ಅನಂತಕಾಲದಿಂದ ಅನಂತಕ್ಷಣಗಳಲ್ಲಿ ನಾವು ಮಾಡಿದ ಇಂಥ ಅನಂತಕರ್ಮಗಳು ಇರುವುದರಿಂದ ಅನುಭವ ಮಾತ್ರದಿಂದ ಎಲ್ಲ ಕರ್ಮಗಳನ್ನು ಅನುಭವಿಸಿ ಮುಗಿಸುವುದಕ್ಕೆ ಸಾಧ್ಯವಿಲ್ಲ. ಕಾಯವ್ಯೂಹವೆಂಬ ಒಂದು ಸಿದ್ಧಿಯನ್ನು ಶಾಸ್ತ್ರವು ತಿಳಿಸುತ್ತದೆಯಾದರೂ ಅದು ಯೋಗಿಗಳಿಗೆ ಮಾತ್ರ ಸಾಧ್ಯವಾದುದು.

ಕಾಯವ್ಯೂಹವೆಂದರೆ, ಒಬ್ಬ ಯೋಗಿಯು ತನ್ನ ಉಳಿದ ಎಲ್ಲ ಕರ್ಮಗಳನ್ನು ಆತ ತಿಳಿದುಕೊಳ್ಳಬಲ್ಲ. ಅವಶಿಷ್ಟವಾದ ಕರ್ಮಗಳೆಷ್ಟು ಮತ್ತು ಅವುಗಳಿಗೆ ತಕ್ಕುದಾದ ಶರೀರಗಳು ಯಾವುದು ಎಂಬುದನ್ನು ತಿಳಿದು ಆತ ಒಟ್ಟಿಗೆ ಆ ಎಲ್ಲ ಶರೀರಗಳನ್ನು ನಿರ್ಮಿಸಿಕೊಂಡು ಎಲ್ಲ ಶರೀರಗಳಲ್ಲಿಯೂ ಒಮ್ಮೆಲೇ ಪ್ರವೇಶಿಸಿ, ಎಲ್ಲ ಕರ್ಮಗಳನ್ನು ಒಟ್ಟಿಗೆ ಅನುಭವಿಸುತ್ತಾನೆ ಎಂಬ ಉಲ್ಲೇಖ ಶಾಸ್ತ್ರಗಳಲ್ಲಿ ಸಿಗುತ್ತದೆ. ಆದರೆ ಅದು ಅಂಥ ಸಿದ್ಧಿಯನ್ನು ಪಡೆದುಕೊಂಡ ಯೋಗಿಶ್ರೇಷ್ಠನಿಗೆ ಮಾತ್ರ ಸಾಧ್ಯ. ಉಳಿದವರು ಅನುಭವಿಸಿಯೇ ನಾಶಮಾಡಿಕೊಳ್ಳಬೇಕು. ಇದಕ್ಕೆ ಹೊರತಾದ ಇನ್ನೊಂದು ಸಾಧನವೆಂದರೆ ಆತ್ಮಸಾಕ್ಷಾತ್ಕಾರ. ಆತ್ಮಜ್ಞಾನವುಂಟಾದಾಗ ಪ್ರಾರಬ್ಧದ ಹೊರತಾದ ಎಲ್ಲ ಕರ್ಮಗಳೂ ನಿಶ್ಶೇಷವಾಗಿ ನಾಶವಾಗುತ್ತವೆ.

ಕರ್ಮಕ್ಕನುಗುಣವಾಗಿ ಶರೀರದ ಪ್ರಾಪ್ತಿಯಾಗುತ್ತದೆ ಎಂಬ ವಿಷಯದಲ್ಲಿ 'ಯೋನಿಮನ್ಯೇ ಪ್ರಪದ್ಯಂತೇ ಶರೀರತ್ವಾಯ ದೇಹಿನಃ। ಸ್ಥಾಣುಮನ್ಯೇಽನುಸಂಯಂತಿ ಯಥಾಕರ್ಮ ಯಥಾಶ್ರುತಮ್॥' ಎಂಬ ಕಠೋಪನಿಷತ್ತಿನ ಮಂತ್ರ, 'ರಮಣೀಯಚರಣಾಃ ರಮಣೀಯಾಂ ಯೋನಿಮಾಪದ್ಯೇರನ್' ಮೊದಲಾದ ಉಪನಿಷದ್ವಾಕ್ಯಗಳು ಇಲ್ಲಿ ಪ್ರಮಾಣ. ಭಗವದ್ಗೀತೆಯು ಕೂಡ 'ವಾಸಾಂಸಿ ಜೀರ್ಣಾನಿ ಯಥಾ ವಿಹಾಯ...' ಮುಂತಾದ ಶ್ಲೋಕಗಳಿಂದ ಇಂಥ ಪುನರ್ಜನ್ಮವನ್ನೇ ತಿಳಿಸುತ್ತದೆ. ಈ ಮೂಲಕ ಶ್ರುತಿ–ಸ್ಮೃತಿಗಳು ನಮ್ಮ ಇಂದಿನ ಈ ಸ್ಥಿತಿಗೆ ಹಿಂದಿನ ಕರ್ಮಗಳು ಕಾರಣವೆಂಬುದಾಗಿಯೂ, ನಮ್ಮ ಮುಂದಿನ ಸ್ಥಿತಿಗೆ ನಾವು ಈಗ ಮಾಡುತ್ತಿರುವ ಕರ್ಮಗಳೂ ಕಾರಣವೆಂಬುದಾಗಿಯೂ ತಿಳಿಸುತ್ತವೆ. ಒಂದು ವೃಕ್ಷದಿಂದ ಹಿಡಿದು, ಇರುವೆ, ಸೊಳ್ಳೆ, ಬ್ಯಾಕ್ಟೀರಿಯಾವರೆಗೆ ಜೀವಿಗಳಿದ್ದಾವೆ. ಅವರೆಲ್ಲ ತಮ್ಮ ತಮ್ಮ ಕರ್ಮದ ಅನುಭೋಗಕ್ಕಾಗಿಯೇ ಆಯಾ ಶರೀರವನ್ನು ಹೊಂದಿವೆ. ಅವೆಲ್ಲ ಕರ್ಮದ ಫಲದ ಅನುಭವಕ್ಕಾಗಿ ಮಾತ್ರ ದೊರಕಿದ ಶರೀರಗಳಾಗಿವೆ. ಮನುಷ್ಯಶರೀರವು ಮಿಶ್ರಕರ್ಮದ ಫಲವಾಗಿದೆ. ಅರ್ಥಾತ್ ಪಾಪ–ಪುಣ್ಯಗಳ ಮಿಶ್ರಣದಿಂದ ದೊರೆತದ್ದಾಗಿದೆ. ಹಾಗಾಗಿ ಇಲ್ಲಿ ದುಃಖವನ್ನೂ ಅನುಭವಿಸಬೇಕಾಗುತ್ತದೆ ಮತ್ತು ಸ್ವಲ್ಪಮಟ್ಟಿಗೆ ವಿಷಯಸುಖವೂ ಪ್ರಾಪ್ತವಾಗುತ್ತದೆ.

ಇಡೀ ಬ್ರಹ್ಮಾಂಡದಲ್ಲಿ ಹದಿನಾಲ್ಕು ಭುವನಗಳಿವೆ ಎಂಬುದಾಗಿ ತಿಳಿಸಿ, ಮನುಷ್ಯಲೋಕವು ಮಧ್ಯದಲ್ಲಿದೆ ಎಂಬುದಾಗಿ ಶಾಸ್ತ್ರಗಳು ತಿಳಿಸುತ್ತವೆ. ಈ ಮನುಷ್ಯಶರೀರದಿಂದ ಆರಂಭಿಸಿ ಮೇಲಿನ ಎಲ್ಲ ಶರೀರಗಳೂ ಪುಣ್ಯಾಧಿಕ್ಯದಿಂದ ದೊರೆಯುವಂಥವು. ಮೇಲೆ ಮೇಲೆ ಹೋದಂತೆ ದೇವತಾಶರೀರಗಳಿವೆ. ಅವುಗಳು ಸ್ವರ್ಗವೆಂಬ ಮೇಲಿನ ಲೋಕದಲ್ಲಿ ತಮ್ಮ ಪುಣ್ಯಕರ್ಮದ ಫಲವನ್ನು ಅನುಭವಿಸಿ ಮತ್ತೆ ಕೆಳಗಿನ ಲೋಕಗಳಲ್ಲಿ ಜನ್ಮವನ್ನು ಪ್ರಾಪ್ತಿಗೊಳಿಸಿಕೊಳ್ಳುತ್ತವೆ. ಒಟ್ಟಿನಲ್ಲಿ ಯಾರೂ ಯಾವ ಲೋಕದಲ್ಲಿಯೂ ಶಾಶ್ವತರಲ್ಲ. ಇದು ಮೇಲಿಂದ ಕೆಳಗೆ ಮತ್ತು ಕೆಳಗಿನಿಂದ ಮೇಲಕ್ಕೆ ಸಂಚರಿಸುತ್ತಿರುವ ಒಂದು ಚಕ್ರವಷ್ಟೇ. ಇಲ್ಲಿ ಎಲ್ಲರಿಗೂ ಸಂಚಾರವಿದೆ. ಜ್ಞಾನಿಮಾತ್ರವೇ ಈ ಸಂಸಾರಚಕ್ರದಿಂದ ಪಾರಾಗಲು ಸಾಧ್ಯವೆಂಬುದು ಸನಾತನಧರ್ಮದ ಸಿದ್ಧಾಂತವಾಗಿದೆ.

ಇಲ್ಲಿ ಒಂದು ಜಿಜ್ಞಾಸೆಯೆಂದರೆ, ವೈಜ್ಞಾನಿಕವಾಗಿ ಈ ಬ್ರಹ್ಮಾಂಡದಲ್ಲಿ ಮೇಲೂ ಇಲ್ಲ ಮತ್ತು ಕೆಳಗೂ ಇಲ್ಲವೆಂಬುದು ಸಾಬೀತಾಗಿದೆ. ಹೀಗಿರುವಾಗ ಸ್ವರ್ಗಲೋಕ ಮತ್ತು ನರಕಲೋಕಗಳು ಯಾಕೆ ಕ್ರಮವಾಗಿ ಮೇಲೆ ಮತ್ತು ಕೆಳಗಿವೆ ಎಂಬುದಾಗಿ ನಿರೂಪಿಸಲ್ಪಟ್ಟಿವೆ? ಏನಿದರ ಸ್ವಾರಸ್ಯ ಎಂಬ ಪ್ರಶ್ನೆ ಉಂಟಾಗುತ್ತದೆ. ಆದರೆ ಕರ್ಮಸಿದ್ಧಾಂತದಲ್ಲಿ ಇದಕ್ಕೆ ತುಂಬ ಯುಕ್ತಿಯುಕ್ತವಾದ ಉತ್ತರವಿದೆ. ಯಾಕೆಂದರೆ ಇವೆಲ್ಲವೂ ತ್ರಿಗುಣಗಳ ಆಧಾರದಲ್ಲಿಯೇ ನಿಶ್ಚಿತಗೊಂಡಂಥವು. ಹಾಗಾಗಿ ತ್ರಿಗುಣಗಳ ಸ್ವಭಾವವನ್ನು ಅರಿತಾಗ, ಸ್ವರ್ಗ ಮೇಲೆ ಮತ್ತು ನರಕ ಕೆಳಗೆ ಯಾಕೆ ಎಂಬುದು ಅರ್ಥವಾಗುತ್ತದೆ. ಈ ವಿಷಯವನ್ನು ಮುಂದಿನ ಲೇಖನದಲ್ಲಿ ನೋಡೋಣ.

ನಮ್ಮ ಕಂಟೆಂಟ್‌ಗಳಿಗೆ ನಾವೇ ಕ್ರಿಯೇಟರ್ ಆಗೋಣ

▶ ಡಾ.ರವೀಶ.ಎನ್.ಎಸ್

ಭಾರತದ ಸನಾತನ ಸಂಸ್ಕೃತಿ ಎಂದರೆ ಕೇವಲ ಧಾರ್ಮಿಕ ಆಚರಣೆಗಳ ಸಂಕಲನವಲ್ಲ, ಅದು ದಾರ್ಶನಿಕರು ನೀಡಿರುವ ಸಮಗ್ರ ತತ್ತ್ವಶಾಸ್ತ್ರ. 'ಸನಾತನ' ಎಂದರೆ ಶಾಶ್ವತ. ಕಾಲ ಬದಲಾಗಿದರೂ ಸತ್ಯ, ಧರ್ಮ, ಕರುಣೆ, ಸಹಿಷ್ಣುತೆ ಮತ್ತು ಜ್ಞಾನ ಎಂಬ ಮೌಲ್ಯಗಳು ಬದಲಾಗುವುದಿಲ್ಲ. ವೇದ, ಉಪನಿಷತ್ತುಗಳು, ರಾಮಾಯಣ–ಮಹಾಭಾರತ, ಪುರಾಣಗಳು, ವಚನ ಸಾಹಿತ್ಯ, ದಾಸರ ಕೀರ್ತನೆಗಳು–ಇವೆಲ್ಲವೂ ಮಾನವ ಜೀವನವನ್ನು ಉನ್ನತಗೊಳಿಸುವ ಜ್ಞಾನಸಂಪತ್ತು. ದೇವಸ್ಥಾನಗಳು ಕಲೆ, ಸಂಗೀತ, ನೃತ್ಯ, ವಾಸ್ತುಶಿಲ್ಪ ಮತ್ತು ಶೈಕ್ಷಣಿಕ ಕೇಂದ್ರಗಳು. ಪ್ರಕೃತಿಯೊಂದಿಗಿನ ಸಾಮರಸ್ಯ, ಕುಟುಂಬ ಮೌಲ್ಯಗಳ ಮಹತ್ವ ಮತ್ತು ಆತ್ಮೋನ್ನತಿಯ ದಾರಿಯನ್ನು ತೋರಿಸುವುದು ಸನಾತನ ಸಂಸ್ಕೃತಿಯ ವೈಶಿಷ್ಟ್ಯ. ಇದು ಭೂತಕಾಲದ ಅವಶೇಷವಲ್ಲ, ಅದು ಇಂದಿಗೂ ಉಸಿರಾಡುತ್ತಿರುವ ಜೀವಂತ ಪರಂಪರೆ.



ಈ ಪರಂಪರೆಯಲ್ಲೇ ಕೇಸರಿ ಅಥವಾ ಕಿತ್ತಳೆ ಬಣ್ಣಕ್ಕೆ ಅಪಾರ ಮಹತ್ವವಿದೆ. ಕೇಸರಿ ತ್ಯಾಗದ ಸಂಕೇತ, ಜ್ಞಾನೋದಯದ ಸಂಕೇತ, ಆತ್ಮಶುದ್ಧಿಯ ಸಂಕೇತ. ಅಗ್ನಿಯ ಜ್ವಾಲೆಯ ಬಣ್ಣವೂ ಇದೇ. ಉದಯಕಾಲದ ಸೂರ್ಯನ ಕಿತ್ತಳೆ ಕಿರಣಗಳು ಹೊಸ ಆರಂಭ, ಚೈತನ್ಯ ಮತ್ತು ಆಶೆಯನ್ನು ಸೂಚಿಸುತ್ತವೆ. ಇದೇ ಮನೋಭಾವ 'ಕಿತ್ತಳೆ ಆರ್ಥಿಕತೆ'ಯ ತತ್ತ್ವದ ಮೂಲವಾಗಿದೆ. ಕಲೆ, ವಿನ್ಯಾಸ, ಬೌದ್ಧಿಕ ಆಸ್ತಿ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ಆರ್ಥಿಕ ಮೌಲ್ಯ ಸೃಷ್ಟಿಸುವ ವ್ಯವಸ್ಥೆಯೇ ಈ ಕಿತ್ತಳೆ ಆರ್ಥಿಕತೆ (Orange Economy).

ಜ್ಞಾನವು ಮೌಲ್ಯವನ್ನು ಸೃಷ್ಟಿಸಿದಾಗ ಅದು ಆರ್ಥಿಕ ಸಂಪತ್ತಾಗುತ್ತದೆ. ಈ ಹಿನ್ನೆಲೆಯಲ್ಲಿ ಅನಿಮೇಷನ್, ಗೇಮಿಂಗ್, ಡಿಜಿಟಲ್ ಮೀಡಿಯಾ ಮತ್ತು ಕೃತಕ ಬುದ್ಧಿಮತ್ತೆಯೊಂದಿಗೆ ಭಾರತ ತನ್ನ ಸಾಂಸ್ಕೃತಿಕ ಶಕ್ತಿಯನ್ನು ಜಗತ್ತಿಗೆ ತಲುಪಿಸುವ ಯುಗ ಪ್ರಾರಂಭವಾಗಿದೆ. 'ಕಿತ್ತಳೆ ಆರ್ಥಿಕತೆ'' ಎಂಬುದು ಸೃಜನಶೀಲ ಆರ್ಥಿಕತೆ (Creative Economy)ಗೆ ಇರುವ ಮತ್ತೊಂದು ಹೆಸರು. ಜಾನ್ ಹೌಕಿನ್ಸ್ ಈ ಪದವನ್ನು ಜಾಗತಿಕ ಮಟ್ಟದಲ್ಲಿ ಜನಪ್ರಿಯಗೊಳಿಸಿದರು. ಕಿತ್ತಳೆ ಆರ್ಥಿಕತೆ ಎಂದರೆ ಜ್ಞಾನಾಧಾರಿತ ಸೃಜನಾತ್ಮಕ ವಲಯಗಳು. ಸಿನಿಮಾ, ಸಂಗೀತ, ಅನಿಮೇಷನ್, ಗೇಮಿಂಗ್, ಡಿಜಿಟಲ್ ಮೀಡಿಯಾ, ಫ್ಯಾಷನ್, ಡಿಸೈನ್, ಸಾಹಿತ್ಯ ಇತ್ಯಾದಿಗಳ ಆರ್ಥಿಕ ವ್ಯವಸ್ಥೆ. ಇಲ್ಲಿ ಮೌಲ್ಯ ಸೃಷ್ಟಿ ಭೌತಿಕ ಉತ್ಪನ್ನಗಳಿಂದಲ್ಲ, ವಿಷಯ (content) ಮತ್ತು ಸೃಜನಶೀಲತೆ (Creativity)ಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ನಡೆದ WAVES 2025 ಶೃಂಗಸಭೆಯ ನಾಯಕತ್ವ ವಹಿಸಿದ್ದ ಭಾರತವು ತನ್ನ ಸೃಜನಾತ್ಮಕ ಸಾಮರ್ಥ್ಯವನ್ನು ಜಗತ್ತಿಗೆ ಪರಿಚಯಿಸಿದೆ.

ವಿವಿಧ ಅಧ್ಯಯನಗಳ ಪ್ರಕಾರ ಭಾರತದ Creator Economy ವೇಗವಾಗಿ ಬೆಳೆಯುತ್ತಿದೆ. ಇದು ಕೇವಲ ಮನರಂಜನಾ ಕ್ಷೇತ್ರವಲ್ಲ, ಉದ್ಯೋಗ ಸೃಷ್ಟಿ, ಸ್ಟಾರ್ಟ್‌ಅಪ್ ವೃದ್ಧಿ ಮತ್ತು ವಿದೇಶಿ ವಿನಿಮಯ ಆದಾಯವನ್ನು ಹೆಚ್ಚಿಸುವ ಪ್ರಮುಖ ವಲಯವಾಗಿದೆ.

ಭಾರತದ ಬಜೆಟ್ 2026ರಲ್ಲಿ ಸೃಜನಶೀಲ ವಲಯ, ಡಿಜಿಟಲ್ ವಿಷಯ ನಿರ್ಮಾಣ, ಅನಿಮೇಷನ್, ಗೇಮಿಂಗ್, AI ಮತ್ತು ಸ್ಟಾರ್ಟ್‌ಅಪ್ ಪರಿಸರಕ್ಕೆ ಒತ್ತು ನೀಡಿದೆ. ಭವಿಷ್ಯದ ಉದ್ಯೋಗಗಳು ಕೇವಲ ಕಾರ್ಖಾನೆಗಳಲ್ಲಿ ಹುಟ್ಟುವುದಿಲ್ಲ, ಅವು ಕಲ್ಪನೆ ಮತ್ತು ಸೃಜನಶೀಲತೆಯಲ್ಲಿ ಹುಟ್ಟುತ್ತವೆ. ಕಿತ್ತಳೆ ಆರ್ಥಿಕತೆಯ ದೊಡ್ಡ ಶಕ್ತಿ ಎಂದರೆ ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಹೋಗುವ ಅಗತ್ಯವಿಲ್ಲ. ಒಂದು ಮೊಬೈಲ್, ಒಂದು ಲ್ಯಾಪ್‌ಟಾಪ್ ಮತ್ತು ಇಂಟರ್‌ನೆಟ್ ಸಂಪರ್ಕ ಇದ್ದರೆ ಸಾಕು. Work from Home ಮಾದರಿಯಲ್ಲಿ ಗ್ರಾಮೀಣ ಯುವಕರು, ಮಹಿಳೆಯರು ಮತ್ತು ಸ್ಥಳೀಯ ಕಲಾವಿದರು ಜಾಗತಿಕ ಮಾರುಕಟ್ಟೆಗೆ ತಲುಪಬಹುದು.

ಸ್ಥಳೀಯ ಕಥೆಗಾರರು ತಮ್ಮ ಹಳ್ಳಿಯ ಪುರಾಣ, ಇತಿಹಾಸ ಮತ್ತು ಜನಪದ ಕಥೆಗಳನ್ನು YouTube, Podcast ಅಥವಾ OTT ವೇದಿಕೆಗಳ ಮೂಲಕ ಹಂಚಬಹುದು. ಗೃಹಿಣಿಯರು ಸ್ವಚ್ಛತೆ, ಪೌಷ್ಟಿಕ ಆಹಾರ, ಸಾಂಪ್ರದಾಯಿಕ ಅಡುಗೆ ಪದ್ಧತಿಗಳು ಮತ್ತು ಆಯುರ್ವೇದ ವೈದ್ಯಕೀಯ ಪದ್ಧತಿಯ ಬಗ್ಗೆ ವಿಷಯ ನಿರ್ಮಾಣ ಮಾಡಿ ಜಗತ್ತಿಗೆ ಪರಿಚಯಿಸಬಹುದು. Hygiene Food ಕ್ಷೇತ್ರದಲ್ಲಿ ಆರೋಗ್ಯಕರ ಭಾರತೀಯ ಪಾಕಶೈಲಿಗೆ ದೊಡ್ಡ ಅವಕಾಶವಿದೆ. ಭಾಷಾ ತಜ್ಞರು ಮತ್ತು ವಿದ್ಯಾರ್ಥಿಗಳು AI ಸಹಾಯದಿಂದ ಕನ್ನಡದ ವಚನಗಳು, ದಾಸ ಸಾಹಿತ್ಯ ಮತ್ತು ಪುರಾಣ ಕಥೆಗಳನ್ನು ಜಗತ್ತಿನ ವಿವಿಧ ಭಾಷೆಗಳಿಗೆ ಅನುವಾದಿಸಿ ಜಾಗತಿಕ ಪ್ರೇಕ್ಷಕರಿಗೆ ತಲುಪಿಸಬಹುದು. Vocal for Local ಎಂಬ ತತ್ವ ಇಲ್ಲಿ ಆರ್ಥಿಕ ಶಕ್ತಿಯಾಗುತ್ತದೆ.

ನಮ್ಮ ಸಂಸ್ಕೃತಿಯ ಕಥೆಗಳು ಮಹತ್ತರ ಬೌದ್ಧಿಕ ಆಸ್ತಿಗಳು. ರಾಮಾಯಣ ಮತ್ತು ಮಹಾಭಾರತದ ವೀರಗಾಥೆಗಳನ್ನು ಆಧರಿಸಿ ವಿಶ್ವದರ್ಜೆಯ ಗೇಮ್‌ಗಳನ್ನು ರೂಪಿಸಬಹುದು. ಜಪಾನ್ ತನ್ನ ಸಂಸ್ಕೃತಿಯನ್ನು ಜಗತ್ತಿಗೆ ತಲುಪಿಸಿದಂತೆ, ಭಾರತವೂ ತನ್ನ ಪುರಾಣ ಪಾತ್ರಗಳನ್ನು ಅಂತರಾಷ್ಟ್ರೀಯ ಮಟ್ಟದ ಅನಿಮೇಷನ್ ರೂಪದಲ್ಲಿ ಮಕ್ಕಳ ಮುಂದೆ ಇಡಬಹುದು. ಇಂದಿನ ಮಕ್ಕಳ ಪರದೆಗಳಲ್ಲಿ BGMI, Roblox, Minecraft ಮುಂತಾದ ವಿದೇಶಿ ಗೇಮ್‌ಗಳು ಮೇಲುಗೈ ಸಾಧಿಸಿವೆ. ಹಿಂಸಾತ್ಮಕ ವಿಷಯ ಮತ್ತು ಅತಿಯಾದ ಸ್ಕ್ರೀನ್ ಸಮಯವು ಮಕ್ಕಳ ಮನೋವೈಜ್ಞಾನಿಕ ಆರೋಗ್ಯಕ್ಕೂ ಪರಿಣಾಮ ಬೀರುತ್ತಿದೆ. ಇದರ ಬದಲಿಗೆ ಪಂಚತಂತ್ರ, ಹಿತೋಪದೇಶ, ಕಥಾಸರಿತ್ಸಾಗರಗಳ ಆಧಾರಿತ ಅನಿಮೇಷನ್ ಮತ್ತು ಗೇಮ್‌ಗಳು ಬಂದರೆ, ಮನರಂಜನೆಯ ಜೊತೆಗೆ ಮೌಲ್ಯ ಶಿಕ್ಷಣವೂ ಸಾಧ್ಯ. ಮಕ್ಕಳ ಹೀರೋಗಳು ನಮ್ಮ ಸಂಸ್ಕೃತಿಯಿಂದ ಬಂದಾಗ ಮಾತ್ರ ಅವರು ಮೌಲ್ಯಪೂರ್ಣ ಚಿಂತನೆಗಳೊಂದಿಗೆ ಬೆಳೆಯುತ್ತಾರೆ.

ಭಾರತೀಯ ಜ್ಞಾನ ಪರಂಪರೆಯ ಕಂಟೆಂಟ್‌ಗಳ ನಿರ್ಮಾಣ ಆಲೋಚನೆಯಾಗದೆ ಚಳವಳಿ ಆಗಬೇಕು. ಭಾರತದ ವೈಭವಮಯ ಇತಿಹಾಸ, ಸನಾತನ ಪರಂಪರೆ ಮತ್ತು ಅಪಾರ ಸಾಂಸ್ಕೃತಿಕ ಸಂಪತ್ತನ್ನು ಜಾಗತಿಕ ಮಟ್ಟದಲ್ಲಿ ಪ್ರತಿಷ್ಠಿತವಾಗಿ ಪ್ರದರ್ಶಿಸುವ ಹೊಣೆಗಾರಿಕೆ ಇಂದಿನ ಕಂಟೆಂಟ್ ಕ್ರಿಯೇಟರ್‌ಗಳ ಮೇಲಿದೆ. ನಮ್ಮ ಇತಿಹಾಸವು ದಿನಾಂಕಗಳ ಸರಮಾಲೆ ಅಲ್ಲ; ಅದು ವಿಜ್ಞಾನ, ತತ್ವಜ್ಞಾನ, ಕಲೆ, ವಾಸ್ತುಶಿಲ್ಪ, ಸಾಹಿತ್ಯ ಮತ್ತು ಆಧ್ಯಾತ್ಮಿಕತೆಯ ಮಹಾಸಾಗರ. ಇವೆಲ್ಲವೂ ಜಗತ್ತಿಗೆ ಪರಿಚಯವಾಗಬೇಕಾದ ವಿಷಯಗಳು.

ಕಿತ್ತಳೆ ಆರ್ಥಿಕತೆ ಕೇವಲ ಆದಾಯದ ಸಾಧನವಲ್ಲ; ಅದು ಆತ್ಮಗೌರವದ ಅಭಿವ್ಯಕ್ತಿ. ಪ್ರತಿಯೊಂದು ಮನೆಯೂ ಒಂದು ಕಲಾಕೇಂದ್ರವಾಗಬಹುದು.

ಪ್ರತಿಯೊಂದು ಹಳ್ಳಿಯೂ ಒಂದು ಕಥಾ ವಿಶ್ವವಾಗಬಹುದು. ಸನಾತನ ಸಂಸ್ಕೃತಿಯ ಆಳ ಮತ್ತು ಕಿತ್ತಳೆ ಆರ್ಥಿಕತೆಯ ಅವಕಾಶಗಳು ಒಂದಾದಾಗ ಅದು ಕೇವಲ ಆರ್ಥಿಕ ಬೆಳವಣಿಗೆಯ ಜೊತೆಗೆ ರಾಷ್ಟ್ರೀಯ ಆತ್ಮಜಾಗೃತಿಯೂ ಆಗುತ್ತದೆ. ಕೇಂದ್ರ ಬಜೆಟ್ 2026 ಕಿತ್ತಳೆ ಆರ್ಥಿಕತೆಯ ಬೆಳವಣಿಗೆಗೆ ನೀಡಿರುವ ಮಹತ್ವವು ಜಾಗತಿಕ ಮಾರುಕಟ್ಟೆಗೆ ನೀಡಿದ ಸೂಕ್ಷ್ಮ ಮತ್ತು ಸ್ಪಷ್ಟ ಸಂಕೇತವೂ ಹೌದು. ಭಾರತ ಕೇವಲ ಉತ್ಪಾದನಾ ಕೇಂದ್ರವಲ್ಲ; ಅದು Intellectual Property Hub, Creative Content Powerhouse ಮತ್ತು Digital Innovation Leader ಆಗಲು ಸಜ್ಜಾಗಿದೆ ಎಂಬ ಸಂದೇಶವನ್ನು ನೀಡಿದೆ. ಜಾಗತಿಕ ಹೂಡಿಕೆದಾರರಿಗೆ ಇದು ಒಂದು ಮುಕ್ತ ಆಹ್ವಾನ. ಭಾರತದಲ್ಲಿ ಕೇವಲ ಮಾನವ ಸಂಪನ್ಮೂಲವಷ್ಟೇ ಇಲ್ಲ, ಅಪಾರ ಸಾಂಸ್ಕೃತಿಕ ಬಂಡವಾಳ ಮತ್ತು ಕಥನಶಕ್ತಿ ಕೂಡ ಇದೆ ಎಂಬುದನ್ನು ಜಗತ್ತಿಗೆ ಸಾರಿದಂತಾಗಿದೆ.

ಇದು ಕೇವಲ ಮನರಂಜನೆಯ ಸ್ಪರ್ಧೆಯಲ್ಲ; ಇದು ನರೇಟಿವ್‌ಗಳ ಯುದ್ಧ. ಕಿತ್ತಳೆ ಆರ್ಥಿಕತೆಯು ಭಾರತದ ಹೊಸ ಭವಿಷ್ಯ ಬರೆಯಲು ವೇದಿಕೆ ಸಿದ್ಧಪಡಿಸಲಿದೆ. ಜಗದಗಲ ವಿಸ್ತಾರಗೊಳ್ಳುವ ಕಾಲ ಸನ್ನಿಹಿತವಾಗಿದೆ. ನಮ್ಮ ಕಥೆಗಳನ್ನು ನಾವೇ ಹೇಳಲಿಲ್ಲವಾದರೆ ಬೇರೆಯವರು ನಮ್ಮ ಕಥೆಯನ್ನು ಅಪೂರ್ಣವಾಗಿಯೋ ಅಥವಾ ತಪ್ಪಾಗಿ ಹೇಳುತ್ತಾರೆ. ಬನ್ನಿ, ನಮ್ಮ ಕಂಟೆಂಟ್‌ಗಳಿಗೆ ನಾವೇ ಕ್ರಿಯೇಟರ್ ಆಗೋಣ. ನಮ್ಮ ದೇಶದ ಸೃಜನಶೀಲ ಸಾಹಿತ್ಯಕ್ಕೆ ಜಾಗತಿಕ ಮೌಲ್ಯ ಸೃಷ್ಟಿಸೋಣ.

ಕೇರಳದ ಪ್ರಗತಿಗೆ ಪ್ರತಿಕೂಲವಾಗಿರುವ 'ಹರತಾಳ'ಗಳು!

▶ ದಿನೇಶ್

ಕೆಲವು ಕಾರ್ಮಿಕ ಸಂಘಟನೆಗಳು ಭಾರತ – ಅಮೆರಿಕ ವ್ಯಾಪಾರ ಒಪ್ಪಂದ ವಿರೋಧಿಸಿ ಫೆಬ್ರವರಿ 12ರಂದು ರಾಷ್ಟ್ರವ್ಯಾಪಿ ಬಂದ್‌ಗೆ ಕರೆ ನೀಡಿದ್ದವು. ಆದರೆ ದೇಶಾದ್ಯಂತ ಈ ಬಂದ್ ಕರೆಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಎಲ್ಲಿಯೂ ಜನಜೀವನ ಅಸ್ತವ್ಯಸ್ತವಾಗಲಿಲ್ಲ.

ಆದರೆ ಕೇರಳ ಮಾತ್ರ ಅದಕ್ಕೆ ಅಪವಾದವಾಗಿತ್ತು. ಅಲ್ಲಿ ಬಂದ್ ಆಚರಿಸಲ್ಪಟ್ಟಿತು. ಜನರು ಸಂಕಷ್ಟ ಅನುಭವಿಸುವಂತಾಯಿತು.

ಪ್ರತಿ ಬಾರಿಯೂ ಅಷ್ಟೆ. ಎಡಪಕ್ಷಗಳು, ಎಡಪಕ್ಷ ಬೆಂಬಲಿತ ಸಂಘಟನೆಗಳು ಬಂದ್‌ಗೆ ಕರೆ ನೀಡಿದಾಕ್ಷಣ ಕೇರಳ ಸ್ತಬ್ಧವಾಗುತ್ತದೆ. ಅಂಗಡಿಮುಂಗಟ್ಟುಗಳು ಬಾಗಿಲು ಮುಚ್ಚುತ್ತವೆ. ಹಾಗೆ ಬಾಗಿಲು ಮುಚ್ಚದಿದ್ದರೆ ಬಲವಂತವಾಗಿ ಮುಚ್ಚಿಸಲು ಎಡಪಕ್ಷಗಳ ಗೂಂಡಾಗಳು ಸಿದ್ಧರಿರುತ್ತಾರೆ.

ಕೇರಳ ಮೊದಲಿನಿಂದಲೂ ಇಂತಹ ಬಂದ್‌ಗಳಿಗೆ ಕುಪ್ರಸಿದ್ಧ. 1990ರ ದಶಕಕ್ಕಿಂತ ಮುನ್ನವಂತೂ ಕೇರಳವು ಸದಾ ಬಂದ್ ಆಚರಿಸುವಂತಾಗುತ್ತಿತ್ತು. ಬಂದ್ ಮತ್ತು ಅದರಿಂದ ಉಂಟಾಗುವ ಹಿಂಸಾಚಾರಗಳು ರಾಜ್ಯವನ್ನು ಕಂಗಾಲು ಮಾಡುತ್ತಿತ್ತು. ಪಕ್ಷದ ಗೂಂಡಾಗಳು ಪ್ರತಿಯೊಂದು ಅಂಗಡಿಯನ್ನು ಮುಚ್ಚಿಸುತ್ತಿದ್ದರು. ಜನರು ಇಂತಹ ಸಂಪೂರ್ಣ ಬಂದ್ ವಿರೋಧಿಸುತ್ತಿದ್ದರಾದರೂ ಅದರ ವಿರುದ್ಧ ತಿರುಗಿ ಬೀಳುವ ಧೈರ್ಯವಿರಲಿಲ್ಲ. ಕೇರಳದಲ್ಲಿ ಬಂದ್‌ನ ಹಾವಳಿ ಅದೆಷ್ಟು ಮಿತಿಮೀರಿತೆಂದರೆ 1997ರಲ್ಲಿ ಕೇರಳ ಹೈಕೋರ್ಟ್ ಬಂದ್‌ನ್ನು ನಿಷೇಧಿಸಿ ಆದೇಶ ಹೊರಡಿಸಿತ್ತು. ಬಂದ್ ಕಾನೂನುಬಾಹಿರ ಮತ್ತು ಅಸಂವಿಧಾನಿಕ ಎಂದು ಕೋರ್ಟ್ ಘೋಷಿಸಿತು. ಇದು ಜನರಿಗೆ ನಿರಾಳತೆ ತಂದಿತಾದರೂ ಅದು ಅತ್ಯಲ್ಪ ಕಾಲ ಮಾತ್ರ. ಪಕ್ಷಗಳು ಮತ್ತು ಸಂಘಟನೆಗಳು ಬಂದ್‌ಗೆ ಬೇರೆಯೇ ದಾರಿ ಹುಡುಕಿದವು. ಬಂದ್ ಬದಲಿಗೆ 'ಹರತಾಳ'ಕ್ಕೆ ಕರೆ ನೀಡತೊಡಗಿದವು. ಹರತಾಳದ ಹೆಸರಿನಲ್ಲಿ ನಡೆಯುತ್ತಿದ್ದುದು ಮತ್ತದೇ ಬಂದ್. ಹರತಾಳವೆಂಬುದು ಬಂದ್‌ನ ಪರ್ಯಾಯ ಹೆಸರಾಯಿತು.

ಕೇರಳದಲ್ಲಿ ರಾಜಕೀಯ ಪಕ್ಷಗಳು ಬಿಡಿ, ಹೆಚ್ಚು ಜನಬೆಂಬಲವಿಲ್ಲದ ಸಂಘಟನೆಗಳು ಕೂಡಾ ಹರತಾಳಕ್ಕೆ ಕರೆಗೊಡುವುದಿದೆ ಹಾಗೂ ಈ ಕರೆಯು ಸಂಪೂರ್ಣ ಬಂದ್‌ಗೆ ಕಾರಣವಾಗುವುದಿದೆ. ತಮ್ಮ ಅಂಗಡಿ, ವಾಹನಗಳ ಮೇಲೆ ದಾಳಿ ನಡೆಯುವ ಭೀತಿಯಿಂದ ಜನರು ಅಂದು ಮನೆಯಲ್ಲೇ ಕೂರುತ್ತಾರೆ. 2017ರಲ್ಲಿ ಕೇರಳದಲ್ಲಿ 120 ಹರತಾಳಗಳು ನಡೆದಿದ್ದವು. 2018ರಲ್ಲಿ 98 ಹರತಾಳ ನಡೆದಿದ್ದವು. ಅದರಲ್ಲಿ ಏಪ್ರಿಲ್ ತಿಂಗಳೊಂದರಲ್ಲೇ 12 ಹರತಾಳಗಳು ನಡೆದಿದ್ದವು.



2018ರಲ್ಲಿ ಕುತೂಹಲಕಾರಿ ಪ್ರಸಂಗವೊಂದು ನಡೆಯಿತು. ಯಾವುದೇ ಸಂಘಟನೆ ಕರೆ ನೀಡದಿದ್ದರೂ ಹರತಾಳ ನಡೆಯುವಂತಾಯಿತು. ಅದಕ್ಕೆ ಕಾರಣವಾದುದು ವಾಟ್ಸಪ್‌ನಲ್ಲಿ ಹರಿದಾಡಿದ ಒಂದು ಸಂದೇಶ. ಕಥುವಾ ಅತ್ಯಾಚಾರ ಪ್ರಕರಣವನ್ನು ವಿರೋಧಿಸಿ ಏಪ್ರಿಲ್ 16ರಂದು ಹರತಾಳ ನಡೆಯಲಿದೆಯೆಂದು ಯಾವುದೋ ಸಂಘಟನೆಯ ಹೆಸರಿನಲ್ಲಿ ಸಂದೇಶಗಳು ಹರಿದಾಡಿದವು. ಸಂದೇಶ ನೀಡಿದ ಅಂತಹ ಸಂಘಟನೆ ಯಾವುದೂ ಇಲ್ಲವೆಂದು ಪೊಲೀಸರು ಸ್ಪಷ್ಟಪಡಿಸಿದರೂ ಜನರಿಗೆ ಭರವಸೆ ಮೂಡಲಿಲ್ಲ. ನಿಗದಿತ ದಿನದಂದು ಜನರು ಬೀದಿಗಿಳಿಯಲು ಹಿಂಜರಿದ ಕಾರಣ ಅಂದೂ ಬಂದ್ ಆಚರಿಸಲ್ಪಟ್ಟಿತು.

> ಬಂದ್ ಸಂಸ್ಕೃತಿಗೆ ಅಂತ್ಯ ಹಾಕದ ಹೊರತು ಕೇರಳವು ಪ್ರಗತಿ ಕಾಣಲಾರದು.

ಕೇರಳದಲ್ಲಿ ಕೆಲವೊಮ್ಮೆಯಂತೂ 'ಹಠಾತ್ ಹರತಾಳ' ನಡೆಯುವುದಿದೆ. ಇದಂತೂ ಜನಜೀವನವನ್ನು ಅಸ್ತವ್ಯಸ್ತಗೊಳಿಸುತ್ತದೆ. ಕೇರಳ ಹೈಕೋರ್ಟ್ 2019ರಲ್ಲಿ ಈ ರೀತಿಯ ಹಠಾತ್ ಹರತಾಳವನ್ನು ನಿಷೇಧಿಸಿತು. ಇಂತಹ ಹಠಾತ್ ಹರತಾಳಕ್ಕೆ ಕರೆ ನೀಡುವ ರಾಜಕೀಯ ಪಕ್ಷಗಳು ಅಥವಾ ಸಂಘಟನೆಯನ್ನು ಅದಕ್ಕೆ ಹೊಣೆಗಾರರನ್ನಾಗಿಸಲಾಗುವುದು ಎಂದು ಹೇಳಿತು. ಆ ಬಳಿಕ ಕೇರಳದಲ್ಲಿ ಹರತಾಳಗಳ ಸಂಖ್ಯೆ ಕಡಿಮೆಯಾಯಿತೆನ್ನಬೇಕು. ಅದರಿಂದಾಗಿ 2019ರಲ್ಲಿ ಕೇವಲ 12 ಹರತಾಳಗಳು ನಡೆದವು.

ಬಂದ್ ಮತ್ತು ಹರತಾಳದ ಬಗ್ಗೆ ಜನರಲ್ಲಿ ತೀವ್ರ ವಿರೋಧವಿದೆ ಹಾಗೂ ಅಸಮಾಧಾನವಿದೆ. ಹಾಗಿದ್ದರೂ ರಾಜಕೀಯ ಪಕ್ಷಗಳು ಆಗೊಮ್ಮೆ ಈಗೊಮ್ಮೆಯಾದರೂ ಹರತಾಳಕ್ಕೆ ಕರೆ ನೀಡುವುದನ್ನು ನಿಲ್ಲಿಸುವುದಿಲ್ಲ. ಹರತಾಳವು ಯಶಸ್ವಿಯಾಯಿತೇ ಇಲ್ಲವೇ ಎಂಬುದರ ಮಾನದಂಡವೇ ಬಂದ್ ಎಂಬಂತಾಗಿದೆ. ಹಾಗಾಗಿ ತಾವು ನೀಡಿದ ಹರತಾಳದ ಕರೆ ಯಶಸ್ವಿಯಾಗಬೇಕಾದರೆ ರಾಜ್ಯವಿಡೀ ಬಂದ್ ಆಚರಿಸಬೇಕು, ಜನರು ಮನೆಯಲ್ಲೇ ಕೂರುವಂತಾಗಬೇಕು ಎಂದು ರಾಜಕೀಯ ಪಕ್ಷಗಳು ಅಥವಾ ಸಂಘಟನೆಗಳು ಆಶಿಸುತ್ತವೆ. ಆ ನಿಟ್ಟಿನಲ್ಲೇ ಪ್ರಯತ್ನಿಸುತ್ತವೆ.

ಕೇರಳವು ಔದ್ಯಮಿಕವಾಗಿ ಹಿಂದುಳಿಯಲು ಇದು ಕೂಡಾ ಒಂದು ಕಾರಣವಾಗಿದೆ. ಕೇರಳದಲ್ಲಿ ಕಂಪನಿ ಸ್ಥಾಪಿಸಲು ಯಾರೂ ಮುಂದೆ ಬರುತ್ತಿಲ್ಲ. ಕೇರಳದಲ್ಲಿ ಯಾವ ಉದ್ಯಮಿಯೂ ಹೂಡಿಕೆ ಮಾಡಲು ಆಸಕ್ತಿ ತೋರುತ್ತಿಲ್ಲ. ಕಮ್ಯುನಿಸ್ಟರು ಅಧಿಕಾರದಲ್ಲಿ ಇರುವ ರಾಜ್ಯಗಳು ಪ್ರಗತಿ ಸಾಧಿಸದೆ ಹಿಂದುಳಿದಿವೆ ಎಂದು ಇತ್ತೀಚೆಗೆ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದರು. ಕೈಟೆಕ್ಸ್ ಕಂಪನಿಯು ಕೇರಳದಿಂದ ತೆರಳಿದ್ದನ್ನು ಅವರು ಇದಕ್ಕೆ ಉದಾಹರಣೆಯಾಗಿ ನೀಡಿದ್ದರು. ಕೇರಳದಲ್ಲಿ 3500 ಕೋಟಿ ರೂಪಾಯಿ ಹೂಡಿಕೆ ಮಾಡಿದ್ದ ಕೈಟೆಕ್ಸ್ ಗ್ರೂಪ್ ಅಲ್ಲಿನ ಎಡಪಂಥೀಯ ಕಾರ್ಮಿಕ ಸಂಘಟನೆಗಳ ಕಿರುಕುಳದ ಕಾರಣದಿಂದಾಗಿ ಬಳಿಕ ಅಲ್ಲಿಂದ ಕಾಲ್ತೆಗೆದಿತ್ತು.

ಕಾರ್ಮಿಕ ಸಂಘಟನೆಗಳ ಹೆಸರಿನಲ್ಲಿ ನಡೆಯುವ ಗೂಂಡಾಗಿರಿ, ಬೆದರಿಕೆ, ಹಣ ವಸೂಲಿ ಮುಂತಾದ ಕ್ರಮಗಳನ್ನು ಹತ್ತಿಕ್ಕದಿದ್ದರೆ ಕೇರಳದಲ್ಲಿ ಯಾವುದೇ ಕಂಪೆನಿಯೂ ಹಣ ಹೂಡಲು ಮುಂದೆ ಬರಲಾರದು. ಮೊದಲಿಗೆ ಬಂದ್ ಸಂಸ್ಕೃತಿಗೆ ಕೇರಳವು ಇತಿಶ್ರೀ ಹಾಕಬೇಕಾಗಿದೆ. ಹಾಗಾದರಷ್ಟೇ ಅಭಿವೃದ್ಧಿಯ ಬಾಗಿಲು ತೆರೆಯಬಹುದು.

ಮಹತ್ವಾಕಾಂಕ್ಷೆ ಆಧಾರಿತ ಬಾಂಧವ್ಯ ವಿಶಿಷ್ಟ

ದ್ವಿಪಕ್ಷೀಯ ಬಾಂಧವ್ಯ ವಿಶಿಷ್ಟ, ಗಮನಾರ್ಹ

ಹೊಸದಿಲ್ಲಿ: ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಇಮ್ಯಾನುವಲ್ ಮ್ಯಾಕ್ರನ್ ಮಂಗಳವಾರ, ಭಾರತ-ಫ್ರಾನ್ಸ್ ನಡುವಿನ ದೀರ್ಘಕಾಲೀನ ವ್ಯೂಹಾತ್ಮಕ ಪಾಲುದಾರಿಕೆಯನ್ನು ಬಲಪಡಿಸುವ ಬಗ್ಗೆ ನಿಯೋಗ ಮಟ್ಟದ ಚರ್ಚೆ ನಡೆಸಿದರು ಮತ್ತು ಬೆನ್ನಲ್ಲೇ ಮುಂಬೈಯಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿದರು.

ರಕ್ಷಣಾ ರಂಗ, ತಂತ್ರಜ್ಞಾನ ಮತ್ತು ಸಾಂಸ್ಕೃತಿಕ ಸಹಕಾರ ರಂಗಗಳಲ್ಲಿನ ತಮ್ಮ ಸಮಾನ ದೃಷ್ಟಿಕೋನಗಳನ್ನು ಪ್ರತಿಪಾದಿಸಿದ ಉಭಯ ನಾಯಕರು, ದ್ವಿಪಕ್ಷೀಯ ಸಹಕಾರಗಳ ಹೊಸ ಆಯಾಮಕ್ಕೆ ವೇದಿಕೆ ಸಜ್ಜುಗೊಳಿಸಿದರು. ಉಭಯ ರಾಷ್ಟ್ರಗಳು ರಕ್ಷಣಾ ರಂಗದಲ್ಲಿ ತಮ್ಮ ಸಹಕಾರ -ಸಹಯೋಗವನ್ನು ವಿಸ್ತರಿಸುತ್ತಿವೆ ಎಂದು ಜಂಟಿ ಸುದ್ದಿಗೋಷ್ಠಿಯಲ್ಲಿ ಘೋಷಿಸಿದ ಮ್ಯಾಕ್ರನ್, ಉಭಯ ರಾಷ್ಟ್ರಗಳ ನಡುವಣ ವಿಶ್ವಾಸಾರ್ಹತೆ, ಮುಕ್ತತೆ ಮತ್ತು ಮಹತ್ವಾಕಾಂಕ್ಷೆ ಆಧಾರಿತ ದ್ವಿಪಕ್ಷೀಯ ಬಾಂಧವ್ಯ ವಿಶಿಷ್ಟವಾದುದು ಮತ್ತು ಗಮನಾರ್ಹವೆಂದು ಬಣ್ಣಿಸಿದರು.

ಪ್ರತೀ ವರ್ಷ ಹೊಸ ಹೊಸ ಸಹಕಾರ ಕೊಂಡಿ: ಪ್ರತೀ ವರ್ಷವೂ ಇಂಡೋ ಪೆಸಿಫಿಕ್, ತಂತ್ರಜ್ಞಾನ ರಂಗ ಸಹಿತ ಅನ್ಯಾನ್ಯ ರಂಗಗಳಲ್ಲಿ ನಿರಂತರ ನೆಲೆಯಲ್ಲಿ ಸಹಕಾರ ಕೊಂಡಿಗಳ ನವ ಮಾರ್ಗಗಳನ್ನು ನಾವು ಬೆಸೆಯುತ್ತಾ ಬಂದಿದ್ದೇವೆ. ಐಎಂಇಸಿ, ಕೃತಕ ಬುದ್ಧಿಮತ್ತೆ ರಂಗದಲ್ಲಿ ಸಹಯೋಗ, ಅಂತಾರಾಷ್ಟ್ರೀಯ ಸೋಲಾರ್ ಜಾಲಕ್ಕೆ ಸಂಬಂಧಿಸಿದಂತೆ ಪ್ರಗತಿ ಸೇರಿದಂತೆ ಹಲವು ಜಂಟಿ ಉಪಕ್ರಮಗಳಿಗೂ ಮುಂದಾಗಿದ್ದೇವೆ. ಉಭಯ ರಾಷ್ಟ್ರಗಳು ನಾಡಿನ ಕಾನೂನು ಮತ್ತು ಸಹಕಾರ ತತ್ತ್ವಗಳಿಗೆ ತುಂಬು ಮಹತ್ವ ನೀಡಿವೆ ಎಂದು ಮ್ಯಾಕ್ರನ್ ಪ್ರತಿಪಾದಿಸಿದ್ದಾರೆ.

ಜನಾಧಾರಿತ ಸಹಯೋಗ: ಭಾರತ-ಫ್ರಾನ್ಸ್ ಆವಿಷ್ಕಾರ ವರ್ಷಕ್ಕೆ ನಾಂದಿ ಹಾಡುವ ಮುಖೇನ ಉಭಯ ರಾಷ್ಟ್ರಗಳು ತಮ್ಮ ವ್ಯೂಹಾತ್ಮಕ ಪಾಲುದಾರಿಕೆಯನ್ನು ಜನಾಧಾರಿತ ಸಹಯೋಗವಾಗಿ ಪರಿವರ್ತಿಸಿವೆ ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ಲೇಷಿಸಿದ್ದಾರೆ. ಸಹಕಾರ ಮುಖೇನ ಆವಿಷ್ಕಾರಗಳ ಬಲವರ್ಧನೆಯಾಗುತ್ತೆ ಮತ್ತು ಪ್ರಸ್ತುತ ಯೋಜನೆಗಳು ಉಭಯ ರಾಷ್ಟ್ರಗಳ ಜನರು, ಉದ್ದಿಮೆಗಳು ಮತ್ತು ಸಂಸ್ಥೆಗಳ ಸಂಪರ್ಕಕೊಂಡಿಯನ್ನು ಬಲಪಡಿಸುತ್ತದೆ ಎಂದು ಪ್ರಧಾನಿ ಮೋದಿ ಹೇಳಿದರು. ಅದು ರಕ್ಷಣಾ ರಂಗವಿರಲಿ, ಪರಿಶುದ್ಧ ಇಂಧನ, ಬಾಹ್ಯಾಕಾಶ ಅಥವಾ ಉದಯೋನ್ಮುಖ ತಂತ್ರಜ್ಞಾನಗಳೇ ಆಗಿರಲಿ ಪ್ರತಿಯೊಂದು ರಂಗಗಳಲ್ಲೂ ನಾವು ನಮ್ಮ ಉದ್ದಿಮೆಗಳು ಹಾಗೂ ಆವಿಷ್ಕಾರಗಳಿಗೆ ಉತ್ತೇಜನ ನೀಡುತ್ತೇವೆ. ಸ್ಟಾರ್ಟ್‌ಅಪ್ ಮತ್ತು ಎಂಎಸ್ಎಂಇಎಸ್ ನಡುವೆ ಬಲಿಷ್ಠ ಜಾಲಗಳ ನಿರ್ಮಿಸಲಿದ್ದೇವೆ. ನಮ್ಮ ವಿದ್ಯಾರ್ಥಿಗಳು ಮತ್ತು ಸಂಶೋಧಕರ ನಡುವೆ ಪರಸ್ಪರ ವಿಚಾರ ವಿನಿಮಯಗಳ ಉತ್ತೇಜಿಸುತ್ತೇವೆ ಮತ್ತು ಜಂಟಿ ಆವಿಷ್ಕಾರಗಳಿಗಾಗಿ ಹೊಸ ಕೇಂದ್ರಗಳನ್ನು ಸ್ಥಾಪಿಸಲಿದ್ದೇವೆ ಎಂದು ಮೋದಿ ಘೋಷಿಸಿದರು.



ಪಾಲುದಾರಿಕೆಗೆ ಹೊಸ ಸ್ಥಾನಮಾನ

ರಾಫೆಲ್‌ನಿಂದ ತೊಡಗಿ ಸಬ್‌ಮರೈನ್‌ವರೆಗೆ ರಕ್ಷಣಾ ರಂಗದಲ್ಲಿ ಸಹಕಾರ ಕೊಂಡಿಗಳನ್ನು ನಾವು ಬಲಪಡಿಸುತ್ತಿದ್ದೇವೆ. ನಮ್ಮೊಳಗಿನ ಪಾಲುದಾರಿಕೆಯನ್ನು ವಿಶೇಷ ವ್ಯೂಹಾತ್ಮಕ ಪಾಲುದಾರಿಕೆಯಾಗಿಸಲು ಮತ್ತು ಇದಕ್ಕೊಂದು ಹೊಸ ಸ್ಥಾನಮಾನ ನೀಡಲು ನಾವಿಂದು ನಿರ್ಧರಿಸಿದ್ದೇವೆ. ಈ ವಿಚಾರದಲ್ಲಿ ಶಂಕೆಗೆ ಎಡೆಯಿಲ್ಲ, ಯಾಕೆಂದರೆ ಈ ಬಾಂಧವ್ಯದಲ್ಲಿ ನಮಗೆ ಸಂಪೂರ್ಣ ವಿಶ್ವಾಸವಿದೆ ಮತ್ತು ಕಳೆದ ಎಂಟು ವರ್ಷಗಳಿಂದ ನಾವು ಈ ಬಾಂಧವ್ಯವನ್ನು ಉತ್ತಮ ರೀತಿ ಕಾಯ್ದುಕೊಂಡು ಬಂದಿದ್ದೇವೆಂದು ಮ್ಯಾಕ್ರನ್ ಘೋಷಿಸಿದರು.

ಮಾ.19ಕ್ಕೆ ಅಯೋಧ್ಯೆಗೆ ಮುರ್ಮು

ಅಯೋಧ್ಯೆ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಾ.19ಕ್ಕೆ ಅಯೋಧ್ಯೆಗೆ ಭೇಟಿ ನೀಡಲಿದ್ದು, ದೇವಾಲಯದ ಸಂಕೀರ್ಣದಲ್ಲಿ ಸುಮಾರು ನಾಲ್ಕು ಗಂಟೆಗಳ ಕಾಲ ಇರಲಿದ್ದಾರೆ ಎಂದು ಜನ್ಮಭೂಮಿ ಮಂದಿರ ನಿರ್ಮಾಣ ಸಮಿತಿಯ ಅಧ್ಯಕ್ಷ ನೃಪೇಂದ್ರ ಮಿಶ್ರಾ ಮಾಹಿತಿ ನೀಡಿದ್ದಾರೆ. ಎರಡು ದಿನಗಳ ಸಭೆಯಲ್ಲಿ ಭಾಗವಹಿಸಲು ಅಯೋಧ್ಯೆಗೆ ಆಗಮಿಸಿದ ರಾಮಯಾತ್ರಿ ನಿವಾಸದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಮಿಶ್ರಾ, ರಾಮ ಮಂದಿರ ಸಂಕೀರ್ಣದ ಅಭಿವೃದ್ಧಿ ಕಾರ್ಯಗಳ ಕುರಿತು ಮಾಹಿತಿ ನೀಡಿದರು.

ದೇವಾಲಯ ನಿರ್ಮಾಣ ಕಾರ್ಯದಲ್ಲಿ ಸೇವೆಯನ್ನು ಮಾಡಿದ 400 ಜನ ಕಾರ್ಮಿಕರನ್ನು ರಾಷ್ಟ್ರಪತಿ ಸನ್ಮಾನಿಸಲಿದ್ದಾರೆ. ಹುತಾತ್ಮರ ಸ್ಮಾರಕ ಮತ್ತು ತಾತ್ಕಾಲಿಕವಾಗಿ ನಿರ್ಮಾಣವಾಗಿದ್ದ ರಾಮಲಲಾ ಮಂದಿರವನ್ನು ಸ್ಮಾರಕವಾಗಿ ಅಭಿವೃದ್ಧಿಪಡಿಸಲಾಗುವುದು, ಎಪ್ರಿಲ್ ಅಂತ್ಯದ ವೇಳೆಗೆ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸುವ ಗುರಿ ಹೊಂದಿದೆ ಎಂದರು. ರಾಮ ಕಥಾ ವಸ್ತುಸಂಗ್ರಹಾಲಯದ ಪ್ರಗತಿಯ ಬಗ್ಗೆ ಮಾಹಿತಿ ನೀಡಿದ ಅವರು ಅತ್ಯಾಧುನಿಕ 3ಡಿ ಹನುಮಾನ್ ಗ್ಯಾಲರಿ ಸೇರಿದಂತೆ ವಸ್ತುಸಂಗ್ರಹಾಲಯದಲ್ಲಿ 20 ಗ್ಯಾಲರಿಯನ್ನು ನಿರ್ಮಿಸಲಾಗುತ್ತಿದ್ದು, ಹನುಮಾನ್ ಗ್ಯಾಲರಿಯಲ್ಲಿ 3ಡಿ ತಂತ್ರಜ್ಞಾನವನ್ನು ಬಳಸಿಕೊಂಡು 12 ನಿಮಿಷಗಳ ಕಾಲ ರಾಮನ ಸನ್ನಿವೇಶವನ್ನು ವೀಕ್ಷಿಸಬಹುದು ಎಂದರು. ಮಂದಿರದ ಸುರಕ್ಷಾ ಗಡಿ ಗೋಡೆಯ ನಿರ್ಮಾಣದ ಕಾರ್ಯ ಬಹಳ ವೇಗವಾಗಿ ನಡೆಯುತ್ತಿದ್ದು ಭೂಮಿಯನ್ನು ಒದುಗಿಸುವಂತೆ ಅರವಿಂದಾಶ್ರಮಕ್ಕೆ ವಿನಂತಿಸಲಾಗಿದೆ. ರಾಮ ನವಮಿಯ ಉತ್ಸವದ ಸಿದ್ಧತೆ ಭರದಿಂದ ಸಾಗುತ್ತಿದ್ದು ರಾಮ ನವಮಿಯ ದಿನದಂದು ಸೂರ್ಯ ತಿಲಕ ಪುನರಾವರ್ತಿಸಲಾಗುವುದು, ಅದಕ್ಕಾಗಿ ಸಿಬಿಆರ್‌ಐ ರೂರ್ಕಿಯೊಂದಿಗೆ 10 ವರ್ಷಗಳಕಾಲ ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ ಎಂದರು.



ಸ್ಮಾರ್ಟ್ ದೇಶಕ್ಕಾಗಿ

ಸರ್ವಂ ಕಾಜಿ ಗ್ಲಾಸ್

ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗದಲ್ಲಿ ಪ್ರಧಾನಿ ನರೇಂದ್ರ ಮೋದಿ ಒಂದು ಸ್ಮಾರ್ಟ್ ಗ್ಲಾಸ್ ಧರಿಸಿಕೊಂಡು ಎಲ್ಲರ ಗಮನಸೆಳೆದರು. ಇದು ಸಾಧಾರಣ ಸನ್‌ಗ್ಲಾಸ್ ಅಲ್ಲ, ಎಐ ನವೋದ್ಯಮ ಕಂಪನಿ ಸರ್ವಂ ಎಐ ನಿರ್ಮಿಸಿದ ಎಐ ವೇರೇಬಲ್ ಸ್ಮಾರ್ಟ್ ಗ್ಲಾಸ್ ಆಗಿದೆ. ಸ್ಮಾರ್ಟ್ ಗ್ಲಾಸ್ ಹೆಸರು ಸರ್ವಂ ಕಾಜಿ. ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗದಲ್ಲಿ ಜಿಯೋ ಕಂಪನಿಯೂ ತನ್ನ ಸ್ಮಾರ್ಟ್ ಗ್ಲಾಸ್ ಪ್ರಸ್ತುತಪಡಿಸಿದೆ. ದೇಶದ ಪ್ರಧಾನಿ ದೇಶೀಯ ಎಐ ಸ್ಮಾರ್ಟ್ ಗ್ಲಾಸ್ ಧರಿಸಿರುವುದು ಖಂಡಿತ ಸಾಧಾರಣ ಸಂಗತಿಯಲ್ಲ. ಎಐ ವೇರೆಬಲ್ ಗ್ಲಾಸ್‌ಗಳು ಹಲವು ವಿಶೇಷತೆಗಳನ್ನು ಹೊಂದಿವೆ. ಸರ್ವಂ ಕಾಜಿ ಗ್ಲಾಸ್ ವಿಶೇಷತೆಗಳೇನು? ಅದು ಹೇಗೆ ಕೆಲಸ ಮಾಡುತ್ತದೆ? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಇಲ್ಲಿದೆ.

- ಎಐ ಆಧಾರಿತ ವೇರೆಬಲ್ ಉಪಕರಣ ಸರ್ವಂ ಕಾಜಿ
- ಕ್ಲೌಡ್ ಸ್ಟೋರೇಜ್, ಇಂಟರ್‌ನೆಟ್ ಇಲ್ಲದೆ ಕಾರ್ಯಾಚರಿಸುವ ಸಾಫ್ಟ್‌ವೇರ್ ಎಐ ಮಾಡೆಲ್ ಸರ್ವಂ ಎಜ್
- ಮೆಟಾ ರೇ-ಬನ್ ಸ್ಮಾರ್ಟ್ ಗ್ಲಾಸ್‌ಗಳಿಗೆ ಸರ್ವಂ ಕಾಜಿ ಟಕ್ಕರ್
- ಆಫ್‌ಲೈನ್‌ನಲ್ಲೂ ಕೆಲಸ ಮಾಡಲಿದೆ ಸರ್ವಂ ಎಜ್



ಎಐ ಸ್ಮಾರ್ಟ್ ಗ್ಲಾಸ್ ಪರೀಕ್ಷಿಸಿದ ಪ್ರಧಾನಿ

ಫೆ.16ರಂದು ದಿಲ್ಲಿಯ ಭಾರತ ಮಂಟಪಂನಲ್ಲಿ ಆರಂಭವಾದ ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗ 2026ರಲ್ಲಿ ನವೋದ್ಯಮ ಕಂಪನಿ ಸರ್ವಂ ಎಐ ತನ್ನ ಎಐ ವೇರೆಬಲ್ ಪರಿಚಯಿಸಿದೆ. ಪ್ರಧಾನಿ ಮೋದಿಯವರು ಸರ್ವಂ ಕಾಜಿ ಸ್ಮಾರ್ಟ್ ಗ್ಲಾಸ್ ಅನ್ನು ಧರಿಸಿ ಪರೀಕ್ಷಿಸಿದ್ದಾರೆ.

ಮೇನಲ್ಲಿ ಅಧಿಕೃತ ಲಾಂಚ್

ಮೇ ತಿಂಗಳಲ್ಲಿ ಕಾಜಿ ಸ್ಮಾರ್ಟ್ ಗ್ಲಾಸ್‌ಗಳನ್ನು ಭಾರತೀಯ ಮಾರುಕಟ್ಟೆಗೆ ಪರಿಚಯಿಸಲು ಸರ್ವಂ ಎಐ ಸಕಲಸಿದ್ಧತೆಗಳನ್ನು ನಡೆಸುತ್ತಿದೆ.

ಚ್ಯಾಟ್ ಸಪೋರ್ಟ್ ತರಲಿದೆ ಸರ್ವಂ

ಸರ್ವಂ ಕಾಜಿ ಸ್ಮಾರ್ಟ್ ಗ್ಲಾಸ್‌ನಲ್ಲಿ ವಾರದೊಳಗೆ ಎಐ ಚ್ಯಾಟ್ ಸಪೋರ್ಟ್ ಫೀಚರ್ ಅನಾವರಣಗೊಳಿಸುವ ಸಾಧ್ಯತೆಯಿದೆ. ನೈಜ ಸಮಯದ ಧ್ವನಿ ಮತ್ತು ದೃಶ್ಯ ಸಂವಹನದ ಮುಖೇನ ದೈನಂದಿನ ಜೀವನದಲ್ಲಿ ಎಐ ಬಳಸಲು ವಿನ್ಯಾಸ ಮಾಡಲಾಗಿದೆ.

ಒಮ್ಮೆ ನೋಡಿದರೆ ಕ್ಯಾಪ್ಚರ್!

ಅತ್ಯಾಧುನಿಕ ಎಐ ತಂತ್ರಜ್ಞಾನ ಮತ್ತು ಉನ್ನತ ಗುಣಮಟ್ಟದ ಕ್ಯಾಮರಾ ಅಳವಡಿಸಿದ ಸರ್ವಂ ಕಾಜಿ ಸ್ಮಾರ್ಟ್ ಗ್ಲಾಸ್‌ಗಳು ನೀವು ಯಾವ ದೃಶ್ಯವನ್ನು ನೋಡುತ್ತಿರೋ ಅಥವಾ ನೀವು ಯಾವ ದೃಶ್ಯಗಳನ್ನು ಸೆರೆಹಿಡಿಯಲು ಬಯಸುವಿರೋ ಅವುಗಳತ್ತ ಒಮ್ಮೆ ದೃಷ್ಟಿ ಹರಿಸಿದರೆ ಸಾಕು, ಅವುಗಳನ್ನೇ ಸ್ಮಾರ್ಟ್ ಗ್ಲಾಸ್ ಸೆರೆಹಿಡಿಯಲಿದೆ.

ಧ್ವನಿ ಕೇಳಿದರೆ ಸಾಕು, ನೀಡಲಿದೆ ಪ್ರತಿಕ್ರಿಯೆ

ಬಳಕೆದಾರರ ಧ್ವನಿಯನ್ನು ಗುರುತಿಸುವ ಸ್ಮಾರ್ಟ್ ಗ್ಲಾಸ್, ಬಳಕೆದಾರ ಏನೇ ಮಾತನಾಡಿದರೂ ಅಥವಾ ಪ್ರಶ್ನೆ ಕೇಳಿದರೂ ಆಯಾ ಸಂದರ್ಭ ಆಧಾರಿಸಿ ಸರಿಯಾದ ಮಾಹಿತಿ ನೀಡಲಿದೆ ಅಥವಾ ಉತ್ತರಿಸಲಿದೆ. ಧ್ವನಿ ಬುದ್ಧಿಮತ್ತೆ ಇರುವುದರಿಂದ ಬಳಕೆದಾರ ಏನೇ ಹೇಳಿದರೂ, ತಕ್ಷಣ ಗ್ಲಾಸ್ ಪ್ರತಿಕ್ರಿಯೆ ನೀಡಲಿದೆ. ಬಳಕೆದಾರರು ಅಗತ್ಯಾನುಸಾರ ಫೀಚರ್‌ಗಳಲ್ಲಿ ಬದಲಾವಣೆ ಮಾಡಿಕೊಳ್ಳುವ ಅವಕಾಶವೂ ಇರಲಿದೆ.

ಸ್ವದೇಶಿ ಎಐ- ಸ್ವಾವಲಂಬಿ ದೇಶ

ಎಐ ಜಾಗತಿಕ ಮಾರುಕಟ್ಟೆಯಲ್ಲಿ ಭಾರತವನ್ನು ಅಗ್ರಸ್ಥಾನಕ್ಕೇರಿಸಲೇ ಬೇಕೆಂದು ಭಾರತೀಯ ಎಐ ನವೋದ್ಯಮ ಕಂಪನಿಗಳೂ ದೃಢ ನಿಶ್ಚಯ ಮಾಡಿಕೊಂಡಿವೆ. ಕೇಂದ್ರ ಸರ್ಕಾರದ ಮೇಕ್ ಇನ್ ಇಂಡಿಯಾ ಉಪಕ್ರಮ ಮತ್ತು ವೋಕಲ್ ಫಾರ್ ಲೋಕಲ್ ಇತ್ಯಾದಿ ಸ್ವದೇಶಿ ಚಿಂತನೆಗಳಿಂದಾಗಿ ಎಐ ಕ್ಷೇತ್ರದಲ್ಲಿ ಆತ್ಮನಿರ್ಭರ (ಸ್ವಾವಲಂಬಿ) ಕನಸು ನನಸಾಗಿಸಲು ಕೇಂದ್ರ ಸರ್ಕಾರ ಮತ್ತು ಕಂಪನಿಗಳು ಟೊಂಕ ಕಟ್ಟಿವೆ.

ಆಫ್‌ಲೈನ್ ನಲ್ಲೂ ಎಐ!

ಭಾರತೀಯ ನವೋದ್ಯಮ ಸರ್ವಂ ಎಐ ಇತ್ತೀಚೆಗೆ ತನ್ನ ಸರ್ವಂ ಎಜ್ ಎಂಬ ಅಪ್ಲಿಕೇಶನ್ ಅನಾವರಣಗೊಳಿಸಿದ್ದು, ಇದು ಇಂಟರ್‌ನೆಟ್ ಇಲ್ಲದೆ ಕಾರ್ಯನಿರ್ವಹಿಸುವ ಎಐ ಅಪ್ಲಿಕೇಶನ್ ಆಗಿದೆ. ಈ ಅಪ್ಲಿಕೇಶನ್ ಅನ್ನು ನಿಮ್ಮ ಫೋನ್ ಅಥವಾ ಲ್ಯಾಪ್‌ಟಾಪ್‌ನಲ್ಲಿ ಇಂಟರ್‌ನೆಟ್ ಇಲ್ಲದೆಯೇ ಆಫ್‌ಲೈನ್‌ನಲ್ಲಿ ಬಳಸಬಹುದು. ಸರ್ವಂ ಎಜ್ ಅಪ್ಲಿಕೇಶನ್ ಬಳಸಲು ಕ್ಲೌಡ್ ಸ್ಟೋರೇಜ್ ಅಥವಾ ಇಂಟರ್‌ನೆಟ್ ಸಂಪರ್ಕ ಅಗತ್ಯವಿಲ್ಲವೆಂದು ಸರ್ವಂ ಎಐ ಹೇಳಿದೆ.

ಇಂಟರ್‌ನೆಟ್ ಬಳಸದ ಮೊಬೈಲ್ ಬಳಕೆದಾರರನ್ನೂ ಸರ್ವಂ ಎಜ್ ಆ್ಯಪ್ ಕೃತಕ ಬುದ್ಧಿಮತ್ತೆ(ಎಐ) ಅನ್ನು ತಲುಪಿಸಲಿದೆ. ಸರ್ವಂ ಎಜ್ ಆ್ಯಪ್ ನಿಮ್ಮ ಫೋನ್‌ನ ಪ್ರಾಸೆಸಿಂಗ್ ಪವರ್ ಬಳಸಿಕೊಳ್ಳಲಿದ್ದು, ಇಂಟರ್‌ನೆಟ್ ಸಂಪರ್ಕ ಇಲ್ಲದಿದ್ದರೂ ಸುರಕ್ಷಿತವಾಗಿ ಕಾರ್ಯ ನಿರ್ವಹಿಸಲಿದೆ.

ಸರ್ವಂ ಕಾಜಿ ವಿಶೇಷತೆಗಳು

ಸರ್ವಂ ಎಐ ತನ್ನ ಕಾಜಿ ಸ್ಮಾರ್ಟ್ ಗ್ಲಾಸ್ ವಿಶೇಷತೆಗಳನ್ನು ಅಧಿಕೃತವಾಗಿ ಘೋಷಿಸಿಲ್ಲ. ಆದರೆ ಕಾಜಿ ಈ ಕೆಳಗಿನ ಎಐ ಸಾಮರ್ಥ್ಯ ಹೊಂದಿರಲಿವೆ ಎಂಬ ನಿರೀಕ್ಷೆಗಳಿವೆ.

ಕೈ ಬಳಸದೆ ಎಐ ಸಂವಹನ: ಸ್ಮಾರ್ಟ್ ಗ್ಲಾಸ್‌ಗಳು ನಮ್ಮ ಮಾತನ್ನು ಕೇಳಿ ಅರ್ಥ ಮಾಡಿಕೊಳ್ಳಲಿದ್ದು, ಬುದ್ಧಿವಂತಿಕೆಯ ಪ್ರತಿಕ್ರಿಯೆಗಳನ್ನು ನೀಡಲಿದೆ. ಇದು ಪ್ರತಿದಿನ ನಿಮ್ಮ ಫೋನ್ ಅಥವಾ ಸ್ಕ್ರೀನ್‌ನ ಮೂಲಕ ಎಐ ಸಹಾಯ ಮಾಡಲಿದೆ.

ಧ್ವನಿ, ದೃಶ್ಯ ಮತ್ತು ಭಾಷಾ ಬುದ್ಧಿಮತ್ತೆ: ಬಿಲ್ಟ್-ಇನ್ ಸೆನ್ಸಾರ್‌ಗಳು ಮತ್ತು ಎಐ ಮಾದರಿಗಳನ್ನು ಬಳಸಿಕೊಂಡು ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಅರ್ಥೈಸಿಕೊಂಡ ಸ್ಮಾರ್ಟ್ ಗ್ಲಾಸ್, ನೀವು ಫೋನ್ ಬಳಸದೆಯೇ ಕೇಳಿದ ಪ್ರಶ್ನೆಗಳಿಗೆ ಸಲಹೆಗಳನ್ನು ನೀಡಲಿದೆ.

ಖಾಸಗಿ ಅನುಭವಗಳು: ಸರ್ವಂ ಪ್ಲಾಟ್‌ಫಾರಂ ಬಳಸಿಕೊಂಡು ಆ್ಯಪ್ ಡೆವಲಪರ್‌ಗಳು ಫೋಟೋ-ಆಧಾರಿತ (ಟೈಲರ್ಡ್) ಮೊಬೈಲ್ ಆ್ಯಪ್‌ಗಳನ್ನು ನಿರ್ಮಿಸಬಹುದು. ಇಂತಹಾ ಆ್ಯಪ್‌ಗಳನ್ನು ಫ್ಯಾಷನ್ ಬ್ರ್ಯಾಂಡ್‌ಗಳು ಹೆಚ್ಚಾಗಿ ಬಳಸುತ್ತವೆ.

ದೇಸಿ ವಿನ್ಯಾಸ ಮತ್ತು ನಿರ್ಮಾಣ: ಇದು ಸಂಪೂರ್ಣ ದೇಸಿ ವಿನ್ಯಾಸ ಮತ್ತು ನಿರ್ಮಾಣದ ಎಐ ಹಾರ್ಡ್‌ವೇರ್ ಉಪಕರಣವಾಗಿದೆ. ಸ್ಥಳೀಯ ಭಾಷೆಗಳಿಗೂ ಸಂಸ್ಕೃತಿಗೂ ಪ್ರಾಧಾನ್ಯತೆ ನೀಡಲಾಗಿದೆ.

ಎಐ ಚ್ಯಾಟ್ ಸಪೋರ್ಟ್: ಎಐ ಚ್ಯಾಟ್ ಸಪೋರ್ಟ್ ಸೇವೆಯನ್ನು ಪರಿಚಯಿಸಲು ಸರ್ವಂ ಯೋಜನೆ ಹಾಕಿಕೊಂಡಿದೆ. ಸ್ಮಾರ್ಟ್ ಗ್ಲಾಸ್‌ನಲ್ಲಿ ಎಐ ಚ್ಯಾಟ್ ಬಾಟ್ ಬರಲಿದ್ದು, ಅಗತ್ಯ ಸೇವೆಗಳಿಗಾಗಿ ಬಳಕೆದಾರರು ಚ್ಯಾಟ್ ಬಾಟ್‌ನೊಂದಿಗೆ ಸಂವಹನ ನಡೆಸಬಹುದು.

ಕಿರುಸುದ್ದಿ

ಛತ್ತೀಸ್‌ಗಢದಲ್ಲಿ 22 ನಕ್ಸಲರ ಶರಣಾಗತಿ

ರಾಯ್ಪುರ: ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ಮಂಗಳವಾರ 22 ನಕ್ಸಲರು ಪೊಲೀಸರ ಮುಂದೆ ಶರಣಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸರ್ಕಾರದ ಪೂನಾ ಮಾರ್ಗೆಮ್ ಪುನರ್‌ವಸತಿ ಯೋಜನೆಯಲ್ಲಿ ಓರ್ವ ಮಹಿಳೆ ಸೇರಿದಂತೆ ಕಾರ್ಯಕರ್ತರು ಹಿರಿಯ ಪೊಲೀಸ್ ಮತ್ತು ಸಿಆರ್‌ಪಿಎಫ್ ಅಧಿಕಾರಿಗಳ ಮುಂದೆ ಶರಣಾಗಿದ್ದಾರೆ ಎಂದು ಸುಕ್ಮಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾಣ್ ತಿಳಿಸಿದ್ದಾರೆ. ನಕ್ಸಲ್ ವಿರೋಧಿ ಕಾರ್ಯಾಚರಣೆಗಳು, ಹೊಸ ಭದ್ರತಾ ಶಿಬಿರಗಳ ಸ್ಥಾಪನೆ ಮತ್ತು ಅಭಿವೃದ್ಧಿ ಯೋಜನೆಗಳ ಹೆಚ್ಚಿದ ವ್ಯಾಪ್ತಿಯಿಂದಾಗಿ ಜಿಲ್ಲೆಯಲ್ಲಿ ಮಾವೋವಾದಿಗಳ ಪ್ರಭಾವವು ಸ್ಥಿರವಾಗಿ ಕುಸಿಯುತ್ತಿದೆ ಎಂದು ಅವರು ಹೇಳಿದರು.

ರೈಲು ಶೌಚಾಲಯದಲ್ಲಿ ನೈರ್ಮಲ್ಯಕ್ಕೆ ಆದ್ಯತೆ

ಹೊಸದಿಲ್ಲಿ: ರೈಲು ಶೌಚಾಲಯಗಳಲ್ಲಿ ನೀರಿನ ಕೊಳವೆಗಳು ಮತ್ತು ಚೈನ್ಡ್ ಸ್ಟೈನ್‌ಲೆಸ್ ಸ್ಟೀಲ್ ಮಗ್‌ಗಳನ್ನು ಜೆಟ್ ಸ್ಪ್ರೇಗಳೊಂದಿಗೆ ಬದಲಾಯಿಸುವಂತೆ ರೈಲ್ವೆ ಸಚಿವಾಲಯವು ಎಲ್ಲಾ ವಲಯ ರೈಲ್ವೆಗೆ ನಿರ್ದೇಶನ ನೀಡಿದೆ. ನೀರು ನಿಲ್ಲುವುದನ್ನು ತಡೆಗಟ್ಟುವ ಮತ್ತು ಪ್ರಯಾಣಿಕರಿಗೆ ನೈರ್ಮಲ್ಯದ ಮಾನದಂಡಗಳನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಉತ್ತರ ರೈಲ್ವೆಯ ಯಶಸ್ವಿ ಪ್ರಯೋಗದ ಬಳಿಕ ಈ ನಿರ್ದೇಶನ ಬಂದಿದೆ. 2026ರ ಫೆಬ್ರವರಿ 17ರಂದು ಹೊರಡಿಸಲಾದ ಸುತ್ತೋಲೆಯಲ್ಲಿ, ಕೋಚ್ ಶೌಚಾಲಯದ ಮಹಡಿಗಳಲ್ಲಿ ನೀರು ಸಂಗ್ರಹವಾಗುವುದರಿಂದ ಅನಾರೋಗ್ಯಕರ ಪರಿಸ್ಥಿತಿಗಳು ಮತ್ತು ಪ್ರಯಾಣಿಕರ ಪ್ರತಿಕೂಲ ಪ್ರತಿಕ್ರಿಯೆಗಳು ಉಂಟಾಗುತ್ತವೆ ಎಂದು ಸಚಿವಾಲಯವು ಗಮನಿಸಿತ್ತು.

ದ್ವಿಪಕ್ಷೀಯ ಸಂಬಂಧ ವೃದ್ಧಿಯ ಆಶಯ

ಹೊಸದಿಲ್ಲಿ: ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ಮಂಗಳವಾರ ಬಾಂಗ್ಲಾದೇಶದ ಪ್ರಧಾನಿಯಾಗಿ ಬಿಎನ್‌ಪಿ ನಾಯಕ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ನೂತನ ಪ್ರಧಾನಿ ತಾರಿಕ್ ರೆಹಮಾನ್ ಅವರನ್ನು ಭೇಟಿಯಾದರು. ಅವರ ಭಾರತೀಯ ಸಹವರ್ತಿ ನರೇಂದ್ರ ಮೋದಿಯವರ ಅಭಿನಂದನಾ ಪತ್ರವನ್ನು ಹಸ್ತಾಂತರಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಮ್ಮ ಬಹುಮುಖಿ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸಲು, ಪ್ರಾದೇಶಿಕ ಸಹಕಾರವನ್ನು ಹೆಚ್ಚಿಸಲು ಮತ್ತು ಸಂಪರ್ಕ, ವ್ಯಾಪಾರ, ತಂತ್ರಜ್ಞಾನ, ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಇಂಧನ, ಆರೋಗ್ಯ, ರಕ್ಷಣೆ, ಸಂಸ್ಕೃತಿ ಮತ್ತು ಜನರ ನಡುವಿನ ವಿನಿಮಯದಂತಹ ವ್ಯಾಪಕ ಕ್ಷೇತ್ರಗಳಲ್ಲಿ ನಮ್ಮ ಸಾಮಾನ್ಯ ಗುರಿಗಳನ್ನು ಮುನ್ನಡೆಸಲು ನಿಮ್ಮೊಂದಿಗೆ ಕೆಲಸ ಮಾಡಲು ನಾನು ಎದುರು ನೋಡುತ್ತಿದ್ದೇನೆ ಎಂದು ಮೋದಿ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಫೆ.22ಕ್ಕೆ ಬೋರಾ ಬಿಜೆಪಿಗೆ ಸೇರ್ಪಡೆ

ಗುವಾಹಟಿ: ಅಸ್ಸಾಂ ಕಾಂಗ್ರೆಸ್ ಭವಿಷ್ಯ ಅತಂತ್ರ ಸ್ಥಿತಿಯಲ್ಲಿದ್ದು, ಅಸ್ಸಾಂನ ಮಾಜಿ ರಾಜ್ಯ ಕಾಂಗ್ರೆಸ್ ಮುಖ್ಯಸ್ಥ ಭೂಪೆನ್ ಬೋರಾ ರಾಜೀನಾಮೆ ನೀಡಿದ ಬೆನ್ನಲ್ಲೇ ಬಿಜೆಪಿಗೆ ಸೇರ್ಪಡೆಯಾಗುತ್ತಿದ್ದಾರೆ. ಬೋರಾ ಅವರು ಫೆಬ್ರವರಿ 22ರಂದು ಬಿಜೆಪಿ ಸೇರಲಿದ್ದಾರೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತಾ ಬಿಸ್ವ ಶರ್ಮಾ ಮಂಗಳವಾರ ಘೋಷಿಸಿದ್ದಾರೆ.

ಫೆಬ್ರವರಿ 22ರಂದು ಭೂಪೆನ್ ಬೋರಾ ಬಿಜೆಪಿ ಸೇರಲಿದ್ದಾರೆ. ಅವರ ಜತೆಗೆ ಗುವಾಹಟಿ ಮತ್ತು ಉತ್ತರ ಲಖಿಂಪುರದಲ್ಲಿ ನೂರಾರು ಕಾಂಗ್ರೆಸ್ ನಾಯಕರು ಅಧಿಕೃತವಾಗಿ ಬಿಜೆಪಿ ಸೇರಲಿದ್ದಾರೆ ಎಂದು ಬೋರಾ ಜತೆಗಿನ ಜಂಟಿ ಪ್ರತಿಕಾಗೋಷ್ಠಿಯಲ್ಲಿ ಸಿಎಂ ಶರ್ಮಾ ಹೇಳಿದ್ದಾರೆ. ನಮ್ಮ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರು ಈಗಾಗಲೇ ಅವರ ಸೇರ್ಪಡೆಗೆ ಅನುಮೋದನೆ ನೀಡಿದ್ದಾರೆ. ಭೂಪೆನ್ ಬೋರಾ ಅವರಿಗೆ ಎಲ್ಲಾ ಗೌರವ ಮತ್ತು ಘನತೆಯನ್ನು ನೀಡಲಾಗುವುದು. ಬಿಜೆಪಿ ಸೇರುವುದು ಅವರಿಗೆ ಮನೆಗೆ ಮರಳುವಂತಿದೆ, ಏಕೆಂದರೆ ಇದು ಅವರಂತಹ ಅನೇಕರನ್ನು ಹೊಂದಿರುವ ಪಕ್ಷವಾಗಿದೆ ಎಂದಿದ್ದಾರೆ. ಈ ಬೆಳವಣಿಗೆಗಳು ಮುಖ್ಯಮಂತ್ರಿ ಹಿಮಂತಾ ಬಿಸ್ವ ಶರ್ಮಾ ಅವರು ಬೋರಾ ಅವರ ಅಧಿಕೃತ ನಿವಾಸಕ್ಕೆ ಭೇಟಿ ನೀಡಿದ ಬೆನ್ನಲ್ಲೇ ಬಂದಿದೆ. ಸೋಮವಾರ, ಬೋರಾ ಅವರು ತಮ್ಮ ರಾಜೀನಾಮೆ ಸಲ್ಲಿಸಿದ್ದರು. ಬೋರಾ ಅವರು ತಮ್ಮ ರಾಜೀನಾಮೆ ಪತ್ರದಲ್ಲಿ, ಪಕ್ಷದ ನಾಯಕತ್ವದಿಂದ ತಮ್ಮನ್ನು ನಿರ್ಲಕ್ಷಿಸಲಾಗುತ್ತಿದೆ ಮತ್ತು ರಾಜ್ಯ ಘಟಕದಲ್ಲಿ ತಮಗೆ ಸಿಗಬೇಕಾದ ಅರ್ಹತೆಯನ್ನು ನೀಡಲಾಗಿಲ್ಲ ಎಂದು ಹೇಳಿದ್ದರು.

ಎಐ ಆಧಾರಿತ ಮಾದರಿ ಕ್ಲಿನಿಕ್ ಆರೋಗ್ಯ ಕೇಂದ್ರ

ಹೊಸದಿಲ್ಲಿ: ನಿಮಿಷಗಳಲ್ಲಿ ಹೆಲ್ತ್ ರಿಪೋರ್ಟ್ ವಿಶ್ಲೇಷಣೆ ಮಾಡಿ, ಅದರ ಫಲಿತಾಂಶವನ್ನು ಕೈಗಿಡುವ ಎಐ ಆಧಾರಿತ ಕ್ಲಿನಿಕ್ ಮಾದರಿ ಇಲ್ಲಿ ನಡೆಯುತ್ತಿರುವ ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಗಮನ ಸೆಳೆಯುತ್ತಿದೆ. ಇದರ ಪ್ರದರ್ಶನ ಇರುವುದು ಜಿಯೋ ಪೆವಿಲಿಯನ್‌ನಲ್ಲಿದ್ದು, ಅಲ್ಲಿ ಪ್ರದರ್ಶಿಸಲಾದ ಜಿಯೋ ಆರೋಗ್ಯ ಎಐ, ಪ್ರಾಥಮಿಕ ಆರೋಗ್ಯ ಕ್ಷೇತ್ರದಲ್ಲಿ ಎಐ-ಆಧಾರಿತ ಕ್ಲಿನಿಕ್ ಮಾದರಿಯನ್ನು ಪರಿಚಯಿಸಿದೆ. ಈ ಎಐ-ಚಾಲಿತ ವ್ಯವಸ್ಥೆಯು ರೋಗಿಯ ಪ್ರಮುಖ ಆರೋಗ್ಯ ಅಂಶಗಳನ್ನು ಅಳೆದು-ತೂಗಿ, ಕೆಲವೇ ನಿಮಿಷಗಳಲ್ಲಿ ಸ್ಕ್ರೀನ್ ಮಾಡುತ್ತದೆ ಮತ್ತು ವಿಶ್ಲೇಷಿಸುತ್ತದೆ, ಸಂಭಾವ್ಯ ಅಪಾಯಗಳನ್ನು ಗುರುತಿಸುತ್ತದೆ. ಅಗತ್ಯವಿರುವಡೆ ತಜ್ಞರ ಉಲ್ಲೇಖಗಳನ್ನು ಶಿಫಾರಸು ಮಾಡುತ್ತದೆ. ದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಎಐ-ಸಕ್ರಿಯಗೊಳಿಸಿದ ಚಿಕಿತ್ಸಾಲಯಗಳಾಗಿ ಪರಿವರ್ತಿಸುವುದು, ಕೈಗೆಟುಕುವ ಆರೋಗ್ಯ ಸೇವೆಯನ್ನು ಒದಗಿಸುವುದು ತನ್ನ ಗುರಿಯಾಗಿದೆ ಎಂದು ಕಂಪನಿ ಹೇಳಿಕೊಂಡಿದೆ.

ಈ ವ್ಯವಸ್ಥೆಯಲ್ಲಿ, ರೋಗಿಯು ಎಐ-ಸಕ್ರಿಯಗೊಳಿಸಿದ ರೋಗನಿರ್ಣಯ (ಡಯಾಗ್ನೋಸ್ಟಿಕ್) ಸಾಧನ, ಸ್ಮಾರ್ಟ್ ಮಿರರ್ ಮುಂದೆ ನಿಲ್ಲುತ್ತಾನೆ, ಇದು ಕಣ್ಣುಗಳು, ಚರ್ಮ ಮತ್ತು ಇತರ ದೃಶ್ಯ ಸೂಚನೆಗಳ ಆಧಾರದ ಮೇಲೆ ಅಗತ್ಯವಾದ ರೀಡಿಂಗ್ ತೆಗೆದುಕೊಳ್ಳುತ್ತದೆ. ಎಐ ಈ ಡೇಟಾವನ್ನು ವಿಶ್ಲೇಷಿಸುತ್ತದೆ. ಪ್ರಾಥಮಿಕ ಆರೋಗ್ಯ ಮೌಲ್ಯಮಾಪನವನ್ನು ಜನರೇಟ್ ಮಾಡುತ್ತದೆ. ರೋಗಿಯು ಸಮಸ್ಯೆಯನ್ನು ವಾಯ್ಸ್ ಎಐ ವೈದ್ಯರಿಗೆ ಮೌಖಿಕವಾಗಿ ವಿವರಿಸಬಹುದು. ಅಗತ್ಯವಿದ್ದರೆ, ವಾಯ್ಸ್ ಎಐ ವೈದ್ಯರು ರೋಗಿಗೆ ಹೆಚ್ಚುವರಿ ಪ್ರಶ್ನೆಗಳನ್ನು ಸಹ ಕೇಳುತ್ತಾರೆ. ಇದರ ವೈಶಿಷ್ಟ್ಯವೆಂದರೆ ಅದು ಹಲವಾರು ಪ್ರಮುಖ ಭಾರತೀಯ ಭಾಷೆಗಳಲ್ಲಿ ಸಂವಹನ ನಡೆಸಬಹುದು.

ರಾಷ್ಟ್ರೀಯ ಗೀತೆಗೆ ವಿರೋಧ ದೇಶದ್ರೋಹಕ್ಕಿಂತ ಕಮ್ಮಿಯಲ್ಲ

ಲಖನೌ: ವಂದೇ ಮಾತರಂ ಅನ್ನು ವಿರೋಧಿಸುವವರಿಗೆ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ರಾಷ್ಟ್ರೀಯ ಗೀತೆಗೆ ವಿರೋಧ ವ್ಯಕ್ತಪಡಿಸುವುದು ದೇಶದ್ರೋಹಕ್ಕಿಂತ ಕಡಿಮೆಯೇನಲ್ಲ ಎಂಬ ಸ್ಪಷ್ಟವಾದ ಎಚ್ಚರಿಕೆ ನೀಡಿದ್ದಾರೆ. ವಂದೇ ಮಾತರಂ ಅನ್ನು ವಿರೋಧಿಸುವುದಾಗಲಿ ಅಥವಾ ರಾಷ್ಟ್ರೀಯ ಅಸ್ಮಿತೆಯ ಸಂಕೇತಗಳನ್ನು ಅವಮಾನಿಸುವುದಾಗಲಿ ದೇಶದ್ರೋಹಕ್ಕಿಂತ ಕಮ್ಮಿಯೇನಲ್ಲ ಎಂದು ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ಪಕ್ಷದವರಿಗೆ ಖಡಕ್ ಸಂದೇಶ ರವಾನಿಸಿದ್ದಾರೆ. ವಿಧಾನಸಭೆಯ ಬಜೆಟ್ ಅಧಿವೇಶನದಲ್ಲಿ ಮಾತನಾಡಿದ ಯೋಗಿ, ವಿರೋಧ ಪಕ್ಷದವರು ರಾಷ್ಟ್ರೀಯ ಗೀತೆಯನ್ನು ಅಗೌರವಿಸಿರುವುದನ್ನು ಪ್ರಸ್ತಾಪಿಸಿದರು. ಭಾರತ ವಿರೋಧಿಗಳ ಪರವಾಗಿ ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಾರೆ. ಇದು ದೇಶದ್ರೋಹಕ್ಕಿಂತ ಕಡಿಮೆಯೇನಲ್ಲ ಎಂದು ಯೋಗಿ ಎಚ್ಚರಿಕೆ ನೀಡಿದರು. 1950ರ ಜ.24ರಂದು ದೇಶದ ಸಂಸತ್ತಿನಲ್ಲೇ ವಂದೇ ಮಾತರಂ ರಾಷ್ಟ್ರೀಯ ಗೀತೆ ಮಾನ್ಯತೆ ಪಡೆದಿತ್ತೆಂದು ಸಿಎಂ ಯೋಗಿ ಸದಸ್ಯರಿಗೆ ನೆನಪಿಸಿದರು. ತ್ರಿವರ್ಣ, ರಾಷ್ಟ್ರಗೀತೆ, ರಾಷ್ಟ್ರೀಯ ಗೀತೆ ಮತ್ತು ರಾಷ್ಟ್ರೀಯ ಮಹಾತ್ಮರನ್ನು ಗೌರವಿಸುವುದು ಪ್ರತಿ ಭಾರತೀಯನ ಆದ್ಯ ಕರ್ತವ್ಯವಾಗಿದೆ ಎಂದು ಯೋಗಿ ಹೇಳಿದರು. ಸಂವಿಧಾನದ ಹೆಸರಿನಲ್ಲಿ ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಇನ್ನೊಂದೆಡೆ ಇದೇ ಪಕ್ಷದವರು ವಂದೇ ಮಾತರಂ ವಿರೋಧಿಸುತ್ತಿದ್ದಾರೆ. ಈ ದೇಶದಲ್ಲಿ ಬದುಕಬೇಕು, ಆದರೆ ರಾಷ್ಟ್ರಗೀತೆ ಮತ್ತು ರಾಷ್ಟ್ರೀಯ ಗೀತೆಯಿಂದ ಸಮಸ್ಯೆಯೇ? ಇದನ್ನು ಸಹಿಸಲು ಸಾಧ್ಯವಿಲ್ಲ ಎಂದು ಯೋಗಿ ಎಚ್ಚರಿಕೆ ನೀಡಿದರು.

ಇಮ್ರಾನ್‌ಗೆ ಸೂಕ್ತ ಚಿಕಿತ್ಸೆ ನೀಡಿ: ಮಾಜಿ ನಾಯಕರ ಮನವಿ

ಹೊಸದಿಲ್ಲಿ: ಪಾಕಿಸ್ತಾನ ಮಾಜಿ ಪ್ರಧಾನಿ ಮತ್ತು ವಿಶ್ವಕಪ್ ವಿಜೇತ ನಾಯಕ ಇಮ್ರಾನ್ ಖಾನ್ ಅವರಿಗೆ ತಕ್ಷಣ ವೈದ್ಯಕೀಯ ಚಿಕಿತ್ಸೆ ನೀಡಿ. ಬಂಧನದಲ್ಲಿ ಅವರನ್ನು ಗೌರವಯುತವಾಗಿ ಚಿಕಿತ್ಸೆ ನೀಡುವುದನ್ನು ಖಚಿತಪಡಿಸಿಕೊಳ್ಳುವಂತೆ ಪಾಕಿಸ್ತಾನ ಸರ್ಕಾರವನ್ನು ಭಾರತ ಕ್ರಿಕೆಟ್ ತಂಡ ಮತ್ತು ಅಂತಾರಾಷ್ಟ್ರೀಯ ಕ್ರಿಕೆಟ್ ತಂಡದ ಮಾಜಿ ನಾಯಕರು ಮನವಿ ಮಾಡಿದ್ದಾರೆ. ಭಾರತದ ಕ್ರಿಕೆಟ್ ತಂಡ ಮಾಜಿ ನಾಯಕರಾದ ಸುನಿಲ್ ಗವಾಸ್ಕರ್ ಮತ್ತು ಕಪಿಲ್ ದೇವ್ ಸೇರಿದಂತೆ ಮಾಜಿ ಅಂತಾರಾಷ್ಟ್ರೀಯ ಕ್ರಿಕೆಟ್ ನಾಯಕರ ಗುಂಪು ಜಂಟಿ ಹೇಳಿಕೆಯಲ್ಲಿ ಒತ್ತಾಯಿಸಿದೆ. ಇಮ್ರಾನ್ ಖಾನ್ ಅವರ ಸಹೋದರಿ ಅಲೀಮಾ ಖಾನುಮ್ ಅವರು ಜೈಲಿನಲ್ಲಿ ಖಾನ್ ಅವರಿಗೆ ನೀಡಲಾಗುತ್ತಿರುವ ಚಿಕಿತ್ಸೆ ಮತ್ತು ಅವರ ಆರೋಗ್ಯ ಹದಗೆಡುತ್ತಿರುವುದರ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು. ಅವರ ಚಿಕಿತ್ಸೆ ಮತ್ತು ಸೆರೆವಾಸದ ಪರಿಸ್ಥಿತಿಗಳ ಬಗ್ಗೆ ಆಳವಾದ ಕಳವಳದಿಂದ ಈ ಪತ್ರ ಬರೆದಿದ್ದೇವೆ ಎಂದು ಹೇಳಿಕೆಯಲ್ಲಿ ಅವರು ಉಲ್ಲೇಖಿಸಿದ್ದಾರೆ.

ವಯಸ್ಸು ಆಧಾರಿತ ಸಾಮಾಜಿಕ ಜಾಲತಾಣ ನಿರ್ಬಂಧ ಜಾರಿ ಸಾಧ್ಯತೆ | ಜಾಲತಾಣ ವ್ಯಸನಮುಕ್ತ ಭಾರತಕ್ಕಾಗಿ ಕೇಂದ್ರ ಪಣ

ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿರ್ಬಂಧ ಕುರಿತ ಚರ್ಚೆ

ಹೊಸದಿಲ್ಲಿ: ವ್ಯಸನಕಾರಿ ಡಿಜಿಟಲ್ ಸೇವೆಗಳು ಮಕ್ಕಳ ಕೈ ಸೇರುವುದನ್ನು ತಡೆಯಬೇಕೆಂಬ ಕೂಗು ಜಾಗತಿಕ ಮಟ್ಟದಲ್ಲಿ ಕೇಳಿಬಂದಿದ್ದು, ಸಾಮಾಜಿಕ ಜಾಲತಾಣಗಳ ಮೇಲೆ ವಯಸ್ಸು ಆಧಾರಿತ ನಿರ್ಬಂಧ ಹೇರುವ ಕುರಿತು ಕೇಂದ್ರ ಸರ್ಕಾರ ಚರ್ಚೆ ನಡೆಸುತ್ತಿದೆ ಎಂದು ಕೇಂದ್ರ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ದಿಲ್ಲಿಯ ಭಾರತ ಮಂಟಪಂನಲ್ಲಿ ಸೋಮವಾರ ಆರಂಭವಾದ ಎಐ ಇಂಪ್ಯಾಕ್ಟ್ ಶೃಂಗದಲ್ಲಿ ಮಾತನಾಡಿದ ಸಚಿವ ವೈಷ್ಣವ್, ಸಾಮಾಜಿಕ ಜಾಲತಾಣಗಳ ಮೇಲೆ ವಯಸ್ಸಿನ ಆಧಾರದಲ್ಲಿ ನಿರ್ಬಂಧಗಳನ್ನು ಹೇರುವ ಮತ್ತು ಡೀಪ್‌ಫೇಕ್ ಸಮಸ್ಯೆಗಳ ಬಗ್ಗೆ ಕೇಂದ್ರ ಸರ್ಕಾರ ಚರ್ಚೆ ನಡೆಸುತ್ತಿದೆ ಎಂದು ಸಚಿವ ವೈಷ್ಣವ್ ಸ್ಪಷ್ಟಪಡಿಸಿದ್ದಾರೆ.

ಶೃಂಗದಲ್ಲಿ ಜನದಟ್ಟಣೆ; ಕ್ಷಮೆ ಕೇಳಿದ ಸಚಿವರು: ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಯೋಜನೆ ಮಾಡಿರುವ ಎಐ ಶೃಂಗದಲ್ಲಿ ಸಾವಿರಾರು ಜನ ಸೇರಿದ್ದರಿಂದ ಉಂಟಾದ ಜನದಟ್ಟಣೆ ಸಮಸ್ಯೆಗಳಿಗಾಗಿ ಸಚಿವ ಅಶ್ವಿನಿ ವೈಷ್ಣವ್ ಕ್ಷಮೆಯಾಚಿಸಿದ್ದಾರೆ. ಭಾರೀ ಸಂಖ್ಯೆಯಲ್ಲಿ ಜನ ಭೇಟಿ ನೀಡಿದ್ದರಿಂದ ಸುದೀರ್ಘ ಕ್ಯೂ, ಕಳ್ಳತನ ಮತ್ತು ಇಂಟರ್‌ನೆಟ್ ವೈಫಲ್ಯ ಇತ್ಯಾದಿ ಸಮಸ್ಯೆಗಳು ಎದುರಾಗಿದ್ದವು. ಇದರಿಂದ ತೊಂದರೆ ಅನುಭವಿಸಿದವರಲ್ಲಿ ನಾವು ಮುಕ್ತ ಮನಸ್ಸಿನಿಂದ ಕ್ಷಮೆಯಾಚಿಸುತ್ತೇವೆ ಎಂದು ಸಚಿವರ ಹೇಳಿದ್ದಾರೆ.



ಜಟಿಲ ಸಮಸ್ಯೆಗಳ ಬಗೆಹರಿಸಲಿದೆ ಎಐ: 2047ಕ್ಕೆ ಸಂಪನ್ನ ರಾಷ್ಟ್ರವಾಗೋ ನಿಟ್ಟಿನಲ್ಲಿ ಭಾರತದ ಯಾನಕ್ಕೆ ಎಐಯು ಶಕ್ತಿ ತುಂಬಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿರುವ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಕೃತಕ ಬುದ್ಧಿಮತ್ತೆಯ ಸಂಪೂರ್ಣ ಪ್ರಯೋಜನಗಳ ಬಳಸುವಂತೆ ಭಾರತದ ಯುವಶಕ್ತಿಗೆ ಕರೆಯಿತ್ತಿದ್ದಾರೆ. ವಿಕಸಿತ ಭಾರತ ದೃಷ್ಟಿಕೋನದ ಸಾಕಾರದಲ್ಲಿ ತಂತ್ರಜ್ಞಾನಗಳು ಮಹತ್ವದ ಪಾತ್ರ ವಹಿಸಲಿವೆ ಎಂದು ಸಚಿವರು ಹೇಳಿದ್ದಾರೆ.

ಎಐ ಜತೆಗಿನ ಸಖ್ಯವನ್ನು ಗಾಢಗೊಳಿಸಿ, ಟೀಮ್‌ವರ್ಕ್ ಬಲವರ್ಧಿಸಿ ಮತ್ತು ತಂತ್ರಜ್ಞಾನಗಳು ತೆರೆದಿಟ್ಟಿರುವ ಅಗಾಧ ಅವಕಾಶಗಳ ಕಂಡುಕೊಂಡು ಬಳಸಿಕೊಳ್ಳಿ ಎಂದು ಸಚಿವರು ಮುಂದಿನ ತಲೆಮಾರಿನ ಯುವಶಕ್ತಿಗೆ ಕರೆ ನೀಡಿದ್ದಾರೆ. ಎಐ ಇಂಪ್ಯಾಕ್ಟ್ ಸಮ್ಮಿಟ್ ಉದ್ದೇಶಿಸಿ ಸಚಿವರು ಮಾತನಾಡಿದರು. ಭಾರತದ ಸಂಪನ್ನ ಚರಿತ್ರೆ ಮತ್ತು ದಂತಕಥೆಗಳೊಂದಿಗೆ ರಾಷ್ಟ್ರದ ಬಹು ಆಯಾಮಗಳು, ವೈವಿಧ್ಯಮಯ ಸಂಸ್ಕೃತಿ, ಬಹುಭಾಷಾ ಪರಂಪರೆಯನ್ನು ಉಲ್ಲೇಖಿಸಿದ ಸಚಿವ ಪ್ರಧಾನ್, ಎಐಯು ಭಾರತಕ್ಕೆ ಮಹತ್ತ್ವಪೂರ್ಣ ಅವಕಾಶಗಳ ತೆರೆದಿಟ್ಟಿದೆ. ಜಟಿಲ ಸವಾಲುಗಳ ನಿಭಾಯಿಸುವಲ್ಲಿ ಎಐಯು ಶಕ್ತಿಶಾಲಿ ಮಾಧ್ಯಮವಾಗಬಲ್ಲುದು ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಎಐ ಜ್ಞಾನವನ್ನು ಮತ್ತಷ್ಟು ಗಹನಗೊಳಿಸಲು ಸಲಹೆ ಬಹುಆಯಾಮಗಳ ಸಹಿತ ವಿವಿಧತೆಯ ಸಂಸ್ಕೃತಿಸಂಪನ್ನ ಭಾರತೀಯ ಸಮಾಜದ ಸಂಕ್ಲಿಷ್ಟತೆಗಳನ್ನು ಅರಿಯುವಲ್ಲಿ ಎಐ ಪ್ರಮುಖ ಮಾಧ್ಯಮವಾಗಬಲ್ಲುದು ಎಂದು ವಿಶ್ವಾಸ ವ್ಯಕ್ತಪಡಿಸಿದ ಸಚಿವ ಪ್ರಧಾನ್, ಎಐ ಬಗ್ಗೆ ನಿಮ್ಮ ಜ್ಞಾನದಾಳವನ್ನು ಮತ್ತಷ್ಟು ಗಹನಗೊಳಿಸಿ ಎಂದು ದೇಶದ ಯುವಶಕ್ತಿಗೆ ಕರೆಯಿತ್ತರು. ಪರಿವರ್ತನೆಗಳಿಗೆ ಹೆದರುವ ಬದಲು ಅವನ್ನು ಧೈರ್ಯದಿಂದ ಸ್ವೀಕರಿಸಿ ಎಂದು ಸಲಹೆ ನೀಡಿದರು.

ಜನರಿಗೆ ಎಐ ತಲುಪಿಸಲು ಬೃಹತ್ ಮೂಲಸೌಕರ್ಯ

ಎಐ ಇಂಪ್ಯಾಕ್ಟ್ ಶೃಂಗದಲ್ಲಿ ಸ್ವದೇಶಿ ಎಐ ಮಾದರಿಗಳು ಲಭ್ಯವಿದ್ದು, ಅವುಗಳ ಸೇವೆಯನ್ನು ಸಾರ್ವಜನಿಕರಿಗೆ ತಲುಪಿಸಲು ಬೃಹತ್ ಮೂಲಸೌಕರ್ಯ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರ ಯೋಜನೆ ರೂಪಿಸಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಇಂದಿನ ಪಂದ್ಯಗಳು

ದ.ಆಫ್ರಿಕಾ vs ಯುಎಇ
ಬೆಳಗ್ಗೆ 11 (ದಿಲ್ಲಿ)

ಪಾಕಿಸ್ತಾನ vs ನಮೀಬಿಯಾ
ಮಧ್ಯಾಹ್ನ 3 (ಕೊಲಂಬೋ)


ಭಾರತ vs ನೆದರ್ಲೆಂಡ್ಸ್
ಸಂಜೆ 7 (ಅಹಮದಾಬಾದ್)

ಪಾಕ್‌ಗೆ ನಮೀಬಿಯಾ ವಿರುದ್ಧ ಮಾಡು ಇಲ್ಲವೆ ಮಡಿ ಪಂದ್ಯ
ಭಾರತ-ನೆದರ್ಲೆಂಡ್ಸ್ ಫೈಟ್

ಅಹಮದಾಬಾದ್: ಬಂದ ಎದುರಾಳಿಗಳಿಗೆ ಸೋಲುಣಿಸುತ್ತಾ ವಿಶ್ವಕಪ್ ಕಣದಲ್ಲಿ ಘರ್ಜಿಸುತ್ತಿರುವ ಭಾರತ ತಂಡವು, ಸೂಪರ್-8 ಪಂದ್ಯಗಳಿಗೂ ಮುನ್ನ ಅಭ್ಯಾಸಕ್ಕೆ ಆಸರೆಯಾಗುವಂತೆ ತನ್ನ ಕೊನೆಯ ಲೀಗ್ ಹಂತದ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದೆ.

ಅಮೆರಿಕ, ನಮೀಬಿಯಾ, ಪಾಕ್ ಹೀಗೆ ಬಂದ ತಂಡಗಳಿಗೆ ಸೋಲಿನ ರುಚಿ ತೋರಿಸುತ್ತಾ, ಗೆಲುವುಗಳನ್ನು ಸಂಭ್ರಮಿಸುತ್ತಾ ಟ್ರೋಫಿ ಉಳಿಸುವತ್ತ ಕಡೆ ಸಾಗುತ್ತಿದೆ ಸೂರ್ಯಕುಮಾರ್ ಯಾದವ್ ಬಳಗ. ಸೂಪರ್ ಎಂಟಕ್ಕೆನ್ನು ಗುಂಪು 1ರಲ್ಲಿ ಪೈಪೋಟಿ ಹಾಗೇ ಸಾಗುತ್ತ ರೋಚಕ ಘಟ್ಟಕ್ಕೆ ತಲುಪಿದೆ. ಅತ್ತ ಭಾರತ ಮೊದಲ ಸ್ಥಾನದಲ್ಲಿದ್ದರೆ, ನೆದರ್ಲೆಂಡ್ಸ್, ಪಾಕಿಸ್ತಾನ ಮತ್ತು ಅಮೆರಿಕ ತಂಡಗಳು ಎರಡನೇ ಸ್ಥಾನಕ್ಕಾಗಿ ಪೈಪೋಟಿಯಲ್ಲಿವೆ. ನೆದರ್ಲೆಂಡ್ಸ್ ಭಾರತ ವಿರುದ್ಧ ದೊಡ್ಡ ರನ್‌ರೇಟ್‌ನಿಂದ ಗೆದ್ದರೆ ಕ್ವಾಲಿಫೈ ಆಗುವ ಅವಕಾಶ ಹೊಂದಿದೆ. ಮಹತ್ವದ ಪಂದ್ಯ ಎಂದುಕೊಂಡು ಆಡಲಿದೆ. ಆದರೆ ಭಾರತ ಅಭ್ಯಾಸವಾಗಿ ಪರಿಗಣಿಸುತ್ತದೆ.

ಸೂರ್ಯ ಪಡೆಗೆ ವಿಶ್ವಾಸ: ಆಡಿರುವ 3 ಪಂದ್ಯಗಳಲ್ಲಿ ಮೊದಲಿಗೆ ಅಮೆರಿಕ ತಂಡವನ್ನು ಮಣಿಸಿದರೆ, ಎರಡನೇ ಪಂದ್ಯದಲ್ಲಿ ನಮೀಬಿಯಾ, ಮೂರನೇ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ದೊಡ್ಡ ಅಂತರದಿಂದ ಸೋಲಿಸಿದೆ. ಅಭಿಷೇಕ್ ಶರ್ಮ ಅವರ ಬ್ಯಾಟಿಂಗ್‌ಗೆ ಬೆಚ್ಚಿಬಿದ್ದಂತೆ ಅವರಿಗಾಗೇ ಹೆಚ್ಚಿನ ಪ್ರಿಪರೇಶನ್ ಮಾಡಿಕೊಂಡು ಬರುತ್ತಿದ್ದ ಎದುರಾಳಿ ತಂಡಗಳಿಗೆ ಈಗ ಇಶಾನ್ ಕಿಶನ್ ಇನ್ನಷ್ಟು ಆತಂಕಗೊಳಿಸಿದ್ದಾರೆ. ಔಟ್ ಆಫ್ ದಿ ಸಿಲ್ಯಾಬಸ್ ಎಂಬಂತೆ ಕಾಡುತ್ತಿದ್ದಾರೆ. ಹಿಂದಿನ



ಪಂದ್ಯಗಳಲ್ಲಿ ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ ಹಾಗೂ ಮುಖ್ಯವಾಗಿ ದೊಡ್ಡ ಪರಿಣಾಮ ಬೀಳಿಸುವ ಚಿಕ್ಕ ಇನ್ನಿಂಗ್ಸ್‌ನೊಂದಿಗೆ ಶಿವಂ ದುಬೆ ಸಜ್ಜಾಗಿದ್ದಾರೆ. ಮುಂದೆ ರಿಂಕು ಸಿಂಗ್, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್... ಎಷ್ಟೇ ವಿಕೆಟ್ ಬಿದ್ದರೂ ನಿಲ್ಲಲ್ಲ ಭಾರತೀಯರ ಆರ್ಭಟ. ಬೌಲಿಂಗ್ ವಿಚಾರದಲ್ಲೂ ಅದೇ. ಬೂಮ್ರಾ ಲಯಕ್ಕೆ ಮರಳಿದ್ದಾರೆ. ಹಾರ್ದಿಕ್ ಪಾಂಡ್ಯ ತಮ್ಮ ಆಕ್ರಮಣಕಾರಿ ಬೌಲಿಂಗ್‌ನೊಂದಿಗೆ ಭರವಸೆಯನ್ನಿಟ್ಟಿದ್ದಾರೆ. ಇನ್ನು ಲಯದಲ್ಲಿರುವ ವರುಣ್ ಚಕ್ರವರ್ತಿ ಮ್ಯಾಜಿಕ್ ಮಾಡುವುದಕ್ಕೆ ಸಿದ್ಧವಾಗಿದ್ದಾರೆ.. ಇನ್ನು ಅಕ್ಷರ್ ಪಟೇಲ್ ಕೂಡ ಇದ್ದಾರಲ್ಲ, ಅವರ ಬೌಲಿಂಗ್ ಕೂಡ ವಿಶ್ವಾಸ ಹೆಚ್ಚಿಸಿದೆ.

ಪಾಕ್‌ಗಿಂದು ಅಗ್ನಿ ಪರೀಕ್ಷೆ: ಇನ್ನು ಮೊದಲನೇ ಗುಂಪಿನಲ್ಲಿ ಎರಡನೇ ಸ್ಥಾನಕ್ಕಾಗಿ ತೀವ್ರ ಹೊಡೆದಾಟ ನಡೆಯುತ್ತಿದೆ. ಪಾಕಿಸ್ತಾನ ಹಾಗೂ ನಮೀಬಿಯಾ ತಂಡಗಳು ಬುಧವಾರದ ಪಂದ್ಯದಲ್ಲಿ ಮುಖಾಮುಖಿಯಾಗಲಿದ್ದು, ಸೋತರೆ ಪಾಕಿಸ್ತಾನ ಹೊರಬೀಳಲಿದೆ. ಸದ್ಯ ಭಾರತದ ನಂತರ ಅಮೆರಿಕ ಎರಡನೇ ಸ್ಥಾನದಲ್ಲಿದ್ದು, ಪಾಕ್‌ಗಿಂತ ಹೆಚ್ಚಿನ ರನ್‌ರೇಟ್ ಹೊಂದಿದೆ. ಈ ಬೆನ್ನಲ್ಲೇ ಪಾಕ್‌ಗೆ ಮಾಡು ಇಲ್ಲವೆ ಮಡಿ ಪಂದ್ಯ ಇದಾಗಿದೆ. ಪಾಕ್ ಗೆದ್ದರೆ ಸಾಲದು. ಹೆಚ್ಚಿನ ರನ್‌ರೇಟ್ ಇಟ್ಟುಕೊಂಡು ಗೆದ್ದರೆ ಮಾತ್ರ ಅವಕಾಶ ಪಡೆಯಲಿದೆ.

ಭಾರತಕ್ಕೆ ಜಿಂಬಾಬ್ವೆ ಎದುರಾಳಿ

ಸೂಪರ್-8ರ ಮೊದಲ ಪಂದ್ಯದಲ್ಲಿ ಭಾರತ ಜಿಂಬಾಬ್ವೆ ತಂಡವನ್ನು ಎದುರಿಸಲಿದೆ. ಆಸ್ಟ್ರೇಲಿಯಾ ತಂಡವನ್ನು ಪಂದ್ಯಾವಳಿ ಯಿಂದ ಹೊರನೂಕಿದ ನಂತರ ಸೂಪರ್-8ಕ್ಕೆ ಲಗ್ಗೆ ಹಾಕಿರುವ ಜಿಂಬಾಬ್ವೆ, ಫೆಬ್ರವರಿ 22ರಂದು ಸೂಪರ್-8ರ ಮೊದಲ ಪಂದ್ಯವಾಡಲಿದೆ.

ತಂಡಗಳು

ಭಾರತ: ಇಶಾನ್ ಕಿಶನ್, ಅಭಿಷೇಕ್ ಶರ್ಮ, ತಿಲಕ್ ವರ್ಮಾ, ಸೂರ್ಯಕುಮಾರ್ ಯಾದವ್ (ನಾಯಕ), ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ರಿಂಕು ಸಿಂಗ್, ಅಕ್ಷರ್ ಪಟೇಲ್, ಕುಲ್ದೀಪ್ ಯಾದವ್, ವರುಣ್ ಚಕ್ರವರ್ತಿ, ಜಸ್ಪ್ರೀತ್ ಬುಮ್ರಾ, ಸಂಜು ಸ್ಯಾಮ್ಸನ್, ಮೊಹಮ್ಮದ್ ಸಿರಾಜ್, ವಾಷಿಂಗ್ಟನ್ ಸುಂದರ್, ಅರ್ಷದೀಪ್. ವಾಷಿಂಗ್ಟನ್ ಸುಂದರ್.

ನೆದರ್ಲ್ಯಾಂಡ್ಸ್: ಮೈಕೆಲ್ ಲೆವಿಟ್, ಮ್ಯಾಕ್ಸ್ ಒ'ಡೌಡ್, ಬಾಸ್ ಡಿ ಲೀಡ್, ಕಾಲಿನ್ ಅಕರ್ಮನ್, ಸ್ಕಾಟ್ ಎಡ್ವರ್ಡ್ಸ್, ಝಾಕ್ ಲಯನ್, ರೋಲೋಫ್, ವ್ಯಾನ್ ಬೀಕ್, ಆರ್ಯನ್ ದತ್, ಕೈಲ್ ಕ್ಲೈನ್, ಫ್ರೆಡ್ ಕ್ಲಾಸೆನ್, ಸಾಕಿಬ್ ಝುಲ್ಫಿನ್, ಸಾಕ್ವಿಬ್ ಕ್ರೋಸ್ಲೆನ್, ಸಾಕ್ವಿಬ್ ಕ್ರೋಸ್ಲೆನ್ ಟಿಮ್ ವ್ಯಾನ್ ಡೆರ್ ಗುಗ್ಟನ್

ಜಿಂಬಾಬ್ವೆ-ಐರ್ಲೆಂಡ್ ಪಂದ್ಯ ರದ್ದು
ವಿಶ್ವಕಪ್: ಆಸ್ಟ್ರೇಲಿಯಾ ಹೊರಕ್ಕೆ

ಕೊಲಂಬೋ: 17 ವರ್ಷಗಳ ಬಳಿಕ ಆಸ್ಟ್ರೇಲಿಯಾ ಗರ್ವಭಂಗ ಎದುರಿಸಿದ್ದು, ಪ್ರತಿಷ್ಠಿತ ಟಿ20 ವಿಶ್ವಕಪ್ ಪಂದ್ಯಾವಳಿಯಿಂದ ಮೊದಲ ಬಾರಿಗೆ ಲೀಗ್ ಹಂತದಲ್ಲೇ ಹೊರಬಿದ್ದಿತು. ಆಸೀಸ್ ಅಂತಹ ದೊಡ್ಡ ತಂಡದ ವಿರುದ್ಧ ಗೆದ್ದು ಬೀಗಿದ್ದ ಜಿಂಬಾಬ್ವೆಗೆ ವರುಣನ ಆಸರೆ ಸಿಕ್ಕ ನಂತರ ಪಂದ್ಯಾವಳಿಯ ಸೂಪರ್-8ರ ಘಟ್ಟಕ್ಕೆ ಹೆಜ್ಜೆ ಹಾಕಿತು.

ಜಿಂಬಾಬ್ವೆ ತಂಡದೊಂದಿಗೆ ಸೋತ ನಂತರ ಶ್ರೀಲಂಕಾ ವಿರುದ್ಧವೂ ತಿಣುಕಾಡಿದ ಆಸ್ಟ್ರೇಲಿಯಾ, ಮಳೆಯಿಂದಾಗಿ ಜಿಂಬಾಬ್ವೆ-ಐರ್ಲೆಂಡ್ ಪಂದ್ಯ ರದ್ದಾದ ನಂತರ ಹೊರನಡೆಯಿತು.

ಸೂಪರ್-8ಕ್ಕೆ ಕಿವೀಸ್: ಇತ್ತ ಇನ್ನೊಂದು ಪಂದ್ಯದಲ್ಲಿ ನ್ಯೂಜಿಲೆಂಡ್ ಸೂಪರ್-8ಕ್ಕೆ ಲಗ್ಗೆ ಹಾಕಿದೆ. ರಚಿನ್ ರವೀಂದ್ರ ಮತ್ತು ಗ್ಲೆನ್ ಫಿಲಿಪ್ಸ್ ಅವರ ಉತ್ತಮ ಬ್ಯಾಟಿಂಗ್‌ನೊಂದಿಗೆ ಮಿಂಚಿದ ಕಿವೀಸ್, ಕೆನಡಾದ ಯುವರಾಜ್ ಸಾಮ್ರಾ ಅವರ ಶತಕವನ್ನು ವ್ಯರ್ಥಗೊಳಿಸಿತು. ಸೂಪರ್-8ಕ್ಕೆ ಲಗ್ಗೆ ಹಾಕಿತು. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆನಡಾ 20 ಓವರ್‌ಗಳಲ್ಲಿ 4 ವಿಕೆಟ್‌ನೊಂದಿಗೆ173 ರನ್ ಗಳಿಸಿತು. ಯುವರಾಜ್ ಒಬ್ಬರೆ 110 ರನ್ ಗಳಿಸಿ ದಾಖಲೆಯ ಶತಕ ಬಾರಿಸಿದರು. ಗುರಿ ಬೆನ್ನತ್ತಿದ ನ್ಯೂಜಿಲೆಂಡ್ 15.1 ಓವರ್‌ಗಳಲ್ಲಿ 176 ರನ್ ಗಳಿಸಿತು. ಕಿವೀಸ್ ಪರ ರವೀಂದ್ರ, 59★, ಫಿಲಿಪ್ಸ್ 76★ ರನ್ ಬಾರಿಸಿದರು.

ಗುಂಪು ಹಂತಲ್ಲೇ ಹೊರಬಿದ್ದ ಆಸೀಸ್: ಆಸ್ಟ್ರೇಲಿಯಾ 17 ವರ್ಷಗಳ ನಂತರ ಟೂರ್ನಿಯ ಗುಂಪು ಹಂತದಿಂದಲೇ ಹೊರಬಿದ್ದಿದೆ. ಇದಕ್ಕೂ ಮೊದಲು, 2009ರ ಟಿ20 ವಿಶ್ವಕಪ್‌ನ ಗುಂಪು ಹಂತದಿಂದ ಮನೆಗೆ ಹೋಗಿತ್ತು. 2021ರ ಟಿ20 ವಿಶ್ವಕಪ್ ವಿಜೇತ ಆಸ್ಟ್ರೇಲಿಯಾ, ಮುಂದಿನ ಹಂತಕ್ಕೆ ಮುನ್ನಡೆಯುವ ಭರವಸೆಯನ್ನು ಐರ್ಲೆಂಡ್ ವಿರುದ್ಧದ ಗೆಲುವಿನ ಮೇಲೆ ಅವಲಂಬಿಸಿತ್ತು. ಅಲ್ಲದೆ, ಜಿಂಬಾಬ್ವೆ ಎರಡೂ ಪಂದ್ಯಗಳನ್ನು ಸೋಲಬೇಕಿತ್ತು. ಆದರೆ ಅದೃಷ್ಟ ಅವರನ್ನು ಸಂಕಷ್ಟಕ್ಕೆ ಕೆಡವಿದ್ದ ಜಿಂಬಾಬ್ವೆ ಕಡೆ ಇತ್ತು. ಐರ್ಲೆಂಡ್ ಜತೆಗಿನ ಪಂದ್ಯ ರದ್ದಾಗಿದೆ. ಆಸೀಸ್ ಹೊರಬಿದ್ದಿದೆ.



ನೇಪಾಳ ಜಯಭೇರಿ

ಸ್ಕಾಟ್ಲೆಂಡ್ ಬಾಯಿಯಿಂದ ಪಂದ್ಯ ಕಸಿದುಕೊಂಡ ನೇಪಾಳ ತಂಡದ ದಿಪೇಂದ್ರ ಸಿಂಗ್ ತಮ್ಮ ತಂಡಕ್ಕೆ ಈ ಬಾರಿಯ ವಿಶ್ವಕಪ್‌ನಲ್ಲಿ ಮೊದಲ ಗೆಲುವು ತಂದುಕೊಟ್ಟರು. ಸ್ಕಾಟ್ಲೆಂಡ್ ನೀಡಿದ್ದ 171 ರನ್ ಗುರಿ ಪೇರಿಸುವಾಗ ಕೊನೆಯ 40 ಬಾಲ್‌ಗಳಲ್ಲಿ 73 ರನ್ ಬಾರಿಸಬೇಕಿದ್ದ ನೇಪಾಳ 7 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿದೆ. ಇದರೊಂದಿಗೆ ಬಾಂಗ್ಲಾದೇಶದ ಬದಲಿ ತಂಡವಾಗಿ ಆಯ್ಕೆಯಾಗಿದ್ದ ಸ್ಕಾಟ್ಲೆಂಡ್ ಸೋಲಿನೊಂದಿಗೆ ಹೊರ ನಡೆದಿದೆ. ದಿಪೇಂದ್ರ ಸಿಂಗ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ 23 ಬಾಲ್‌ಗಳಲ್ಲಿ ಅಜೇಯ 50 ರನ್ ಬಾರಿಸಿ ಗೆಲುವಿನ ರೂವಾರಿ ಎನಿಸಿದರು.

ಕಿರುಸುದ್ದಿ

ಕೋಚ್ ಹುದ್ದೆಗೆ ಶ್ರೀಜೇಶ್ ಮರು ಅರ್ಜಿ

ಹೊಸದಿಲ್ಲಿ: ಹಾಕಿ ಅಂಗಳದಲ್ಲಿ ತಡೆಗೋಡೆಯಂತೆ ಭಾರತದ ಗೋಲು ಪೆಟ್ಟಿಗೆ ಕಾಯ್ದು ಒಲಿಂಪಿಕ್ಸ್ ಪದಕ ಸೇರಿದಂತೆ ವಿವಿಧ ಟೂರ್ನಿಗಳಲ್ಲಿ ಭಾರತ ತಂಡವನ್ನು ಗೆಲ್ಲುವಂತೆ ಮಾಡಿರುವ ದಿಗ್ಗಜ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರು ತಮ್ಮ ಜೂನಿಯರ್ ತಂಡದ ಪ್ರಧಾನ ಕೋಚ್ ಹುದ್ದೆಗೆ ಮರು ಅರ್ಜಿ ಸಲ್ಲಿಸಿದ್ದಾರೆ. ಗರಿಷ್ಠ ಕ್ರೀಡಾಕೂಟ ಎನಿಸುವ ಒಲಿಂಪಿಕ್ಸ್‌ನಲ್ಲಿ 2 ಬಾರಿ ಪದಕಕ್ಕೆ ಕೊರಳೊಡ್ಡಿರುವ ಶ್ರೀಜೇಶ್ ಗೆಲುವಿನ ರೂವಾರಿಯೂ, ಭಾರತದ ಪ್ರಮುಖ ಆಟಗಾರರೂ ಆಗಿದ್ದರು. ಹಾಕಿ ಕ್ಷೇತ್ರದಲ್ಲಿ ವಿಶೇಷ ಇತಿಹಾಸ ಹೊಂದಿರುವ ಅವರು, ತಮ್ಮ ಲೆಗೆಸಿಯನ್ನು ಕೋಚ್ ಆಗಿ ಮುಂದುವರಿಸುವುದಕ್ಕೆ ನಿವೃತ್ತಿಯಾದ ನಂತರದ ದಿನವೇ ಯೋಚಿಸಿದ್ದ ಅವರು, ಈಗಾಗಲೇ ಒಂದು ಅವಧಿ ಮಟ್ಟಕ್ಕೆ ಕೋಚ್ ಆಗಿ ಜೂನಿಯರ್ ತಂಡಕ್ಕೆ ಗೆಲುವಿನ ಮಾರ್ಗ ತೋರಿಸಿದ್ದಾರೆ. ಚೆನ್ನೈನಲ್ಲಿ ನಡೆದಿದ್ದ ಜೂನಿಯರ್ ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ 9 ವರ್ಷಗಳ ನಂತರ ಮೊದಲ ಸ್ಥಾನ ಗೆದ್ದುಕೊಂಡಿತ್ತು. ಹೇಗೆ ಗೋಲ್‌ಕೀಪರ್ ಆಗಿ ಗೆಲುವಿನ ಮಾರ್ಗ ತೋರಿಸುತ್ತಿದ್ದರೋ ಹಾಗೆ ಇಲ್ಲಿಯೂ ಕೂಡ ಕೋಚ ಆಗಿ ಗೆಲುವಿನಲ್ಲಿ ಮಿಂಚಿದ್ದರು ಶ್ರೀಜೇಶ್. ಮೂರು ವರ್ಷದ ಕೋಚ್ ಅವಧಿಯಲ್ಲಿ ಸಾಧನೆಗಳ ಸಾಲನ್ನು ಹೊಂದಿರುವ ಶ್ರೀಜೇಶ್, 6 ಮಂದಿಯೊಂದಿಗೆ ಸ್ಪರ್ಧಿಸಲಿದ್ದಾರೆ. ಈ ಆರು ಜನರಲ್ಲಿ ಒಬ್ಬರನ್ನು ಆಯ್ಕೆ ಮಾಡಲಾಗುತ್ತದೆ.

ರುತುಜಾ-ಪ್ಲಿಪುಯೆಚ್ ಜೋಡಿ ಶುಭಾರಂಭ

ದುಬೈ: ಭಾರತದ ನಂ.1 ಆಟಗಾರ್ತಿ ರುತುಜಾ ಭೋಸಲೆ-ಪ್ಲಿಪುಯೆಚ್ ದುಬೈ ಚಾಂಪಿಯನ್‌ಶಿಪ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಗೆಲುವಿನೊಂದಿಗೆ ತಮ್ಮ ಅಭಿಯಾನ ಆರಂಭಿಸಿದರು. ಡಬ್ಲ್ಯುಟಿಎ 1000 ಮಟ್ಟದ ಟೂರ್ನಿಯಲ್ಲಿ ಮೊದಲ ಬಾರಿ ಕಣಕ್ಕಿಳಿದ ಭೋಸಲೆ, ಥೈಲ್ಯಾಂಡ್‌ನ ಪಿಯಾಂಗ್‌ಟಾರ್ನ್ ಪ್ಲಿಪುಯೆಚ್ ಜೊತೆಗೆ ಜಪಾನ್‌ನ ಎರಿ ಹೋಜುಮಿ ಮತ್ತು ಚೈನೀಸ್ ತೈಪೆಯ ಫಾಂಗ್-ಶಿಯನ್ ವು ಜೋಡಿಯನ್ನು 7-5, 6-2 ಅಂತರದಿಂದ ಸೋಲಿಸಿದರು. ಮೊದಲ ಸೆಟ್‌ನಲ್ಲಿ ಸಮಬಲದ ಹೋರಾಟ ಕಂಡುಬಂದರೂ, ನಿರ್ಣಾಯಕ ಕ್ಷಣಗಳಲ್ಲಿ ಭೋಸಲೆ-ಪ್ಲಿಪುಯೆಚ್ ಜೋಡಿ ಮುನ್ನಡೆ ಸಾಧಿಸಿ 7-5ರಿಂದ ಸೆಟ್ ತಮ್ಮದಾಗಿಸಿಕೊಂಡಿತು. ಎರಡನೇ ಸೆಟ್‌ನಲ್ಲಿ ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಜೋಡಿ ಎದುರಾಳಿಗಳಿಗೆ ಅವಕಾಶ ನೀಡದೇ 6-2ರಿಂದ ಸುಲಭ ಜಯ ಸಾಧಿಸಿತು. ಮುಂದಿನ ಸುತ್ತಿನಲ್ಲಿ ಡಾನಿಲಿನಾ-ಅಲೆಕ್ಸಾಂಡ್ರಾ ಜೋಡಿಯನ್ನು ಎದುರಿಸಲಿದ್ದಾರೆ.

ಸ್ಲಾಲೋಮ್‌ನಲ್ಲಿ ಆರೀಫ್ ದಾಖಲೆ

ಹೊಸದಲ್ಲಿ: ಕೆಲವೇ ಜನರು ಮಾಡಬಲ್ಲ ಸಾಧನೆಯೊಂದನ್ನು ಮಾಡಿರುವ ಭಾರತದ ಅಗ್ರ ಆಲ್ಪೈನ್ ಸ್ಕೀಯರ್ ಆರೀಫ್ ಮೊಹಮ್ಮದ್ ಖಾನ್ ಅವರು ಇಟಲಿಯಲ್ಲಿ ನಡೆಯುತ್ತಿರುವ ವಿಂಟರ್ ಗೇಮ್ಸ್ ಕ್ರೀಡಾಕೂಟದಲ್ಲಿ ಪುರುಷರ ಸ್ಲಾಲೋಮ್ ಸ್ಪರ್ಧೆಯಲ್ಲಿ 39ನೇ ಸ್ಥಾನ ಪಡೆದು ಇತಿಹಾಸ ನಿರ್ಮಿಸಿದ್ದಾರೆ.

ಓಟ ಶುರುವಾಗುವಾಗ ನೂರಾರು ಪಟುಗಳಿರುತ್ತಾರೆ. ಗುರಿ ಮುಟ್ಟುವುದು ಆಯ್ದ ಪಟುಗಳು ಮಾತ್ರ. ಗೆಲುವಿಗಾಗಿ ಮೂರು ಸ್ಥಾನ ಪಡೆಯಬೇಕಾದದ್ದು ಸತ್ಯ ಆದರೆ ಆ ಮಹಾ ಚಳಿಯಲ್ಲಿ ಓಟ ಮುಗಿಸುವುದೇ ದೊಡ್ಡ ಗೆಲುವು. ಅಂತಹ ವಿಶೇಷ ಕ್ರೀಡೆಯಾಗಿದ ಸ್ಲಾಲಂ ಓಟ.

ವಿಶೇಷ ಸಾಧನೆ ಮಾಡಿದ ಖಾನ್: ಸೋಮವಾರ ನಡೆದ ಸ್ಪರ್ಧೆಯ ಎರಡನೇ ಸುತ್ತಿನ ಓಟದಲ್ಲಿ ಖಾನ್ 1:19.48 ಕ್ರಮಿಸಿದರು. ಇದಕ್ಕೂ ಮುನ್ನ ಸ್ಟೆಲ್ವಿಯೋ ಸ್ಕೀ ಸೆಂಟರ್‌ನಲ್ಲಿ ನಡೆದ ಮೊದಲ ಸುತ್ತಿನ ರನ್‌ನಲ್ಲಿ ಖಾನ್ 1:22.12 ಸಮಯದೊಂದಿಗೆ 96 ಸ್ಪರ್ಧಿಗಳಲ್ಲಿ 44ನೇ ಸ್ಥಾನ ಪಡೆದಿದ್ದರು. ಒಟ್ಟು ಸಮಯದಲ್ಲಿ 2 ಗಂಟೆ 41ನಿಮಿಷ ಮತ್ತು 60 ಸೆಕೆಂಡುಗಳಲ್ಲಿ ಗುರಿ ಕ್ರಮಿಸಿರುವ ಅವರು, ಎರಡೂ ರನ್‌ಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಅಪರೂಪ ಸಾಧನೆ ಮಾಡಿಬಿಟ್ಟರು ಆರೀಫ್. ಓಟದ ಸ್ಪರ್ಧಿಗಳ ಪೈಕಿ ಕೊನೆಯ ಸ್ಥಾನದಲ್ಲಿದ್ದರೂ, ಇದು ಚಳಿಗಾಲಿನ ಒಲಿಂಪಿಕ್ಸ್‌ನಲ್ಲಿ ಭಾರತೀಯ ಪುರುಷರ ಸ್ಲಾಲೋಮ್ ವಿಭಾಗದ ಅತ್ಯುತ್ತಮ ಸಾಧನೆ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಆರೀಫ್ ಖಾನ್ ದಾಖಲೆ: ಎರಡನೇ ರನ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ 1:19.48 ಸಮಯದಲ್ಲಿ 39ನೇ ಸ್ಥಾನಕ್ಕೆ



ಏರಿದರು. ಎರಡೂ ರನ್‌ಗಳ ಒಟ್ಟು ಸಮಯ 2:41.60 ಆಗಿದೆ. ಈ ಹಿಂದೆ 1988ರ ಕ್ಯಾಲ್ಗರಿ ಶೀತಕಾಲಿನ ಒಲಿಂಪಿಕ್ಸ್‌ನಲ್ಲಿ ಕಿಶೋರ್ ರತ್ನ ರೈ 2:52.21 ಸಮಯದೊಂದಿಗೆ 49ನೇ ಸ್ಥಾನ ಪಡೆದಿದ್ದು, ಅದುವರೆಗೂ ಭಾರತೀಯ ಪುರುಷರ ಅತ್ಯುತ್ತಮ ಸಾಧನೆಯಾಗಿತ್ತು. ಮಹಿಳಾ ವಿಭಾಗದಲ್ಲಿ ಶೈಲಜಾ ಕುಮಾರ್ 1988ರ ಕ್ಯಾಲ್ಗರಿಯಲ್ಲಿ 28ನೇ ಸ್ಥಾನ ಪಡೆದಿದ್ದು ಭಾರತದ ಅತ್ಯುತ್ತಮ ಸ್ಲಾಲೋಮ್ ಫಲಿತಾಂಶವಾಗಿದೆ. ಸ್ಪರ್ಧೆಯಲ್ಲಿ ಸ್ವಿಟ್ಜರ್‌ಲ್ಯಾಂಡ್‌ನ ಲೋಕ್ ಮಿಲ್ಲಾರ್ಡ್ 1:53.61 ಸಮಯದೊಂದಿಗೆ ಚಿನ್ನ ಗೆದ್ದರು. ಆಸ್ಟ್ರಿಯಾದ ಫ್ಯಾಬಿಯೋ ಸ್ಟ್ರೈನ್ ಬೆಳ್ಳಿ, ನಾರ್ವೆಯ ಹೆನ್ರಿಕ್ ಕ್ರಿಸ್ಟೋಫರ್‌ಸೆನ್ ಕಂಚು ಪಡೆದರು. ಸ್ಲಾಲಂ ಆಲ್ಪೈನ್ ಸ್ಕೀಯಿಂಗ್‌ನ ವೇಗ ಮತ್ತು ತಾಂತ್ರಿಕತೆಯ ಸಂಯೋಜನೆಯ ಸ್ಪರ್ಧೆಯಾಗಿದ್ದು, ಎರಡು ರನ್‌ಗಳ ಒಟ್ಟು ಸಮಯವೇ ಅಂತಿಮ ಫಲಿತಾಂಶ ನಿರ್ಧರಿಸುತ್ತದೆ. ಕಡಿಮೆ ಸಮಯ ದಾಖಲಿಸಿದವರೇ ವಿಜೇತರಾಗುತ್ತಾರೆ.

ಟೆನಿಸ್: ಸಹಜಾ ಮುನ್ನಡೆ

ಬೆಂಗಳೂರು: ಕೆಪಿಬಿ ಟ್ರಸ್ಟ್ ಐಟಿಎಫ್ ವುಮೆನ್ಸ್ ಓಪನ್ ಡಬ್ಲ್ಯು100 ಬೆಂಗಳೂರು 2026 ಟೂರ್ನಿಯಲ್ಲಿ ಭಾರತದ ಸಹಜಾ ಯಮಲಪಲ್ಲಿ ಮೂರನೇ ಸೆಟ್‌ನಲ್ಲಿ ದಿಟ್ಟ ಹೋರಾಟದೊಂದಿಗೆ ಸಿಂಗಲ್ಸ್ 16 ರ ಸುತ್ತಿಗೇರಿದರು.

ಕೊರಿಯಾದ ದಯೆಯೋನ್ ಬ್ಯಾಕ್ ವಿರುದ್ಧ ಮೊದಲ ಸೆಟ್‌ನಲ್ಲಿ ಆತ್ಮವಿಶ್ವಾಸದಿಂದ ಆಟ ಆರಂಭಿಸಿದ ಸಹಜಾ, ಬಲಿಷ್ಠ ಬೇಸ್‌ಲೈನ್ ಶಾಟ್‌ಗಳು ಮತ್ತು ನೆಟ್ ಬಳಿಯ ಚುರುಕು ಚಲನೆಯಿಂದ ಪಂದ್ಯವನ್ನು ನಿಯಂತ್ರಿಸಿದರು. ಮೊದಲ ಸೆಟ್ ಅನ್ನು 6-2ರಿಂದ ಸುಲಭವಾಗಿ ಗೆದ್ದರು. ಆದರೆ ಎರಡನೇ ಸೆಟ್‌ನಲ್ಲಿ ಅನಾವಶ್ಯಕ ದೋಷಗಳು ಹೆಚ್ಚಾಗಿ, ಲಯ ತಪ್ಪಿದ ಸಹಜಾ 1-6ರಿಂದ ಸೆಟ್ ಕಳೆದುಕೊಂಡರು. ತೀರ್ಮಾನಾತ್ಮಕ ಮೂರನೇ ಸೆಟ್‌ನಲ್ಲಿ 2-2 ಸಮಬಲದ ನಂತರ ಗೇಮ್‌ಗಳ ಸರಣಿಯನ್ನು ಗೆದ್ದು 6-2, 1-6, 6-2 ಅಂತರದಿಂದ ಜಯ ಸಾಧಿಸಿ ಮುಂದಿನ ಸುತ್ತಿಗೆ ಮುನ್ನಡೆದರು.

ಡಬಲ್ಸ್ ವಿಭಾಗದಲ್ಲಿ ಮೂರನೇ ಸೀಡ್ ಅಂಕಿತಾ ರೈನಾ ಮತ್ತು ಇಂಡೋನೇಷ್ಯಾದ ಪ್ರಿಸ್ಕಾ ಮಡೇಲಿನ್ ನುಗ್ರೊಹೋ ಜೋಡಿ 6-4, 6-1 ಅಂತರದಿಂದ ಪೌಲ್ಯಾಂಡ್‌ನ ಜುಜಾನಾ ಪಾವ್ಲಿಕೋವ್ ಹಾಗೂ ಭಾರತದ ವಸಂತಿ ಶಿಂಡೆ ವಿರುದ್ಧ ಭರ್ಜರಿ ಜಯ ದಾಖಲಿಸಿತು. ಮೊದಲ ಸೆಟ್‌ನಲ್ಲಿ 5-4 ಮುನ್ನಡೆಯಲ್ಲಿದ್ದಾಗ ರೈನಾ ತೀವ್ರ ರಿಟರ್ನ್‌ಗಳ ಮೂಲಕ ಸರ್ವ್ ಬ್ರೇಕ್ ಮಾಡಿ ಸೆಟ್ ತಮ್ಮದಾಗಿಸಿಕೊಂಡರು. ಎರಡನೇ ಸೆಟ್‌ನಲ್ಲಿ ಆರಂಭದಲ್ಲೇ ಬ್ರೇಕ್ ಸಾಧಿಸಿದ ಜೋಡಿ



ಆತ್ಮವಿಶ್ವಾಸದಿಂದ ಆಟ ಮುಂದುವರಿಸಿ ಸುಲಭ ಜಯ ಸಾಧಿಸಿತು.

ಇತರೆ ಸಿಂಗಲ್ಸ್ ಪಂದ್ಯಗಳಲ್ಲಿ ವೈಷ್ಣವಿ ಅಡ್ಕರ್ 6-1, 7-6 ಅಂತರದಿಂದ ಶ್ರುತಿ ಅಹ್ಲಾವತ್ ಅವರನ್ನು ಸೋಲಿಸಿದರು. ಎಂಟನೇ ಸೀಡ್ ಮೈ ಹೋಂಟಾಮಾ 6-2, 6-1ರಿಂದ ಡಿಲೆಟ್ಟಾ ಚೆರುಬಿನಿ ವಿರುದ್ಧ ಜಯ ಸಾಧಿಸಿದರು. ಎರಿಕಾ ಆಂಡ್ರೀವಾ 7-6(12), 1-0 ಮುನ್ನಡೆಯಲ್ಲಿದ್ದಾಗ ನಿಕೋಲ್ ಫೊಸ್ಸಾ ಹುವೆರ್ಗೋ ನಿವೃತ್ತಿಯಾಗಿದ್ದರಿಂದ ಮುಂದಿನ ಸುತ್ತಿಗೆ ಪ್ರವೇಶಿಸಿದರು.

ರಣಜಿ: ಕರ್ನಾಟಕ ಬೃಹತ್ ಮುನ್ನಡೆ

ಲಖನೌ: ಪೇರಿಸಲಾದ ಮೊತ್ತವನ್ನು ದಾಖಲಿಸಿದ ನಂತರ ಫೈನಲ್‌ನತ್ತ ನಡೆದು ಹೋಗುತ್ತಿರುವ ಕರ್ನಾಟಕ ತಂಡವು ಮೂರನೇ ದಿನವೂ ಉತ್ತರಾಖಂಡ ತಂಡವನ್ನು ಪರೀಕ್ಷಿಸಿತು.

ಎರಡು ದಿನಕ್ಕೂ ಹೆಚ್ಚು ಬರೀ ಫೀಲ್ಡಿಂಗ್ ಮಾಡಿ ಸುಸ್ತಾಗಿರುವ ಉತ್ತರಾಖಂಡ ತಂಡದ ಆಟಗಾರರು ಬ್ಯಾಟಿಂಗ್‌ನಲ್ಲಿ ರನ್ ಗಳಿಸಲು ಪರದಾಟ ನಡೆಸಿದಂತೆ ಭಾಸವಾಗಿತ್ತು. ಬರೋಬ್ಬರಿ 736 ರನ್ ಗಳಿಸಿ ಮೈದಾನದಲ್ಲಿ ಮೆರೆದಿರುವ ಪಡಿಕ್ಕಲ್ ಪಡೆ ಎದುರಾಳಿಗಳು 149 ರನ್ ಗಳಿಸುವಷ್ಟರಲ್ಲಿ 5 ವಿಕೆಟ್ ಪಡೆದು ದೊಡ್ಡ ಮುನ್ನಡೆ ಸಾಧಿಸುವತ್ತ ಹೊರಟಿದೆ. ಮೊದಲ ಇನ್ನಿಂಗ್ಸ್ ಮುನ್ನಡೆಗಾಗಿ ಕರ್ನಾಟಕ ಐದು ವಿಕೆಟ್ ಪಡೆಯಬೇಕಿದೆ. 587 ರನ್‌ಗಳ ದೊಡ್ಡ ಮುನ್ನಡೆ ಸಾಧಿಸಿದೆ.

ಉತ್ತರಾಖಂಡ್ ಬಳಿ ಉತ್ತರವಿಲ್ಲ: ಪಡಿಕ್ಕಲ್ ದ್ವಿಶತಕ, ರಾಹುಲ್ ಮತ್ತು ಸ್ಮರಣ್ ರವಿಚಂದ್ರನ್ ಅವರ ಶತಕದ ನೆರವಿನಿಂದ 194.4 ಓವರ್‌ಗಳವರೆಗೆ ಬ್ಯಾಟಿಂಗ್ ಮಾಡಿರುವ ಕರ್ನಾಟಕ




ತಂಡವು 736 ಗಳಿಸಿತು. ಅಬ್ಬಾ! ಕೊನೆಗೂ ಪತನಗೊಂಡಿತು. ಈಗ ಬ್ಯಾಟಿಂಗ್ ಮಾಡಬಹುದೆಂಬ ಆಲೋಚನೆಯೊಂದಿಗೆ ಬಂದ ಉತ್ತರಾಖಂಡಕ್ಕೆ ಆರಂಭದಲ್ಲೇ ಆಘಾತ ಎದುರಾಯಿತು. ಭರವಸೆಯ ಬ್ಯಾಟಿಗರೆಲ್ಲರೂ ಕೈಕೊಟ್ಟರು. ಮಧ್ಯಮ ಕ್ರಮಾಂಕದಲ್ಲಿ ರಾಜೇಶ್ 52 ರನ್ ಗಳಿಸಿದ್ದು 150ರ ಆಸುಪಾಸಿನ ಸ್ಕೋರ್‌ನತ್ತ ಸಾಗಿದೆ ಉತ್ತರಾಖಂಡ. ಕರ್ನಾಟಕ ಪರ ವಿದ್ಯಾಧರ ಪಾಟೀಲ್ 2 ವಿಕೆಟ್, ಕೃಷ್ಣ, ವೈಶಾಖ್, ಗೋಪಾಲ್ ತಲಾ ಒಂದು ವಿಕೆಟ್ ಪಡೆದುಕೊಂಡರು.

ಗೆಲುವಿನ ಹಾದಿಯಲ್ಲಿ ಜಮ್ಮು-ಕಾಶ್ಮೀರ: ಶಮಿ ಅವರ ಕರಾರುವಾಕ್ ಬೌಲಿಂಗ್ ದಾಳಿಯ ನೆರವಿನಿಂದ ಮೊದಲ ಇನ್ನಿಂಗ್ಸ್‌ನಲ್ಲಿ ಬಂಗಾಳ ತಂಡ ಮುನ್ನಡೆ ಸಾಧಿಸಿದ್ದರೂ ಬ್ಯಾಟಿಂಗ್‌ನಲ್ಲಿ ಭಾರೀ ಹಿನ್ನಡೆಯೊಂದಿಗೆ ತತ್ತರಿಸಿದ್ದು, ಜಮ್ಮು-ಕಾಶ್ಮೀರ ಗೆಲುವಿನತ್ತ ಸಾಗಿದೆ. ಎರಡನೇ ಇನ್ನಿಂಗ್ಸ್‌ನಲ್ಲಿ 99ಕ್ಕೆ ಬಂಗಾಳ ತಂಡವನ್ನು ಆಲೌಟ್ ಮಾಡಿರುವ ಕಾಶ್ಮೀರ, 126 ರನ್ ಗುರಿ ಬೆನ್ನತ್ತುತ್ತಿದೆ. ಈಗಾಗಲೇ 43 ರನ್ ಗಳಿಸಿದೆ. ಇನ್ನೂ 83 ರನ್ ಮಾತ್ರ ಗಳಿಸಬೇಕಿದೆ. ಬಂಗಾಳ 9 ವಿಕೆಟ್ ಕಿತ್ತಬೇಕಿದೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5899

ಎಡದಿಂದ ಬಲಕ್ಕೆ
2.ಸೂಕ್ಷ್ಮವಾಗಿ ಅವಲೋಕಿಸುವ ವಿವೇಕಶಾಲಿ (5)
4.ಇದು ಶಬ್ದ ಜೋಡಣೆಯ ಆಟ (4)
6.ನಮಸ್ಕರಿಸಲು ಯೋಗ್ಯನಾದವನು (2)
7.ಔಷಧ ಸೇವಿಸುವ ಕ್ರಮವಿದು (4)
8.ಮೂವತ್ತು ದಿನಗಳ ಒಂದು ಘಟಕ (2)
11.ಸಂಕಟದಿಂದ ಈ ಸೇತುವೆಯನ್ನು ಉಲ್ಟಾ ದಾಟುತ್ತಿದ್ದೇವೆ (2)
13.ಗ್ರಂಥಗಳಲ್ಲಿನ ಅಶುದ್ಧ ಬರವಣಿಗೆ (4)
14.ಮುಂದಿಗೆ ಕಂಡ ಚುರುಕಾಗಿಲ್ಲದುದು (2)
15. ಸರಕಾರ ತೋರುತ್ತಿರುವ ಸಹಾಯ (4)
17. ಕಲ-ನಾಕ ಒಳಗೊಂಡ ಸುವರ್ಣಗಿರಿ (5)

ಮೇಲಿನಿಂದ ಕೆಳಕ್ಕೆ
1.ಚೆಲುವು-ಸೊಬಗಿನಿಂದ ಕೂಡಿದ್ದು (2)
2.ಒಂದು ನಿರ್ದಿಷ್ಟ ರೀತಿಯ ವಸ್ತು-ಕೃತ್ಯ (2)
3.ಗೌರವಾನ್ವಿತ ವ್ಯಕ್ತಿ ತಲೆಕೆಳಗಾಗಿದ್ದಾನೆ (4)
4.ಪರ್ಯಟನ ಮಾಡುವ ಸನ್ಯಾಸಿ (5)
5.ದಂಗೆ ಏಳುವ ಸ್ವಭಾವದವನು (4)
9. ಸರದ ನಡುವೆ ಅಡಗಿದ ಯುದ್ಧಭೂಮಿ (5)
10.ಇದು ಬಳ್ಳಿಗಳಿಂದಾದ ಮಂಟಪ (4)
12.ಪತ್ರಿಕೆಯ ಮುಖ್ಯ ಸುದ್ದಿಪರಿಷ್ಕಾರಕ (4)
15.ಎಷ್ಟನೇ ಪಾಳಿ (2)
16.ದುರ್ಗೆ-ಪಾರ್ವತಿಯ ಹೆಸರು (2)

5898 ಉತ್ತರ

ಎಡದಿಂದ ಬಲಕ್ಕೆ:
2.ಸರಸಿಜ 5.ಚಕಾರ
6.ಲಗೋರಿ 7.ಪಡಿಕಟ್ಟು
9.ಕಟ್ಟು 11.ಶುಭ
12.ಸಹಜಾತ 16.ರುದಿತ
17.ಕೋಕಿಲ 18.ಗಿರಿಸುತೆ

ಮೇಲಿನಿಂದ ಕೆಳಕ್ಕೆ :
1.ಸುಚರಿತ 2.ಸರ 3.ಸಿಗಡಿ
4.ಬಾಲಬಿಚ್ಚು 8.ಶುನಕ
10.ಕಲಹ 12.ಭರತಜ್ಞ
13.ಬಾರುಕೋಲು
15.ಜಾಲರಿ 17.ಲತೆ

ಫ್ರಾಂಚೈಸಿ ಮಾದರಿಯ ಕೂಟದ ಬಿಡ್ಡಿಂಗ್ ಸಂಪನ್ನ | ಕೃಥಾರ್ಥ್ ದುಬಾರಿ ಶೂಟರ್
ಕರ್ನಾಟಕ ಶೂಟಿಂಗ್ ಲೀಗ್‌ಗೆ ಕಣ ಸಿದ್ಧ

ಬೆಂಗಳೂರು: ಗುರಿ ಬೇಧಿಸಲೆಂದು ಗನ್ನಿನ ಟ್ರಿಗರ್ ಹಿಡಿದು ಅವಕಾಶಕ್ಕಾಗಿ ಕಾದು ಕೂತಿರುವ ರಾಜ್ಯದ ವೃತ್ತಿಪರ ಶೂಟರ್‌ಗಳಿಗೆ ಕರ್ನಾಟಕ ಶೂಟಿಂಗ್ ಸಂಸ್ಥೆಯು ಸಾಧನೆಗೆ ಅಡಿಪಾಯ ಹಾಕಿಕೊಳ್ಳುವಂತಹ ಕೂಟವೊಂದನ್ನು ನಡೆಸಲು ಸಜ್ಜಾಗಿದೆ.



ಕೃಥಾರ್ಥ ದೇವಾಂಗ್ ಸವ್ಯಸಾಚಿ

ಶೂಟಿಂಗ್ ಪ್ರಿಯರನ್ನು ರಂಜಿಸುವುದಕ್ಕೆ ಮತ್ತು ಶೂಟರ್‌ಗಳಿಗೊಂದು ಮಹತ್ವದ ಅವಕಾಶ ಕಲ್ಪಿಸುವಂತೆ ಶೂಟಿಂಗ್ ಲೀಗ್ ಆಫ್ ಕರ್ನಾಟಕ ಹೆಸರನಲ್ಲಿ ಫ್ರಾಂಚೈಸಿ ಮಾದರಿಯ ಕೂಟವೊಂದನ್ನು ಆಯೋಜಿಸಲಿದೆ.

ಫೆಬ್ರವರಿ ತಿಂಗಳ ಕೊನೆಯ ದಿನ ಮತ್ತು ಮಾರ್ಚ್ ತಿಂಗಳ ಮೊದಲನೇ ದಿನ ಈ ಕೂಟ ನಡೆಯಲಿದ್ದು, ಮಂಗಳವಾರದಂದು ನಗರದ ಖಾಸಗಿ ಹೋಟೆಲ್ ಒಂದರಲ್ಲಿ ಎಂಟು ತಂಡಗಳ ಮಧ್ಯೆ ಹರಾಜು ಪ್ರಕ್ರಿಯೆ ನಡೆಯಿತು. ತುಂಬ ವಿಸ್ತಾರವಾಗಿ ನಡೆದ ಈ ಹರಾಜಿನಲ್ಲಿ 8 ಫ್ರಾಂಚೈಸಿಗಳು ತಲಾ 11ರಂತೆ ಒಟ್ಟು 88 ಶೂಟರ್‌ಗಳನ್ನು ಖರೀದಿಸಿ ಸಮರಕ್ಕೆ ಸಜ್ಜಾದವು. ಕನ್ನಡ ನಾಡಿನ ಚಿರಪರಿಚಿತ ಶೂಟರ್‌ಗಳಲ್ಲಿ ಒಬ್ಬರಾದ ಕೃಥಾರ್ಥ ದೇವಾಂಗ್ ಸವ್ಯಾಸಾಚಿ, ಫ್ರಾಂಚೈಸಿಗಳ ನಡುವೆ ತೀವ್ರ ಪೈಪೋಟಿ ಹುಟ್ಟಿಸಿ 44 ಲಕ್ಷ ರೂ.ಗೆ ಬಿಕರಿಯಾಗಿ ದುಬಾರಿ ಶೂಟರ್ ಎನಿಸಿಕೊಂಡರು. ಅನುಷ್ಕಾ ತೋಕುರ್, ಮಮಿತ್ ಗೌಡ್ ಕೂಡ ಬಿಡ್ಡಿಂಗ್‌ನಲ್ಲಿ ಆಕರ್ಷಣೆಯ ಕೇಂದ್ರ ಬಿಂದುವಾಗಿದ್ದರು.





ಏನಿದು ಲೀಗ್?: ಶೂಟಿಂಗ್ ಲೀಗ್ ಆಫ್ ಕರ್ನಾಟಕ ಒಂದು ಫ್ರಾಂಚೈಸಿ ಮಾದರಿಯ ಶೂಟಿಂಗ್ ಕೂಟ. ಬೆಂಗಳೂರು, ಹುಬ್ಬಳ್ಳಿ, ಮಂಗಳೂರು ಸೇರಿದಂತೆ ಒಟ್ಟು 8 ಫ್ರಾಂಚೈಸಿಗಳ ನಡುವೆ ನಡೆಯುವ ಆಟ. ಒಂದು ತಂಡದಲ್ಲಿ 11 ಶೂಟರ್‌ಗಳು. ಕೂಟದಲ್ಲಿ ಒಟ್ಟು 11 ಇವೆಂಟ್‌ಗಳು. ಸದ್ಯಕ್ಕೆ 4ಲಕ್ಷ ಬಹುಮಾನ. ಶೂಟರ್‌ಗಳ ವೈಯಕ್ತಿಕ ಗೆಲುವುಗಳಿಗೆ ಪದಕ ಸಮೇತ ಬಹುಮಾನವೂ ಸಿಗಲಿದೆ.

ವಿಜೇತರು ಯಾರು?: ಹನ್ನೊಂದಕ್ಕೆ ಹನ್ನೊಂದೂ ಸಿಂಗಲ್ಸ್ ಸ್ಪರ್ಧೆಯಾಗಿವೆ. ಎಲ್ಲಾ ಸ್ಪರ್ಧೆಗಳಲ್ಲಿ ಅರ್ಹತಾ ಸುತ್ತು ಮತ್ತು ಫೈನಲ್‌ಗಳು ನಡೆಯುತ್ತವೆ. 28ಕ್ಕೆ ನಡೆಯುವ ಅರ್ಹತಾ ಸುತ್ತಿನಲ್ಲಿ ತಂಡದ ಒಬ್ಬರಂತೆ ನಿರ್ದಿಷ್ಟ ವಿಭಾಗಕ್ಕೆ ಆಯ್ಕೆಯಾದವರು ಅಥವಾ ಫ್ರಾಂಚೈಸಿ ಬಯಸಿದರೆ ಬದಲಾಯಿಸಿದ ಶೂಟರ್‌ಗಳು 15 ಬಾರಿ ಶೂಟ್ ಮಾಡುತ್ತಾರೆ. ಹೆಚ್ಚು ಅಂಕ ಗಳಿಸಿದ ಶೂಟರ್‌ಗಳು ಫೈನಲ್‌ಗೆ ಮುನ್ನಡೆಯುತ್ತಾರೆ. ಅಲ್ಲಿ ಕೂಡ 15 ಶಾಟ್‌ಗಳು ಸಿಗುತ್ತವೆ. ಗೆದ್ದವರಿ ಒಂದು ಅಂಕಿ ತಮ್ಮ ತಂಡಕ್ಕೆ ನೀಡುತ್ತಾರೆ. ಹೀಗೆ 11 ಸ್ಪರ್ಧೆಗಳನ್ನು ಲೆಕ್ಕಿಸಿದಾಗ ಹೆಚ್ಚು ಅಂಕ ಬಾರಿಸಿದ ತಂಡವೇ ಲೀಗ್‌ನ ಚಾಂಪಿಯನ್.

ಟಾಪ್ 5 ದುಬಾರಿ ಶೂಟರ್‌ಗಳು

ಶೂಟರ್	ತಂಡ	ಮೊತ್ತ	ವಿಭಾಗ
ಕೃಥಾರ್ಥ ದೇವಾಂಗ್ ಸವ್ಯಸಾಚಿ	ಬೆಂಗಳೂರು ಬ್ರಿಗೇಡ್	44 ಲಕ್ಷ ರೂ.	ಸ್ಕೀಟ್
ಅನುಷ್ಕಾ ಎಚ್ ತೋಕುರ್	ಬೆಂಗಳೂರು ಬ್ರಿಗೇಡ್	43 ಲಕ್ಷ ರೂ.	50 ಮೀ. ರೈಫಲ್ ಪ್ರೋನ್
ಮಮಿತ್ ಗೌಡ	ಮಂಗಳೂರು ರಾಪ್ಟರ್ಸ್	42 ಲಕ್ಷ ರೂ.	25 ಮೀ. ಏರ್ ಪಿಸ್ತೂಲ್
ನವಾಬ್ಜಾದಾ ಎಂ.ಡಿ.	ಹುಬ್ಬಳ್ಳಿ ಸ್ಟಾರ್ಸ್	41 ಲಕ್ಷ ರೂ.	ಸ್ಕೀಟ್
ಶ್ರವಣ್ ಎಂ ಶಶಿಧರ್	ಟಾಪ್ ಗನ್ಸ್	35 ಲಕ್ಷ ರೂ.	25 ಮೀ. ಏರ್ ಪಿಸ್ತೂಲ್

ಸ್ಪರ್ಧೆಗಳ್ಯಾವವು?

- 10 ಮೀಟರ್ ಏರ್ ಪಿಸ್ತೂಲ್ (ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ)
- 10 ಮೀಟರ್ ಏರ್ ರೈಫಲ್ (ಉಭಯ ವಿಭಾಗಗಳಲ್ಲಿ)
- 25 ಮೀಟರ್ ಸ್ಪೋರ್ಟ್ಸ್ ಪಿಸ್ತೂಲ್ (ಉಭಯ ವಿಭಾಗಗಳಲ್ಲಿ)
- 50 ಮೀಟರ್ ರೈಫಲ್ ಪ್ರೋನ್ (ಒಬ್ಬರೆ)
- ಟ್ರ್ಯಾಪ್(ಕೆಟಗರಿಯಲ್ಲಿ ಒಟ್ಟು 2 ಸ್ಪರ್ಧೆ)

ಫ್ರಾಂಚೈಸಿಗಳಾವವು?

ಕ್ಯಾಲಿಬರ್ ಕ್ಯಾಪಿಟಲ್ಸ್, ಟ್ರಿಗರ್ ಟ್ಯಾಕ್ಟನ್, ಬೆಂಗಳೂರು ಬ್ರಿಗೇಡ್, ರೆಡ್‌ರಮ್, ಮಂಗಳೂರು ರಾಪ್ಟರ್ಸ್, ಟಾಪ್ ಗನ್ಸ್, ಸ್ನೈಪರ್ ಸ್ಕ್ವಾಡ್ ಹಾಗೂ ಹುಬ್ಬಳ್ಳಿ ಶೂಟಿಂಗ್ ಸ್ಟಾರ್.

ಬಿಡ್ಡಿಂಗ್ ನಡೆದಿದ್ದು ಹೇಗೆ?

ಸ್ಪರ್ಧೆಗಾಗಿ ಒಟ್ಟು 136 ಶೂಟರ್‌ಗಳು ನೋಂದಾಯಿಸಿಕೊಂಡಿದ್ದರು. ಇದರಲ್ಲಿ 88 ಶೂಟರ್‌ಗಳು ಫ್ರಾಂಚೈಸಿ ಸೇರಿಕೊಂಡರು. ಫ್ರಾಂಚೈಸಿಗಳಿಗೆ ತಮ್ಮ ತಂಡ ಕಟ್ಟಿಕೊಳ್ಳಲು 1.75 ಕೋಟಿ ರೂ. ದಾಟದಂತೆ ಮಿತಿ ನೀಡಲಾಗಿತ್ತು. ಈ ಮಿತಿ ದಾಟಿದರೆ, ಲಕ್ಷ ರೂ.ಗೊಂದು ಅಂಕ ಕಡಿತಗೊಳಿಸುವ ನಿಯಮ ಈ ಕೂಟಕ್ಕಿದೆ. ಟಾಪ್ ಗನ್ಸ್ ಎಂಬುವ ಫ್ರಾಂಚೈಸಿ ಬಿಡ್ಡಿಂಗ್‌ನಲ್ಲಿ 1.84 ಕೋಟಿ ರೂ. ಖರ್ಚು ಮಾಡಿದೆ. ಈ ತಂಡ ಈಗ 9 ಅಂಕದ ಹಿನ್ನಡೆ ಹೊಂದಿದೆ.

ಕರ್ನಾಟಕ ಸರಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹಾವೇರಿ, ಜಿಲ್ಲಾ ಸರ್ವೇಕ್ಷಣಾ / ಜಿಲ್ಲಾ ಎನ್.ಸಿ.ಡಿ. ಘಟಕ, 'ಎ' ಬ್ಲಾಕ್ 3ನೇ ಮಹಡಿ, ಕೊಠಡಿ ಸಂಖ್ಯೆ : 15, ಜಿಲ್ಲಾಡಳಿತ ಭವನ, ದೇವಗಿರಿ ಹಾವೇರಿ–581110

Email : ncdhaveri@gmail.com Ph : 08375-232210

ಸಂಖ್ಯೆ: ಡಿ.ಎಸ್.ಯು/ಸಿಪಿಹೆಚ್‌ಸಿ–ಯುಹೆಚ್‌ಸಿ/128/2025–26

ದಿನಾಂಕ : 16/02/2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಸನ್ 2025–26 ಸಾಲಿಗೆ 15ನೇ ಹಣಕಾಸು ಆಯೋಗದ ಸಿ.ಪಿ.ಹೆಚ್.ಸಿ–ಯು.ಹೆಚ್.ಸಿ ಕಾರ್ಯಕ್ರಮದಡಿಯಲ್ಲಿ ಹಾವೇರಿ ಜಿಲ್ಲೆಯ ಉಪಕೇಂದ್ರ–ಆಯುಷ್ಮಾನ್ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಲೇಖನ ಸಾಮಗ್ರಿಗಳು, ಸ್ವಚ್ಛತಾ ಸಾಮಗ್ರಿಗಳು ಮತ್ತು ವೈದ್ಯಕೀಯ ಉಪಕರಣಗಳನ್ನು 1 ವರ್ಷದ ಅವಧಿಯವರೆಗೆ ಪೂರೈಸಲು ಅರ್ಹ ಸಂಸ್ಥೆಗಳಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಎರಡು ಟೆಂಡರ್ ಡಾಕ್ಯೂಮೆಂಟ್ ಸಿಸ್ಟಂನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಉಚಿತ ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್ ಸೈಟ್ **https://kppp.karnataka.gov.in** ನಲ್ಲಿ ನೋಡಬಹುದಾಗಿದೆ. (1) ಟೆಂಡರ್ ಸಂಖ್ಯೆ **DHFWS/2025-26/IND2236** (2) ಟೆಂಡರ್ ಅಪ್‌ಲೋಡ್ ಮಾಡುವ ಪ್ರಾರಂಭ ದಿನಾಂಕ : **17/02/2026** (3) ಟೆಂಡರ್‌ನ ಅಂದಾಜು ಮೌಲ್ಯ ರೂ. **24,91,000=00** (4) ಟೆಂಡರ್ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ವೇಳೆ : **03/03/2026** ಸಂಜೆ 04:00 ಗಂಟೆಗೆ (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : **04/03/2026** ಸಂಜೆ 04:30 ಗಂಟೆಗೆ (6) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : ಸೂಚಿಸಲಾಗುವುದು. (7) ಸ್ಯಾಂಪಲ್ ನೀಡುವ ದಿನಾಂಕ : ಸೂಚಿಸಲಾಗುವುದು. (8) ಪಾವತಿಸಬೇಕಾದ ಇ.ಎಂ.ಡಿ ರೂ. **62275=00** (9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ) ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಜಿಲ್ಲಾ ಸರ್ವೇಕ್ಷಣಾ ಘಟಕ, ಜಿಲ್ಲಾಡಳಿತ ಭವನ, ದೇವಗಿರಿ ಹಾವೇರಿ ದೂರವಾಣಿ ಸಂಖ್ಯೆ: 08375–297359 (10) ವೆಬ್ ಸೈಟ್ ವಿಳಾಸ **http://kppp.karnataka.gov.in**

ವಾ.ಸಾ.ಸಂ.ಇ/ಹಾವೇರಿ/ಕೆಎಸ್‌ಎಂಸಿಎ/717/2025–26

ಸಹಿ/– ಸದಸ್ಯ ಕಾರ್ಯದರ್ಶಿ, ಟೆಂಡರ್ ಸಮಿತಿ ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳು, ಹಾವೇರಿ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಸಂಚಾರ ಶಾಖೆ, ವಿಭಾಗೀಯ ಕಛೇರಿ, ಕಲಬುರಗಿ ವಿಭಾಗ–1, ಕಲಬುರಗಿ

ರಾಷ್ಟ್ರಪತಿ ಸರ್ಕಲ್, ಎಂ.ಎಸ್.ಕೆ.ಮಿಲ್ ರೋಡ್, ಕಲಬುರಗಿ–585102, E-mail: dtodivn1@gmail.com

ಸಂ/ಕಕರಸಾನಿ/ಕ.ವಿ–1/ಸವಾ/3478 /25–26 ದಿನಾಂಕ.16/02/2026

:: ಕೋಟೆಶನ್ ಪ್ರಕಟಣೆ ::

ಉಲ್ಲೇಖ: ತಾತ್ಕಾಲಿಕ ಕೋಟೆಶನ್ ಪ್ರಕಟಣೆ ಸಂಖ್ಯೆ. 01/2026 (ಸ್ವಚ್ಛತಾ ನಿರ್ವಹಣೆಗಾಗಿ)

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕಲಬುರಗಿ ವಿಭಾಗ–1ರ ವ್ಯಾಪ್ತಿಗೆ ಬರುವ ಬಸ್ ನಿಲ್ದಾಣದಲ್ಲಿನ ಮೂತ್ರಾಲಯ/ಶೌಚಾಲಯದ ಸ್ವಚ್ಛತೆ ನಿರ್ವಹಣೆ ಹಾಗೂ ನಿಲ್ದಾಣದ ಅವರಣ ಸ್ವಚ್ಛತೆಗಾಗಿ ತಾತ್ಕಾಲಿಕ ನಿರ್ವಹಣೆಗಾಗಿ ಪರವಾನಿಗೆದಾರರನ್ನು ಆಯ್ಕೆ ಮಾಡಲು ಉಲ್ಲೇಖ ಪತ್ರದ ಟೆಂಡರ್ ಪ್ರಕಣೆಯನ್ವಯ ಹಾಗೂ ನಿಗಮದ ನಿಯಮಾವಳಿಯನ್ವಯ ದಿನಾಂಕ: 16.02.2024 ರಿಂದ ಸಂಧಾನ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಪಡೆಯಲು ಹಾಗೂ ಭರ್ತಿ ಮಾಡಿದ ಅರ್ಜಿಸಲ್ಲಿಸುವ ಕೋನೆಯ ದಿನಾಂಕ.19.02.2026ರಂದು ಸಮಯ 11.00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ಇದಕ್ಕೆ ಸಂಬಂಧಿದ ದಾಸ್ತಾವೇಜುಗಳನ್ನು ಪಡೆಯಲು ವಿಭಾಗೀಯ ಕಛೇರಿ ರವರ ಕಾರ್ಯಲಯವನ್ನು ಸಂಪರ್ಕಿಸಲು ಕೋರಲಾಗಿದೆ ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 7760992100, 7760992102, 9535392265, 9742455513 ಸಂಪರ್ಕಿಸಿ.

ಸಹಿ/– ವಿಭಾಗಿಯ ನಿಯಂತ್ರಣಾಧಿಕಾರಿ, ಕಲಬುರಗಿ ವಿಭಾಗ–1, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1086/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಸಂ:ಕಾ.ಸಾ.ಚಿ/ಪಿ.ಬಿ–1/ಅಲ್ಪಾವಧಿ ಟೆಂಡರ್ ಪ್ರಕಟಣೆ–ಐ.ಎಫ್.ಟಿ–20/2025–26/276 ದಿನಾಂಕ: 16–02–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿಸಿ ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1.2, 3 ಹಾಗೂ 4 (ಟೆಂಡರ್‌ಗಿಟ್ಟ ಮೊತ್ತ ಕನಿಷ್ಠ ರೂ.3.50 ಲಕ್ಷ ರೂಗಳು ಹಾಗೂ ಗರಿಷ್ಠ ರೂ.300.64 ಲಕ್ಷ ರೂಗಳು) ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ– ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಒಟ್ಟು 12 ಕಾಮಗಾರಿಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿ:16–02–2026 ರಿಂದ ಕೆಪಿಪಿ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 10–03–2026 ಸಾಯಂಕಾಲ 5.30 ರವರೆಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 11–03–2026 ರ ಸಾಯಂಕಾಲ 4.00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 12–03–2026 ಸಾಯಂಕಾಲ 04–30 ಗಂಟೆಯ ನಂತರ (ಸಾಧ್ಯವಾದಲ್ಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ:13–03–2026 ಸಾಯಂಕಾಲ 04–30 ಗಂಟೆಯ ನಂತರ (ಸಾಧ್ಯವಾದಲ್ಲಿ). ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿನ ಬಿಡ್ ಡಾಕ್ಯುಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) ಹಾಗೂ ಕೆ.ಪಿ.ಪಿ.ಪಿ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ: +91–8046010000+91–8068948777 ರಿಂದ ಪಡೆಯಬಹುದು.

DIPR/CTA/KSMCA/679/2025-26

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: 947/ಹೆಚ್‌ಬಿಎಲ್/ಕಾನಿಇಂ(ವಿ)/ಕಾರ್ಯಾಚರಣೆ/ಸಇಂ(ಕ)/ಎಫ್–ಎ13/4700 ದಿನಾಂಕ: 16.02.2026

ಸೀಮಿತ ಟೆಂಡರ್ ಅಧಿಸೂಚನೆ

ಕವಿಪ್ರನಿನಿಯು, **ಹುಬ್ಬಳ್ಳಿ ಕಾರ್ಯಾಚರಣೆ ವಿಭಾಗಕ್ಕೆ** ಸಂಬಂಧಿಸಿದಂತೆ ಈ ಕೆಳಗಿನ ಕಚೇರಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

1) 220ಕೆವಿ ಎಸ್.ಆರ್.ಎಸ್.ನಲ್ಲಿ ಸ್ಥಾಪಿತ ಉಪಕರಣಗಳು ಮತ್ತು ರಚನೆಗಳಿಗೆ ಬಣ್ಣ ಹಚ್ಚುವ ಕೆಲಸ. **2)** 220ಕೆವಿ ಉಪಕೇಂದ್ರ, ಬಿಡ್ನಾಳಕ್ಕೆ ಅಗತ್ಯವಿರುವ ನಿರ್ವಹಣಾ ಸಾಮಗ್ರಿಗಳ ಸರಬರಾಜು. **3)** 220ಕೆವಿ ಮತ್ತು 110ಕೆವಿ ವರ್ಗದ ಐಸೋಲೇಟರ್‌ಗಳಿಗೆ ಅಗತ್ಯವಿರುವ ಫಿಕ್ಸ್ಡ್ ಕಾಂಟಾಕ್ಟ್‌ಗಳ ಸರಬರಾಜು–220ಕೆವಿ ಉಪಕೇಂದ್ರ, ಬಿಡ್ನಾಳ. **4)** 110ಕೆವಿ ಉಪ ಕೇಂದ್ರ, ಗೋಪನಕೊಪ್ಪಕ್ಕೆ ಅಗತ್ಯವಿರುವ ಸರ್ಜ್ ಕೌಂಟರ್ ಖರೀದಿ. **5)** 110ಕೆವಿ ಉಪಕೇಂದ್ರ, ಗೋಪನಕೊಪ್ಪಕ್ಕೆ ಅಗತ್ಯವಿರುವ 9ಕೆವಿ, 10ಕೆಎ ಸ್ಟೇಷನ್ ಕ್ಲಾಸ್ ಮೆಟಲ್ ಆಕ್ಸೈಡ್ ಸೆರಾಮಿಕ್ ಪ್ರಕಾರದ ಗ್ರೌಂಡ್ ಡಿಸ್‌ಕನೆಕ್ಟರ್ ಸಹಿತ ಲೈಟ್‌ನಿಂಗ್ ಅರೆಸ್ಟರ್‌ಗಳ ಸರಬರಾಜು. **6)** 220ಕೆವಿ ಎಸ್.ಆರ್.ಎಸ್. ಹುಬ್ಬಳ್ಳಿ ಮತ್ತು 220ಕೆವಿ ಉಪ ಕೇಂದ್ರ, ಬಿಡ್ನಾಳಕ್ಕೆ ಅಗತ್ಯವಿರುವ ಮೀರಾ ಎಕ್ಸೈಡ್ 71 ಕಳೆನಾಶಕ ಸರಬರಾಜು. **7)** ಟಿಎಲ್ಎಂ ಉಪ ವಿಭಾಗ, ಕೆಪಿಟಿಸಿಎಲ್ ಹುಬ್ಬಳ್ಳಿಗೆ ಅಗತ್ಯವಿರುವ (26 ಮಿ.ಮೀ., 20 ಮಿ.ಮೀ. ಮತ್ತು 16 ಮಿ.ಮೀ. ವ್ಯಾಸ ಇರುವ ಪಿ.ಪಿ.ರೋಪನ್ನು) ಸರಬರಾಜು ಮಾಡುವುದು. **8)** 220ಕೆವಿ ಉಪ ಕೇಂದ್ರ ಬಿಡ್ನಾಳಗೆ, ಅಗತ್ಯವಿರುವ 198ಕೆವಿ ಲೈಟ್‌ನಿಂಗ್ ಅರೆಸ್ಟರ್ ಸರಬರಾಜು. **9)** 110ಕೆವಿ ಉಪ ಕೇಂದ್ರ ಗಾಮನಗಟ್ಟಿಗೆ ಅಗತ್ಯವಿರುವ ನಿರ್ವಹಣಾ ಸಾಮಗ್ರಿಗಳ ಸರಬರಾಜು. **10)** 220ಕೆವಿ ಉಪ ಕೇಂದ್ರ ಬಿಡ್ನಾಳಕ್ಕೆ ಅಗತ್ಯವಿರುವ ಐಸೋಲೇಟರ್ ಸ್ಪೇರ್‌ಗಳ ಸರಬರಾಜು ಮತ್ತು ಅಳವಡಿಕೆ. **11)** 220ಕೆವಿ ಎಸ್.ಆರ್.ಎಸ್‌ಗೆ ಅಗತ್ಯವಿರುವ ಟಿಎನ್‌ಸಿ ಮತ್ತು ಎಲ್‌ಆರ್ ಸ್ವಿಚ್‌ಗಳ ಸರಬರಾಜು. **12)** 220ಕೆವಿ ಉಪ ಕೇಂದ್ರ ಬಿಡ್ನಾಳಕ್ಕೆ ಅಗತ್ಯವಿರುವ 48V, 200Ah ಸಾಮರ್ಥ್ಯದ ಪಿಎಲ್‌ಸಿಸಿ ಬ್ಯಾಟರಿ ಸೆಟ್‌ಗಳ ಸರಬರಾಜು.

ವಿಚಾರಣೆ ಹಾಗೂ ಸಾಮಗ್ರಿಗಳ ಸಂಪೂರ್ಣ ವಿವರಗಳನ್ನು ಕೆಳಕಂಡ ಅಧಿಕಾರಿಯ ಕಚೇರಿಯಿಂದ ದಿನಾಂಕ: **19.02.2026 ಬೆಳಗ್ಗೆ 10:00 ಗಂಟೆಯಿಂದ** ಪಡೆಯಬಹುದು. ಟೆಂಡರ್ ಸಲ್ಲಿಕೆಗೆ ಕೊನೆಯ ದಿನಾಂಕ: **05.03.2026 ಸಂಜೆ 04:00 ಗಂಟೆಯವರೆಗೆ.**

ಸಹಿ/–ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯಾಚರಣೆ ವಿಭಾಗ, ಕವಿಪ್ರನಿನಿ, ವಿದ್ಯುತ್‌ನಗರ, ಹುಬ್ಬಳ್ಳಿ – 580024.

ಪತ್ರಿಕಾ ಪ್ರಕಟಣೆಗಾಗಿ

ಮಾನ್ಯ ಗೌರವಾನ್ವಿತ ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಗಂಗಾವತಿ

ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ. 42/2026

ಅರ್ಜಿದಾರರು : ಶ್ರೀಮತಿ ಶಕುಂತಲಾ ಗಂಡ ದಿ। ಶೇಖರಗೌಡ, ವಯಸ್ಸು: 55 ವರ್ಷ. ಉದ್ಯೋಗ: ಮನೆಗೆಲಸ, ಸಾಕೀನ: ಚಿಕ್ಕಮಾದಿನಾಳ. ತಾಲೂಕ: ಕನಕಗಿರಿ, ಹಾಲಿವಸ್ತಿ: ಆರಾಳ ಗ್ರಾಮ, ತಾಲೂಕ: ಗಂಗಾವತಿ, ಜಿಲ್ಲಾ: ಕೊಪ್ಪಳ

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರರು, ತಹಶೀಲ್ ಕಾರ್ಯಾಲಯ ಕನಕಗಿರಿ

ಸಂಬಂಧಪಟ್ಟವರು :

ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ–ಮರಣ ನೋಂದಣಿ ಕಾಯ್ದೆ 13(3) ನಿಯಮ 9(3) ರ ಅಡಿಯಲ್ಲಿ ಅರ್ಜಿದಾರರ ಗಂಡನಾದ ಶೇಖರಗೌಡ ತಂದೆ ಪಂಪನಗೌಡ ರವರು ದಿ: 17/06/2017 ರಂದು ಕನಕಗಿರಿ ತಾಲೂಕಿನ ಚಿಕ್ಕಮಾದಿನಾಳ ಗ್ರಾಮದ ತಮ್ಮ ಸ್ವಗೃಹದಲ್ಲಿ ಮರಣ ಹೊಂದಿದ್ದು, ಸದರಿಯವರ ಮರಣ ನೋಂದಣಿ ಮಾಡಲು ಮತ್ತು ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರ ಕಾರ್ಯಾಲಯಕ್ಕೆ ಆದೇಶ ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರು ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲು ಮಾಡಿದ್ದಾರೆ. ಈ ಪ್ರಕರಣವು ದಿನಾಂಕ: 07/03/2026ರಂದು ಮಾನ್ಯ ಅಪರ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಗಂಗಾವತಿಯಲ್ಲಿ ಬೆಳಿಗ್ಗೆ11–00 ಗಂಟೆಗೆ ವಿಚಾರಣೆಗೆ ಇದ್ದ ಪ್ರಯುಕ್ತ, ಯಾರಾದರೂ ತಕರಾರುಗಳನ್ನು ಸಲ್ಲಿಸುವದಿದ್ದರೆ ಸದರಿ ದಿನಾಂಕದಂದು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿ ಲಿಖಿತ ರೂಪದಲ್ಲಿ ಯಾವುದೇ ತಕರಾರನ್ನು ಸಲ್ಲಿಸತಕ್ಕದ್ದು. ಒಂದುವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಪನ ನ್ಯಾಯಾಲಯ ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಿಗಣಿಸಿ, ಅರ್ಜಿದಾರರ ಪರ ಏಕಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು.

ಸ್ಥಳ : ಗಂಗಾವತಿ.
ದಿ : 12/02/2026

//ನ್ಯಾಯಾಲಯದ ಆದೇಶ ಮೇರೆಗೆ//
ಮುಖ್ಯ ಲಿಪಿಕ ಅಧಿಕಾರಿ
ಅಪರ ದಿವಾಣಿ ನ್ಯಾಯಾಧೀಶರು & ಪ್ರ.ದ.ನ್ಯಾ. ದಂ. ನ್ಯಾಯಾಲಯ, ಗಂಗಾವತಿ.

ಮುಖಾಂತರ :
ಟಿ.ಮಂಜುನಾಥ
ಅರ್ಜಿದಾರರ ಪರ ವಕೀಲರು ಗಂಗಾವತಿ

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು

ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)

ಐ.ಎಫ್.ಟಿ ಸಂಖ್ಯೆ 21/2025–26 ದಿನಾಂಕ: 13.02.2026

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ರಸ್ತೆ ಸಂಚಾರ ಗಣತಿ ಮತ್ತು ಕಟ್ಟಡಗಳ ನಿರ್ವಹಣೆ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೋಕೋಪಯೋಗಿ ಇಲಾಖೆಯಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನೊಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನು ಗುಣವಾಗಿ 07–ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ದಿ: 13.02.2026 ರಿಂದ ಟೆಂಡರು ದಾಖಲಾತಿಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಠ 11.42 ಲಕ್ಷಗಳು ಮತ್ತು ಕನಿಷ್ಠ 4.68 ಲಕ್ಷಗಳು, ಗರಿಷ್ಠ ಇ.ಎಂ.ಡಿ ರೂ.21,190/– ಮತ್ತು ಕನಿಷ್ಠ ರೂ.11.700/– ಗುತ್ತಿಗೆ ಕಾಲಾವಧಿ ಗರಿಷ್ಠ 2–ತಿಂಗಳು ಮತ್ತು ಕನಿಷ್ಠ 2–ದಿನಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ ಟೆಂಡರ್ ಅಧಿಸೂಚನೆಯಲ್ಲಿನ ಕಾಮಗಾರಿಗಳ ಕ್ರಸಂ–1 ರಿಂದ 5 ರವರೆಗೆ ದಿ: 21.02.2026 ಮತ್ತು ಕ್ರಸಂ–6 ರಿಂದ 7 ರವರೆಗೆ ದಿ: 23.02.2026 ಎಂದು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕ ಕಾರಣಗಳಿಂದ ಯಾವುದೇ ಬದಲಾವಣೆಗಳು/ತಿದ್ದುಪಡಿಗಳು ಉಂಟಾದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

DIPR/DDMYS/1671/KSMCA/947/2025-26 ಸಹಿ/– ಕಾರ್ಯಪಾಲಕ ಇಂಜಿನಿಯರ್

ಗುಲ್ಬರ್ಗ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, ಕಲಬುರಗಿ

(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)
ಸಿನ್ ಸಂಖ್ಯೆ: U04010KA2002SGC030436

ಸಂಖ್ಯೆ:ಗುವಿಸಕಂನಿ/ಅಅ(ವಿ)(ಖರೀದಿ)/ ಕಾನಿಇಂ/ಸಕಾನಿಇಂ/25–26/84886–91 ದಿನಾಂಕ:16.02.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಈ ಕೆಳಗಿನ ಸ್ಥಳಗಳಲ್ಲಿ ವಿದ್ಯುತ್ ಪರಿವರ್ತಕಗಳ ದುರಸ್ತಿ ಕೇಂದ್ರದ ಸ್ಥಾಪನೆ ಮತ್ತು ವಿಫಲವಾದ 25ಕೆವಿಎ, 63ಕೆವಿಎ,100 ಕೆವಿಎ ಕನ್ವೆನ್‌ಷನಲ್ ಮತ್ತು 3 ಸ್ಟಾರ್ ರೇಟೆಡ್ ವಿದ್ಯುತ್ ಪರಿವರ್ತಕಗಳ ದುರಸ್ತಿಯನ್ನು ಕೈಗೊಳ್ಳುವುದು. 1) ಪಿಸಿ–**1478** : ಚಿಂಚೋಳಿ, 2) ಪಿಸಿ–**1479**: ಸಂಡೂರು, 3) ಪಿಸಿ–**1480**: ಬಸವಕಲ್ಯಾಣ, 4) ಪಿಸಿ–**1481** : ಮಾನವಿ, 5) ಪಿಸಿ–**1482** : ಕೊಟ್ಟೂರು 6) ಪಿಸಿ–**1483** : ಯಡ್ರಾಮಿ, 7) ಪಿಸಿ–**1484**: ಕುರುಗೋಡು 8) ಪಿಸಿ–**1485**: ಕಂಪ್ಲಿ, 9)ಪಿಸಿ–**1486** : ಮುನಿರಾಬಾದ 10) ಪಿಸಿ–**1487** : ಶಕ್ತಿನಗರ 11) ಪಿಸಿ–**1488**: ಗುರುಮಿಠಕಲ್, 12) ಪಿಸಿ–**1489** : ಕಾಳಗಿ, 13) ಪಿಸಿ–**1490**: ಕಮಲಾಪುರ, 14) ಪಿಸಿ– **1491** : ಕಾರಟಗಿ, **ಟೆಂಡರ್ ಮೊತ್ತ: ಪ್ರತಿ ಟೆಂಡರಗೆ ರೂ.114.95 ಲಕ್ಷಗಳು, ದಿನಾಂಕ:** ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ:**18.02.2026** ರಂದು ಅಥವಾ ನಂತರ.ಟೆಂಡರ್ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ, ತಾಂತ್ರಿಕ ಬಿಡ್ ತೆರೆಯುವ ಮತ್ತು ಆರ್ಥಿಕ ಬಿಡ್‌ತೆರೆಯುವ ದಿನಾಂಕ: ಕೆ.ಪಿ.ಪಿ ಪೋರ್ಟಲ್‌ನಲ್ಲಿರುವಂತೆ, **ಬಿಡ್ಡುದಾರರ ಅರ್ಹತೆ ವಿವರ** : ಟೆಂಡರ್ ದಸ್ತಾವೇಜು ಪ್ರಕಾರ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : **ಅಧೀಕ್ಷಕ ಅಭಿಯಂತರರು (ವಿ), ಖರೀದಿ ಶಾಖೆ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585102.** ಮೊ.ಸಂ: 9448499997. ಅಂತರ್ಜಾಲತಾಣದ ವಿಳಾಸ : www.kppp.karnataka.gov.in. KPP ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ +91–8046010000/8068948777 ಗೆ ಇಮೇಲ್ ವಿಳಾಸ : support@eprochelpdesk.comಗೆ ಸಂಪರ್ಕಿಸಬಹುದಾಗಿದೆ.

ಸಹಿ/– ಅಧೀಕ್ಷಕಅಭಿಯಂತರರು (ವಿ)., ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ವಾ.ಸಾ.ಸಂ.ಇ.ಕಲಬುರಗಿ/1087/ದೇಶಪಾಂಡೆ ಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

(www.kpwd.gov.in)

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ದೂರವಾಣಿ ಸಂಖ್ಯೆ: 08182–222943 Email ID: spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ

(ದ್ವಿ–ಲಕೋಟೆ ಪದ್ಧತಿ) (ಕೆ.ಪಿ.ಪಿ–ಪೋರ್ಟಲ್ ಮೂಲಕ)

ಐಎಫ್‌ಟಿ ಸಂಖ್ಯೆ 47/2025–26 ದಿನಾಂಕ : 17.02.2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 1ನೇ ದರ್ಜೆ ಗುತ್ತಿಗೆದಾರರಿಗೆ ಭದ್ರಾವತಿ ತಾಲ್ಲೂಕಿನಲ್ಲಿ 4059–80–051–0–60–132 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ (ಇಂಡೆಂಟ್ ನಂ.33342 & 33363) ಕಾಮಗಾರಿಗಳಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ.730.89 ಲಕ್ಷ ಮತ್ತು ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.438.14 ಲಕ್ಷ ಹಾಗೂ ಇ.ಎಂ.ಡಿ. ಗರಿಷ್ಠ ಮೊತ್ತ ರೂ.10.965 ಲಕ್ಷ ಮತ್ತು ಇ.ಎಂ.ಡಿ. ಕನಿಷ್ಠ ಮೊತ್ತ ರೂ.6.44 ಲಕ್ಷ, ಕಾಲಾವಧಿ ಕೆ.ಪಿ.ಪಿ. ಪೋರ್ಟ್‌ಲ್‌ನಲ್ಲಿ ನಮೂದಿಸಿದಂತೆ.

ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್ –2ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–4ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 17.02.2026 ರಿಂದ 04.03.2026ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 04.03.2026ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ದಿನಾಂಕ: 05.03.2026 ರಂದು ಸಂಜೆ 5.30ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 06.03.2026ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ./ಶಿ/ನಂ.93–02/ ರ್ಯೋಂಕಾರ್/2025–26

ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ: 08382–220556 ಇ–ಮೇಲ್: predkarwar@gmail.com

ಕ್ರ.ಸಂ:ಪಂರಾ.ಇಂ/ಕಾ/ಪಿಬಿ–1/2025–26/43 ದಿ: 12.02.2026

ಟೆಂಡರ್ ಪ್ರಕಟಣೆ–43/2025–26 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ 2024–25 ನೇ ಸಾಲಿನ ಐ.ಸಿ.ಡಿ.ಎಸ್ ಹಾಗೂ ನರೇಗಾ ಅನುದಾನದ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Documentನ K.W-1ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ): (1) 2024–25 ನೇ ಸಾಲಿನ ಐ.ಸಿ.ಡಿ.ಎಸ್ ಹಾಗೂ ನರೇಗಾ ಅನುದಾನದ ಕ್ರೀಯಾ ಯೋಜನೆಯಡಿ ಭಟ್ಕಳ ತಾಲೂಕಿನ ಬೇಂಗ್ರೆ ಗ್ರಾ.ಪಂ ಕೋಗ್ತಿ ಅಂಗನವಾಡಿ ಕಟ್ಟಡ ನಿರ್ಮಾಣ. ಅಂದಾಜು ಮೊತ್ತ: ರೂ. 12.00 ಲಕ್ಷ, ಮುಂಗಡ ಠೇವಣಿ: ರೂ. 30,000.00, ಕಾಲಮಿತಿ (ಮಳೆಗಾಲ ಸಹಿತ): 03 ತಿಂಗಳು.

(2)––ಸದರ–– ಭಟ್ಕಳ ತಾಲೂಕಿನ ಶಿರಾಲಿ ಗ್ರಾ.ಪಂ ನೀರಕಂಠ –2 ಅಂಗನವಾಡಿ ಕಟ್ಟಡ ನಿರ್ಮಾಣ. ಅಂದಾಜು ಮೊತ್ತ: ರೂ. 12.00 ಲಕ್ಷ, ಮುಂಗಡ ಠೇವಣಿ: ರೂ. 30,000.00, ಕಾಲಮಿತಿ (ಮಳೆಗಾಲ ಸಹಿತ): 03 ತಿಂಗಳು.

(ಮೀಸಲಾತಿ: ಪ್ರ ವರ್ಗ 2 ಎ): (3) ––ಸದರ–– ಭಟ್ಕಳ ತಾಲೂಕಿನ ಮಾವಳ್ಳಿ–2 ಗ್ರಾ.ಪಂ ಮಾಳಯ್ಯನಮನೆ ಅಂಗನವಾಡಿ ಕಟ್ಟಡ ನಿರ್ಮಾಣ. ಅಂದಾಜು ಮೊತ್ತ: ರೂ. 12.00 ಲಕ್ಷ, ಮುಂಗಡ ಠೇವಣಿ: ರೂ. 15,000.00, ಕಾಲಮಿತಿ (ಮಳೆಗಾಲ ಸಹಿತ): 03 ತಿಂಗಳು.

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್–ಬಿಗಳನ್ನು ಮತ್ತು Technical Bid ನ್ನು ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 24.02.2026 ರ ಮದ್ಯಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 25.02.2026 ಬೆಳಿಗ್ಗೆ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ

DIPR/KWR/KSVCA/1093/25-26 dt. 17.02.2026

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ನಂ: ಇಇ/ಎಂಐಡಿ/ಬೀದರ/ತಾ.ಶಾ–1&2/ಟೆಂಡರ್/2025–26/ 307 ದಿನಾಂಕ: 16–2–2026

ಕೆಪಿಪಿ–ಪ್ರೋಕ್ಯೂರಮೆಂಟ್ಸ ಟೆಂಡರ್ ಪ್ರಕಟಣೆ

1) ಕಾಮಗಾರಿಗಳ ವಿವರ. KPP -Portalನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ. KPP -Portalನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ. KPP -Portalನಲ್ಲಿ ನಮೂದಿಸಿದಂತೆ, 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ:ಕೆ.ಡಬ್ಲೂ–1, ಕೆ.ಡಬ್ಲೂ–2& ಕೆ.ಡಬ್ಲೂ –3 ಮಾತ್ರ : **19–02–2026 ರಂದು 17.00 ಗಂಟೆವರೆಗೆ,** 8) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲೂ –1, ಕೆ.ಡಬ್ಲೂ –2 & ಕೆ.ಡಬ್ಲೂ –3 ಮಾತ್ರ **:23–02–2026 ರಂದು 16.00 ಗಂಟೆಗೆ ಸಾದ್ಯವಾದಲ್ಲಿ,** 9) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಕೆ.ಡಬ್ಲೂ –1, ಕೆ.ಡಬ್ಲೂ –2 & ಕೆ.ಡಬ್ಲೂ –3 ಮಾತ್ರ **:25–02–2026 ರಂದು 11.00 ಗಂಟೆಗೆ ಸಾದ್ಯವಾದಲ್ಲಿ,** 10) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ –1, ಕೆ.ಡಬ್ಲೂ–2& ಕೆ.ಡಬ್ಲೂ –3 ಮಾತ್ರ **27–02–2026 ರಂದು 11.00 ಗಂಟೆಗೆ ಸಾದ್ಯವಾದಲ್ಲಿ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ.ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080, 12) ಅಂತರ್ಜಾಲ ತಾಣದ ವಿಳಾಸ. KPP portal https://kppp.karnataka.gov.in

ಸಹಿ/– ಕಾರ್ಯ ನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/336/ಕೆ.ಎಸ್.ಎಂ.ಸಿ.&ಎ/2025–26

ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ,

ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಚಿಂತಾಮಣಿ ತಾಲ್ಲೂಕು, ಚಿಂತಾಮಣಿ

ಇ–ಮೇಲ್ ವಿಳಾಸ: amocmy@gmail.com, ದೂರವಾಣಿ ಸಂಖ್ಯೆ: 08154–450758

ಸಂಖ್ಯೆ:ಸಾಆಚಿಂ/ಪಥ್ಯಾಹಾರ ಟೆಂಡರ್/03/2025–26/E-42695

ದಿನಾಂಕ:10.02.2026

WHEREAS above named petitioner here in have instituted above petition under section 13[3]of birth and death Acts 1969 against the respondents for purpose of seeking death certificate of petitioner's Father by name K.AMARANNA S/O BASANNA (who was died on: 19-05-2011 at the residence of the Petitioner.
Any person interested are here by summoned to appear before this court in person or by pleader duly instructed and able to answer all material questions relating to the petition on 18-03-2026 at 11.00 am before this court. In default of your appearance on the date/ day of above petition will be heard and determined as "Ex-parte"
Given under my hand & seal of the court this 16th day of FEB-2026.
By Order of the court,
Sd/- Chief ministrial officer,
Civil judge & JMFC Court
Siruguppa.
Sd/- J.RAJABAKSHI
Advocates Siruguppa,

IN THE COURT OF THE HON'BLE CIVIL JUDGE AND JMFC AT SIRUGUPPA CRIMINAL MISCELLENEOUS CASE. NO 106 OF 2026

Between:E. Ramanjineyalu .....Petitioner
-AND-
The Chief officer Cum Birth & Death Registrar TMC Tekkalakote & others. ....Respondent

TO WHOMSOEVER IT MAY CONCERN NOTICE
WHEREAS above named petitioner here in have instituted above petition under section 13[3]of birth and death Acts 1969 against the respondents for purpose of seeking death certificate of petitioner's Mother by name B. SARASVATHAMMA W/O E. YALLAIAH SETTY (who was died on: 04-08-2012 at the residence of the Petitioner.
Any person interested are here by summoned to appear before this court in person or by pleader duly instructed and able to answer all material questions relating to the petition on 18-03-2026 at 11.00 am before this court. In default of your appearance on the date/ day of above petition will be heard and determined as "Ex-parte"
Given under my hand & seal of the court this 16th day of FEB-2026.
By Order of the court,
Sd/- Chief ministrial officer,
Civil judge & JMFC Court
Siruguppa.
Sd/- J.RAJABAKSHI
Advocates Siruguppa,

IN THE COURT OF THE HON'BLE CIVIL JUDGE AND JMFC AT SIRUGUPPA CRIMINAL MISCELLENEOUS CASE. NO 99 OF 2026

Between: Kambali Hemanna .....Petitioner
-AND-
The Chief officer Cum Birth & Death Registrar TMC Tekkalakote.
....Respondent

TO WHOMSOEVER IT MAY CONCERN NOTICE
WHEREAS above named petitioner here in have instituted above petition under section 13[3]of birth and death Acts 1969 against the respondents for purpose of seeking death certificate of petitioner's Father by name Kambali Tulusappa. S/o Kambali Banappa (who was died on: 01-09-1973 at the residence of the Petitioner.
Any person interested are here by summoned to appear before this court in person or by pleader duly instructed and able to answer all material questions relating to the petition on 18-03-2026 at 11.00 am before this court. In default of your appearance on the date/ day of above petition will be heard and determined as "Ex-parte"
Given under my hand & seal of the court this 10th day of FEB-2026.
By Order of the court,
Sd/- Chief ministrial officer,
Civil judge & JMFC Court
Siruguppa.
Sd/- K.SANNA HUSENI
Advocates Siruguppa,

IN THE COURT OF THE HON'BLE CIVIL JUDGE AND JMFC AT SIRUGUPPA CRIMINAL MISCELLENEOUS CASE. NO 97 OF 2026

Between: Kambali Hemanna .....Petitioner
-AND-
The Chief officer Cum Birth & Death Registrar TMC Tekkalakote.
....Respondent

TO WHOMSOEVER IT MAY CONCERN NOTICE
WHEREAS above named petitioner here in have instituted above petition under section 13[3]of birth and death Acts 1969 against the respondents for purpose of seeking death certificate of petitioner's Mother by name Kambali Mahankalamma W/o Kambali Tulusappa. (who was died on: 18-02-2000 at the residence of the Petitioner.
Any person interested are here by summoned to appear before this court in person or by pleader duly instructed and able to answer all material questions relating to the petition on 17-03-2026 at 11.00 am before this court. In default of your appearance on the date/ day of above petition will be heard and determined as "Ex-parte"
Given under my hand & seal of the court this 10th day of FEB-2026.
By Order of the court,
Sd/- Chief ministrial officer,
Civil judge & JMFC Court
Siruguppa.
Sd/- K.SANNA HUSENI
Advocates Siruguppa,

IN THE COURT OF THE HON'BLE CIVIL JUDGE AND JMFC AT SIRUGUPPA CRIMINAL MISCELLENEOUS CASE. NO 119 OF 2026

Between:Megharaja.. C .....Petitioner
-AND-
The Registrar Birth & Deaths Tahasildar Taluk office siruguppa.
....Respondent

TO WHOMSOEVER IT MAY CONCERN NOTICE
WHEREAS above named petitioner here in have instituted above petition under section 13[3]of birth and death Acts 1969 against the respondents for purpose of seeking death certificate of petitioner's Grandfather by name Chaa Veerangouda. S/O Basavanagouda (who was died on: 02-06-1995 at the residence of the Petitioner.
Any person interested are here by summoned to appear before this court in person or by pleader duly instructed and able to answer all material questions relating to the petition on 25-03-2026 at 11.00 am before this court. In default of your appearance on the date/ day of above petition will be heard and determined as "Ex-parte"
Given under my hand & seal of the court this 10th day of FEB-2026.
By Order of the court,
Sd/- Chief ministrial officer,
Civil judge & JMFC Court
Siruguppa.
Sd/- K.SANNA HUSENI
Advocates Siruguppa,

IN THE COURT OF THE HON'BLE CIVIL JUDGE AND JMFC AT SIRUGUPPA CRIMINAL MISCELLENEOUS CASE. NO 118 OF 2026

Between: Megharaja.. C .....Petitioner
-AND-
The Registrar Birth & Deaths Tahasildar Taluk office siruguppa.
....Respondent

TO WHOMSOEVER IT MAY CONCERN NOTICE
WHEREAS above named petitioner here in have instituted above petition under section 13[3]of birth and death Acts 1969 against the respondents for purpose of seeking death certificate of petitioner's Grandmother by name Gowramma W/o Chaa Veerangouda. (who was died on: 02-06-1996 at the residence of the Petitioner.
Any person interested are here by summoned to appear before this court in person or by pleader duly instructed and able to answer all material questions relating to the petition on 23-03-2026 at 11.00 am before this court. In default of your appearance on the date/ day of above petition will be heard and determined as "Ex-parte"
Given under my hand & seal of the court this 10th day of FEB-2026.
By Order of the court,
Sd/- Chief ministrial officer,
Civil judge & JMFC Court
Siruguppa.
Sd/- K.SANNA HUSENI
Advocates Siruguppa,

IN THE HON'BLE COURT OF THE CIVIL JUDGE CUM J.M.F.C. AT SIRUGUPPA
Execution Petition No. 55 of 2023
Between:
K. Krishna....Decree Holder
-And-
Smt. Eramma...Judgment Debtor
Summons to JDR No.1(C) (a) and 1(e):
To,
The JDR No.1(C) (a) and 1(e):
1. Sri. Mudukamma, W/o. (Late) Gundappa, aged about 53 years, R/o. 2nd ward, Mannuru Village, Siruguppa Taluk, Ballari Dist.
2. Smt. Hanumanthamma, W/o. Huligappa, aged about 54 years, R/o. APMC Gung, Gangavathi (Post), Koppala Dist.
Whereas the plaintiff instituted a suit in this court on the against the JDR No.1(C) (a) and 1(e)and desiring that you be made the JDR/s instead: You are hereby summoned to attend in this court on the 23rd day of- March- 2026 at 11 AM. To defend the said suit, in default of your appearance on the day specified, the said suit will be heard and determined in your absence.
Given under my hand and the seal of the court, this 17th Day of Feb-2026
BOC
CHIEF MINISTRIAL OFFICER
C.J. & J.M.F.C. COURT
SIRUGUPPA
Advocate for DHR
U.CHANDRASHEKAR

ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಆರೋಪ

ಹಗರಣದಲ್ಲಿಯೇ ಮುಳುಗಿದ ಸರ್ಕಾರ



ಕೊಪ್ಪಳ: ಸಿದ್ದರಾಮಯ್ಯ ಹಾಗೂ ಡಿಕೆಶಿ ಅವರ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತದ ಸಾವಿರ ದಿನಗಳ ಅವಧಿಯಲ್ಲಿ ಮಿತಿ ಮೀರಿದ ಭ್ರಷ್ಟಾಚಾರ, ಆಡಳಿತ ವೈಫಲ್ಯ ಹಾಗೂ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿತ ಕಂಡಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಆರೋಪಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ರಾಜ್ಯದ ಜನರು ಅತ್ಯಂತ ದುರಾಡಳಿತದ ದಿನಗಳೆಂದರೇ ಈ ಸಾವಿರ ದಿನಗಳಾಗಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸರ್ಕಾರರ ಹಗರಣಗಳು ಒಂದಾ, ಎರಡಾ...? ಹೇಳುತ್ತಾ ಹೋದರೇ ಹನುಮಂತನ ಬಾಲ ಬೆಳೆದಂತೆ ಬೆಳೆಯುತ್ತಿದೆ. ಪ್ರಮುಖವಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಭೂ ಹಂಚಿಕೆ ವಿವಾದ, ವಾಲ್ಮೀಕಿ ನಿಗಮ ಹಣ ದುರುಪಯೋಗ ಪ್ರಕರಣ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಸಂಬಂಧಿತ ಹಣ ವರ್ಗಾವಣೆ ವಿಚಾರ ಸೇರಿದಂತೆ ಹಲವು ಆರ್ಥಿಕ ಹಗರಣಗಳು ಜನರ ಕಣ್ಣು ಮುಂದಿವೆ ಎಂದರು.

ಅಬಕಾರಿ ಇಲಾಖೆಯಲ್ಲಿ ಲೈಸೆನ್ಸ್ ಮತ್ತು ವರ್ಗಾವಣೆಗಳಿಗೆ ಲಂಚ ಬೇಡಿಕೆ ಆರೋಪದ ಕುರಿತು ಸಾಕ್ಷ್ಯಾಧಾರವಿದ್ದರೂ ಸಚಿವ ಆರ್.ಬಿ. ತಿಮ್ಮಾಪುರ ಅವರನ್ನು ಸಮರ್ಥಿಸಿಕೊಂಡ ಲಜ್ಜೆಗೇಡಿ ಸರ್ಕಾರವಿದು ಎಂದು ತಿವಿದಿದ್ದಾರೆ. ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಭಾರೀ ಪ್ರಮಾಣದ ಹಣ ವ್ಯಯವಾಗಿದ್ದು, ಅದರ ಅನುಷ್ಠಾನದಲ್ಲಿ ಪಾರದರ್ಶಕತೆ ಕೊರತೆ ಇದೆ ಎಂಬ ಟೀಕೆಯೂ ವ್ಯಕ್ತವಾಗಿದೆ ಎಂದು ತಿಳಿಸಿದರು.ಅನ್ನಭಾಗ್ಯ ಮತ್ತು ಗೃಹಲಕ್ಷ್ಮಿ ಯೋಜನೆಗಳಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ ಎಂಬ ಆರೋಪಗಳು ಕೇಳಿ ಬಂದಿವೆ. ಬಿಪಿಎಲ್ ಕಾರ್ಡ್‌ಗಳನ್ನು ಎಪಿಎಲ್‌ಗೆ ವರ್ಗಾವಣೆ ಮಾಡುವ ಕ್ರಮವೂ ಸಾರ್ವಜನಿಕರಲ್ಲಿ ಚರ್ಚೆಗೆ ಕಾರಣವಾಗಿದೆ. ಕಾನೂನು ಸುವ್ಯವಸ್ಥೆ ವಿಚಾರದಲ್ಲಿಯೂ ಸಂಪೂರ್ಣ ವಿಫಲವಾಗಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ಬ್ಯಾಂಕ್ ದರೋಡೆ, ಸೈಬರ್ ವಂಚನೆ, ಕೊಲೆ ಪ್ರಕರಣಗಳು ಹೆಚ್ಚಾಗಿವೆ ಎಂದು ಆರೋಪಿಸಿದರು. ವಿಪ ಸದಸ್ಯೆ ಹೇಮಲತಾ ನಾಯಕ್, ಮಾಜಿ ಸಚಿವ ಹಾಲಪ್ಪ ಆಚಾರ, ಬಸವರಾಜ ಕ್ಯಾವಟರ್ ಇದ್ದರು.

ಹಿಂದೂಗಳು ಒಗ್ಗಟ್ಟಾಗಿರಲಿ: ಮಂಜುನಾಥ ಭಾರತಿ ಶ್ರೀ



ಬೆಳಗಾವಿ: ಸಮಾಜವು ತನ್ನ ಧರ್ಮ ಮತ್ತು ಸಂಸ್ಕೃತಿಯಿಂದ ವಿಮುಖವಾಗದೆ ಜಾಗೃತರಾಗಿ ಒಗ್ಗಟ್ಟಾಗಿರಬೇಕು. ಸನಾತನ ಧರ್ಮ ಮತ್ತು ಸಂಪ್ರದಾಯ ಮಾನವೀಯತೆಯ ಸಂದೇಶವಾಗಿದ್ದು, ಅಹಿಂಸೆ, ಕರುಣೆ, ಪರಸ್ಪರ ಗೌರವ ಮತ್ತು ಕರ್ತವ್ಯದ ಮೌಲ್ಯಗಳನ್ನು ಆಧರಿಸಿದೆ. ಇತರರ ದುಃಖದಲ್ಲಿ ಹಂಚಿಕೊಳ್ಳುವುದು, ಬಿಕ್ಕಟ್ಟಿನ ಸಮಯದಲ್ಲಿ ಸಹಾಯ ಹಸ್ತ ಚಾಚುವುದು ಮತ್ತು ಮಹಿಳೆಯರನ್ನು ತಾಯಿ ಮತ್ತು ಸಹೋದರಿಯರಂತೆ ಗೌರವಿಸುವುದು ನಿಜವಾದ ಸಂಸ್ಕೃತಿ ಎಂದು ಬೆಂಗಳೂರಿನ ಗೋಸಾವಿ ಮಹಾಸಂಸ್ಥಾನ ಮಠದ ಮಂಜುನಾಥ ಭಾರತಿ ಸ್ವಾಮೀಜಿ ಹೇಳಿದರು.

ಮಂಗಳವಾರ ನಗರದ ಖಡೆಬಜಾರ್, ಸಮಾದೇವಿ ಮಂದಿರದ ಬಳಿ ವಿರಾಟ ಹಿಂದೂ ಸಮ್ಮೇಳನ ಸಮಿತಿ ವತಿಯಿಂದ ಆಯೋಜಿಸಿದ್ದ ಬೃಹತ್ ವಿರಾಟ ಹಿಂದೂ ಸಮ್ಮೇಳನದಲ್ಲಿ ಮಾತನಾಡಿದ ಅವರು, ಇತಿಹಾಸದಲ್ಲಿ ಪ್ರೇರಣಾದಾಯಕ ವ್ಯಕ್ತಿಗಳನ್ನು ಉಲ್ಲೇಖಿಸುವಾಗ ಛತ್ರಪತಿ ಶಿವಾಜಿ ಮಹಾರಾಜರ ಕಾರ್ಯಗಳ ಬಗ್ಗೆ ಅದ್ಭುತ ಉಲ್ಲೇಖವನ್ನು ನೀಡಿದರು.

ಹಲವು ಶತಮಾನಗಳ ನಂತರವೂ, ಅವರ ಸ್ವರಾಜ್ಯ, ಶೌರ್ಯ ಮತ್ತು ಸಾರ್ವಜನಿಕ ಕಲ್ಯಾಣದ ಚಿಂತನೆಗಳು ಇನ್ನೂ ಸಮಾಜದ ಹೃದಯಗಳನ್ನು ಆವರಿಸಿಕೊಂಡಿವೆ ಎಂದು ಹೇಳಿದರು.

ಪ್ರತಿ ಪೀಳಿಗೆಯೂ ಅವರ ಆದರ್ಶಗಳಿಂದ ಸ್ಫೂರ್ತಿ ಪಡೆಯಬೇಕಾಗಿದೆ. ವ್ಯಕ್ತಿತ್ವ, ಜ್ಞಾನ ಮತ್ತು ಸೇವೆಯನ್ನು ಬೆಳೆಸಿಕೊಳ್ಳುವ ಮೂಲಕ ಮುಂದುವರಿಯಲು ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಅನುಸರಿಸುವಂತೆ ಅವರು ಯುವಕರಿಗೆ ಮನವಿ ಮಾಡಿದರು.

ಕುಟುಂಬದಲ್ಲಿ ಪೋಷಕರ ಪಾತ್ರವೂ ಬಹಳ ಮುಖ್ಯ ಎಂದು ಹೇಳಿದ ಅವರು, ಮಕ್ಕಳಲ್ಲಿ ಚಿಕ್ಕ ವಯಸ್ಸಿನಿಂದಲೇ ಮೌಲ್ಯಗಳು, ಉತ್ತಮ ಶಿಕ್ಷಣ ಮತ್ತು ನೈತಿಕ ಮೌಲ್ಯಗಳನ್ನು ಬೆಳೆಸುವ ಅಗತ್ಯಕ್ಕೆ ಒತ್ತು ನೀಡಲಾಯಿತು. ಮಕ್ಕಳಿಗೆ ಧಾರ್ಮಿಕಮತ್ತುತಾತ್ವಿಕಪುಸ್ತಕಗಳನ್ನು ನೀಡುವುದರಿಂದ ಅವರಿಗೆ ಮಾನಸಿಕ ಶಕ್ತಿ ಮತ್ತು ಸರಿಯಾದ ನಿರ್ದೇಶನ ಸಿಗುತ್ತದೆ. ವಿಶೇಷವಾಗಿ ಭಗವದ್ಗೀತೆ ಜೀವನವನ್ನು ಅರ್ಥಮಾಡಿಕೊಳ್ಳುವ ಶಕ್ತಿಯನ್ನು ನೀಡುತ್ತದೆ ಎಂದು ಸ್ವಾಮೀಜಿ ಹೇಳಿದರು. ದೇಶಾದ್ಯಂತ ಕೋಟೆಗಳು, ಮಠಗಳು ಮತ್ತು ಸಂಪ್ರದಾಯಗಳು ಭಾರತೀಯ ಸಂಸ್ಕೃತಿಯ ಜೀವಂತ ನೆನಪುಗಳಾಗಿವೆ.

ಬೆಂಗಳೂರಿನಲ್ಲಿ ಸುಮಾರು ನಾಲ್ಕು ನೂರು ವರ್ಷಗಳ ಹಿಂದೆ ಸ್ಥಾಪನೆಯಾದ ಈ ಮಠವು ಇನ್ನೂ ವೇದಗಳು, ಸಂಸ್ಕೃತಿ ಮತ್ತು ಸಂಗೀತವನ್ನು ಕಲಿಸುತ್ತದೆ ಮತ್ತು ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಮತ್ತು ವಸತಿ ಲಭ್ಯವಿದೆ ಎಂಬ ಮಾಹಿತಿಯನ್ನು ನೀಡಲಾಯಿತು.

ಈ ವೇಳೆ ಮಾಜಿ ಶಾಸಕ ಸಂಜಯ ಪಾಟೀಲ, ಅನಿಲ ಬೆನಕೆ, ಬಿಜೆಪಿ ಮುಖಂಡ ಕಿರಣ ಜಾಧವ, ಮುರಘೇಂದ್ರಗೌಡ ಪಾಟೀಲ, ಹಿಂದೂ ಮುಖಂಡರು, ಕಾರ್ಯಕರ್ತರು ಸೇರಿದಂತೆ ಮತ್ತಿತರರು ಇದ್ದರು.

ಕಿರುಸುದ್ದಿ

ಅಶೋಕ ಕೋರಿ ಅವರಿಗೆ ಪಿಎಚ್.ಡಿ ಪ್ರದಾನ



ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದ ಸಮಾಜಕಾರ್ಯ ಅಧ್ಯಯನ ವಿಭಾಗದಲ್ಲಿ ಸಂಶೋಧನಾ ವಿದ್ಯಾರ್ಥಿ ಅಶೋಕ.ಎಸ್.ಕೋರಿ ಅವರು ಮಂಡಿಸಿದ Family Burden, Social Support and Quality of Life among Parents of Children with Multiple Disabilities: A Social Work Perspective ಎಂಬ ಮಹಾಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಪಿಎಚ್.ಡಿ ಪ್ರದಾನ ಮಾಡಿದೆ. ಕರ್ನಾಟಕ ವಿಶ್ವವಿದ್ಯಾಲಯ ಸಮಾಜಕಾರ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ರೇಣುಕಾ ಈ. ಅಸಗಿ ಅವರು ಮಾರ್ಗದರ್ಶನ ಮಾಡಿದ್ದಾರೆ. ಪ್ರಸ್ತುತ ಅಶೋಕ ಕೋರಿಯವರು ಧಾರವಾಡದ ಡಿಮ್ಹಾನ್ಸ್ ಸಂಸ್ಥೆಯಲ್ಲಿ ಮನೋವೈದ್ಯಕೀಯ ಸಮಾಜಕಾರ್ಯಕರ್ತರಾಗಿ ಕಾರ್ಯನಿರ್ವಹಿಸುತ್ತಿದ್ದು, ಹಲವಾರು ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮಗಳಲ್ಲಿ ಸಮುದಾಯ ಮಟ್ಟದಲ್ಲಿ ಕ್ರಿಯಾಶೀಲರಾಗಿ ಭಾಗವಹಿಸಿದ್ದಾರೆ.

ವಿದ್ಯಾರ್ಥಿ ಶವ ಪತ್ತೆ: ಆತ್ಮಹತ್ಯೆ ಶಂಕೆ



ಕಲಬುರಗಿ: ಕಲಬುರಗಿ ತಾಲೂಕಿನ ಬಬಲಾದ ಗ್ರಾಮದ ಡಾನ್ ಬಾಸ್ಕೋ ಸ್ಕೂಲ್ ಆವರಣದಲ್ಲಿ ವಿದ್ಯಾರ್ಥಿಯೊಬ್ಬ ಬಾವಿಯಲ್ಲಿ ಶವವಾಗಿ ಪತ್ತೆಯಾಗಿರುವ ಘಟನೆ ಆತಂಕ ಮೂಡಿಸಿದೆ. ಮೃತ ವಿದ್ಯಾರ್ಥಿಯನ್ನು ಗುರು ತಂದೆ ನಾಗಪ್ಪ(15) ಎಂದು ಗುರುತಿಸಲಾಗಿದ್ದು, ಚಿಂಚೋಳಿ ತಾಲೂಕಿನ ನಿವಾಸಿ ಎಂದು ತಿಳಿದುಬಂದಿದೆ.ಗುರು ವಸತಿ ನಿಲಯದಲ್ಲಿದ್ದುಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದನು. ಕಳೆದ ಮೂರು ದಿನಗಳಿಂದ ಶಾಲೆಯಿಂದ ನಾಪತ್ತೆಯಾಗಿದ್ದ, ಹುಡುಕಾಟ ನಡೆಯುತ್ತಿತ್ತು. ಮಂಗಳವಾರ ಬೆಳಗ್ಗೆ ಶಾಲೆಯ ಆವರಣದಲ್ಲಿರುವ ಬಾವಿಯಲ್ಲಿ ಅವನ ಶವ ಪತ್ತೆಯಾಗಿದೆ.ಎರಡು ದಿನಗಳ ಹಿಂದೆ ಶಾಲೆಯ ಬೈಕ್ ತೆಗೆದುಕೊಂಡು ಹೋಗಿ ಗೋಡೆಗೆ ಡಿಕ್ಕಿ ಹೊಡೆದಿದ್ದು, ಬೈಕ್‌ನ ಡೋಮ್ ಹಾನಿಗೊಳಗಾಗಿತ್ತು ಎನ್ನಲಾಗಿದೆ. ಈ ವಿಷಯವಾಗಿ ಸಿಬ್ಬಂದಿ ಪ್ರಿನ್ಸಿಪಾಲ್ ಗಮನಕ್ಕೆ ತಂದಿದ್ದರು. ಬಳಿಕ ಪ್ರಿನ್ಸಿಪಾಲ್ ಬೈದು, ಬೈಕ್ ರಿಪೇರಿ ವೆಚ್ಚವನ್ನು ಕುಟುಂಬದಿಂದ ಭರಿಸಲು ಸೂಚಿಸಿದ್ದರೆಂಬ ಆರೋಪ ಕೇಳಿಬಂದಿದೆ. ಇದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿರಬಹುದೆಂಬ ಶಂಕೆ ವ್ಯಕ್ತವಾಗಿದೆ. ಘಟನೆ ಕಲಬುರಗಿ ಸಬ್-ಅರ್ಬನ್ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ನಡೆದಿದೆ. ಬಬಲಾದ್ ಡಾನ್ ಬಾಸ್ಕೋ ಶಾಲೆಯ 15 ವರ್ಷದ ಗುರು ಎಂಬ ವಿದ್ಯಾರ್ಥಿ ನಾಪತ್ತೆಯಾಗಿದ್ದಾನೆ ಎಂದು ಶಾಲೆಯವರು ದೂರು ನೀಡಿದ್ದರು. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಕಿಡ್ನಾಪ್ ಪ್ರಕರಣ ದಾಖಲಾಗಿತ್ತು. ಶಾಲೆಯ ಆವರಣದಲ್ಲಿನ ಬಾವಿಯಲ್ಲೇ ಗುಡುಗನ ಶವ ಪತ್ತೆಯಾಗಿದೆ. ಮನೆಯವರ ದೂರು ಆಧರಿಸಿ ಕ್ರಮಕ್ಕೆಗೊಳ್ಳುತ್ತೇವೆ ಎಂದು ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ತಿಳಿಸಿದ್ದಾರೆ.

ಮಾರಿಕಾಂಬಾ ದೇವಿ ರಥೋತ್ಸವಕ್ಕೆ ಭರದ ಸಿದ್ಧತೆ



ಶಿರಸಿ: ಎರಡು ವರ್ಷಕ್ಕೊಮ್ಮೆ ಜರುಗುವ ಜಾಗೃತ ಶಕ್ತಿ ಸ್ವರೂಪಿಣಿ ಶಿರಸಿ ಶ್ರೀ ಮಾರಿಕಾಂಬಾ ದೇವಿಯ ಮಹಾ ಜಾತ್ರೆಯ ರಥೋತ್ಸವದ ಸಿದ್ಧತೆಗಳು ಬಿರುಸುಗೊಂಡಿದ್ದು, ರಥ ನಿರ್ಮಾಣಕ್ಕಾಗಿ ಕಡಿಯಲಾಗಿದ್ದ 'ತಾರೆ ಮರ'ದ ಬೃಹತ್ ತುಂಡುಗಳನ್ನು ಮಂಗಳವಾರ ಸಂಪ್ರದಾಯದಂತೆ ವಾದ್ಯಮೇಳಗಳ ಮೆರವಣಿಗೆಯೊಂದಿಗೆ ದೇವಸ್ಥಾನದ ಎದುರು ತರಲಾಯಿತು.

ಅಂಕೆಯ ಹೊರಬೀಡಿನ ದಿನವಾದ ಇಂದು ನಿಗದಿತ ಶುಭ ಮುಹೂರ್ತದಲ್ಲಿ ಅಲಂಕೃತ ಎತ್ತಿನ ಗಾಡಿಗಳ ಮೂಲಕ ಈ ಮರದ ದಿಮ್ಮಿಗಳನ್ನು ನಗರದ ಗಡಿಯಿಂದ ದೇವಸ್ಥಾನಕ್ಕೆ ಬರಮಾಡಿಕೊಳ್ಳಲಾಯಿತು.

ಕಳೆದ ಶುಕ್ರವಾರ ತಾಲೂಕಿನ ಬ್ಯಾಗದ್ದೆಯ ಅಶೋಕ ಶಿವು ನಾಯ್ಕ ಅವರು ಸೇವಾರ್ಥವಾಗಿ ನೀಡಿದ್ದ ಜಮೀನಿನಲ್ಲಿ ಬೆಳೆದ ತಾರೆ ಮರವನ್ನು ಶಾಸ್ತ್ರೋಕ್ತವಾಗಿ ಪೂಜಿಸಿ ಕಡಿಯಲಾಗಿತ್ತು. ಇಂದು ಅಂಕೆಯ ಹೊರಬೀಡಿನ ಹಿನ್ನೆಲೆಯಲ್ಲಿ ಈ ಮರದ ತುಂಡುಗಳಿಗೆ ಮೊದಲು ಕೋಟೆಕೆರೆ ಬಳಿ ಪೂಜೆ ಮತ್ತು ಆರತಿ ನೆರವೇರಿಸಿ ಗೌರವಿಸಲಾಯಿತು.

ತದನಂತರ ಮೆರವಣಿಗೆಯ ಮೂಲಕ ದೇವಸ್ಥಾನದ ಮಹಾದ್ವಾರಕ್ಕೆ ತಂದು ಸಾಲಾಗಿ ನಿಲ್ಲಿಸಿ, ಅರ್ಚಕರು, ಬಾಬದಾರರು ಹಾಗೂ ಬಾಬದಾರ ಕುಟುಂಬದ ಮಹಿಳೆಯರು ಭಕ್ತಿಯಿಂದ ಪೂಜೆ ಸಲ್ಲಿಸಿ ಆರತಿ ಬೆಳಗಿದರು.

ಫೆ. 24ರಂದು ರಾತ್ರಿ ಶ್ರೀ ದೇವಿಯ ಕಲ್ಯಾಣೋತ್ಸವ ಜರುಗಲಿದ್ದು, ಬುಧವಾರ ಬೆಳಗ್ಗೆ ದೇವಿಯು ರಥಾರೂಢಳಾಗಿ ಮೆರವಣಿಗೆಯ ಮೂಲಕ ಜಾತ್ರಾ ಗದ್ದುಗೆಯನ್ನು ಏರಲಿದ್ದಾಳೆ. ರಥದ ಮರ ದೇವಸ್ಥಾನದ ಆವರಣಕ್ಕೆ ಆಗಮಿಸುವ ಮೂಲಕ ಜಾತ್ರಾ ವೈಭವದ ಚಟುವಟಿಕೆಗಳು ಕಳೆಗಟ್ಟಿವೆ. ಈ ಸಂದರ್ಭದಲ್ಲಿ ದೇವಸ್ಥಾನದ ಧರ್ಮದರ್ಶಿ ಮಂಡಳಿಯ ಸದಸ್ಯರು, ಬಾಬದಾರ ಪ್ರಮುಖರಾದ ಜಗದೀಶ ಗೌಡ ಸೇರಿದಂತೆ ವಿವಿಧ ಬಾಬದಾರ ಕುಟುಂಬಗಳ ಸದಸ್ಯರು, ಪಾರುಪತ್ಯಗಾರರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಜೆಇಇ ಅಡ್ವಾನ್ಸ್ಡ್ ಪರೀಕ್ಷೆಗೆ ಅರ್ಹತೆ





ಧಾರವಾಡ: ಕಳೆದ 2025-26ನೇ ಶೈಕ್ಷಣಿಕ ವರ್ಷದಲ್ಲಿ ಜೆ.ಇ.ಇ. ಪರೀಕ್ಷೆ ಬರೆದ ಜನತಾ ಶಿಕ್ಷಣ ಸಮಿತಿ ವಿಜ್ಞಾನ ವಿಭಾಗದ ಜೆ.ಇ.ಇ. ವಿಭಾಗದ 8 ವಿದ್ಯಾರ್ಥಿಗಳು, ಮೇನ್ಸ್ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆಗೈದು ಜೆ.ಇ.ಇ. ಅಡ್ವಾನ್ಸ್ಡ್ ಪರೀಕ್ಷೆಗೆ ಅರ್ಹತೆ ಪಡೆದಿದ್ದಾರೆ.

ಜೋಯಿಶ ಅಚ್ಯುತ್ 99.069, ಗರಪತಿ ಸಾಯಿ ವೈಭವ 94.36, ಸ್ವರೂಪ ಧರ್ಮಗೌಡರ 93.445, ಕೋಷ್ಟಿ ಅರ್ಥ್ ಧಾನೇಶಕುಮಾರ 93.128, ಹರೀಷ ಟಿ 92.934, ಶ್ರೀಧರ ಕಲಾಲ 92.115, ಸಮೃದ್ಧಿ ಛಬ್ಬಿ 92.038, ಶಶಾಂಕ ಕದಕೊಳ್ಳಮಠ 91.48 ಅಂಕ ಗಳಿಸಿದ್ದಾರೆ. ಸಾಧನೆಗೈದ ವಿದ್ಯಾರ್ಥಿಗಳಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ರಾಜರ್ಷಿ, ಡಾ. ಡಿ.ವೀರೇಂದ್ರ ಹೆಗ್ಗಡೆ, ಜೆಎಸ್ಎಸ್ ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಪ್ರಾಚಾರ್ಯ ಭಾರತಿ ಶಾನಭಾಗ ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

ಜೆಇಇ ಮೇನ್ಸ್ ಪರೀಕ್ಷೆ | ಧಾರವಾಡ ನಗರಕ್ಕೆ ಪ್ರಥಮ ಸ್ಥಾನ

ಅರ್ಜುನ ಕಾಲೇಜ್ ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆ






ಧಾರವಾಡ: ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ನಡೆಸುವ ಜೆಇಇ ಮುಖ್ಯ ಪರೀಕ್ಷೆಯ ಪ್ರಥಮ ಆವೃತ್ತಿಯಲ್ಲಿ ಅರ್ಜುನ ಸಂಸ್ಥೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆಯನ್ನು ಮಾಡುವುದರ ಮೂಲಕ ಧಾರವಾಡ ಶಹರಕ್ಕೆ ಪ್ರಥಮ ಸ್ಥಾನವನ್ನು ಪಡೆದುಕೊಂಡು ಸಂಸ್ಥೆಯ ಕೀರ್ತಿ ಹೆಚ್ಚಿಸಿದ್ದಾರೆ.

ಸಾಧನೆಗೈದ ವಿದ್ಯಾರ್ಥಿಗಳು ಕೇದಾರ್ ಜೋಶಿ (99.84), ಅನ್ಮೋಲ್ ಪ್ರಭು (99.75), ಅನೀಶ್ ನಾಯಕ್ (99.56), ದರ್ಶನ ಭಟ್(98.97),ಧ್ರುವಂತ್ (98.52),ವಿನೀತ್ ಚವಾಣ್ (98.05),ಆಕಾಶ್ ರಾಠೋಡ್ (97.61),ಪ್ರೀತಮ್ ಚವಾಣ್ (97.46),ಕಾರ್ತಿಕ್ ಭಜಂತ್ರಿ (96.38), ರಜತ್ ಭಟ್ (95.36), ಸೃಜನ ಪಾಟೀಲ್ (94.62), ಪ್ರಣತಿ ಮೆಣಸೂಮನೆ (94.37), ಸಿಂಚನಾ ಭಟ್ (93.92), ಭಾರ್ಗವ್ ಹೆಬ್ಬಾರ್ (93.62), ಪ್ರಗತಿ ನರೋಣೆ (93.40),ಅನನ್ಯ ಪೂಜಾರ್ (93.11), ಪೂರ್ವಿ ಹೆಗ್ಡೆ (92.04), ಸುಶಾಂತ್ ನಾಯಕ್ (91.71), ಪ್ರೀತಮ್ ಯು ವೈ(91.70), ಉದಿತ್ (90.95), ಸಚಿನ್ ಜೋಶಿ (90.85), ಅಪೂರ್ವ ಹೆಗ್ಡೆ (90.14) ಶೇಕಡವನ್ನು ಪಡೆದಿರುತ್ತಾರೆ.

ಒಟ್ಟಾರೆಯಾಗಿ ಪರೀಕ್ಷೆಯನ್ನು ಬರೆದ ವಿದ್ಯಾರ್ಥಿಗಳ ಪೈಕಿ ಶೇ.99ಕ್ಕಿಂತ ಹೆಚ್ಚು 3 ವಿದ್ಯಾರ್ಥಿಗಳು, ಶೇ.95ಕ್ಕಿಂತ ಹೆಚ್ಚು 10 ವಿದ್ಯಾರ್ಥಿಗಳು, ಶೇ.90ಕ್ಕಿಂತ ಹೆಚ್ಚು 22 ವಿದ್ಯಾರ್ಥಿಗಳು ಮತ್ತು ಶೇ.85 ಕ್ಕಿಂತ ಹೆಚ್ಚು 40 ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಗಳಿಸುವುದರ ಮೂಲಕ ತಮ್ಮ ಸಾಧನೆಯ ಗರಿಯನ್ನು ಮತ್ತು ಸಂಸ್ಥೆಯ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ಸಾಧನೆಗೈದ ವಿದ್ಯಾರ್ಥಿಗಳನ್ನು ಸಂಸ್ಥೆಯ ಆಡಳಿತ ಮಂಡಳಿ ಪ್ರಾಚಾರ್ಯರು ಶಿಕ್ಷಕ ವೃಂದದವರು ಅಭಿನಂದಿಸುವುದರೊಂದಿಗೆ ವಿದ್ಯಾರ್ಥಿಗಳ ಸಾಧನೆಗೆ ತಮ್ಮ ಹರ್ಷವನ್ನು ವ್ಯಕ್ತಪಡಿಸಿದ್ದಾರೆ.

ಜೆಇಇ ಪರೀಕ್ಷೆ: ಎಕ್ಸಲಂಟ್ ವಿದ್ಯಾರ್ಥಿಗಳ ಅಮೋಘ ಸಾಧನೆ





ವಿಜಯಪುರ: ಶಿಕ್ಷಣ ಕ್ಷೇತ್ರದಲ್ಲಿ ಅದ್ವಿತೀಯ ಹೆಜ್ಜೆ ಹಾಕುತ್ತ ಸಾಗಿ ಬಂದಿರುವ ಎಕ್ಸಲಂಟ್ ವಿಜ್ಞಾನ ಪದವಿ ಪೂರ್ವಕಾಲೇಜು ಪ್ರತಿ ಪರೀಕ್ಷೆಯಲ್ಲಿಯೂ ಉತ್ತಮ ಫಲಿತಾಂಶ ದೊಂದಿಗೆ ಗುರುತಿಸಿ ಕೊಂಡಿದ್ದು, ಸದ್ಯ ಪ್ರಸಕ್ತ ಬಾರಿ ಪ್ರಥಮ ಹಂತದ ಜೆಇಇ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದುಕೊಳ್ಳುವ ಮೂಲಕ ಅಮೋಘ ಸಾಧನೆ ಮಾಡಿದೆ.

ಐಐಟಿ, ಐಐಐಟಿ, ಎನ್‌ಐಟಿ ಸೇರಿದಂತೆ ಭಾರತದ ಪ್ರತಿಷ್ಠಿತ ತಾಂತ್ರಿಕ ಶಿಕ್ಷಣ ಕಾಲೇಜುಗಳಲ್ಲಿ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರವೇಶ ಪಡೆದುಕೊಳ್ಳುವುದಕ್ಕೆಂದು ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಎನ್‌ಟಿಎ) ಮೂಲಕ ನಡೆಸಲಾಗುವ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸುವ ಮೂಲಕ ಎಕ್ಸಲಂಟ್ ಕಾಲೇಜಿನ ವಿದ್ಯಾರ್ಥಿಗಳು ಮತ್ತೊಂದು ಸಾಧನೆ ಮಾಡಿದ್ದಾರೆ.

ಜ. 2026ರಲ್ಲಿ ಜರುಗಿದ ಜೆಇಇ ಪರೀಕ್ಷೆಯ ಫಲಿತಾಂಶಪ್ರಕಟಗೊಂಡಿದ್ದು, ಅತ್ಯಂತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಅದರಲ್ಲಿಯೂ ಸಲ್ಮಾನ ಗೋಡಿಹಾಳ 98.11 ಪ್ರತಿಷತ ಅಂಕಗಳನ್ನು ಪಡೆದುಕೊಳ್ಳುವ ಮೂಲಕ ಅತಿ ಹೆಚ್ಚು ಅಂಕಗಳನ್ನು ಪಡೆದ ಕೀರ್ತಿಗೆ ಪಾತ್ರನಾದರೆ, ಇನ್ನುಳಿದಂತೆ ಸಂಕೇತ ಬಿರಾದಾರ (97.70), ಧೈರ್ಯಶೀಲ ಹವಾಲ್ದಾರ(96.85), ರಿಜ್ವಾನ್ ಶೇಖ್ (96.82), ಅಭಿಷೇಕ್ ಜಂಗಮಶೆಟ್ಟಿ (96.58), ಭೂಮಿಕಾ ತಳವಾರ (96.46), ಅನುಷ್ಕಾ ಮಹಿಶಾಳೆ (96.09), ಶ್ರೇಯಸ್ ಹಳಕಟ್ಟಿ (94.86), ಅನುಷಾ ಎಡವಣ್ಣವರ (94.43), ನಿವೇಶ ಮುಗಳಿ (94.23), ಬಸವಾ ಗೋಳಸಂಗಿ (93.82), ಕೀರ್ತಿ ಬಿರಾದಾರ (93.78), ಅನನ್ಯಾ ರೊಟ್ಟಿ (93.71), ಎನ್. ರಜತ್ (92.38), ಶ್ರೇಯಾ ಗಂಗರಗೊಂಡ (92.16), ನಿಖಿಲ್ ಕಿತ್ತೂರ (92.11), ಪ್ರತೀಕ್ ಚವ್ಹಾಣ (91.76), ಹಣಮಂತ ನಂದ್ಯಾಳ (90.94), ಆದಿತ್ಯಾ ರಾಠೋಡ (90.33), ಪ್ರವೀಣ ಬಿರಾದಾರ (90.23), ಸುಜಯ್ ಕುಲಕರ್ಣಿ (90.00) ಸೇರಿದಂತೆ ಒಟ್ಟು 21 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಶೇ. 90 ಕ್ಕೂ ಅಧಿಕ ಅಂಕಗಳನ್ನು ಪಡೆದುಕೊಂಡಿದ್ದು, ಈ ಮೂಲಕ ಮುಂದಿನ ದಿನಗಳಲ್ಲಿ ಜರುಗುವ ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲಿಯೂ ಸಹ ಅತ್ಯುತ್ತಮವಾದ ಫಲಿತಾಂಶವನ್ನು ಪಡೆದುಕೊಳ್ಳುವ ಭರವಸೆ ಮೂಡಿಸಿದ್ದಾರೆ.

ಈ ಕುರಿತು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಸವರಾಜ್ ಕೌಲಗಿ ಮಾತನಾಡಿ, ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಗಳು ಸದಾ ಮಕ್ಕಳ ಶ್ರೇಯೋಭಿವೃದ್ಧಿಗಾಗಿಯೇ ಶ್ರಮಿಸುತ್ತವೆ. ಅದೇ ರೀತಿ ನಮ್ಮಲ್ಲಿ ಕಲಿಯುವ ಮಕ್ಕಳು ಸದಾ ಸಾಧನೆಯ ಪಥದಲ್ಲಿ ಹೆಜ್ಜೆ ಹಾಕುವುದರೆಡೆಗೆ ದೃಷ್ಟಿ ನೆಟ್ಟಿರುತ್ತಾರೆ. ಇನ್ನೂ ಹೆಚ್ಚಿನ ಫಲಿತಾಂಗಳನ್ನು ನೀಡುವ ಮೂಲಕ ನಮ್ಮ ಸಂಸ್ಥೆ ಹೆತ್ತವರ ಕನಸುಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ. ಸಾಧನೆಯ ಹಾದಿಯಲ್ಲಿ ಸಾಗುತ್ತಿರುವ ಮಕ್ಕಳಿಗೆ ಹಾಗೂ ಅವರ ಸಾಧನೆಗೆ ನೆರವಾದ ಉಪನ್ಯಾಸಕ ವರ್ಗಕ್ಕೆ ಅಭಿನಂದನೆಗಳನ್ನು ಸಲ್ಲಿಸಿವೆ ಎಂದರು.

ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿಯ ಸರ್ವ ಸದಸ್ಯ ಬಳಗ, ಕಾಲೇಜಿನ ಪ್ರಾಚಾರ್ಯ ಮಂಜುನಾಥ ಜುನಗೊಂಡ ಸೇರಿದಂತೆ ಬೋಧಕ, ಬೋಧಕೇತರ ಸಿಬ್ಬಂದಿ ಅಭಿನಂದನೆಗಳನ್ನು ಸಲ್ಲಿಸಿದರು.

ಬಳ್ಳಾರಿ ಐಜಿಪಿ ಡಾ.ಪಿ.ಎಸ್.ಹರ್ಷ ಸಂತಸ

ನ್ಯಾಯಾಲಯದಿಂದ ಐತಿಹಾಸಿಕ ತೀರ್ಪು



ಕೊಪ್ಪಳ: ಗಂಗಾವತಿ ಹೆಚ್ಚುವರಿ ಜಿಲ್ಲಾ ನ್ಯಾಯಾಲಯ, ಇಸ್ರೇಲ್ ದೇಶದ ಪ್ರವಾಸಿ ಮೇಲಿನ ಅತ್ಯಾಚಾರ ಹಾಗೂ ಒಡಿಸಾ ಯುವಕನ ಕೊಲೆ ಪ್ರಕರಣದಲ್ಲಿ ಐತಿಹಾಸಿಕ ತೀರ್ಪು ನೀಡಿದೆ. ಈ ತೀರ್ಪಿನಿಂದ ಭಾರತದ ನ್ಯಾಯಾಂಗ ವ್ಯವಸ್ಥೆ ಬಗ್ಗೆ ಜಾಗತಿಕ ಮಟ್ಟದಲ್ಲಿ ಭರವಸೆ ಹೆಚ್ಚಾಗಿದೆ. ಈ ನೆಲದ ಕಾನೂನಿನ ಬಗ್ಗೆ ಗೌರವ ಮೂಡಿಸಿದೆ ಎಂದು ಬಳ್ಳಾರಿ ಐಜಿಪಿ ಡಾ.ಪಿ.ಎಸ್.ಹರ್ಷ ಹೇಳಿದರು.

ಕೊಪ್ಪಳದ ಎಸ್ಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಘಟನೆ ನಡೆದ ಕೇವಲ 11 ತಿಂಗಳ ಒಳಗೆ ದುಷ್ಕರ್ಮಿಗಳಿಗೆ ಶಿಕ್ಷೆ ಆಗಿದೆ. ಈ ನೆಲದ ಕಾನೂನಿನ ಅಡಿಯಲ್ಲಿ ದುಷ್ಕರ್ಮಿಗಳು ಶಿಕ್ಷೆಗೆ ಒಳಗಾಗಿದ್ದಾರೆ.

ಈ ಪ್ರಕರಣ ರಾಜ್ಯದ ಪೊಲೀಸರು ಸಾರ್ವಜನಿಕ ಸಂರಕ್ಷಣೆ ಬಗ್ಗೆ ಹೊಂದಿರುವ ಬದ್ಧತೆ ಪ್ರದರ್ಶಿಸುತ್ತದೆ. ಐತಿಹಾಸಿಕ ತೀರ್ಪು ಹೊರ ಬರಲು ಕಾರಣರಾದ ಕೊಪ್ಪಳ ಎಸ್ಪಿ ಡಾ.ರಾಮ್ ಎಲ್.ಅರಸಿದ್ದಿ ಸೇರಿ ಇಡೀ ಪೊಲೀಸ್ ತನಿಖಾ ತಂಡ ಹಾಗೂ ಸರ್ಕಾರಿ ಅಭಿಯೋಜಕಿ ನಾಗಲಕ್ಷ್ಮೀ ಹಾಗೂ ಸೂಕ್ತ ಸಮಯದಲ್ಲಿ ಬಂದು ಸಾಕ್ಷಿ ಹೇಳಿರುವ ಸಾರ್ವಜನಿಕರು ಅಭಿನಂದನಾರ್ಹರು ಎಂದು ತಿಳಿಸಿದರು.

ಆರೋಪಿ ಮಲ್ಲೇಶ ಹಂದಿ ಮಲ್ಲ ಮತ್ತು ಶರಣಪ್ಪ ಶರಣಬಸವರಾಜ್ ಅವರನ್ನು ಘಟನೆ ನಡೆದ 24 ಗಂಟೆ ಒಳಗಾಗಿ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ಮಾಡುತ್ತಾರೆ. ಮಾ.6ಕ್ಕೆ ರಾತ್ರಿ ಘಟನೆ ನಡೆದಿದೆ. ಮಾ.7ಕ್ಕೆ ತಮ್ಮ ಮೇಲೆ ಆಗಿರುವ ಅತ್ಯಾಚಾರದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದಾಗ ಎಫ್‌ಐಆರ್ ಆಗಿದೆ ಎಂದು ಮಾಹಿತಿ ನೀಡಿದರು.

ತ್ವರಿತ ತನಿಖೆ, ವಿಚಾರಣೆ: ಕಳೆದ 2025ರ ಮಾ.7ಕ್ಕೆ ಎಫ್‌ಐಆರ್ ಆಗಿದ್ದು, 2025ರ ಮೇ 30ಕ್ಕೆ ಪೊಲೀಸರು ಆರೋಪಪಟ್ಟಿ ಸಲ್ಲಿಸಿದ್ದಾರೆ. ಕೇವಲ 84 ದಿನಕ್ಕೆ ಒಟ್ಟು 1500 ಸಾವಿರ ಪುಟದ ಆರೋಪ ಪಟ್ಟಿ ಸಲ್ಲಿಸಲಾಗಿದೆ. ಡಿಜಿಟಲ್ ವಿಧಿವಿಜ್ಞಾನ, ಮೂರು ಮೊಬೈಲ್ ಸೇರಿ ಒಟ್ಟು 85 ಮೆಟಿರಿಯಲ್ ಸೀಜ್ ಮಾಡಿ, ಕೋರ್ಟ್‌ಗೆ ಸಲ್ಲಿಸಲಾಗಿತ್ತು. ಮುಂದಿನ ಜು.10ರಿಂದಲೇ ಕೋರ್ಟ್ ಟ್ರಯಲ್ ಶುರು ಮಾಡಿತ್ತು. ಅತ್ಯಾಚಾರಕ್ಕೆ ಒಳಗಾದ ವಿದೇಶಿ ಮಹಿಳೆ, ಹಲ್ಲೆಗೆ ಒಳಗಾದ ಅಮೇರಿಕಾ ಪ್ರಜೆಯಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ಸಾಕ್ಷಿ ಪಡೆಯಲಾಗಿದೆ ಎಂದು ಮಾಹಿತಿ ನೀಡಿದರು.

ಎಸ್ಪಿ ಡಾ.ರಾಮ್ ಎಲ್. ಅರಸಿದ್ದಿ, ಎಎಸ್ಪಿ ಹೇಮಂತ ಕುಮಾರ, ಡಿವೈಎಸ್ಪಿಗಳಾದ ಸಿದ್ದಲಿಂಗಪ್ಪಗೌಡ ಪಾಟೀಲ್, ನ್ಯಾಮಗೌಡರ, ಸರಕಾರಿ ಅಭಿಯೋಜಕಿ ನಾಗಲಕ್ಷ್ಮೀ ಇದ್ದರು.

7 ಕುಖ್ಯಾತ ಕಳ್ಳರ ಬಂಧನ: 26 ಲಕ್ಷ ಮೌಲ್ಯದ ಸ್ವತ್ತು ಜಪ್ತಿ



ಕಲಬುರಗಿ: ನಗರದ ವಿವಿಧ ಭಾಗಗಳಲ್ಲಿ ನಡೆದ ಸರಣಿ ಸುಲಿಗೆ ಹಾಗೂ ಮನೆಗಳ್ಳತನ ಪ್ರಕರಣಗಳನ್ನು ಭೇದಿಸುವಲ್ಲಿ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ಮತ್ತು ಅಶೋಕ ನಗರ ಪೊಲೀಸ್ ಠಾಣೆ ಪೊಲೀಸರು ಯಶಸ್ವಿಯಾಗಿದ್ದು, ಒಟ್ಟು ಏಳು ಆರೋಪಿಗಳನ್ನು ಬಂಧಿಸಿ ಚಿನ್ನಾಭರಣ, ವಾಹನಗಳು ಸೇರಿ ರೂ. 26.11 ಲಕ್ಷ ಮೌಲ್ಯದ ಸ್ವತ್ತುಗಳನ್ನು ಜಪ್ತಿ ಮಾಡಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪಾ ಢಗೆ ತಿಳಿಸಿದರು.

ನಗರದ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವವಿದ್ಯಾಲಯ ಠಾಣಾ ವ್ಯಾಪ್ತಿಯಲ್ಲಿ ಮೊದಲ ಕಾರ್ಯಾಚರಣೆಯಲ್ಲಿ 12.25 ಲಕ್ಷ ಮೌಲ್ಯದ 40 ಗ್ರಾಂ ಚಿನ್ನ, ಒಂದು ಪಲ್ಸರ್ ಬೈಕ್ ಹಾಗೂ ಕ್ರಿಟಾ ಕಾರನ್ನು ವಶಪಡಿಸಿಕೊಳ್ಳಲಾಗಿದೆ. ಅದೇ ಠಾಣೆಯ ಮತ್ತೊಂದು ಮನೆಗಳ್ಳತನ ಪ್ರಕರಣದಲ್ಲಿ 6.66 ಲಕ್ಷ ಮೌಲ್ಯದ ಸ್ವತ್ತು ಹಾಗೂ ಅಶೋಕ ನಗರ ಠಾಣಾ ವ್ಯಾಪ್ತಿಯಲ್ಲಿ ನಡೆದ ಸರಗಳ್ಳತನ ಪ್ರಕರಣದಲ್ಲಿ 7.20 ಲಕ್ಷ ಮೌಲ್ಯದ ಚಿನ್ನದ ಸರ ಮತ್ತು ಪಲ್ಸರ್ ಎನ್.ಎಸ್ ಬೈಕ್ ಸೇರಿ ಒಟ್ಟು 26,11,000 ಮೌಲ್ಯದ ವಸ್ತು ಜಪ್ತು ಮಾಡಲಾಗಿದೆ ಮಾಹಿತಿ ನೀಡಿದರು.

ಆರೋಪಿಗಳಾದ ಇಮ್ರಾನ್ ಶೇಖ್, ಮಹಮ್ಮದ ಸಮೀರ, ಇಮ್ತಿಯಾಜ್ ಹಾಗೂ ರುಕ್ನೋದ್ದಿನ ಬಾಬಾ, ಮಹಮ್ಮದ ಜಮೀರ, ಆಕಾಶ ಮತ್ತು ನಾಗರಾಜ ಅವರನ್ನು ಬಂಧಿಸಿದ್ದಾರೆ.

'ಕೋಕಾ' ಪ್ರಯೋಗ

ಬಂಧಿತ ಆರೋಪಿಗಳಾದ ಇಮ್ರಾನ್ ಶೇಖ್ (12 ಪ್ರಕರಣ), ಇಮ್ತಿಯಾಜ್ (13), ಸಮೀರ್ (11) ಹಾಗೂ ರುಕ್ನೋದ್ದಿನ್ (05) ಮೇಲೆ ಕರ್ನಾಟಕ ಹಾಗೂ ತೆಲಂಗಾಣದ ಜಹೀರಾಬಾದ್ ಸೇರಿದಂತೆ ವಿವಿಧೆಡೆ ಹತ್ತಾರು ದರೋಡೆ ಪ್ರಕರಣಗಳಿವೆ. ಈ ಗ್ಯಾಂಗ್ ಸಿಸಿಟಿವಿ ಇಲ್ಲದ ಕಡೆಗಳಲ್ಲೇ ಕೃತ್ಯವೆಸಗುತ್ತಿತ್ತು. ಮಾಸ್ಕ್ ಧರಿಸಿ, ನಿರಂತರವಾಗಿ ಬಟ್ಟೆ ಹಾಗೂ ವಾಹನಗಳನ್ನು ಬದಲಿಸಿ ಪೊಲೀಸರಿಗೆ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದರು. ಈ ಅಂತರರಾಜ್ಯ ಗ್ಯಾಂಗ್‌ನ ಸರಣಿ ಅಪರಾಧಗಳನ್ನು ಪರಿಗಣಿಸಿ, ಇವರ ಮೇಲೆ ಕಠಿಣ 'ಕೋಕಾ' ಕಾಯ್ದೆ ಅಳವಡಿಸಲು ಕಲಬುರಗಿ ಪೊಲೀಸರು ನಿರ್ಧರಿಸಿದ್ದಾರೆ.

ಕಿರುಸುದ್ದಿ

ಮೂರ್ತಿ ಭಗ್ನ: ಕ್ರಮಕ್ಕೆ ಆಗ್ರಹ



◆**ಮುಂಡರಗಿ:** ತಾಲೂಕಿನ ಸಿಂಗಟಾಲೂರ ಗ್ರಾಮದ ತುಂಗಭದ್ರಾ ನದಿ ತೀರದಲ್ಲಿರುವ ಐತಿಹಾಸಿಕ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ದುಷ್ಕರ್ಮಿಗಳು ಭಾನುವಾರ ಬೆಳಗಿನ ಸಮಯದಲ್ಲಿ ಶಿವಲಿಂಗ ಹಾಗೂ ನಂದಿ ಮೂರ್ತಿಗಳನ್ನು ಹಾಗೂ ಹೊನ್ನತ್ತೆಮ್ಮ ಮೂರ್ತಿಯನ್ನು ಭಗ್ನಗೊಳಿಸಿರುವ ಕಿಡಗೇಡಿಗಳನ್ನು ಕೂಡಲೇ ಪತ್ತೆ ಹಚ್ಚಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸಾಮಾಜಿಕ ಕಾರ್ಯಕರ್ತ ಮಂಜುನಾಥ ಇಟಗಿ ಆಗ್ರಹಿಸಿದ್ದಾರೆ.

ಅವರು ಈ ಕುರಿತು ಹೊಸದಿಗಂತದೊಂದಿಗೆ ಮಾತನಾಡಿ, ಇದು ಉದ್ದೇಶಪೂರ್ವಕವಾಗಿ ಮೂರ್ತಿಗಳನ್ನು ಧ್ವಂಸಗೊಳಿಸಿದ್ದು ಖೇದಕರ. ಇಂತಹ ಕೃತ್ಯ ಎಸಗಿದವರ ಮೇಲೆ ಯಾವುದೇ ಮುಲಾಜಿಲ್ಲದೆ ಕಠಿಣ ಕ್ರಮ ಜರುಗಿಸಬೇಕು. ಇದು ಕೇವಲ ಶಿಂಗಟಾಲೂರ ಗ್ರಾಮದಲ್ಲಿ ನಡೆದಿರುವ ಕೃತ್ಯವಲ್ಲ, ಇಂತಹ ಕೃತ್ಯಗಳು ಅಲ್ಲಲ್ಲಿ ನಡೆದಿರುವುದು ಕಂಡುಬಂದಿದೆ. ಹಿಂದೂ ದೇವಸ್ಥಾನ, ಪುರಾತನ ದೇವಸ್ಥಾನಗಳ ಮೂರ್ತಿಗಳನ್ನು ನಿಧಿ ಆಸೆಗೆ ಕಿತ್ತೊಗೆಯುವ ಪ್ರಯತ್ನಗಳೂ ನಡೆಯುತ್ತಿವೆ. ಈ ಕುರಿತು ಕ್ರಮ ಜರುಗಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಪ್ರತಿಬಂಧಕಾಜ್ಞೆ ಜಾರಿ

◆**ಗದಗ:** ಸಿಬಿಎಸ್‌ಇ ವತಿಯಿಂದ 10 ಹಾಗೂ 12 ನೇ ತರಗತಿ ಪರೀಕ್ಷೆಗಳು ಫೆ. 18 ರಿಂದ ಏ.11 ರವರೆಗೆ ಬೆಳಗ್ಗೆ 10 ರಿಂದ ಮಧ್ಯಾಹ್ನ 1.30ರವರೆಗೆ ನಡೆಯಲಿದೆ. ಪರೀಕ್ಷಾ ಸಮಯದಲ್ಲಿ ನಕಲು ಮಾಡುವುದು, ಪರೀಕ್ಷಾರ್ಥಿಗಳ ಬದಲು ಬೇರೆಯವರು ಪರೀಕ್ಷೆಗೆ ಹಾಜರಾಗುವುದು ಮುಂತಾದ ಅವ್ಯವಹಾರ ತಡೆಗಟ್ಟಲು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಜಿಲ್ಲೆಯ 6 ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವನ್ನಾಗಿ ಘೋಷಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪರಿಮಿತಿಯೊಳಗೆ ಬೆಳಗ್ಗೆ 8.30 ರಿಂದ ಮಧ್ಯಾಹ್ನ 3ರವರಗೆ ಪ್ರತಿಬಂಧಕಾಜ್ಞೆ ಜಾರಿ ಮಾಡಲಾಗಿದೆ. ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು ಐದಕ್ಕಿಂತ ಹೆಚ್ಚು ಜನರು ಗುಂಪು ಕೂಡುವುದು ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಝರಾಕ್ಸ್ ಅಂಗಡಿ, ಬುಕ್‌ಸ್ಟಾಲ್, ಫೋಟೋ ಕಾಪಿಯರ್‌ಗಳನ್ನು ಬಂದ್ ಮಾಡಲು ಆದೇಶಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮೊಬೈಲ್ ಫೋನ್ ಮತ್ತು ಇತರೇ ಸಂಪರ್ಕ ಸಲಕರಣೆಗಳನ್ನು ತರುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಥೋತ್ಸವ ಇಂದು

◆**ನರಗುಂದ:** ಪಂಚಗೃಹ ಗುಡ್ಡದ ಹಿರೇಮಠದ ನಮ್ಮೂರ ಶ್ರೀ ಸಿದ್ಧೇಶ್ವರ ಜಾತ್ರಾ ಮಹೋತ್ಸವದ ರಥೋತ್ಸವವು ಫೆ18ರ ಸಂಜೆ 5 ಗಂಟೆಗೆ ಶ್ರೀಮಠದಿಂದ ಎಪ್‌ಎಂ ಹಸಬಿ ಮಾರ್ಗದ ಪ್ರಮುಖ ರಾಜಬೀದಿಯಲ್ಲಿ ಹೊರಟು ಕೆಂಪಗಸಿ ಬಸವೇಶ್ವರ ದೇವಸ್ಥಾನದ ಪಾದಗಟ್ಟಿ ವರೆಗೆ ಜರುಗಲಿದೆ. ಬೆಳಗ್ಗೆ ಶ್ರೀಮಠದ ಕರ್ತೃ ಸಿದ್ಧೇಶ್ವರ ಗದ್ದುಗೆ ಮಹಾರುದ್ರಾಭಿಷೇಕ ಜರುಗಲಿದೆ. ತುಪ್ಪದಕುರಹಟ್ಟಿ ಭೂಸನೂರ ಸಂಸ್ಥಾನಮಠದ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಅಯ್ಯಾಚಾರ ಹಾಗೂ ಲಿಂಗದೀಕ್ಷೆ ಕಾರ್ಯಕ್ರಮವು ವೈದಿಕ ವೃಂದದವರಿಂದ ಜರುಗಲಿದೆ. ಬೆಳಗ್ಗೆಯಿಂದ ಸಂಜೆಯ ವರೆಗೆ ಮಹಾಪ್ರಸಾದ ಜರುಗುತ್ತದೆ ಎಂದು ಶ್ರೀಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ರಾಮಕೃಷ್ಣರ ಜಯಂತಿ ನಾಳೆ

◆**ಗದಗ:** ನಗರದ ಎಪಿಎಂಸಿ ಪ್ರಾಂಗಣದಲ್ಲಿರುವ ರಾಮಕೃಷ್ಣ-ವಿವೇಕಾನಂದ ಆಶ್ರಮದಲ್ಲಿ ಫೆ.19 ರಂದು ಭಗವಾನ್ ರಾಮಕೃಷ್ಣರ 191ನೇ ಜಯಂತಿಯ ಕಾರ್ಯಕ್ರಮಗಳು ಜರುಗಲಿವೆ. ಬೆಳಗ್ಗೆ 6ಕ್ಕೆ ಮಂಗಳಾರತಿ, 6.30ಕ್ಕೆ ಉಷಃಕೀರ್ತನೆ, 8.30 ಕ್ಕೆ ಪೂಜೆ, 10.30ಕ್ಕೆ ಹೋಮ ಹಾಗೂ ವಿಷ್ಣುಸಹಸ್ರನಾಮ ಪಾರಾಯಣ, 11ಕ್ಕೆ ಭಜನೆ, 12ಕ್ಕೆ ನಿರ್ಭಯಾನಂದ ಸರಸ್ವತಿ ಸ್ವಾಮೀಜಿ ಅವರಿಂದ ಉಪನ್ಯಾಸ, ಮಧ್ಯಾಹ್ನ 1.30ಕ್ಕೆ ಮಹಾಪ್ರಸಾದ, ಸಂಜೆ 6.30ಕ್ಕೆ ಭಜನೆ, 7ಕ್ಕೆ ಹರಿಕಥೆ, 8.30ಕ್ಕೆ ಆಶೀರ್ವಚನ, 8.45ಕ್ಕೆ ಪ್ರಸಾದ ಹೀಗೆ ವಿವಿಧ ಕಾರ್ಯಕ್ರಮಗಳು ವರ್ಷದ ಪದ್ಧತಿಯಂತೆ ಜರುಗಲಿದೆ ಎಂದು ರಾಮಕೃಷ್ಣ-ವಿವೇಕಾನಂದ ಆಶ್ರಮ ಪ್ರಕಟಣೆಯಲ್ಲಿ ತಿಳಿಸಿದೆ.

ಸಾಂಸ್ಕೃತಿಕ ಕಾರ್ಯಕ್ರಮ

◆**ಗದಗ:** ತಾಲೂಕಿನ ಕಳಸಾಪುರ ಗ್ರಾಮದಲ್ಲಿ ಈಶ್ವರ ಬಸವಣ್ಣ ದೇವರ 16 ನೇ ವರ್ಷದ ಜಾತ್ರಾ ಮಹೋತ್ಸವ ಅಂಗವಾಗಿ ಶಿವಶರಣೆ ಗುಡ್ಡಾಪುರದ ದಾನಮ್ಮದೇವಿ ಪುರಾಣ ಪ್ರಾರಂಭೋತ್ಸವ, ಸರ್ವಧರ್ಮ ಸಾಮೂಹಿಕ ವಿವಾಹ, ಮಹಾರಥೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿವೆ. ಮಾ.3ರಿಂದ 15 ರವರೆಗೆ ಪ್ರತಿದಿನ ಸಂಜೆ 7ಕ್ಕೆ ಶಿವಲಿಂಗಯ್ಯ ಶಾಸ್ತ್ರಿಗಳು ಹಿರೇಮಠ ಸಿದ್ದಾಪುರ ಅವರಿಂದ ಪುರಾಣಪ್ರವಚನ ಜರುಗಲಿದೆ. ಮಾ.15 ರಂದು ಬೆಳಗ್ಗೆ 8.30ಕ್ಕೆ ಕಳಸಾರೋಹಣ ಜರುಗುವುದು. ಮಾ.16 ರಿಂದ 18ರ ವರೆಗೆ ಪ್ರತಿದಿನ ಸಂಜೆ 7ಕ್ಕೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಮಾ.18ರಂದು ಸಂಜೆ 4ಕ್ಕೆ ಕುಂಭಮೇಳ ಜರುಗಲಿದೆ. ಮಾ.19ರಂದು ಬೆಳಗ್ಗೆ 11.30ಕ್ಕೆ ಸರ್ವಧರ್ಮ ಸಾಮೂಹಿಕ ವಿವಾಹ ಮಹೋತ್ಸವ ಜರುಗುವುದು. ಸಂಜೆ 5.30ಕ್ಕೆ ಮಹಾರಥೋತ್ಸವ ಜರುಗಲಿದೆ. ಮಾ.20 ರಂದು ಸಂಜೆ 5.30ಕ್ಕೆ ಲಘು ರಥೋತ್ಸವ ಹಾಗೂ ರಾತ್ರಿ 9.30ಕ್ಕೆ ರಸಮಂಜರಿ ಕಾರ್ಯಕ್ರಮ ಜರುಗಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.



ನರಗುಂದ: ಪಟ್ಟಣದ ಕಿತ್ತೂರ ರಾಣಿ ಚನ್ನಮ್ಮಾಜಿ ವೃತ್ತದಲ್ಲಿ ಸರ್ವ ಜನಾಂಗದ ಸಂಘ ಸಂಸ್ಥೆಗಳ ವತಿಯಿಂದ ಡಾ.ಬಿ ಆರ್ ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನರಾಮ್ ಅವರುಗಳ ಪುತ್ಥಳಿ ಸ್ಥಾಪನೆಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಹೋರಾಟ ನಡೆಯಿತು. ಸ್ಥಾಪನೆ ಮಾಡುವವರೆಗೂ ನಾವು ನಮ್ಮ ಹೋರಾಟವನ್ನು ನಿಲ್ಲಿಸಲ್ಲ ಎಂದು ಹೋರಾಟಗಾರರು ಹೇಳಿದರು. ಹೋರಾಟದ ಸ್ಥಳಕ್ಕೆ ತಹಶೀಲ್ದಾರ್ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪೊಲೀಸ್ ಇಲಾಖೆ ಸಿಪಿಐ ಮಂಜುನಾಥ ನಡುವಿನಮನಿ ಭೇಟಿ ನೀಡಿದರು. ಮುತ್ತುಸ್ ಫೌಂಡೇಷನ್ ಅಧ್ಯಕ್ಷ ಡಾ.ಮುತ್ತು ಸುರಕೋಡ, ಕಿರಣ ಜೋಗಣ್ಣವರ, ರವಿ ಚಿಂತಾಲ, ಈರಪ್ಪ ಮಾದರ, ಕಿರಣ ಜೋಗಣ್ಣವರ, ವಿಜಯ ಚಲವಾದಿ ಇತರರಿದ್ದರು.

ಫೆ.27ರಂದು ಜಿಲ್ಲಾಮಟ್ಟದ ಜನತಾ ದರ್ಶನ

◆**ಗದಗ:** ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮ ಫೆ.27ರಂದು ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಡಳಿತವು ಜನತಾದರ್ಶನ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಆಯೋಜಿಸಿ ಸಾರ್ವಜನಿಕರ ಅಹವಾಲುಗಳಿಗೆ ಪರಿಹಾರವನ್ನು ಒದಗಿಸುವ ನಿಟ್ಟಿನಲ್ಲಿ ಸಾರ್ವಜನಿಕರಿಂದ ಮನವಿಗಳನ್ನು ಸ್ವೀಕರಿಸಲು ಜಿಲ್ಲಾಡಳಿತ ಭವನದಲ್ಲಿ ಹಾಗೂ ಜಿಲ್ಲೆಯ ಎಲ್ಲಾ ತಾಲೂಕಿನ ತಹಶೀಲ್ದಾರ್ ಕಾರ್ಯಾಲಯಗಳಲ್ಲಿ ಜಿಲ್ಲಾ ಮಟ್ಟದ ಜನತಾ ದರ್ಶನಕ್ಕೆ ಸಂಬಂಧಿಸಿದ ಅರ್ಜಿಗಳ ಸ್ವೀಕರಿಸುವ ಕೇಂದ್ರಗಳನ್ನು ಫೆ.16ರಿಂದ ಪ್ರಾರಂಭಿಸಲಾಗುವುದು. ತಾಲೂಕು ಮಟ್ಟದಲ್ಲಿ ತಹಶೀಲ್ದಾರ್ ಕಚೇರಿಗಳಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಪ್ರತಿದಿನ ಸಂಬಂಧಿಸಿದ ಕಚೇರಿಗಳಿಗೆ ನೀಡಲಾಗುವುದು. ಸಂಬಂಧಿಸಿದ ಕಚೇರಿಯವರು ಅರ್ಜಿದಾರರ ಕೋರಿಕೆ ಬಗ್ಗೆ ನಿಯಮಬದ್ಧವಾಗಿ ಪರಿಹಾರ ನೀಡಲು ಕ್ರಮ ಜರುಗಿಸುವುದು. ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಫೆ.27 ರಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆವರಣದಲ್ಲಿ ನಡೆಯುವ ಜನತಾದರ್ಶನದ ವೇಳೆಯಲ್ಲಿ ಅರ್ಜಿದಾರರ ಕೋರಿಕೆಗೆ ನೀಡಿರುವ ಪರಿಹಾರ ಹಾಗೂ ಅಗತ್ಯ ದಾಖಲೆಗಳೊಂದಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಾಗಿ ಅರ್ಜಿದಾರರಿಗೆ ಪರಿಹಾರ ನೀಡಲಾಗುವುದು. ಸಾರ್ವಜನಿಕರು ಈ ಕಾರ್ಯಕ್ರಮದ ಸದುಪಯೋಗಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದ್ದಾರೆ.



ಗದಗ: ಮಹಾಶಿವರಾತ್ರಿ ಅಂಗವಾಗಿ ತಾಲೂಕಿನ ಲಕ್ಕುಂಡಿಯ ಬಿನ್ನಾಳ ಬಸವೇಶ್ವರ ರಥೋತ್ಸವವು ಸಂಭ್ರಮದಿಂದ ಮಂಗಳವಾರ ಸಂಜೆ ಜರುಗಿತು. ಅಲ್ಲಮ ಪ್ರಭುದೇವರ ಮಠದ ಸಿದ್ಧಲಿಂಗೇಶ್ವರ ಸ್ವಾಮೀಜಿ ಪೂಜಾ ವಿಧಿ ವಿಧಾನಗಳನ್ನು ಪೂರೈಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ಯೋಜನಾ ಸಮಿತಿ ಸಭೆ | ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಹೇಳಿಕೆ

ಅಧಿಕಾರಿಗಳು ಜನ ಮಿತ್ರರಾಗಲಿ

◆**ಗದಗ:** ಜಿಲ್ಲೆಯ ಪ್ರತಿ ಗ್ರಾಮಗಳಲ್ಲಿನ ಕಟ್ಟಕಡೆಯ ವ್ಯಕ್ತಿಯ ಅಭಿಪ್ರಾಯವನ್ನು ಗ್ರಾಮ ಸಭೆಗಳ ಮೂಲಕ ಮೇಲಿನ ಹಂತಕ್ಕೆ ಕೊಂಡೊಯ್ಯಬೇಕು. ಗ್ರಾಮ ಸಭೆಗಳಲ್ಲಿನ ಅಭಿಪ್ರಾಯ ಯೋಜನೆ ರೂಪದಲ್ಲಿ ಜಾರಿಗೆ ತರುವ ಕಾರ್ಯವಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ ಜರುಗಿದ ಯೋಜನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜನಪ್ರತಿನಿಧಿಗಳು ಜನರ ಅಭಿಪ್ರಾಯದಂತೆ ಯೋಜನೆ ರೂಪಿಸಬೇಕಾಗಿದೆ. ಗ್ರಾಮ ಸ್ವರಾಜ್ಯ ಹಾಗೂ ಪಂಚಾಯತ್ ರಾಜ್ ಕಾನೂನು ಜಾರಿಗೆ ತರುವುದರಲ್ಲಿ ಜಿಲ್ಲೆಯ ಪಾತ್ರ ಬಹುಮುಖ್ಯವಾಗಿದೆ. ಗ್ರಾಮ ಮಟ್ಟದಿಂದಲೇ ಯೋಜನೆಗಳನ್ನು ರೂಪಿಸುವ ಕಾನೂನಿನಲ್ಲಿವೆ. ಈ ಕಾನೂನ ಸಮರ್ಪಕವಾಗಿ ಅನುಷ್ಠಾನವಾದರೆ ಗ್ರಾಮಗಳ ಅಭಿವೃದ್ಧಿ ಸಾಧ್ಯವಾಗಲಿದೆ ಎಂದರು.

ಕೆಳಹಂತದಿಂದ ಮೇಲಿನ ಹಂತದವರೆಗೆ ಯೋಜನೆಗಳನ್ನು ರೂಪಿಸಿ ಅವುಗಳನ್ನು ಜಾರಿಗೆ ತರುವ ಕಾರ್ಯದಲ್ಲಿ ಜಿಲ್ಲೆ ಯಾವುದೇ ಕಾರಣಕ್ಕೂ ಹಿಂದುಳಿಯಬಾರದು. ಯೋಜನೆ ರೂಪಿಸುವಲ್ಲಿ ಜನಪ್ರತಿನಿಧಿ ಹಾಗೂ ಅಧಿಕಾರಿಗಳ ನಡುವೆ ಸಂಘರ್ಷವಿದ್ದು, ದೇಶದಲ್ಲಿ ಜನರ ಅಭಿಪ್ರಾಯದಂತೆ ಯೋಜನೆಗಳನ್ನು ರೂಪಿಸಲು ಸಾಧ್ಯವಾಗುತ್ತಿಲ್ಲ. ಅಧಿಕಾರಿಗಳು ಜನ ಮಿತ್ರರಾಗಿದ್ದಲ್ಲಿ ಮಾತ್ರ ಅಭಿವೃದ್ಧಿ ಸಾಧ್ಯ. ಯೋಜನೆ ರೂಪಿಸುವ ಸಂದರ್ಭದಲ್ಲಿ ಗ್ರಾಮಸಭೆ, ಜನಪ್ರತಿನಿಧಿಗಳ ಸಲಹೆಗಳನ್ನು ಪಡೆಯಬೇಕಾಗಿದೆ. ಗ್ರಾಮ ಪಂಚಾಯತ್‌ಗಳ ಮೂಲಕ ಆದ್ಯತೆ ಪ್ರಕಾರ ಯೋಜನೆಗಳ ಪಟ್ಟಿಯನ್ನು ತಯಾರಿಸಬೇಕು ಎಂದರು.

ಜಿಲ್ಲಾ ಯೋಜನಾ ಸಮಿತಿ ಸದಸ್ಯ ಕೃಷ್ಣಾ ಪರಾಪೂರ, ಬರಕತ್ ಅಲಿಮುಲ್ಲಾ ಅಬ್ದುಲ್, ಚಂದ್ರಶೇಖರಗೌಡ ಕರಿಸೋಮನಗೌಡ, ವಿಜಯಕುಮಾರ ನೀಲಗುಂದ, ರಾಚಯ್ಯ ಮಾಲಗಿತ್ತಿ, ರಾಜೇಸಾಬ ಸಾಂಗ್ಲಿಕರ, ರಾಜಶೇಖರ ಮಾಲಗಿತ್ತಿ, ಸುರೇಶ ಕಟ್ಟಿಮನಿ, ರಾಜೇಸಾಬ ಬೆಟಗೇರಿ, ರಾಜೇಶ್ವರಿ ವೀರನಗೌಡ್ರ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಮಣದೀಪ ಚೌದರಿ, ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ ಕುಮಾರ, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್., ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ ಇದ್ದರು. ಜಿಲ್ಲಾ ಅಂಕಿ ಸಂಖ್ಯೆ ಸಂಗ್ರಹಣಾಧಿಕಾರಿ ಎ.ಎ.ಕಂಬಾಳಿಮಠ ಜಿಲ್ಲಾ ವಾರ್ಷಿಕ ಕರಡು ಯಾದಿ ಮಂಡಿಸಿದರು.



> ವರ್ಷದಿಂದ ವರ್ಷಕ್ಕೆ ಜಿಲ್ಲೆಯಲ್ಲಿ ತೇಂಗಾ, ಮಾವು ಸೇರಿದಂತೆ ಇತರೆ ಬೆಳಗಳ ಇಳುವರಿ ಕಡಿಮೆಯಾಗುತ್ತಿರುವ ಕುರಿತು ಕಾರಣ ತಿಳಿದುಕೊಂಡು ಮಾಹಿತಿ ನೀಡುವುದರ ಜೊತೆಗೆ ಜಿಲ್ಲೆಯ ಮೂಲಭೂತ ಅವಶ್ಯಕತೆಗಳು, ಶಾಲೆಗಳಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕುರಿತು ವಿವರವಾದ ಮಾಹಿತಿ ಕ್ರೋಢೀಕರಿಸಿ ಪ್ರಸ್ತಾವನೆ ಸಲ್ಲಿಸಬೇಕು.
> ■ **ಎಚ್.ಕೆ.ಪಾಟೀಲ, ಜಿಲ್ಲಾ ಉಸ್ತುವಾರಿ ಸಚಿವ**

> ಗ್ರಾಮಸಭೆಗಳ ಮೂಲಕ ಆಯ್ಕೆ ಮಾಡುವ ಯೋಜನೆಗಳನ್ನು ಆದ್ಯತೆ ಮೇರೆಗೆ ಅನುಷ್ಠಾನಕ್ಕೆ ಕ್ರಮ ವಹಿಸಿ, ಆಯಾ ಯೋಜನೆಗಳನ್ನು ಗ್ರಾಮ ಪಂಚಾಯತ್ ಮೂಲಕವೇ ಅನುಷ್ಠಾನಗೊಳಿಸುವ ಕಾರ್ಯವಾಗಬೇಕು. ಯೋಜನೆಗಳ ತಯಾರಿಕೆಯಲ್ಲಿ ಗ್ರಾಮೀಣ ವಾರ್ಡ್ ಸಭೆ, ಗ್ರಾಮ ಸಭೆ, ಗ್ರಾಮ ಅಭಿವೃದ್ಧಿ ಯೋಜನೆ ಮೂಲಕ ಕೆಳಮಟ್ಟದಿಂದಲೇ ಅಭಿವೃದ್ಧಿಗೆ ಸಹಕಾರಿಯಾಗಲಿದೆ.
> ■ **ಡಿ.ಆರ್.ಪಾಟೀಲ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ**

ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆ ಅವಶ್ಯ

◆**ಮುಂಡರಗಿ:** ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳು ಅವಶ್ಯಕವಾಗಿದೆ ಎಂದು ಜಗದ್ಗುರು ನಾಡೋಜ ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳು ಹೇಳಿದರು.

ಅವರು ಜಗದ್ಗುರು ಅನ್ನದಾನೀಶ್ವರ ಆಂಗ್ಲ ಮಾಧ್ಯಮ ಶಾಲೆ ಹಾಗೂ ಜಗದ್ಗುರು ಅನ್ನದಾನೀಶ್ವರ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, 1982 ರಲ್ಲಿ ಮಠದ ಆವರಣದಲ್ಲಿ ಆಂಗ್ಲ ಮಾಧ್ಯಮ ಶಾಲೆಯನ್ನು ಪ್ರಾರಂಭಿಸಿದ್ದು, ಇಂದು ಶಾಲೆಯ ಸಾಧನೆ ಅಮೋಘವಾಗಿ ಬೆಳೆಯುತ್ತಿದೆ. ಹಾಗೇ ಈ ಶಾಲೆಯ ಪ್ರಗತಿಗೆ ಇದೇ ಶಾಲೆಯಲ್ಲಿ ಶಿಕ್ಷಣ ಪಡೆದು ಉನ್ನತ ಸ್ಥಾನ ಮಾನಗಳನ್ನು ಪಡೆದಿರುವಂತಹ ಹಿರಿಯ ವಿದ್ಯಾರ್ಥಿಗಳು ಸಹಾಯ, ಸಹಕಾರ ನೀಡುವುದಕ್ಕೆ ಮುಂದೆ ಬಂದಿರುವುದು ಒಳ್ಳೆಯ ಬೆಳವಣಿಗೆ. ಶಿಕ್ಷಕರು ಕೂಡಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದಕ್ಕೆ ಮುಂದಾಗಬೇಕು ಎಂದರು.

ಶಾಂತಾ ಕಾವಲದಂಡಿ ಮಾತನಾಡಿ, ಮಕ್ಕಳ ಅಭಿರುಚಿಗೆ ತಕ್ಕಂತೆ ಬೋಧನೆ ಮಾಡಬೇಕು. ಗುಣಮಟ್ಟದ ಶಿಕ್ಷಣ ನೀಡಬೇಕು. ಪಾಲಕರು ಮತ್ತು ಶಿಕ್ಷಕರು ಒಟ್ಟಾಗಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶ್ರಮಿಸಬೇಕು. ಇದರಿಂದ ಮಕ್ಕಳು ಸಾಧನೆ ಮಾಡಲು ಅನುಕೂಲವಾಗುತ್ತದೆ ಎಂದರು.

ಹಿರಿಯ ವಿದ್ಯಾರ್ಥಿಗಳಾದ ಡಾ. ಪ್ರಕಾಶ ಹೊಸಮನಿ, ಡಾ.ವಿರೇಶ ಹಂಚಿನಾಳ ಮಾತನಾಡಿ, ಜ.ಅ. ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶಿಕ್ಷಣ ಪಡೆಯುವಂತಹ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಕಲ್ಪಿಸಿಕೊಡುವುದಕ್ಕಾಗಿ ಈ ಶಾಲೆಯಲ್ಲಿ ವ್ಯಾಸಂಗ ಮಾಡಿದಂತಹ ಹಿರಿಯ ವಿದ್ಯಾರ್ಥಿಗಳು ಶಾಲೆಯ ಅಭಿವೃದ್ಧಿಗಾಗಿ ಕೆಲವು ಯೋಜನೆಗಳನ್ನು ರೂಪಿಸಲಾಗಿದೆ. ಶೀಘ್ರ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಅನ್ನದಾನಿ ಮೇಟಿ ವಹಿಸಿದ್ದರು. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಡಾ. ಬಿ.ಜಿ. ಜವಳಿ, ಸುಧಾ ಸಾವುಕಾರ, ಗಂಗಾಧರ ಅಣ್ಣಿಗೇರಿ, ವಿ.ಎಚ್. ಹೊಳೆಯಮ್ಮನವರ, ನಾಗವೇಣಿ ಏರಿ, ಬಸವರಾಜ ಬಿಸನಳ್ಳಿ, ಅಂದಪ್ಪ ಗೋಡಿ, ರಾಜಶೇಖರ ಕಡಿವಾಳರ, ವೆಂಕಟೇಶ ದಾಸಕನಕಪ್ಪನವರ, ರಾಜು ಪ್ರೋತಿಸ್, ಭೀಮನಗೌಡ ತಿಪ್ಪಾಪೂರ, ಸುಭಾಷ ತಳವಾರ, ಮಂಜುನಾಥ ಬಡಿಗೇರ, ದೇವಪ್ಪ ಕಮ್ಮಾರ, ಹಾಲಯ್ಯ ಹಿರೇಮಠ ಮುಂತಾದವರಿದ್ದರು. ಜ್ಯೋತಿ ಕಾರ್ಯಕ್ರಮ ನಿರೂಪಿಸಿದರು. ಪಾಟೀಲ ಮಿಸ್ ವಂದಿಸಿದರು.



ಸ್ವಾವಲಂಬಿ ಜೀವನಕ್ಕೆ ಶಕ್ತಿ ನೀಡಿದ ಗ್ಯಾರಂಟಿ

◆**ಮುಂಡರಗಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ನೇತೃತ್ವದ ಕಾಂಗ್ರೆಸ್ ಸರ್ಕಾರವು ಜಾರಿಗೆ ತಂದಿರುವಂತಹ ಪಂಚ ಗ್ಯಾರಂಟಿ ಯೋಜನೆ ರಾಜ್ಯದ 1 ಕೋಟಿ, 26 ಲಕ್ಷ ಬಡ ಕುಟುಂಬಗಳಿಗೆ ಆರ್ಥಿಕ ಭದ್ರತೆಯೊಂದಿಗೆ ಸ್ವಾವಲಂಬಿ ಜೀವನಕ್ಕೆ ಶಕ್ತಿ ಕೊಟ್ಟಿದೆ ಎಂದು ಗದಗ ಜಿಲ್ಲಾ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಬಿ.ವಿ. ಅಸೂಟಿ, ಹೇಳಿದರು.

ಅವರು ಮುಂಡರಗಿಯ ತಾಲೂಕು ಪಂಚಾಯತಿ ಸಭಾಭವನದಲ್ಲಿ ಜರುಗಿದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಹಿನ್ನೆಲೆಯಾಗಿ ಫೆ.18ರಂದು ಗದಗ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಸಮಾವೇಶವನ್ನು ಆಯೋಜನೆ ಮಾಡಲಾಗಿದೆ ಎಂದರು.

ಮುಂಡರಗಿ ತಾಲೂಕು ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಡಿ.ಡಿ. ಮೋರನಾಳ ಮಾತನಾಡಿದರು. ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಹಾದೇವಪ್ಪ ಇರಸನಾಳ ಮಾತನಾಡಿ, ಗೃಹಲಕ್ಷ್ಮೀ ಯೋಜನೆಗಾಗಿ ಮುಂಡರಗಿ ತಾಲೂಕಿನಲ್ಲಿ 35680 ಫಲಾನುಭವಿಗಳು ಅರ್ಜಿ ಹಾಕಿದ್ದು ಅದರಲ್ಲಿ 34399 ಫಲಾನುಭವಿಗಳು ಲಾಭಪಡೆಯುತ್ತಿದ್ದಾರೆ ಎಂದರು. ಕೆ.ಪಿ.ಟಿ.ಸಿ.ಎಲ್. ಇಲಾಖೆಯ ಅಧಿಕಾರಿ ಚನ್ನಪ್ಪ ಲಮಾಣಿ ಮಾತನಾಡಿ, ತಾಲೂಕಿನಲ್ಲಿ 32951 ಕುಟುಂಬಗಳು ಗೃಹಜ್ಯೋತಿ ಯೋಜನೆಯ ಲಾಭವನ್ನು ಪಡೆಯುತ್ತಿವೆ. ಶಕ್ತಿ ಯೋಜನೆಯಲ್ಲಿ ಮುಂಡರಗಿ ರಸ್ತೆ ಸಾರಿಗೆ ಘಟಕದ ಬಸ್ಸುಗಳಲ್ಲಿ ಶಕ್ತಿ ಯೋಜನೆ ಪ್ರಾರಂಭವಾದಾಗಿನಿಂದ ಒಟ್ಟು 17 ಕೋಟಿ ಮಹಿಳೆಯರು ಪ್ರಯಾಣ ಮಾಡಿದ್ದು, 61 ಕೋಟಿ ರೂ.ಗಳನ್ನು ಸರ್ಕಾರವು ಸಾರಿಗೆ ಸಂಸ್ಥೆಗೆ ಆದಾಯ ನೀಡಿದೆ ಎಂದರು.

ಗದಗ ಜಿಲ್ಲಾ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷರಾದ ಹೇಮಂತಗೌಡ ಪಾಟೀಲ, ಮಲಕೇಶಗೌಡ ಪಾಟೀಲ, ರಾಮಣ್ಣ ಮೇಗಲಮನಿ, ವಿಶ್ವನಾಥಗೌಡ ಪಾಟೀಲ, ನಾಗರಾಜ ಸಜ್ಜನರ, ಭವನೇಶ್ವರಿ ಕಲ್ಲಕೂಟಗರ, ನಿಂಗಪ್ಪ ಮಜ್ಜಗಿ, ಉಮೇಶ ಕಲಾಲ, ಜಲಾಲಸಾಬ ವಡ್ಡಟ್ಟಿ, ಶರಣಪ್ಪ ಮಲ್ಲಾಪೂರ, ದ್ರಾಕ್ಷಿ ಮುಂತಾದವರಿದ್ದರು. ಎಚ್.ಎಂ. ಕಾತರಕಿ ಸ್ವಾಗತಿಸಿದರು. ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ವಿಶ್ವನಾಥ ಹೊಸಮನಿ ವಂದಿಸಿದರು.



ಅಭಿವೃದ್ಧಿ ಕಾಮಗಾರಿಗೆ ಬಿಡುಗಡೆಯಾದ ಅನುದಾನದ ಬಳಕೆ ಸಮರ್ಪಕವಾಗಲಿ

◆**ಗದಗ:** ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಬಿಡುಗಡೆಯಾದಂತಹ ಅನುದಾನ ಸಮರ್ಪಕವಾಗಿ ಬಳಕೆ ಆಗಬೇಕು. ಈ ಅನುದಾನಡಿ ಜಿಲ್ಲೆಯಲ್ಲಿ ಕೈಗೊಳ್ಳಲಾಗುವ ಅಭಿವೃದ್ಧಿ ಕಾಮಗಾರಿಗಳು ಉತ್ತಮ ಗುಣಮಟ್ಟದಿಂದ ಕೂಡಿರುವಂತೆ ನಿಗಾವಹಿಸಲು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಬಿಡುಗಡೆಯಾದ ಅನುದಾನದ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಗರೋತ್ಥಾನದಡಿ ಬಿಡುಗಡೆಯಾದಂತಹ ಅನುದಾನ ಹಾಗೂ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ಮಾಹಿತಿ ಪಡೆದ ಸಚಿವರು ನಗರೋತ್ಥಾನದಡಿ ಕೈಗೊಳ್ಳಲಾಗುವ ರಸ್ತೆ, ಚರಂಡಿ ಮುಂತಾದ ಕಾಮಗಾರಿಗಳನ್ನು ಕಾಲಮಿತಿಯೊಳಗಾಗಿ ಪೂರ್ಣಗೊಳಿಸಬೇಕು. ಗದಗ ವಿಧಾನಸಭಾ ಮತಕ್ಷೇತ್ರ ಸೇರಿದಂತೆ ಜಿಲ್ಲೆಯಲ್ಲಿ ಕೂಗೊಳ್ಳಲಾಗುತ್ತಿರುವ ಅಪೂರ್ಣವಾದಂತಹ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಅವರು ಸೂಚಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕಬರಸಾಬ್ ಬಬರ್ಚಿ, ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷಕುಮಾರ, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್.ಕೆ.ಆರ್., ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ನಗರಸಭೆ ಪೌರಾಯುಕ್ತ ರಾಜಾರಾಮ್ ಪವಾರ್ ಇತರರಿದ್ದರು.



ವಿಬಿಜಿ ರಾಮ್ ಜಿಯಿಂದ ಭಾರತದ ವಿಕಾಸ



◆**ನರಗುಂದ:** ವಿಬಿಜಿ ರಾಮ್ ಜಿ ಯೋಜನೆಯ ಬಗ್ಗೆ ಕಾಂಗ್ರೆಸ್ ಸರ್ಕಾರ ಅಪಪ್ರಚಾರ ಮಾಡುತ್ತಿದೆ ಎಂದು ಆರೋಪಿಸಿ ನರಗುಂದ ವಿಧಾನಸಭಾ ಮತಕ್ಷೇತ್ರದ ಚಿಕ್ಕನರಗುಂದ ಗ್ರಾಮದಲ್ಲಿ ಬಿಜೆಪಿ ವತಿಯಿಂದ ಜನಜಾಗೃತಿ ಅಭಿಯಾನ ನಡೆಯಿತು.


ಶಾಸಕ ಸಿ.ಸಿ. ಪಾಟೀಲ ಮಾತನಾಡಿ, ಗ್ರಾಮೀಣ ಶಕ್ತಿಯನ್ನು ವಿಕಸಿತ ಭಾರತದ ಗುರಿಯೊಂದಿಗೆ ಜೋಡಿಸುವ ನಿಟ್ಟಿನಲ್ಲಿ ಈ ಮಹತ್ವದ ಕಾನೂನಿನ ಬಗ್ಗೆ ನಮ್ಮ ಗ್ರಾಮೀಣ ಜನತೆಗೆ ಮಾಹಿತಿ ನೀಡಿ ಅವರ ಬದುಕಿನಲ್ಲಿ ಪರಿವರ್ತನೆ ಉಂಟುಮಾಡುವುದು ಈ ಕಾರ್ಯಕ್ರಮದ ಪ್ರಮುಖ ಆಶಯವಾಗಿದೆ ಎಂದರು. ಮಂಡಲ ಅಧ್ಯಕ್ಷ ನಾಗನಗೌಡ ತಿಮ್ಮನಗೌಡ್ರ, ಮಲ್ಲಪ್ಪ ಮೇಟಿ, ಗುರುನಾಥ ಆದೇಪನವರ, ಎಸ್.ಆರ್. ಪಾಟೀಲ, ಅಶೋಕ ಜ್ಞಾನೋಪಂತ, ಬಾಬುಗೌಡ ತಿಮ್ಮನಗೌಡ್ರ, ದೇಸಾಯಿಗೌಡ ಪಾಟೀಲ, ಬಿ.ಬಿ. ಐನಾಪೂರ, ರಾಚಪ್ಪ ಅಳಗವಾಡಿ, ಈರಣ್ಣ ಹೊಂಗಲ ಇತರರಿದ್ದರು.

ಪುಸ್ತಕ ಉಚಿತ ವಿತರಣೆ ಅಭಿಯಾನಕ್ಕೆ ಚಾಲನೆ

◆**ಲಕ್ಷ್ಮೇಶ್ವರ:** ಪ್ರತಿವರ್ಷ ಶಿವರಾತ್ರಿಯಂದು ಸಂಸ್ಥೆಯಿಂದ ತುಳಸಿ ಗಿಡ ವಿತರಣೆ, ರುದ್ರಾಕ್ಷಿ ಮಾಲೆ, ಶಿವ ಮಂತ್ರಗಳ ಪ್ರಕಟಣೆಗಳ ವಿತರಣೆ ಮಾಡಿಕೊಂಡು ಬಂದಿದ್ದು ಈ ಬಾರಿ ಶಿವ ಪಂಚಾಕ್ಷರಿ ಮಹಾಮಂತ್ರ ಲಿಖಿತ ಜಪ ಯಜ್ಞ ಪುಸ್ತಕವನ್ನು ಉಚಿತವಾಗಿ ನೀಡುವ ಅಭಿಯಾನ ಹಮ್ಮಿಕೊಂಡಿದ್ದೇವೆ ಎಂದು ಮಹಾತಪಸ್ವಿ ಫೌಂಡೇಶನ್ ಲಕ್ಷ್ಮೇಶ್ವರ ಉಪಶಾಖೆಯ ಕೋ ಆರ್ಡಿನೇಟರ್ ಸಂಗೀತಾ ರಕ್ಷಿತಗೌಡ ಪಾಟೀಲ ಹೇಳಿದರು.

ಅವರು ಪಟ್ಟಣದ ಸೋಮೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಹಬ್ಬದ ಪ್ರಯುಕ್ತ ಸಂಸ್ಥೆ ವತಿಯಿಂದ ಶಿವ ಪಂಚಾಕ್ಷರಿ ಮಹಾಮಂತ್ರ ಲಿಖಿತ ಜಪ ಯಜ್ಞ ಪುಸ್ತಕವನ್ನು ಉಚಿತವಾಗಿ ನೀಡುವ ಅಭಿಯಾನ ಚಾಲನೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಿವೃತ್ತ ಎಎಸ್‌ಐ ವೈ.ಎಸ್. ಕುಬಿಹಾಳ ಕಾರ್ಯಕ್ರಮ ಉದ್ಘಾಟಿಸಿದರು. ಸಂಸ್ಥೆಯ ಸಹಾಯಕ ನಿರ್ದೇಶಕ ಮಂಜುಳಾ ಮುಳುಗುಂದ, ದಿಗಂಬರ ಪೂಜಾರ, ವಿಶ್ವನಾಥ ಹೊಸಮನಿ, ಲಾವಣ್ಯ ಬಿಂಕದಕಟ್ಟಿ, ಬಸವರಾಜ ಹಡಪದ, ವಿಶ್ವನಾಥ ಧರ್ಮಾಯತ್, ಯಲ್ಲಪ್ಪ ಶಿರಬಡಗಿ, ಶಿವಲಿಂಗಯ್ಯ ಹೊತಗಿಮಠ, ಮುತ್ತುರಾಜ ಸುಗಾರ, ಜ್ಯೋತಿ ಬೋಮಲೆ, ಕೃಷ್ಣಾ ಹಂಜಗಿ ಇತರರಿದ್ದರು.



ಅವ್ಯವಸ್ಥೆ ಆಗರವಾದ ವಾಣಿಜ್ಯ ಮಳಿಗೆಗಳ ಸಂಕೀರ್ಣ

◆**ಲಕ್ಷ್ಮೇಶ್ವರ:** ಪಟ್ಟಣದ ಹೊಸ ಬಸ್ ನಿಲ್ದಾಣದ ಎದುರಿನ ಪುರಸಭೆಗೆ ವಾಣಿಜ್ಯ ಮಳಿಗೆಗಳ ಸಂಕೀರ್ಣ ಅವ್ಯವಸ್ಥೆ, ಅಧ್ವಾನದ ಆಗರವಾಗಿದೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

ಪಟ್ಟಣದ ಹೊಸ ಬಸ್‌ನಿಲ್ದಾಣದ ಹತ್ತಿರ ಸಣ್ಣ ಮತ್ತು ಮಧ್ಯಮ ಪಟ್ಟಣ ಅಭಿವೃದ್ಧಿ ಯೋಜನೆಯಡಿ ಸುಮಾರು 25 ವರ್ಷಗಳ ಹಿಂದೆ ವಾಣಿಜ್ಯ ಮಳಿಗೆ ನಿರ್ಮಿಸಲಾಗಿದೆ. ಈ ವಾಣಿಜ್ಯ ಮಳಿಗೆಯಲ್ಲಿ ಒಟ್ಟು 29 ಮಳಿಗೆಗಳಿದ್ದು, ಇದರಲ್ಲಿ 25 ಮಳಿಗೆಗಳನ್ನು 20 ವರ್ಷದ ಲೀಜ್ ಆಧಾರದ ಮೇಲೆ ಮತ್ತು 4 ಮಳಿಗೆಗಳನ್ನು 12 ವರ್ಷದ ಲೀಜ್ ಆಧಾರದ ಮೇಲೆ ನೀಡಲಾಗಿದೆ. ಟೆಂಡರ್ ಪಡೆದವರು ಯಾವುದೇ ಮಾರ್ಗಸೂಚಿಗಳನ್ನು ಪಾಲಿಸದೇ ಮನಸೂ ಇಚ್ಛೇ ಅಂಗಡಿಗಳನ್ನು ನಡೆಸುತ್ತಿದ್ದಾರೆ. ಜಿಲ್ಲಾಧಿಕಾರಿಗಳ ನಿಯಂತ್ರಣದಲ್ಲಿರುವ ಐಡಿಎಸ್‌ಎಂಟಿ ಮಳಿಗೆಗಳು ಅವರ ಸೂಚನೆಯಂತೆ ನಡೆಯುತ್ತವೆ. ಆದರೆ ಇಲ್ಲಿ ಜಿಲ್ಲಾಧಿಕಾರಿಗಳ ಗಮನಕ್ಕೂ ತರದೆ ಪುರಸಭೆಯ ಯಾವುದೇ ಅನುಮತಿಯೂ ಇಲ್ಲದೇ ಯಾರದೋ ಹಿತಾಸಕ್ತಿಯಿಂದಾಗಿ ಮಳಿಗೆಯಲ್ಲಿ ಕಾನೂನು ಬಾಹೀರ ನಡೆದುಕೊಳ್ಳಲಾಗುತ್ತಿದೆ. 20 ವರ್ಷಗಳಿಂದ ಯಾವ ಅವಧಿಯ ಚುನಾಯಿತ ಮಂಡಳಿ ಮತ್ತು ಅಧಿಕಾರಿಗಳು ಈ ಬಗ್ಗೆ ಚಕಾರವೆತ್ತದಿರುವುದು ಜನರ ಅಚ್ಚರಿಗೆ ಕಾರಣವಾಗಿದೆ.



ಮಳಿಗೆಗಳ ಸ್ಥಿತಿ ಅಧೋಗತಿ

ಸಂಕೀರ್ಣದಲ್ಲಿ ಮಾಂಸಹಾರಿ ಹೋಟೆಲ್, ಎಗ್‌ರೈಸ್ ಅಂಗಡಿಗಳಿರುವುದರಿಂದ ಕೆಲವರು ವಿಪರೀತ ಮದ್ಯ ಸೇವಿಸಿ ಈ ಅಂಗಡಿ ಮುಂದೆ ಅರೆಪ್ರಜ್ಞಾವಸ್ಥೆಯಲ್ಲಿ ಬಿದ್ದಿರುತ್ತಾರೆ. ಇದರಿಂದಾಗಿ ಈ ವಾಣಿಜ್ಯ ಮಳಿಗೆಯಲ್ಲಿನ ಎಸ್‌ಬಿಐನ ಎಟಿಎಂ, ಔಷಧಿ ಅಂಗಡಿ, ಬೇಕರಿ ಹಾಗೂ ಹೂವು, ಹಣ್ಣು ಮಾರಾಟ ಮಳಿಗೆಗಳಿಗೆ ಬರುವ ಮಹಿಳೆಯರು, ಮಕ್ಕಳು ಭಯಬೀತರಾಗುತ್ತಿದ್ದಾರೆ. ಬಾಡಿಗೆಯಿಂದ ಲಕ್ಷಾಂತರ ರೂಪಾಯಿ ಪುರಸಭೆಗೆ ಸಂದಾಯವಾಗುತ್ತಿದ್ದರೂ ಕಳೆದ 15 ವರ್ಷಗಳಿಂದ ಇಲ್ಲಿನ ಮಳಿಗೆಗಳ ಸ್ಥಿತಿ ಅಧೋಗತಿಗೆ ತಲುಪಿದೆ. ಸಂಕೀರ್ಣದ ಮುಂದೆ 4-5 ತಳ್ಳುಗಾಡಿಯ ಎಗ್‌ರೈಸ್, ಟಿಫನ್, ಚಹಾದ ಅಂಗಡಿಗಳಿಗೆ ಪರವಾನಗಿ ಕೊಟ್ಟಿದ್ದಾರೆ. ಇಲ್ಲಿನ ವ್ಯಾಪಾರಸ್ಥರು ಮುಸರಿ, ತ್ಯಾಜ್ಯವನ್ನು ಚರಂಡಿಗೆ ಹಾಕುವುದರಿಂದ ಈ ಪ್ರದೇಶ ಗಬ್ಬು ನಾರುತ್ತಿದೆ. ಆದರೂ ಸಂಬಂಧಿಸಿದ ಪುರಸಭೆ ಅಧಿಕಾರಿಗಳು ಮಾತ್ರ ಇತ್ತ ಗಮನ ಹರಿಸುತ್ತಿಲ್ಲ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

> ವಾಣಿಜ್ಯ ಮಳಿಗೆಗಳಲ್ಲಿ ಅನಧಿಕೃತ ವ್ಯಾಪಾರ ನಡೆಸುತ್ತಿರುವುದನ್ನು ತೆರವುಗೊಳಿಸಲಾಗುವುದು. ಮಾಂಸ ಮಾರಾಟ ಮಾಡುವವರ ವಿರುದ್ಧ, ವ್ಯಾಪಾರಸ್ಥರು ಚರಂಡಿಯಲ್ಲಿ ಕಸ ಮುಸುರಿ ಹಾಕದಂತೆ ಕ್ರಮ ಕೈಗೊಳ್ಳಲಾಗುವುದು. ಈ ವರ್ಷ ಮಳಿಗೆ ಟೆಂಡರ್ ಅವಧಿ ಮುಗಿಯಲಿದ್ದು, ಮರು ಟೆಂಡರ್ ವೇಳೆ ನಿಯಮಾವಳಿಯಂತೆ ಮಳಿಗೆ ನೀಡಲಾಗುವುದು.
> ■ **ಮಹಾಂತೇಶ ಬೀಳಗಿ, ಪುರಸಭೆ ಮುಖ್ಯಾಧಿಕಾರಿ**

ಆದೇಶಕ್ಕೆ ಕಿಮ್ಮತ್ತಿಲ್ಲ

ಸರ್ಕಾರದ ನಿಯಮದ ಪ್ರಕಾರ ವಾಣಿಜ್ಯ ಮಳಿಗೆಯ ಕಟ್ಟಡದಲ್ಲಿ ಮಾಂಸ, ಎಗ್‌ರೈಸ್ ಮಾರಾಟ ನಿಷಿದ್ಧ. ಆದರೆ ಇಲ್ಲಿ ಸರ್ಕಾರದ ಆದೇಶಕ್ಕೆ ಯಾವುದೇ ಕಿಮ್ಮತ್ತಿಲ್ಲ. ವಾಣಿಜ್ಯ ಸಂಕೀರ್ಣದಲ್ಲಿ ಇವುಗಳದ್ದೇ ಅಬ್ಬರದ ಥಾಟು. ಇಲ್ಲಿ ಸಿದ್ಧಪಡಿಸಿ ಮಾರಾಟ ಮಾಡುವ ಆಹಾರದ ಗುಣಮಟ್ಟ, ಸ್ವಚ್ಛತೆ. ಕುಡಿಯುವ ನೀರು, ಡಸ್ಟ್‌ಬಿನ್‌ಗಳ ಬಗ್ಗೆ ಕಿಂಚಿತ್ತೂ ಗಮನ ಹರಿಸುವುದಿಲ್ಲ. ಎಗ್ ರೈಸ್, ಚಿಕನ್ ಮತ್ತು ಕರಿದ ಮೀನುಗಳಿಗೆ ಕೃತಕ ರಾಸಾಯನಿಕ ಬಣ್ಣ, ಟೇಸ್ಟಿಂಗ್ ಪೌಡರ್‌ಗಳ (ಅಜಿನೋಮೋಟೋ) ಯಥೇಚ್ಚ ಬಳಕೆ ನಡೆಯುತ್ತಿದ್ದು, ಇದು ಗ್ರಾಹಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಶರಣು ಗೋಡಿ ಆರೋಪಿಸಿದ್ದಾರೆ.

- ವಾಣಿಜ್ಯ ಸಂಕೀರ್ಣದಲ್ಲಿ ಮದ್ಯ ಮತ್ತು ಮಾಂಸದ ಅಂಗಡಿಗಳ ಕುರಿತು ಪುರಸಭೆಯವರನ್ನು ಪ್ರಶ್ನಿಸಿದಾಗ ಯಾವುದೇ ಅನುಮತಿ ಕೊಟ್ಟಿಲ್ಲವೆಂದು ಹೇಳುತ್ತಾರೆ
- ಹಾಗಾದರೆ ಕಾನೂನು ಬಾಹೀರವಾಗಿ ನಡೆಯುತ್ತಿರುವ ವ್ಯಾಪಾರಕ್ಕೆ ರಕ್ಷಣೆ ಯಾರದು ಎಂಬುದಕ್ಕೆ ಜಿಲ್ಲಾಧಿಕಾರಿಗಳೇ ಉತ್ತರಿಸಬೇಕು ಎಂಬುದು ಸಾರ್ವಜನಿಕರ ಆಗ್ರಹ

ಜ್ಯೋತಿರ್ಲಿಂಗ ದರ್ಶನಕ್ಕೆ ಅವಕಾಶ ಶ್ಲಾಘನೀಯ

◆**ಗದಗ:** ಭಾರತದಲ್ಲಿ ಒಟ್ಟು ಹನ್ನೆರಡು ಜ್ಯೋತಿರ್ಲಿಂಗಗಳಿವೆ. ಎಲ್ಲರೂ ದೂರದ ಕ್ಷೇತ್ರಗಳಿಗೆ ಹೋಗಲು ಸಾಧ್ಯವಾಗದಿದ್ದರೂ ಇಲ್ಲಿಯೇ ಜ್ಯೋತಿರ್ಲಿಂಗ ದರ್ಶನ ಸಿಗುತ್ತಿರುವುದು ವಿಶೇಷ ಎಂದು ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರು ಹೇಳಿದರು.

ನಗರದ ಮುನ್ಸಿಪಲ್ ಹೈಸ್ಕೂಲ್ ಮೈದಾನದಲ್ಲಿ ಜರುಗಿದ ಮಹಾಶಿವರಾತ್ರಿಯ ಕಾರ್ಯಕ್ರಮದ ನಾಗೇಶ್ವರ ಜ್ಯೋತಿರ್ಲಿಂಗ ಮಹಾದ್ವಾರ ಉದ್ಘಾಟನೆಗೊಳಿಸಿ ಮಾತನಾಡಿ, ದೇಶದಲ್ಲಿರುವ ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಗುಜರಾತಿನಲ್ಲಿ ಎರಡು, ಮಹಾರಾಷ್ಟ್ರದಲ್ಲಿ ಮೂರು, ಮಧ್ಯಪ್ರದೇಶದಲ್ಲಿ ಎರಡು, ಆಂಧ್ರಪ್ರದೇಶದಲ್ಲಿ ಒಂದು, ಉತ್ತರಾಖಂಡದಲ್ಲಿ ಒಂದು, ತಮಿಳುನಾಡಿನಲ್ಲಿ ಒಂದು ಹಾಗೂ ಜಾರ್ಖಂಡ್‌ನಲ್ಲಿ ಒಂದು ಇದೆ. ಈಶ್ವರಿ ವಿಶ್ವವಿದ್ಯಾಲಯವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಹಾಗೂ ಸಹೋದರತ್ವದ ಸಂದೇಶ ಸಾರುತ್ತಿದೆ ಎಂದರು.



ಪ್ರೊ.ಎಸ್.ವೈ. ಚಿಕ್ಕಟ್ಟಿ ಮಾತನಾಡಿ, ಎಲ್ಲಾ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರನ್ನು ಒಂದೇ ವೇದಿಕೆಯಲ್ಲಿ ಸೇರಿಸಿ ಕಾರ್ಯಕ್ರಮ ನಡೆಸಿರುವುದು ಅರ್ಥಪೂರ್ಣ. ಶಿಕ್ಷಕರಿಗೆ ಆಧ್ಯಾತ್ಮ ಮೌಲ್ಯ ಮತ್ತು ಧ್ಯಾನದ ಅನುಭವ ದೊರೆತರೆ ಅವರು ಅದನ್ನು ಮಕ್ಕಳಿಗೆ ಹಂಚುತ್ತಾರೆ ಎಂದರು.

ಪ್ರೊ. ಶಿವಾನಂದ ಪಟ್ಟಣಶೆಟ್ಟಿ ಮಾತನಾಡಿ, ಶಿವರಾತ್ರಿ ಪವಿತ್ರ ದಿನ. ಮಕ್ಕಳಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಂಯಮಶೀಲತೆ ಬೆಳೆಸುವುದು ಅತ್ಯಗತ್ಯ. ಇಂತಹ ಕಾರ್ಯಕ್ರಮಗಳು ಸಕಾರಾತ್ಮಕ ಭಾವನೆಗಳನ್ನು ವೃದ್ಧಿಸುತ್ತವೆ ಎಂದರು. ರವಿ ಮೂಲಿಮನಿ ಮಾತನಾಡಿ, ಶೈಕ್ಷಣಿಕ ಶಿಕ್ಷಣದ ಜೊತೆಗೆ ಆಧ್ಯಾತ್ಮಿಕ ಶಿಕ್ಷಣವೂ ಕಡ್ಡಾಯವಾಗಬೇಕು ಎಂದರು. ವಾಸಣ್ಣ ಕುರುಡಗಿ ಮಾತನಾಡಿ, ಪ್ರತಿ ವರ್ಷ ಒಂದೊಂದು ಜ್ಯೋತಿರ್ಲಿಂಗದ ದರ್ಶನವನ್ನು ಈಶ್ವರೀಯ ವಿಶ್ವವಿದ್ಯಾಲಯವು ಮಾಡಿಸುತ್ತಿದೆ. ದೂರ ಹೋಗಲು ಸಾಧ್ಯವಾಗದವರು ಗದುಗಿನಲ್ಲಿ ದರ್ಶನ ಪಡೆಯಬಹುದು ಎಂದರು.

ಪ್ರದಕ್ಷಿಣೆ ಲಿಂಗ, ಸಹಸ್ರಲಿಂಗ ದರ್ಶನ, ಆಧ್ಯಾತ್ಮ ಚಿತ್ರ ಪ್ರದರ್ಶನ, ಉದ್ಭವ ಲಿಂಗ ದರ್ಶನ, ಮ್ಯಾಜಿಕ್ ಆಫ್ ಮೆಡಿಟೇಶನ್ ಹಾಗೂ ಶಿವನೊಂದಿಗೆ ಸೆಲ್ಫೀ ಪಾಯಿಂಟ್ ಭಕ್ತರನ್ನು ಆಕರ್ಷಿಸಿತು. ಓಂ ನಮಃ ಶಿವಾಯ ಧ್ಯಾನ ಮಂಟಪದಲ್ಲಿ ಧ್ವನಿ ಮತ್ತು ಚಿತ್ರಗಳ ಮೂಲಕ ಭಕ್ತರು ಶಿವಾನುಭವದಲ್ಲಿ ತಲ್ಲೀನರಾದರು.

ಖಾಲಿ ಹುದ್ದೆ ಸರ್ಕಾರದ ದೊಡ್ಡ ಸಾಧನೆ: ನಮೋಶಿ

ಕಲಬುರಗಿ: ರಾಜ್ಯಾದ್ಯಂತ ವಿವಿಧ ಇಲಾಖೆಗಳಲ್ಲಿನ ಸುಮಾರು 1.28 ಲಕ್ಷ ಹುದ್ದೆಗಳನ್ನು ಖಾಲಿಯಿಟ್ಟುಕೊಂಡು ಸಿಎಂ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ 1000 ದಿನದ ಸಮಾವೇಶ ಎಂದು ತೋರಿಸುತ್ತಿರುವುದು ಯಾವ ಪುರುಷಾರ್ಥಕ್ಕಾಗಿ. ಕಾಂಗ್ರೆಸ್ ಆಡಳಿತಕ್ಕೆ ಬಂದಾಗಿನಿಂದ ಖಾಲಿ ಹುದ್ದೆಗಳ ಭಾಗ್ಯವೇ ರಾಜ್ಯ ಸರ್ಕಾರದ ಅತಿದೊಡ್ಡ ಸಾಧನೆಯಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ ತಿಳಿಸಿದರು.



ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಒಳ ಮೀಸಲಾತಿ ಹೆಸರಿನಲ್ಲಿ ಸರ್ಕಾರದ ಬೊಕ್ಕಸ ಖಾಲಿಯಾಗಿರುವದನ್ನು ಮರೆಮಾಚಲು ರಾಜ್ಯದಲ್ಲಿರುವ ಖಾಲಿ ಹುದ್ದೆಗಳ ಭರ್ತಿಗೆ ವಿಳಂಬ ನೀತಿ ಅನುಸರಿಸುತ್ತಿದ್ದು, ರಾಜ್ಯದಾದ್ಯಂತ ಶಿಕ್ಷಣ ಇಲಾಖೆಯಲ್ಲಿ 94 ಸಾವಿರ, ಆರೋಗ್ಯ ಇಲಾಖೆ–38ಸಾವಿರ,ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ 10 ಸಾವಿರ ಕಂದಾಯ ಇಲಾಖೆಯಲ್ಲಿ 11 ಸಾವಿರ ಹಾಗೂ ಇತರೆ ಇಲಾಖೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹುದ್ದೆ ದೀರ್ಘಾವಧಿಯಿಂದ ಖಾಲಿಯಿವೆ.

> **ಸರ್ಕಾರ ಒಳಮೀಸಲಾತಿ ನೆಪ ಹೇಳದೆ ಹಿಂದಿನ ರೋಸ್ಟರ್ ಪದ್ಧತಿಯಂತೆ ರಾಜ್ಯದಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕು. ನೇಮಕಾತಿ ಕ್ರಮಗಳಿಂದ ಸಾರ್ವಜನಿಕ ಸೇವೆಗಳ ಗುಣಮಟ್ಟವನ್ನು ಸುಧಾರಿಸಲು,ಯುವಕರಿಗೆ ಉದ್ಯೋಗ ಕಲ್ಪಿಸಲು ಮುಂದಾಗಬೇಕು.**
> ■ ಶಶೀಲ್ ನಮೋಶಿ, ಎಂಎಲ್ಸಿ

ಹೈಕೋರ್ಟ್ ಕೂಡ ರೋಸ್ಟರ್‌ನಂತೆ ಶೇ.50 ಮೀಸಲಾತಿ ಅನ್ವಯ ನೇಮಕಾತಿ ಪ್ರಕ್ರಿಯೆ ಮಾಡುವಂತೆ ಹೇಳಿದೆ ಎಂದರು.

ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿಯಾದ ಹುದ್ದೆಗಳಿಂದ ಸಾಮಾಜಿಕ, ಆರ್ಥಿಕ ಮತ್ತು ಆಡಳಿತಾತ್ಮಕ ತೊಂದರೆ ಹೆಚ್ಚಾಗಿವೆ.ರಾಜ್ಯದ ಜನತೆಗೆ ಸರ್ಕಾರದ ವಿವಿಧ ಯೋಜನೆಗಳನ್ನು ತಲುಪಿಸುವಲ್ಲಿ ಸಂಪೂರ್ಣವಾಗಿ ಸರ್ಕಾರ ವಿಫಲವಾಗಿದ್ದು, ಇದರಿಂದ ಆಡಳಿತ ವ್ಯವಸ್ಥೆ ಹಾಗೂ ಸಾರ್ವಜನಿಕ ಸೇವೆಗಳ ಮೇಲೆ ಮಹತ್ತರ ಪರಿಣಾಮ ಬೀರುತ್ತಿದೆ.ಖಾಲಿ ಹುದ್ದೆಗಳ ಭರ್ತಿ ಮಾಡದಿರುವುದರಿಂದ ರಾಜ್ಯದಲ್ಲಿ ಲಕ್ಷಾಂತರ ಅಭ್ಯರ್ಥಿಗಳು ವರ್ಷಾನುಗಟ್ಟಲೆ ಓದಿದ್ದರೂ ಕೂಡ ಉದ್ಯೋಗವಿಲ್ಲದೆ ನಿರುದ್ಯೋಗಿಗಳಾಗಿ ಜೀವನದಿಂದ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ವಿವಿಧ ಇಲಾಖೆಗಳಲ್ಲಿ ಸುಮಾರು 40 ಸಾವಿರಕ್ಕಿಂತ ಅಧಿಕ ಹುದ್ದೆ ಖಾಲಿಯಿವೆ.ಈ ಭಾಗದ ವಿಶೇಷ 371 ಜೆ ಅನುಚ್ಛೇಧದ ನಿಯಮದಂತೆ ಭಾಗದ ಖಾಲಿ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆಯ ಯಾವುದೇ ಅನುಮತಿ ಅಗತ್ಯವಿರುವುದಿಲ್ಲ. ಆದರೂ, ಸರ್ಕಾರ ನೇಮಕಾತಿಗೆ ಹಿಂದೇಟು ಹಾಕಿ ಒಳಮೀಸಲಾತಿ ವಿಷಯವನ್ನು ಮುಂದಿಟ್ಟುಕೊಂಡು ಅನುದಾನದ ಕೊರತೆಯನ್ನು ಮರೆಮಾಚಲು ಹೊರಟಿದೆ ಎಂದ ಅವರು,ಕಳೆದ 2023ರಿಂದ ಇಲ್ಲಿಯವರೆಗೆ ಸರ್ಕಾರ ಕೇವಲ 11,238 ಹುದ್ದೆ ಮಾತ್ರ ತುಂಬಿಕೊಂಡಿದೆ ಎಂದು ಹೇಳುತ್ತಿದೆ. ಆದರೆ, ವಾಸ್ತವವಾಗಿ 8,157 ಹುದ್ದೆಗಳ ನೇಮಕಾತಿ ಮಾತ್ರ ಪೂರ್ಣಗೊಳಿಸಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಅವಿನಾಶ್ ಕುಲಕರ್ಣಿ,ಆನಂದ ಕಣಸೂರ,ಅಣವೀರ ಪಾಟೀಲ್ ಇದ್ದರು.

ಶಿರಸಿ ಮಾರಿಕಾಂಬಾ ಜಾತ್ರೆ | ಲಕ್ಷಾಂತರ ಭಕ್ತರ ನಿರೀಕ್ಷೆ
ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಿ: ಶಾಸಕ ಭೀಮಣ್ಣ

ಶಿರಸಿ: ನಾಡಿನ ಸುಪ್ರಸಿದ್ಧ ಮತ್ತು ಐತಿಹಾಸಿಕ ಶಿರಸಿ ಮಾರಿಕಾಂಬಾ ಜಾತ್ರೆಗೆ ಕ್ಷಣಗಣನೆ ಆರಂಭವಾಗಿದ್ದು, ಸಕಲ ಸಿದ್ಧತೆಗಳು ಭರದಿಂದ ಸಾಗಿವೆ. ಈ ಹಿನ್ನೆಲೆಯಲ್ಲಿ ಶಾಸಕ ಭೀಮಣ್ಣ ಟಿ. ನಾಯ್ಕ ಸೋಮವಾರ ಅಧಿಕಾರಿಗಳೊಂದಿಗೆ ಅನೌಪಚಾರಿಕ ಸಭೆ ನಡೆಸಿ, ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದರು.



ನಗರದ ತಹಶೀಲ್ದಾರ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಶಾಸಕರು, ಜಾತ್ರೆಗೆ ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆ ಇರುವುದರಿಂದ, ಆಡಳಿತಾತ್ಮಕವಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಶಾಸಕರು ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು.

ಜಾತ್ರಾ ಅವಧಿಯಲ್ಲಿ ಜನದಟ್ಟಣೆಯನ್ನು ನಿಯಂತ್ರಿಸಲು ಮತ್ತು ಭಕ್ತರ ಸುರಕ್ಷತೆಗಾಗಿ ನಗರದಾದ್ಯಂತ ಬಿಗಿ ಪೊಲೀಸ್ ಭದ್ರತೆ ಕಲ್ಪಿಸಲು ಸೂಚಿಸಲಾಯಿತು. ವಾಹನ ಸಂಚಾರಕ್ಕೆ ಅಡ್ಡಿಯಾಗದಂತೆ ಪರ್ಯಾಯ ರಸ್ತೆ ಹಾಗೂ ಸುಗಮ ಸಂಚಾರಕ್ಕೆ ಅಗತ್ಯ ವ್ಯವಸ್ಥೆ ಮಾಡುವಂತೆ ತಿಳಿಸಿದರು.

ಬಿಸಿಲಿನ ತಾಪ ಹೆಚ್ಚಿರುವುದರಿಂದ ಜಾತ್ರಾ ಮೈದಾನ ಹಾಗೂ ನಗರದ ಪ್ರಮುಖ ಸ್ಥಳಗಳಲ್ಲಿ ಭಕ್ತಾದಿಗಳಿಗೆ ನಿರಂತರವಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಆದ್ಯತೆ ನೀಡಲು ಸೂಚಿಸಿದರು.

> **ನಮ್ಮ ಶಿರಸಿಯ ಐತಿಹಾಸಿಕ ಮಾರಿಕಾಂಬಾ ಜಾತ್ರೆಯು ಕೇವಲ ಒಂದು ಧಾರ್ಮಿಕ ಕಾರ್ಯಕ್ರಮವಲ್ಲ, ಇದು ನಮ್ಮ ಸಾಂಸ್ಕೃತಿಕ ಹೆಮ್ಮೆ. ಭಕ್ತಾದಿಗಳ ಸಹಕಾರ ಮತ್ತು ಅಧಿಕಾರಿಗಳ ದಕ್ಷ ನಿರ್ವಹಣೆಯೊಂದಿಗೆ ಈ ಬಾರಿಯ ಜಾತ್ರೆಯನ್ನು ಅತ್ಯಂತ ಯಶಸ್ವಿಯಾಗಿ ಆಚರಿಸೋಣ.**
> ■ ಭೀಮಣ್ಣ ಟಿ. ನಾಯ್ಕ, ಶಾಸಕ

ಜಾತ್ರೆಯ ಅವಧಿಯಲ್ಲಿ ಮತ್ತು ನಂತರವೂ ನಗರದ ಸ್ವಚ್ಛತೆಯನ್ನು ಕಾಪಾಡುವುದು ಅತಿ ಮುಖ್ಯ. ಈ ನಿಟ್ಟಿನಲ್ಲಿ ನಗರಸಭೆ ವತಿಯಿಂದ ಹೆಚ್ಚಿನ ಪೌರಕಾರ್ಮಿಕರನ್ನು ನಿಯೋಜಿಸಿ, ಶೌಚಾಲಯ ಹಾಗೂ ಕಸ ವಿಲೇವಾರಿ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

- ಅಧಿಕಾರಿಗಳೊಂದಿಗೆ ಅನೌಪಚಾರಿಕ ಸಭೆ
- ಜನದಟ್ಟಣೆ ನಿಯಂತ್ರಿಸಲು ಮತ್ತು ಭಕ್ತರ ಸುರಕ್ಷತೆಗಾಗಿ ಪೊಲೀಸ್ ಭದ್ರತೆ ಕಲ್ಪಿಸಿ
- ಭಕ್ತಾದಿಗಳಿಗೆ ನಿರಂತರವಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇರಲಿ

ದೂರದ ಊರುಗಳಿಂದ ಬರುವ ಭಕ್ತರಿಗೆ ಮೂಲಭೂತ ಸೌಕರ್ಯಗಳಲ್ಲಿ ಕೊರತೆಯಾಗದಂತೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಈ ವೇಳೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

ಕಿರುಸುದ್ದಿ

ಸ್ನಾನಕ್ಕೆಂದು ನದಿಗಿಳಿದ ಯುವಕ ನೀರು ಪಾಲು

ಸುರಪುರ: ದೇವರ ಗಂಗಾ ಸ್ನಾನಕ್ಕೆಂದು ಕೃಷ್ಣಾ ನದಿಗೆ ತೆರಳಿದ್ದ ವೇಳೆ ಈಜಲು ತೆರಳಿದ್ದ ಯುವಕನೊಬ್ಬ ಮೃತಪಟ್ಟಿರುವ ಘಟನೆ ಸೋಮವಾರ ಬೆಳಗ್ಗೆ ನಡೆದಿದೆ. ಪಟ್ಟಣದ ಗಡೆದುರ್ಗಮ್ಮ ದೇವಿಯ ಜಾತ್ರೆ ಅಂಗವಾಗಿ ನೂರಾರು ಜನ ತಾಲೂಕಿನ ಶೆಳ್ಳಗಿ ಗ್ರಾಮದ ಬಳಿಯಲ್ಲಿನ ಕೃಷ್ಣಾ ನದಿಗೆ ಗಂಗಾ ಸ್ನಾನಕ್ಕೆಂದು ತೆರಳಿದ ಸಂದರ್ಭದಲ್ಲಿ ಯಾದಗಿರಿಯ ದುರ್ಗೇಶ (17) ಬೇರೆ ಬಾಲಕರ ಜೊತೆಗೆ ಈಜಾಡಲು ನದಿಯ ಮಧ್ಯದಲ್ಲಿ ಹೋದಾಗ ಮೊಸಳೆ ಇವೆ ಎಂದು ಯಾರೋ ಕೂಗಿದ್ದರಿಂದ ಭಯ ಭೀತರಾಗಿ ದಡದ ಕಡೆಗೆ ಬರುವ ಸಂದರ್ಭದಲ್ಲಿ ನೀರಿನ ಸುಳಿಗೆ ಸಿಲುಕಿ ಮೃತಪಟ್ಟಿದ್ದಾನೆ ಎಂದು ತಿಳಿದುಬಂದಿದೆ. ಈಜು ತಜ್ಞರು ಹಾಗೂ ಮೀನುಗಾರರು ಆಗಮಿಸಿ ಹುಡುಕಾಟ ನಡೆಸಿದಾಗಯುವಕನ ಶವ ಪತ್ತೆಯಾಗಿದೆ. ನಂತರ ಸ್ಥಳಕ್ಕೆ ಸುರಪುರ ಠಾಣೆಯ ಪಿಐ ಉಮೇಶ ಎಂ ಹಾಗೂ ಸಿಬ್ಬಂದಿ ಕೂಡ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಯುವಕನ ಸಾವಿನಿಂದ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

ಫೆ.19ರಂದು ಜಾನಪದ ವಿವಿ ಅಕ್ರಮ ನೇಮಕದ ಬಗ್ಗೆ ವಿಚಾರಣೆ

ಹಾವೇರಿ: ಗೊಟಗೋಡಿಯ ಜಾನಪದ ವಿವಿಯ ಸಹಾಯಕ ಕುಲಸಚಿವರನ್ನು ಅಕ್ರಮವಾಗಿ ನೇಮಕ ಮಾಡಿಕೊಳ್ಳಲಾಗಿದೆ ಎಂದು ವಿವಿಯ ಸಿಂಡಿಕೇಟ್ ಸದಸ್ಯರ ದೂರಿನ ಹಿನ್ನೆಲೆಯಲ್ಲಿ ಬೆಳಗಾವಿ ಪ್ರಾದೇಶಿಕ ಆಯುಕ್ತರಾದ ಕೆ.ಎಂ.ಜಾನಕಿ ಫೆ.19ರಂದು ಜಾನಪದ ವಿವಿಗೆ ಆಗಮಿಸಿ ವಿಚಾರಣೆ ನಡೆಸಲಿದ್ದಾರೆ ಎಂದು ಕರ್ನಾಟಕ ರಾಜ್ಯ ಜಾನಪದ ಸ್ನಾತಕೋತ್ತರ ಹಾಗೂ ಸಂಶೋಧಕರ ಒಕ್ಕೂಟದ ಅಧ್ಯಕ್ಷ ಡಾ.ಶಿವಸೋಮಪ್ಪ ನಿಟ್ಟೂರ ಹೇಳಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೊಟಗೋಡಿಯ ಜಾನಪದ ವಿವಿಯ ಸಹಾಯಕ ಕುಲಸಚಿವರ ಹುದ್ದೆಗೆ 2023ರಲ್ಲಿ ಶಹಜಹಾನ್ ಮುದಕವಿ ನಕಲಿ ದಾಖಲೆ ಸೃಷ್ಟಿಸಿ ನೌಕರಿ ಪಡೆದಿದ್ದು, ಈ ಕುರಿತು ಕರ್ನಾಟಕ ರಾಜ್ಯ ಜಾನಪದ ಸ್ನಾತಕೋತ್ತರ ಹಾಗೂ ಸಂಶೋಧಕರ ಒಕ್ಕೂಟ ಕಳೆದ ಮೂರು ವರ್ಷಗಳಿಂದ ಹೋರಾಟ ಮಾಡುತ್ತ ಬಂದಿದೆ.

ಇದೀಗ ವಿವಿದ ವಿವಿಗಳ ಅಕ್ರಮ ಕುರಿತು ಒಟ್ಟಾರೆ ತನಿಖೆಗೆ ರಾಜ್ಯಪಾಲರು ಮತ್ತು ಸಿಎಂ ಸಿದ್ಧರಾಮಯ್ಯ ಅವರು ತನಿಖೆಗೆ ಸೂಚನೆ ನೀಡಿದ್ದು, ನಿವೃತ್ತ ನ್ಯಾಯಮೂರ್ತಿ ಉಮೇಶ ಅಡಿಗ ಅವರ ನೇತೃತ್ವದದಲ್ಲಿ ವಿಚಾರಣೆಗೆ ಸೂಚಿಸಿದೆ. ಇದನ್ನು ಕರ್ನಾಟಕ ರಾಜ್ಯ ಜಾನಪದ ಸ್ನಾತಕೋತ್ತರ ಹಾಗೂ ಸಂಶೋಧಕರ ಒಕ್ಕೂಟ ಸ್ವಾಗತಿಸುತ್ತದೆ ಎಂದು ಹೇಳಿದರು.



ಜಾನಪದ ವಿವಿಯ ಸಿಂಡಿಕೇಟ್ ಸದಸ್ಯರಾದ ಡಾ.ಬಿ.ಎಂ.ಪುಟ್ಟಯ್ಯ, ಗೋರೆವಾಲೆ ಚಂದ್ರಶೇಖರ, ಡಾ.ಜ್ಯೋತಿಲಕ್ಷ್ಮೀ ಡಿ.ಪಿ., ಡಾ.ಸಹನಾ ಪಿಂಜಾರ್, ರಾಮಪ್ಪಎಂ. ಲಮಾಣಿ ಮತ್ತು ಮೋಹನ್‌ಕುಮಾರ ಇವರು 2025ರ ಡಿಸೆಂಬರ್23 ರಂದುಮುಖ್ಯಮಂತ್ರಿಗಳಿಗೆಸಲ್ಲಿಸಿದ ದೂರಿನ ಮೇರೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಈ ಕುರಿತು ವಿಚಾರಣೆಗೆ ಸೂಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬೆಳಗಾವಿ ಪ್ರಾದೇಶಿಕ ಆಯುಕ್ತರಾದ ಕೆ.ಎಂ. ಜಾನಕಿ ವಿಚಾರಣೆಗೆ ಆಗಮಿಸುತ್ತಿದ್ದು ಈ ಕುರಿತು ವಿಚಾರಣೆಗೆ ಹಾಜರಾಗುವಂತೆ ದೂರುದಾರರಾದ ಸಿಂಡಿಕೆಟ್ ಸದಸ್ಯರಿಗೆ ತಿಳುವಳಿಕೆ ಪತ್ರ ಕಳಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಒಕ್ಕೂಟದ ಉಪಾಧ್ಯಕ್ಷ ಡಾ.ಎಸ್.ನಾಗರಾಜ, ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಾ.ಬಿ.ಎಂ. ದುಗಾಣಿ ಇದ್ದರು.

ಗ್ಯಾರಂಟಿ ಎನ್ನುವುದು ಕೇವಲ ಆಮಿಷ: ಕಡಾಡಿ

ಮೂಡಲಗಿ: ಬಸ್‌ಗಳಲ್ಲಿ ಲಗೇಜ್ ಸಾಗಿಸುವುದು ಶ್ರೀಮಂತರಲ್ಲ, ಬದಲಾಗಿ ತಮ್ಮ ಬೆಳೆಗಳನ್ನು ಮಾರುಕಟ್ಟೆಗೆ ತರುವ ರೈತರು ಮತ್ತು ದಿನನಿತ್ಯದ ವ್ಯಾಪಾರ ಮಾಡುವ ಸಣ್ಣ ಉದ್ದಿಮೆದಾರರು. ಕೆಎಸ್ ಆರ್‌ಟಿಸಿ ಲಗೇಜ್ ದರದಲ್ಲಿ ಶೇ.15ರಷ್ಟು ಏರಿಕೆ ಮಾಡಿರುವುದು ಅವರ ಬದುಕಿನ ಆಧಾರವನ್ನೇ ಕಸಿದುಕೊಳ್ಳುವಂತಿದೆ. ಇದು ಕೇವಲ ದರವಲ್ಲ, ಕಾಂಗ್ರೆಸ್ ಸರ್ಕಾರ ರೈತರ ಬೆನ್ನಿಗೆ ಹಾಕಿದ ಹೊರೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ನವದೆಹಲಿಯಲ್ಲಿ ಪತ್ರಿಕಾ ಹೇಳಿಕೆ ನೀಡಿದ ಅವರು ರಾಜ್ಯದ ಕಾಂಗ್ರೆಸ್ ಸರ್ಕಾರವು ಹೆಣ್ಣು ಮಕ್ಕಳಿಗೆ ಉಚಿತ ಬಸ್ ಪ್ರಯಾಣದ ಹೆಸರಲ್ಲಿ ಮೊದಲು ಮಂಕುಬೂದಿ ಎರಚಿ, ಗ್ಯಾರಂಟಿ ಯೋಜನೆಗಳಿಗಾಗಿ ಸಾರಿಗೆ ಸಂಸ್ಥೆಯನ್ನು ಆರ್ಥಿಕ ನಷ್ಟಕ್ಕೆ ದೂಡಿ ಖಜಾನೆ ಖಾಲಿ ಮಾಡಿಕೊಂಡಿರುವ ಸಿದ್ದರಾಮಯ್ಯನವರ ಸರ್ಕಾರ, ಈಗ ಆ ನಷ್ಟ ಸರಿದೂಗಿಸಲು ಸಾಮಾನ್ಯ ಜನರ ಮೇಲೆ 'ಕಪ್ಪ' ವಸೂಲಿಗೆ ಇಳಿದಿದೆ. ಇದು ಜನಪರ ಆಡಳಿತವೇ? ಎಂದು ಅವರು ಪ್ರಶ್ನಿಸಿದ್ದಾರೆ.

(1–5 ಸ್ಟೇಜ್‌ವರೆಗೆ) ಈ ಹಿಂದೆ ಇದ್ದ 5ರ ದರವನ್ನು ಈಗ 6ಕ್ಕೆ ಏರಿಸಲಾಗಿದೆ. ಹಾಗೆಯೇ, ದೀರ್ಘ ದೂರದ ಪ್ರಯಾಣದ ಗರಿಷ್ಠ ದರ 123ರಿಂದ 14 ಕ್ಕೆ ಏರಿಕೆಯಾಗಿದೆ. ಉಚಿತ ಭಾಗ್ಯದ ಹೆಸರಲ್ಲಿ ರಾಜ್ಯವನ್ನು ಸಾಲದ ಸುಳಿಗೆ ದೂಡಿರುವ ಸರ್ಕಾರ, ಕೂಡಲೇ ಈ ಹೆಚ್ಚುವರಿ ಲಗೇಜ್ ದರ ಹಿಂಪಡೆಯಬೇಕೆಂದು ಸಂಸದ ಈರಣ್ಣ ಕಡಾಡಿ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಉತ್ತರ ಕರ್ನಾಟಕದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಗಮನ ಸೆಳೆದ ಕೆಸಿಸಿಐ

ಹುಬ್ಬಳ್ಳಿ: ರಾಜ್ಯ ಸರ್ಕಾರ 2026–27ನೇ ಸಾಲಿನ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿ, ಉತ್ತರ ಕರ್ನಾಟಕ ಹಾಗೂ ಧಾರವಾಡ ಜಿಲ್ಲೆಯಲ್ಲಿ ಆಗಬೇಕಾದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಗಮನ ಸೆಳೆದರು.

ಹುಬ್ಬಳ್ಳಿ ಧಾರವಾಡ ನಗರದ ಸಮಗ್ರ ಅಭಿವೃದ್ಧಿ, ವ್ಯಾಪಾರ–ವಾಣಿಜ್ಯೋದ್ಯಮಕ್ಕೆ ಪ್ರೋತ್ಸಾಹ, ಬಾಕಿ ಇರುವ ಪ್ರಮುಖ ರೈಲ್ವೆ ಯೋಜನೆಗಳಿಗೆ ರಾಜ್ಯ ಸರ್ಕಾರದ ಸಹಕಾರ, ಎಪಿಎಂಸಿಗೆ ಸಂಬಂಧಿಸಿದ ಪ್ರಸ್ತಾವನೆಗಳು, ಬೆಂಗಳೂರು ಇಲೆಕ್ಟ್ರಾನಿಕ್ ಸಿಟಿ ಮಾದರಿಯಲ್ಲಿ ಮ್ಯಾನ್ಯುಫ್ಯಾಕ್ಚರಿಂಗ್ ಸಿಟಿ ಸ್ಥಾಪನೆ, ಪ್ರವಾಸೋದ್ಯಮ ಅಭಿವೃದ್ಧಿಗೆ ಉತ್ತರ ಕರ್ನಾಟಕಕ್ಕೆ ವಿಶೇಷಪ್ಯಾಕೇಜ್, ಜಿಎಸ್‌ಟಿ ಕುರಿತಂತೆ ಸಲಹೆ–ಸೂಚನೆಗಳ ಮನವಿಯನ್ನು ಸಲ್ಲಿಸಿದರು.



ಬಜೆಟ್ ಪೂರ್ವಭಾವಿ ಸಭೆ

ಸಭೆಯಲ್ಲಿ ಸಂಸ್ಥೆಯ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ, ಉಪಾಧ್ಯಕ್ಷ ಸಿದ್ದೇಶ್ವರ ಕಮ್ಮಾರ, ವೀರಣ್ಣ ಕಲ್ಲೂರ, ಗೌರವ ಕಾರ್ಯದರ್ಶಿ ಉದಯ ರೇವಣಕರ ಹಾಗೂ ಜೊತೆ ಗೌರವ ಕಾರ್ಯದರ್ಶಿ ಪ್ರಕಾಶ ಶೃಂಗೇರಿ ಅವರು ಉಪಸ್ಥಿತರಿದ್ದರು.

ಸಮುದ್ರದಲ್ಲಿ ಮುಳುಗಿ ಸಾವು

ಕಾರವಾರ: ಇಲ್ಲಿಯ ಮಾಜಾಳಿ ಕಡಲ ತೀರದಲ್ಲಿ ಸಮುದ್ರ ಸ್ನಾನಕ್ಕೆ ಇಳಿದ ಯುವಕನೋರ್ವ ಮುಳುಗಿ ಆಸ್ಪತ್ರೆಗೆ ಸಾಗಿಸುವಾಗ ಮೃತಪಟ್ಟ ಘಟನೆ ನಡೆದಿದೆ. ಶಿವರಾತ್ರಿ ಅಂಗವಾಗಿ ಮಾಜಾಳಿ ಕಡಲತೀರದಲ್ಲಿ ಯಶ್ ಶ್ಯಾಮ್ ಮಹಾಲೆ (19) ಎಂಬಾತ ಉಳಿದವರಂತೆ ಈಜಲೆಂದು ಸಮುದ್ರಕ್ಕೆ ಇಳಿದಾಗ ಈ ಘಟನೆ ನಡೆದಿದೆ. ಯಶ್ ಸಮುದ್ರಕ್ಕೆ ಇಳಿದು ಈಜುತ್ತ ಎಲ್ಲರಿಗಿಂತ ಮುಂದೆ ಸಾಗಿದ್ದಾನೆ. ಕೆಲವು ಹೊತ್ತಿನ ನಂತರ ಆತ ಕಾಣದಾದಾಗ ಸ್ಥಳೀಯರು ಹುಡುಕಾಟ ನಡೆಸಿದಾಗ ಯಶ ನೀರಿನಲ್ಲಿ ಮುಳುಗುತ್ತಿರುವದು ಕಂಡು ಬಂದಿದೆ. ಸ್ಥಳೀಯರು ಸಮುದ್ರದಲ್ಲಿ ಎತ್ತಿ ದಡಕ್ಕೆ ತಂದರಾದರೂ, ತೀವ್ರ ಅಸ್ವಸ್ಥಗೊಂಡ ಆತನನ್ನು ಆಸ್ಪತ್ರೆಗೆ ಸಾಗಿಸಲಾಗಿತ್ತಾದರೂ ಮೃತಪಟ್ಟಿದ್ದಾನೆ. ಚಿತ್ತಾಕುಲ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಯುವಕ ಆತ್ಮಹತ್ಯೆಗೆ ಯತ್ನ | ವಂಚಿಸಿದ ಯುವತಿ ಬಂಧನ
ಪ್ರೀತಿ–ಮದುವೆ ಹೆಸರಲ್ಲಿ ವಂಚನೆ

ಧಾರವಾಡ: ಪ್ರೀತಿ–ಮದುವೆ ಹೆಸರಿನಲ್ಲಿ ಯುವತಿ, ಲಕ್ಷಾಂತರ ರೂಪಾಯಿ ಹಣ ಪಡೆದು ವಂಚಿಸಿದ ಘಟನೆ ನಗರದಲ್ಲಿ ನಡೆದಿರುವುದು ಬೆಳಕಿಗೆ ಬಂದಿದೆ. ಐಶ್ವರ್ಯ ಎಂಬುವಳೇ ವಂಚಿಸಿದ ಯುವತಿ ಎಂದು ತಿಳಿದು ಬಂದಿದ್ದು, ಗುರು ವಕ್ಕುಂದ ಮೋಸಕ್ಕೆ ಒಳಗಾಗಿ ಆತ್ಮಹತ್ಯೆಗೆ ಪ್ರಯತ್ನಿಸಿದ ಯುವಕ ಎಂದು ಗುರುತಿಸಲಾಗಿದೆ.

> **ಯುವಕರಿಗೆ 7ಲಕ್ಷ ರೂ. ವಂಚನೆ**
> ವಿವಿಧ ಕಾರಣಗಳನ್ನು ನೀಡಿ ಯುವಕರಿಬ್ಬರಿಂದ ಬರೋಬ್ಬರಿ ರೂ.7 ಲಕ್ಷ ರೂಪಾಯಿ ಹಣ ಪಡೆದು ಮದುವೆ ಮಾಡಿಕೊಳ್ಳದೆ, ವಂಚನೆ ಮಾಡಿದ್ದಾಳೆ.

ಧಾರವಾಡಪೆಟ್ರೋಲ್ ಬಂಕ್ ನಲ್ಲಿ ಕೆಲಸ ಮಾಡುವ ಐಶ್ವರ್ಯ, ಆರೋಹಿ, ರೇಣುಕಾ ಹೀಗೆ ಬೇರೆ ಬೇರೆ ಹೆಸರಿಟ್ಟುಕೊಂಡು ಯುವಕರಿಗೆ ವಂಚಿಸಿದ್ದಾಳೆ. ಸದ್ಯ ಮದುವೆಯಾಗಿ ಮಗು ಹೊಂದಿರುವ ಯುವತಿ ಸಂಜು ದೊಡ್ಡಮನಿ ಹಾಗೂ ಗುರು ವಕ್ಕುಂದ ಎಂಬಿಬ್ಬರು ಯುವಕರಿಂದ ಲಕ್ಷಾಂತರ ರೂಪಾಯಿ ಪಡೆದು ವಂಚನೆ ಮಾಡಿದ್ದಾಳೆ.

ಹಾಲು ಮಾರಾಟ ಮಾಡುತ್ತಿದ್ದ ಗುರು ವಕ್ಕುಂದ ಸ್ನೇಹ ಬೆಳೆಸಿದ ಐಶ್ವರ್ಯ, ಮದುವೆಯಾಗುವುದಾಗಿ ನಂಬಿಸಿ, ವಿವಿಧ ಕಾರಣಗಳು ನೀಡಿ ಬರೋಬ್ಬರಿ ರೂ.7 ಲಕ್ಷ ಹಣ ಪಡೆದು ಮದುವೆ ಮಾಡಿಕೊಳ್ಳದೆ, ವಂಚನೆ ಮಾಡಿದ್ದಾಳೆ. ಬೇಸತ್ತ ಗುರು ವಿಷ ಸೇವಿಸಿದ್ದಾನೆ. ಅಲ್ಲದೇ, ಸಾವು–ಬದುಕಿನ ಮಧ್ಯೆ ಹೋರಾಟ ಮಾಡುತ್ತಿದ್ದಾನೆ.

ವಿಷ ಸೇವಿಸಿದ ಜಿಲ್ಲಾಸ್ಪತ್ರೆಗೆ ದಾಖಲಾದ ಗುರು ನೋಡಲು ಬಂದ ವಂಚಕಿ ಐಶ್ವರ್ಯ ಅವಳಿಗೆ ಗುರು ಕುಟುಂಬಸ್ಥರು ಹಿಡಿದು ಥಳಿಸಿ, ಪೊಲೀಸರಿಗೆ ಒಪ್ಪಿಸಿದ್ದಾರೆ. ಯುವಕನ ಸ್ಥಿತಿ ಚಿಂತಾಜನಕವಿದ್ದು, ಯುವಕನನ್ನು ಮದುವೆ ಮಾಡಿಕೊಳ್ಳಬೇಕು, ಇಲ್ಲವೇ ಹಣ ಮರಳಿಸಬೇಕು ಎಂಬ ಬೇಡಿಕೆಯುವಕನಕುಟುಂಸ್ಥರು ಒತ್ತಾಯಿಸಿದ್ದಾರೆ. ಈ ಕುರಿತು ಧಾರವಾಡ ಶಹರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಖೇಲೋ ಇಂಡಿಯಾ ಗೇಮ್ಸ್‌ಗೆ ಆಯ್ಕೆ



◆ **ಹಳಿಯಾಳ:** ಮಾರ್ಚ್ 2026ರಂದು ಪರಿಶಿಷ್ಟ ಪಂಗಡದ ಖೇಲೋ ಇಂಡಿಯಾ ಗೇಮ್ಸ್ ಛತ್ತಿಸಗಡ ರಾಜ್ಯದಲ್ಲಿ ನಡೆಯುವ ಪ್ರಯುಕ್ತ ಫೆ.15ರಂದು ದೆಹಲಿಯ ಐಜಿಕ್ರೀಡಾಂಗಣದಲ್ಲಿ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಹಳಿಯಾಳದ ಐದು ಕ್ರೀಡಾಪಟುಗಳು ಭಾಗವಹಿಸಿ ಆಯ್ಕೆಯಾಗಿರುತ್ತಾರೆ.

ರೋಹನ್ ದೊಡ್ಡಮನಿ 65 ಕೆಜಿ, ಅಮೃತ್ ದುರ್ಗನ್ನವರ್ 74 ಕೆಜಿ, ಶಾಲಿನ ಸಿದ್ದಿ 57ಕೆಜಿ, ಮನಿಷಾ ಸಿದ್ದಿ 76 ಕೆಜಿ, ಪ್ರಿನ್ಸಿಟಾ ಸಿದ್ದಿ 65 ಕೆಜಿ ವಿಭಾಗದಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ಕುಸ್ತಿ ಕ್ರೀಡಾಪಟುಗಳಿಗೆ ಆರ್.ವಿ.ದೇಶಪಾಂಡೆ ಶಾಸಕರು ಹಳಿಯಾಳ ಹಾಗೂ ರವಿ ವೈ ನಾಯಕ್ ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಾರವಾರ ಅಭಿನಂದನೆ ತಿಳಿಸಿದ್ದಾರೆ.

ಆಡಳಿತ ಮಂಡಳಿಗೆ ಅವಿರೋಧ ಆಯ್ಕೆ




◆ **ಕುಮಟಾ:** 2026 ರಿಂದ ಐದು ವರ್ಷಗಳ ಅವಧಿಗೆ ಸಂಘದ ನೂತನ ಆಡಳಿತ ಮಂಡಳಿಯು ಚುನಾವಣೆ ಇಲ್ಲದೇ ಅವಿರೋಧವಾಗಿ ಆಯ್ಕೆ ಆಗಿದೆ. ಇದು ಈವರೆಗಿನ ಆಡಳಿತ ಮಂಡಳಿಯ ಮೇಲಿಟ್ಟ ಸದಸ್ಯರ ವಿಶ್ವಾಸ ಹಾಗೂ ಗೌರವ. ಇದನ್ನು ಉಳಿಸಿಕೊಂಡು ಸಂಘವನ್ನು ಬೆಳೆಸಬೇಕೆಂದು ನಿರ್ಗಮಿತ ಅಧ್ಯಕ್ಷ ಚಂದ್ರಶೇಖರ ಉಪಾಧ್ಯಾಯ ಹೇಳಿದರು.

ನೂತನ ಅಧ್ಯಕ್ಷರಾದ ದಯಾನಂದ ಭಟ್ಟ ಅವರು ಸರ್ವರ ಸಹಕಾರದಿಂದ ಸಂಘವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯ ಬೇಕು ಎಂದರು. ಉಪಾಧ್ಯಕ್ಷರಾಗಿ ಎಂ.ಎನ್.ಹೆಗಡೆ, ಕಾರ್ಯದರ್ಶಿಯಾಗಿ ಶ್ರೀರಾಮ ಭಟ್ಟ, ಸಂಘದ ಕಲ್ಯಾಣ ಮಂಟಪ, ವಿದ್ಯಾರ್ಥಿ ನಿಲಯ, ವೃದ್ಧಾಶ್ರಮ ಹಾಗೂ ದಿನ ನಿತ್ಯದ ಮೇಲ್ವಿಚಾರಣೆಗಾಗಿ ಕಾರ್ಯನಿರ್ವಾಹಕ ಗೌರವ ನಿರ್ದೇಶಕರಾಗಿ ಸಾವಿತ್ರಿ ಭಟ್ಟ ಹಾಗೂ ಯಾಜ್ಞವಲ್ಕ್ಯ ಸಾಂಸ್ಕೃತಿಕ ವೇದಿಕೆಯ ಸಂಚಾಲಕರಾಗಿ ಚಂದ್ರಶೇಖರ ಉಪಾಧ್ಯಾಯರು ಸರ್ವಾನುಮತದಿಂದ ಆಯ್ಕೆಗೊಂಡರು.

ನಿಧನ ಸುದ್ದಿ

ನಳಿನಿ ದೇಸಾಯಿ

◆ **ಮುಂಡಗೋಡ:** ಪಟ್ಟಣದ ಬಂಕಾಪುರ ರಸ್ತೆಯ ನಿವಾಸಿ ದಿ.ಡಾ.ರಾಧಾಕೃಷ್ಣ ದೇಸಾಯಿ ಅವರ ಧರ್ಮಪತ್ನಿ ನಳಿನಿ. ಆರ್.ದೇಸಾಯಿ(92) ನಿಧನರಾದರು. ಮೃತರಿಗೆ ಮೂವರು ಪುತ್ರರು ಹಾಗೂ ಅಪಾರ ಬಂಧು-ಬಳಗವಿದೆ. ಪಟ್ಟಣದ ವೈದ್ಯರು ಸಂತಾಪ ಸೂಚಿಸಿದ್ದಾರೆ.



ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62699	71199
ಬಿಳಿಗೋಟು	29999	42899
ಕೆಂಪುಗೋಟು	23199	38618
ಬೆಟ್ಟೆ	41299	52618
ರಾಶಿ	44099	57199
ಚಾಲಿ	42190	49899
ಬಿ.ಕಾಳುಮೆಣಸು	90569	90569

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	64001	66975
ರಾಶಿ	50519	62930
ಬೆಟ್ಟೆ	37974	52215
ಕೆಂಪುಗೋಟು	18969	41611
ಬಿಳಿಗೋಟು	16899	40511
ಚಾಲಿ ಹೊಸದು	40935	49199
ಚಾಲಿ	38699	51419
ಕೋಕಾ	12900	32699
ಕಾಳುಮೆಣಸು	62000	68211



ಅಂಕೋಲಾ: ತಾಲೂಕಿನ ಕೇಣಿ ಕಡಲ ತೀರದಲ್ಲಿ ಮಹಾಶಿವರಾತ್ರಿ ಉತ್ಸವದ ಪ್ರಯುಕ್ತ ವಿವಿಧ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ನಡೆದವು.ಸಾಗರಶಾಸ್ತ್ರ ನಿವೃತ್ತ ಪ್ರಾಧ್ಯಾಪಕ ಡಾ.ವಿ.ಎನ್.ನಾಯಕ ಕಾರ್ಯಕ್ರಮ ಉದ್ಘಾಟಿಸಿದರು. ಈ ವೇಳೆ ಮೀನುಗಾರ ಪ್ರಮುಖ ಮಂಜುನಾಥ ಟಾಕೇಕರ, ರಮೇಶ ಕುರ್ಲೆ, ಜಯರಾಮ ಬಾನಾವಳಿಕರ್ ಉಪಸ್ಥಿತರಿದ್ದರು.

ಶಿವ ಮಹಾ ತ್ಯಾಗಮಯಿ: ನಾಯಕ

◆ **ಅಂಕೋಲಾ:** ತಾಲೂಕಿನ ಕೇಣಿ ಕಡಲ ತೀರದಲ್ಲಿ ಮಹಾಶಿವರಾತ್ರಿ ಉತ್ಸವದ ಪ್ರಯುಕ್ತ ವಿವಿಧ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ನಡೆದವು.ಸಾಗರಶಾಸ್ತ್ರ ನಿವೃತ್ತ ಪ್ರಾಧ್ಯಾಪಕ ಡಾ.ವಿ.ಎನ್.ನಾಯಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಲೋಕ ಕಲ್ಯಾಣಕ್ಕಾಗಿ ವಿಷವನ್ನು ಕುಡಿದು ನೀಲಕಂಠ ಎನಿಸಿಕೊಂಡಿರುವ ಶಿವ ಮಹಾ ತ್ಯಾಗಿಯಾಗಿದ್ದು, ಇಂದು ನಾವು ಪರಿಸರದಲ್ಲಿ ಪರಶಿವನನ್ನು ಕಾಣಬೇಕಿದೆ ಶುದ್ಧ ಪರಿಸರಕ್ಕೆ ಕೊಡುಗೆ ನೀಡುತ್ತಿರುವ ಕೋಟೆಗುಡ್ಡ ಮತ್ತು ಸಮುದ್ರದ ಪೂಜೆ ನಡೆಸಿ ಶಿವರಾತ್ರಿ ಉತ್ಸವದ ಆಚರಣೆ ಅರ್ಥಪೂರ್ಣ ಎಂದರು.ಪತ್ರಕರ್ತ ಪ್ರಮೋದ ಹರಿಕಂತ್ರ ಮಾತನಾಡಿ, ಪ್ರಕೃತಿಯಲ್ಲಿ ದೇವರನ್ನು ಕಾಣುವ ಮೀನುಗಾರರು ದೇವರ ಮೇಲೆ ನಂಬಿಕೆ ಇಟ್ಟು ತಮ್ಮ ಕಾಯಕದಲ್ಲಿ ತೊಡಗುವವರಾಗಿದ್ದು ಶಿವರಾತ್ರಿ ಉತ್ಸವ ಕಡಲ ಮಕ್ಕಳ ಒಗ್ಗಟ್ಟನ್ನು ಬಲಪಡಿಸಲಿ ಎಂದರು.ಪತ್ರಕರ್ತ ವಿಲಾಸ ನಾಯಕ ಮಾತನಾಡಿ, ಕೋಟೆಗುಡ್ಡದ ಧಾರ್ಮಿಕ ಮತ್ತು ಐತಿಹಾಸಿಕ ಮಹತ್ವ ಕೇಣಿ ಕಡಲ ತೀರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸಹಕಾರಿಯಾಗಲಿ ಎಂದರು.ಕಾರ್ಯಕ್ರಮದ ಸಂಘಟಕ ಪ್ರಮುಖ ಸಂಜೀವ ಬಲೆಗಾರ ಮಾತನಾಡಿ, ಮುಂದಿನ ವರ್ಷಗಳಲ್ಲಿ ಕೇಣಿ ಕಡಲ ತೀರದಲ್ಲಿ ಮೂರು ದಿನಗಳ ಕಾಲ ಶಿವರಾತ್ರಿ ಉತ್ಸವ ಆಯೋಜಿಸಲಾಗುವುದು ಎಂದರು.ಪ್ರಮುಖರುಗಳಾದ ವಿಕಾಸ ತಾಂಡೇಲ, ಪದ್ಮಾವತಿ ಗೌಡ, ತೋಕು ಕೋಡಾರಕರ್,ಸಾತು ಗೌಡ, ಹುವಾ ಖಂಡೇಕರ್ ಮಾತನಾಡಿದರು.ಸ್ಥಳೀಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಮಹಿಳೆಯರಿಗಾಗಿ ಹಗ್ಗ ಜಗ್ಗಾಟ ಮೊದಲಾದ ಗ್ರಾಮೀಣ ಆಟೋಟ ಸ್ಪರ್ಧೆ ನಡೆಯಿತು.



ಯಲ್ಲಾಪುರ: ಗ್ರಾಮದೇವಿ ಜಾತ್ರೆಯ ಸಂದರ್ಭದಲ್ಲಿ ಜಾತ್ರೆಗೆ ಆಗಮಿಸಿದ ಕೆಲವರು ತಮ್ಮ ಮೊಬೈಲ್, ಹಣ, ಪರ್ಸ್ ಮುಂತಾದ ಬೆಲೆ ಬಾಳುವ ವಸ್ತುಗಳನ್ನು ಕಳೆದುಕೊಂಡಿದ್ದರು. ಕಳೆದುಹೋಗಿದ್ದ ಈ ಎಲ್ಲ ವಸ್ತುಗಳನ್ನು ಸಿ.ಪಿ.ಆಯ್ ರಮೇಶ್ ಹಾನಾಪುರ ನೇತೃತ್ವದಲ್ಲಿ ಜಾತ್ರಾ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸರು ಹುಡುಕಿ ವಾರಸುದಾರರಿಗೆ ಹಸ್ತಾಂತರಿಸುವ ಕಾರ್ಯ ಮಾಡಿದ್ದಾರೆ. ಇವರ ಕಾರ್ಯಕ್ಕೆ ಸಾರ್ವಜನಿಕರಿಂದ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ.

ಬೆಳೆಗಾರರ ಹಿತ ಸಂರಕ್ಷಣಾ ಸಮಿತಿ ಅಧ್ಯಕ್ಷ ಜಿವ್ರೋಜಿ ಆರೋಪ

ಪೂರ್ಣಗೊಳ್ಳದ ಕಾಳಿ ನದಿ ಯೋಜನೆ

◆ **ಹಳಿಯಾಳ:** 2017ರಲ್ಲಿ ಮುಖ್ಯಮಂತ್ರಿ ಅವರನ್ನು ಕರೆಸಿ ಭಾರೀ ಪ್ರಮಾಣದಲ್ಲಿ ಅಡಿಗಲ್ಲು ಸಮಾರಂಭ ನಡೆಸಿ ಬಹಳಷ್ಟು ಪ್ರಚಾರ ಪಡೆದ ಕಾಳಿ ನದಿಯಿಂದ ಕೆರೆಗಳು ಹಾಗೂ ಬಾಂಧಾರಗಳಿಗೆ ನೀರು ತುಂಬಿಸುವ ಯೋಜನೆ, ಪಟ್ಟಣದ ಒಳಚರಂಡಿ ಯೋಜನೆ, ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಸೇರಿದಂತೆ 784 ಕೋಟಿ ರೂ.ಗೂ ಅಧಿಕ ಮೊತ್ತದ ಕಾಮಗಾರಿಗಳಲ್ಲಿ ಒಂದೂ ಯೋಜನೆಯೂ ಪೂರ್ಣಗೊಳ್ಳದೇ ಇಂದಿಗೂ ಪ್ರಾಯೋಗಿಕ ಹಂತಕ್ಕೆ ಇದೆ ಎನ್ನುವ ಉತ್ತರ ಪಡೆಯುವ ಕರ್ಮ ಹಳಿಯಾಳ ತಾಲೂಕಿನ ರೈತರದ್ದಾಗಿದೆ ಎಂದು ಹಳಿಯಾಳ ಮತಕ್ಷೇತ್ರದ ಶಾಸಕರ ಕಾರ್ಯ ವೈಖರಿಯ ಬಗ್ಗೆ ಬೆಳೆಗಾರರ ಹಿತ ಸಂರಕ್ಷಣಾ ಸಮಿತಿ ಅಧ್ಯಕ್ಷ ನಾಗೇಂದ್ರ ಜಿವ್ರೋಜಿ ಕಿಡಿಕಾರಿದರು.

ಅವರು ಪಟ್ಟಣದ ಮರಾಠ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಲ್ಲಾ ಕಾಮಗಾರಿಗಳು 2019-20ರಲ್ಲೇ ಪೂರ್ಣಗೊಳ್ಳಬೇಕಾಗಿತ್ತು. ಆದರೆ ಒಂಬತ್ತು ವರ್ಷ ಕಳೆದರೂ ಯೋಜನೆಗಳು ಪೂರ್ಣವಾಗದೇ ರೈತರು ನೀರಿಗಾಗಿ ಚಾತಕ ಪಕ್ಷಿಯಂತೆ ಕಾಯುವ ಸ್ಥಿತಿ ನಿರ್ಮಾಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾಳಿ ನದಿ ಯೋಜನೆಯಿಂದ ನಮ್ಮ ಬಾಳು ಹಸನಾಗುತ್ತದೆ, ಬಡತನ ನೀಗುತ್ತದೆ ಎಂಬ ನಿರೀಕ್ಷೆಯೊಂದಿಗೆ ತಾಲೂಕಿನ ರೈತರು ಕಾಯುತ್ತಿದ್ದರೂ, ಯೋಜನೆ ಏಳು ವರ್ಷಗಳ ಹಿಂದೆಯೇ ಜಾರಿಗೆ ಬರಬೇಕಾಗಿದ್ದರೂ ಇದುವರೆಗೂ ಕಾರ್ಯಗತಗೊಂಡಿಲ್ಲ ಎಂದು ಹೇಳಿದರು.

ನೀರಿನ ಕೊರತೆಯಿಂದ ನಿರಾಶೆಗೊಂಡ ರೈತರು ಸಾವಿರಾರು ಬೋರ್‌ವೆಲ್‌ಗಳನ್ನು ಕೊರೆಸಿದ್ದು, ಒಂದೊಂದು ಬೋರ್‌ವೆಲ್‌ಗೆ 1 ಲಕ್ಷ ರೂ.ಗೂ ಅಧಿಕ ವೆಚ್ಚ ಬರುತ್ತಿದೆ. ಇದರಿಂದ ರೈತರ ಮೇಲಿನ ಸಾಲದ ಹೊರೆ ಹೆಚ್ಚುತ್ತಿದೆ ಎಂದರು. ಯೋಜನೆಗಾಗಿ 2003ರಿಂದ ರೈತರು ಹೋರಾಟ ನಡೆಸಿದ್ದು, ಅನೇಕ ಬಾರಿ



> ಒಬ್ಬ ಪ್ರಭಾವಿ ನಾಯಕ ಎನಿಸಿಕೊಂಡ ಶಾಸಕರಿಗೆ ಯೋಜನೆಯ ಅನುಮೋದನೆ ದೊರೆಯುವಾಗಲೇ ಎಲ್ಲಾ ಇಲಾಖೆಗಳೂ ಸಹಕರಿಸಲೇ ಬೇಕು ಎನ್ನುವ ನಿಯಮ ತಿಳಿಯದೇ ಇರುವಷ್ಟು ಹಳಿಯಾಳದ ರೈತರು ಮೂರ್ಖರಲ್ಲ.
> ■ ನಾಗೇಂದ್ರ ಜಿವ್ರೋಜಿ, ಬೆಳೆಗಾರರ ಹಿತ ಸಂರಕ್ಷಣಾ ಸಮಿತಿ ಅಧ್ಯಕ್ಷ

ಚುನಾವಣೆಗೂ ಇದು ಪ್ರಮುಖ ವಿಷಯವಾಗಿತ್ತು. ಮಂಜೂರಾತಿ ಪಡೆಯಲು 15 ವರ್ಷಗಳ ಹೋರಾಟ ಸಾಕ್ಷಿಯಾಗಿತ್ತು. ಆದರೆ ಮಂಜೂರಾದ ನಂತರವೂ ಒಂಬತ್ತು ವರ್ಷಗಳಾದರೂ ಯೋಜನೆ ಪೂರ್ಣಗೊಳ್ಳದೇ ಇರುವುದು ದುರಂತ ಅಲ್ಲದೇ ಕಳೆದ ಪತ್ರಿಕಾಗೋಷ್ಠಿಯಲ್ಲಿ ಡಜನ್ಗೂ ಮಿಗಿಲಾದ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಯೋಜನೆ ಅಂತಿಮ ಹಂತಕ್ಕೆ ಬಂದಿದೆ ಎಂದು ಹೇಳಿರುವುದು ಹಾಸ್ಯಾಸ್ಪದವಾಗಿದೆ.

ಸೋಮವಾರ ಶಾಸಕರು ಪತ್ರಿಕಾ ಹೇಳಿಕೆ ನೀಡಿ, ಯೋಜನೆ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಲಿದೆ, ರೈತರು ನಿರಾಶರಾಗಬಾರದು ಎಂದು ಭರವಸೆ ನೀಡಿದ್ದಾರೆ. ಆದರೆ ಕಳೆದ ಮೂರು-ನಾಲ್ಕು ವರ್ಷಗಳಿಂದ ಇದೇ ರೀತಿಯ ಹೇಳಿಕೆಗಳನ್ನು ಹಲವಾರು ಬಾರಿ ಕೇಳಿದ್ದೇವೆ. 9 ವರ್ಷಗಳ ಕೆಲಸದ ಆದೇಶ ಇದೇ ಏನು? ಎಂಬ ಪ್ರಶ್ನೆ ಈಗ ಸಾರ್ವಜನಿಕ ವಲಯದಲ್ಲಿ ಎದುರಾಗಿದೆ ಅಲ್ಲದೇ ಯಾವಾಗಲೂ ಕೊರೋನಾ ಬಂದ ಸಮಯದ ಕಾರಣ ನೀಡುತ್ತಾ ಯೋಜನೆಯನ್ನು ಹಿಂಡಿ ಹಿಪ್ಪೆ ಮಾಡಿರುವುದು ರೈತರಿಗೆ ತಿಳಿದಿದೆ ಎಂದು ಹೇಳಿದರು.

ಫೆ.27ರಂದು ಪಾದಯಾತ್ರೆ

ರಾಜ್ಯ ಕಬ್ಬು ಬೆಳೆಗಾರ ಸಂಘ ಹಾಗೂ ಕಬ್ಬು ಬೆಳೆಗಾರರ ಹಿತ ಸಂರಕ್ಷಣಾ ಸಮಿತಿ ವತಿಯಿಂದ ಫೆ.27ರಂದು ಪಟ್ಟಣದ ಮರಾಠ ಭವನದಿಂದ ಪಾದಯಾತ್ರೆ ಆರಂಭಿಸಿ ಗ್ರಾಮೀಣ ಭಾಗದ ಹಳ್ಳಿಗಳಿಗೆ ಭೇಟಿ ನೀಡಿ ನೀರಿಗಾಗಿ ಜನಜಾಗೃತಿ ಮೂಡಿಸಲಾಗುವುದು ಎಂದು ತಿಳಿಸಿದರು.

ಪಾದಯಾತ್ರೆ ನಂತರ ಹಳಿಯಾಳ ಪಟ್ಟಣದಲ್ಲಿ ನಿರಂತರ ಪ್ರತಿಭಟನೆ ನಡೆಸಲಾಗುವುದು. ಸಂಪೂರ್ಣ ಕ್ಷೇತ್ರಕ್ಕೆ ನೀರು ಬರುವವರೆಗೂ ಪ್ರತಿಭಟನೆ ನಿಲ್ಲಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಕುಮಾರ ಬೊಬಾಟಿ, ಕಾರ್ಯದರ್ಶಿ ಅಶೋಕ ಮೇಟಿ, ಸಾತುರಿ ಗೋಡಿಮನಿ, ಸುರೇಶ ಶಿವಣ್ಣವರ, ರಾಮದಾಸ್ ಬೆಳಗಾಂವಕರ, ಮಹೇಶ್ ಪಾಳೆಕರ, ಮುಂಡ್ಲಿಕ ಗೋಡಿಮನಿ, ನಕುಲ ಕೆಂಚಣ್ಣವರ ಇತರರು ಉಪಸ್ಥಿತರಿದ್ದರು.

ವಂದೇ ಮಾತರಂ ಕೋಸ್ಟಲ್ ಸೈಕ್ಲೋಥಾನ್-2026 ರ‍್ಯಾಲಿ

◆ **ಕಾರವಾರ:** ವಂದೇ ಮಾತರಂ ಗೀತೆಯು 150 ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಆಯೋಜಿಸಿರುವ 'ವಂದೇ ಮಾತರಂ ಕೋಸ್ಟಲ್ ಸೈಕ್ಲೋಥಾನ್-2026 ರ‍್ಯಾಲಿಯ ಪಶ್ಚಿಮ ಕರಾವಳಿ ಸೈಕ್ಲೋಥಾನ್ ತಂಡವು ಸೋಮವಾರ ಕಾರವಾರ ಪ್ರವೇಶಿಸಿದ್ದು, ಈ ರ‍್ಯಾಲಿಗೆ ಮಾಜಾಳಿ ಚೆಕ್ ಪೋಸ್ಟ್‌ನಲ್ಲಿ ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಈ ರ‍್ಯಾಲಿಯಲ್ಲಿ ಸುಮಾರು 50 ರಷ್ಟು ಮಹಿಳಾ ಸಿಬ್ಬಂದಿ ಸೇರಿದಂತೆ 120 ಸಿಐಎಸ್‌ಎಫ್ ಸಿಬ್ಬಂದಿ ಭಾಗವಹಿಸಿದ್ದು, ಈ ತಂಡವು ಜ.28ರಂದು ಗುಜರಾತ್‌ನ ಲಖ್‌ಪತ್ ಕೋಟೆಯಿಂದ ತಮ್ಮ ರ‍್ಯಾಲಿಯನ್ನು ಪ್ರಾರಂಭಿಸಿದ್ದು, ಸೋಮವಾರ ಮಡಗಾಂವ್-ಕಾಣಕೋಣ-ಮಾಜಾಳಿ ಮೂಲಕ ಕಾರವಾರ ಪ್ರವೇಶಿಸಿದ್ದು, ಸಿಐಎಸ್‌ಎಫ್ ಕೈಗಾದ ಅಧಿಕಾರಿಗಳು, ಪೊಲೀಸ್ ಇಲಾಖೆ ಅಧಿಕಾರಿಗಳು, ಎನ್.ಸಿ.ಸಿ ವಿದ್ಯಾರ್ಥಿಗಳು, ಪೊಲೀಸ್ ಬ್ಯಾಂಡ್ ಮತ್ತು ಸ್ಥಳೀಯ ಜಾನಪದ ಕಲಾತಂಡಗಳ ಮೆರವಣಿಗೆಯ ಮೂಲಕ ಅವರನ್ನು ಸ್ವಾಗತಿಸಲಾಯಿತು.

ಸೈಕ್ಲೋಥಾನ್ ತಂಡದಲ್ಲಿದ್ದ ಸಿಐಎಸ್‌ಎಫ್ ಸಿಬ್ಬಂದಿಯನ್ನು ಗೋಟ್ನೆಭಾಗ್ ಕ್ರಾಸ್‌ನಲ್ಲಿ ಮೀನುಗಾರ ಮಹಿಳೆಯರು ತಿಲಕವಿಟ್ಟು, ಪುಷ್ಪವೃಷ್ಟಿ ಮಾಡಿ ಸ್ವಾಗತಿಸಿದರು.

ಸಿಐಎಸ್‌ಎಫ್ ಘಟಕ ಎನ್‌ಪಿಸಿ ಕೈಗಾದ ಸೀನಿಯರ್ ಕಮಾಂಡೆಂಟ್ ಅಜಯ್ ಕುಮಾರ್ ಝಾ, ಬೆಂಗಳೂರಿನ ಸ್ಯಾಟಲೈಟ್ ಕೇಂದ್ರದ ಸೀನಿಯರ್ ಕಮಾಂಡೆಂಟ್ ಆರ್.ಪಿ ಸಿಂಗ್, ಡೆಪ್ಯುಟಿ ಕಮಾಂಡೆಂಟ್ ಬಿರೇಂದ್ರ ಕುಮಾರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ರವಿ ನಾಯಕ್, ಡಿವೈಎಸ್ಪಿ ಗಿರೀಶ್ ಮತ್ತಿತರರು ಭಾಗವಹಿಸಿದ್ದರು.

ನಂತರ ಈ ಸೈಕ್ಲೋಥಾನ್ ತಂಡವು ಮಾಜಾಳಿ ಚೆಕ್ ಪೋಸ್ಟ್ ನೆಚ್ಚಿನ್ ಬಾಗ್ಲ-ಹಿಪ್ಪಲಿ, ದಂಡೇಬಾಗ್-ಬವಾಲ್ -ದೇವ್‌ಬಾಗ್-ಸದಾಶಿವಗಡ-ಶಿವಾಜಿ ಕ್ರಾಸ್-ಚಿಂಚೇವಾಡ - ರಾಮನಾಥ್ ವೃತ್ತ-ವಂಗಡ -ಮಾಜಾಳಿ ಮಾರ್ಗದ ಮೂಲಕ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಮಾಜಾಳಿಗೆ ತೆರಳಿತು, ಕಾಲೇಜಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಕೋಸ್ಟಲ್ ಸೈಕ್ಲೋಥಾನ್‌ನಲ್ಲಿ ಭಾಗವಹಿಸಿದ್ದ ಸಿಐಎಸ್‌ಎಫ್ ಕಾನ್ಸ್ಟೇಬಲ್ ರಾಹುಲ್ ಮಾತನಾಡಿ, ಗುಜರಾತಿನಿಂದ ಪ್ರಾರಂಭವಾದ ನಮ್ಮ ರ‍್ಯಾಲಿಯು ಕೇರಳದ ಕೊಚ್ಚಿ ತನಕ ನಡೆಯಲಿದ್ದು, ಈ ರ‍್ಯಾಲಿಯ ಮುಖ್ಯ ಉದ್ದೇಶ ಸುರಕ್ಷಿತ ಸಮೃದ್ಧ ಭಾರತ. ಕರಾವಳಿ ತೀರ ಪ್ರದೇಶ ಎಲ್ಲಿಯವರೆಗೆ ಸುರಕ್ಷಿತವಾಗಿರುತ್ತೋ ಅಲ್ಲಿಯವರೆಗೆ ಭಾರತ ಸಮೃದ್ಧವಾಗಿರುತ್ತದೆ ಎಂದರು.



ಜಾನಪದ ಕಲೆ ಶ್ರೀಮಂತಿಕೆಯ ಸಂಕೇತ

◆ **ಸಿದ್ದಾಪುರ:** ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅಭಿಮಾನಿ ಬಳಗದ ವತಿಯಿಂದ ಸಿದ್ದಾಪುರದ ನೆಹರು ಮೈದಾನದಲ್ಲಿ ಆಯೋಜಿಸಲಾಗಿದ್ದ ರಾಜ್ಯಮಟ್ಟದ ಹೊನಲು ಬೆಳಕಿನ ಡೊಳ್ಳು ಕುಣಿತ ಸ್ಪರ್ಧೆ ಯಶಸ್ವಿಯಾಗಿ ಜರುಗಿತು.

ಸಾಗರ ತಾಲೂಕಿನ ಹೊಸಕೊಪ್ಪ ಪ್ರಥಮ ಸ್ಥಾನ ಪಡೆದರೆ ಸಿದ್ದಾಪುರದ ಕೊಡಗಿಬೈಲ್ ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿದೆ.

ಶಿರಸಿ-ಸಿದ್ದಾಪುರ ಕ್ಷೇತ್ರದ ಶಾಸಕ ಭೀಮಣ್ಣ ನಾಯ್ಕ ಡೊಳ್ಳು ಬಾರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ಮಾತನಾಡಿ, ಜಾನಪದ ಕಲೆಗಳು ಈ ನಾಡಿನ ಶ್ರೀಮಂತಿಕೆಯ ಸಂಕೇತವಾಗಿವೆ. ನನ್ನ ರಾಜಕೀಯ ಗುರುಗಳಾಗಿದ್ದ ವರ್ಣರಂಜಿತ ರಾಜಕಾರಣಿ ಎಸ್.ಬಂಗಾರಪ್ಪ ಡೊಳ್ಳು ಕುಣಿತದಲ್ಲಿ ಹೆಸರುವಾಸಿಯಾಗಿದ್ದರು. ಅವರ ಮೆಚ್ಚಿನ ಕಲೆಯನ್ನು ಉಳಿಸಿ ಬೆಳೆಸುವ ಕಾರ್ಯ ಮಾಡುತ್ತಿರುವ ಸಿದ್ದಾಪುರದ ಅಭಿಮಾನಿ ಬಳಗದ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡುತ್ತೇನೆ. ಜಾನಪದ ಕಲೆಗಳನ್ನು ಉಳಿಸಿ-ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.ಸಾರಂಗನಜಡ್ಡು ಕಾರ್ತಿಕೇಯ ಪೀಠದ ಶ್ರೀ ಯೋಗೇಂದ್ರ ಶ್ರೀಗಳು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.ತಾಲೂಕಾ ಕೃಷಿಕ ಸಮಾಜದ ಅಧ್ಯಕ್ಷ ವೀರಭದ್ರ ನಾಯ್ಕ ಮಾತನಾಡಿದರು. ತಾಲೂಕಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಸಂತ ನಾಯ್ಕ ಅಧ್ಯಕ್ಷತೆ ವಹಿಸಿದ್ದರು. ತಾಲೂಕಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಜಿ.ನಾಗರಾಜ, ಜಿಪಂ ಮಾಜಿ ಸದಸ್ಯ ವಿ.ಎನ್.ನಾಯ್ಕ, ತಾಪಂ ಮಾಜಿ ಅಧ್ಯಕ್ಷ ಸಿ.ಆರ್.ನಾಯ್ಕ, ಯುವ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಹರೀಶ ನಾಯ್ಕ ಹಸ್ವಿಗುಳಿ, ಉದ್ಯಮಿ ಉಪೇಂದ್ರ ಪೈ, ಬಂಗಾರಪ್ಪ ಅಭಿಮಾನಿ ನಾಸೀರ ಖಾನ್ ಮತ್ತಿತರರು ಉಪಸ್ಥಿತರಿದ್ದರು.

ಡೊಳ್ಳು ಕುಣಿತ ಸಮಿತಿ ಅಧ್ಯಕ್ಷ ಹೇಮಂತ ನಾಯ್ಕ ಗೋಳಗೋಡ ಪ್ರಾಸ್ತಾವಿಕ ಮಾತನಾಡಿದರು. ಸಮಿತಿ ಕಾರ್ಯದರ್ಶಿ ರವಿಕುಮಾರ ಕೊಠಾರಿ ಸ್ವಾಗತಿಸಿದರು. ತಾಲೂಕಾ ಆರೋಗ್ಯಾಧಿಕಾರಿ ಡಾ.ಲಕ್ಷ್ಮೀಕಾಂತ ನಾಯ್ಕ, ಹಿರಿಯ ವೈದ್ಯ ಡಾ.ಎಸ್.ಆರ್. ಹೆಗಡೆ, ಪತ್ರಕರ್ತ ಕನ್ನೇಶ ಕೋಲಸಿರ್ಸಿ, ಖ್ಯಾತ ಚಂಡೆವಾದಕ ಧನಂಜಯ ನಾಯ್ಕ ಪುರದಮಠ, ಯಕ್ಷಗಾನ ಕಲಾವಿದ ರಮೇಶ ಗೌಡ ಮುಸವಳ್ಳಿ, ಸಂಗೀತ ಕಲಾವಿದರಾದ ಗೋಪಾಲ ಕಾನಳ್ಳಿ, ವೆಂಕಟೇಶ ಕೊಂಡ್ಲಿ, ಅಸ್ಲಾಂ ಶೇಖ್ ಇವರನ್ನು ಸನ್ಮಾನಿಸಲಾಯಿತು.

ರಾಜ್ಯಮಟ್ಟದ ಹೊನಲು ಬೆಳಕಿನ ಡೊಳ್ಳು ಕುಣಿತ ಸ್ಪರ್ಧೆಯಲ್ಲಿ ಸಾಗರ ತಾಲೂಕಿನ ಹೊಸಕೊಪ್ಪ ಪ್ರಥಮ, ಸಿದ್ದಾಪುರ ತಾಲೂಕಿನ ಕೊಡಗಿಬೈಲ ದ್ವಿತೀಯ ಹಾಗೂ ಬಾಗಲಕೋಟ ಜಿಲ್ಲೆಯ ಬಾದಾಮಿ ತಾಲೂಕಿನ ಕರಡಿಗುಡ್ಡ ತಂಡ ತೃತೀಯ ಸ್ಥಾನ ಪಡೆದುಕೊಂಡಿತು.



ಸಂತ ಸೇವಾಲಾಲರ ತತ್ವಾದರ್ಶ ಅಳವಡಿಸಿಕೊಳ್ಳಿ: ಶಾಸಕ

◆ **ಶಿರಸಿ:** ಬಂಜಾರ ಸಮುದಾಯದ ಆರಾಧ್ಯ ದೈವ, ಅಹಿಂಸೆ ಮತ್ತು ಸೌಹಾರ್ದತೆಯ ಹರಿಕಾರರಾದ ಸಂತ ಸೇವಾಲಾಲ್ ಮಹಾರಾಜರ ತತ್ವ ಆದರ್ಶಗಳು ಇಡೀ ಸಮಾಜಕ್ಕೆ ದಾರಿ ದೀಪವಾಗಿವೆ ಎಂದು ಶಾಸಕ ಭೀಮಣ್ಣ ನಾಯ್ಕ ಹೇಳಿದರು.

ನಗರದ ಶ್ರೀ ಮಾರಿಕಾಂಬ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಶ್ರೀ ಸಂತ ಸೇವಾಲಾಲ್ ರವರ 287ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರವು ಬಂಜಾರ ಸಮುದಾಯದ ಸರ್ವತೋಮುಖ ಏಳಿಗೆಗಾಗಿ ನಿರಂತರವಾಗಿ ಶ್ರಮಿಸುತ್ತಿದೆ. ಬಂಜಾರ ಸಮುದಾಯದ ಮಕ್ಕಳು ಉನ್ನತ ಶಿಕ್ಷಣ ಪಡೆಯಲು ಬೇಕಾದ ವಸತಿ ನಿಲಯಗಳು, ಶಿಷ್ಯವೇತನ ಹಾಗೂ ಮೂಲಭೂತ ಸೌಕರ್ಯಗಳಿಗೆ ಸರ್ಕಾರವು ಹೆಚ್ಚಿನ ಅನುದಾನ ಮೀಸಲಿಟ್ಟಿದೆ. ಅಭಿವೃದ್ಧಿ ನಿಗಮಗಳ ಮೂಲಕ ಆರ್ಥಿಕ ನೆರವು ನೀಡಿ ಸಮುದಾಯದ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು.ಜಗತ್ತಿಗೆ ಶಾಂತಿ ಮತ್ತು ಅಹಿಂಸೆಯ ಸಂದೇಶ ಸಾರಿದ ಸೇವಾಲಾಲ್ ಮಹಾರಾಜರ ಜಯಂತಿಯನ್ನು ಸರ್ಕಾರಿ ಕಾರ್ಯಕ್ರಮವನ್ನಾಗಿ ಆಚರಿಸುವ ಮೂಲಕ ಸರ್ಕಾರವು ಸಮುದಾಯಕ್ಕೆ ಗೌರವ ಸಲ್ಲಿಸಿದೆ. ಅವರ ಆದರ್ಶಗಳನ್ನು ಇಂದಿನ ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.ಬಂಜಾರ ಸಮುದಾಯದ ಪ್ರಮುಖ ಮುಖಂಡರು, ಸಮಾಜದ ಗಣ್ಯರು ಉಪಸ್ಥಿತರಿದ್ದರು.



ಹದಗೆಟ್ಟ ರಸ್ತೆ: ನಗರವೆಲ್ಲ ಧೂಳುಮಯ

◆ **ಗೋಕರ್ಣ:** ಇಲ್ಲಿನ ಮುಖ್ಯ ಕಡಲತೀರದಲ್ಲಿ ನಿಲುಗಡೆಗೊಳಿಸಿದ ವಾಹನಗಳು ಹೊರಗಡೆ ಹೋಗಲು ಮಾಡಿದ ರಸ್ತೆಗೆ ಮಣ್ಣು ತುಂಬಿದ್ದು ಇದರಿಂದ ವಾಹನ ಭರಾಟೆಗೆ ಧೂಳು ಅಬ್ಬರಿಸುತ್ತಿದ್ದು ಜನರಿಗೆ ತೊಂದರೆಯಾಗುತ್ತಿದೆ ಎಂದು ಇಲ್ಲಿನ ನಿವಾಸಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಗ್ರಾಪಂ ಜಾಗದಿಂದ ಬೇಲೆಹಿತ್ತಲ ಭಾಗದ ಏಕಮುಖ ಸಂಚಾರದ ಊರಿನಿಂದ ಹೊರಗೋಗುವ ಮುಖ್ಯ ಮಾರ್ಗಕ್ಕೆ ಸಂಪರ್ಕಕಲ್ಪಿಸಲು ಈ ಮಾರ್ಗ ಮಾಡಲಾಗಿತ್ತು. ಆದರೆ ಇದರ ಮೇಲೆ ಅನಗತ್ಯವಾಗಿ ಶೆಡಿ ಮಣ್ಣು ಪಂಚಾಯತದವೇ ಹಾಕಿದ್ದಾರೆ ಎಂದು ಸ್ಥಳೀಯರು ಹೇಳುತ್ತಿದ್ದಾರೆ. ನಿತ್ಯ ನೂರಾರು ವಾಹನ ಸಂಚರಿಸುವಾಗ ಧೂಳು ಅಕ್ಕಪಕ್ಕದ ಮನೆಗೆ ತುಂಬುತ್ತಿದ್ದು, ಚಿಕ್ಕಮಕ್ಕಳಿಂದ ವಯೋವೃದ್ಧರವರೆಗೆ ಕೆಮ್ಮು ಹಾಗು ಜ್ವರ ಕಾಣಿಸಿಕೊಂಡಿದ್ದು ಆಸ್ಪತ್ರೆ ಅಲೆಯುತ್ತಿದ್ದಾರೆ.

ಈ ಅವ್ಯವಸ್ಥೆ ಆಗಿರುವ ದೇವಸ್ಥಾನದ ಸಮೀಪವೇ ಇರುವ ಬೇಲೆಹಿತ್ತಲ ದಾರಿಯಿಂದ ಸಮುದ್ರಕ್ಕೆ ಹೋಗಲು ಹಾಗು ವಾಹನದ ನಿಲುಗಡೆ ಮಾಡಲು ಸ್ಥಳೀಯ ಆಡಳಿತ ಕೈಕೊಂಡ ನಿರ್ಧಾರಕ್ಕೆ ಜನರ ಆಕ್ಷೇಪವಿಲ್ಲ, ಆದರೆ ಒಳ ರಸ್ತೆಗೆ ಕೆಂಪು ಮಣ್ಣನ್ನ ತಂದು ಸುರಿದು ಅದ್ವಾನ ಎಬ್ಬಿಸಲಾಗಿದೆ.

ವಾಹನ ಹೋದಾಗಲೆಲ್ಲ ರಸ್ತೆಗೆ ಹಾಕಿರುವ ಮಣ್ಣಿನ ಧೂಳು ಸುತ್ತಲಿನ ಪ್ರದೇಶವನ್ನು ಆಕ್ರಮಿಸಿದಾಗ, ಹಾಕಿರುವ ಬಟ್ಟೆ ಹಾಗು ಮೈ ತುಂಬೆಲ್ಲಾ ಕೆಂಪು ಧುಳು ಮೆತ್ತಿಕೊಳ್ಳುತ್ತಿದೆ. ಸಂಬಂಧ ಪಟ್ಟವರು ಕೂಡಲೆ ಎಚ್ಚೆತ್ತುಕೊಂಡು ಪರ್ಯಾಯ ವ್ಯವಸ್ಥೆ ಮಾಡಬೇಕಿದೆ. ಗೋಕರ್ಣ ಪ್ರವಾಸಿಗರ ಸ್ವರ್ಗ ಅದರಲ್ಲಿಯೂ ಶಿವರಾತ್ರಿಯ ಸಂದರ್ಭದಲ್ಲಿ ಪ್ರವಾಸಿಗರೊಂದಿಗೆ ಶಿವನ ದರ್ಶನಕ್ಕೆ ಆಗಮಿಸುವ ಭಕ್ತಾಧಿಗಳ ಸಾಗರ ಆಗಮಿಸಿದೆ. ಇವರೆಲ್ಲರೂ ಸ್ಥಳಿಯ ಆಡಳಿತದ ಬೇಜವಾಬ್ದಾರಿಗೆ ಹಿಡಿ ಶಾಪ ಹಾಕಿ ಹೋಗುತ್ತಿರುವ ದೃಶ್ಯ ಸಾಮಾನ್ಯವಾಗಿದೆ.



> ನಿತ್ಯ ವಾಹನ ಭರಾಟೆಯಿಂದ ಮನೆಗೆ ಧೂಳು ತುಂಬುತ್ತಿದೆ, ಆರೋಗ್ಯ ಸಮಸ್ಯೆ ಉಂಟಾಗುತ್ತಿದ್ದು,ತಕ್ಷಣ ಈ ಬಗ್ಗೆ ಗಮನಿಸಿ ಸರಿಪಡಿಸಿ.
> ■ ರಾಮು, ಸ್ಥಳೀಯ ನಿವಾಸಿ

ಜಿಲ್ಲೆಯ ಅಭಿವೃದ್ಧಿ ಶೂನ್ಯ: ಸುನೀಲ ಹೆಗಡೆ



◆ **ಕಾರವಾರ:** ಕಳೆದ ನಾಲ್ಕು ದಶಕದಿಂದ ಹಳಿಯಾಳ ಕ್ಷೇತ್ರಕ್ಕೆ ಆರ್.ವಿ.ದೇಶಪಾಂಡೆ 9 ಬಾರಿ ಆಯ್ಕೆಯಾಗಿದ್ದರೂ, ಜಿಲ್ಲೆಯ ಅಭಿವೃದ್ಧಿ ಏನೂ ಇಲ್ಲದಾಗಿದೆ ಎಂದು ಮಾಜಿ ಶಾಸಕ ಸುನೀಲ ಹೆಗಡೆ ಹೇಳಿದರು.

ಅವರು ಕಾರವಾರದಲ್ಲಿ ಪತ್ರಿಕಾಭವನದಲ್ಲಿ ನಡೆದ ಪತ್ರಿಕಾಗೋಷ್ಟಿಯಲ್ಲಿ ಮಾತನಾಡಿ, ದೇಶಪಾಂಡೆಯವರು 9 ಬಾರಿ ಶಾಸಕರಾಗಿ ಗೆದ್ದಿದ್ದಾರೆ. ಮಂತ್ರಿಯಾಗಿದ್ದಾರೆ. ಆದರೆ ಅವರಿಂದ ಜಿಲ್ಲೆಯ ಅಭಿವೃದ್ಧಿ ಏನೂ ಇಲ್ಲವಾಗಿದೆ. ದೇಶಪಾಂಡಯವರು ಸಂಸದ ಕಾಗೇರಿ ಯವರಿಗೆ ಅನುಭವದ ಕೊರತೆ ಬಗ್ಗೆ ಮಾತನಾಡುತ್ತಾರೆ. ಇವರ ಅವಧಿಯಲ್ಲಿ ಏನೆನಾಗಿದೆ ಎನ್ನುವದನ್ನು ಅವರು ಒಮ್ಮೆ ನೋಡಿಕೊಳ್ಳಲಿ. ಇವರು ಶಾಸಕರಾದಾಗ ಮಂತ್ರಿಗಳಾದಾಗ ಸರ್ಕಾರದ ಆಸ್ತಿ ಅತಿಕ್ರಮಣಗಳಿಗೆ ಯಾವುದೇ ಹಿಡಿತವಿಲ್ಲದೆ ನಡೆದಿದೆ.ಕಾಗೇರಿಯವರು ರೈತರಿಗೆ ಬೆಳೆ ವಿಮೆ, ನೆಟವರ್ಕಸ ಸಮಸ್ಯೆ, ಸಿರಸಿ-ಸಿದ್ದಾಪುರದಲ್ಲಿ ಆಗಿರುವ ರಸ್ತೆ ಸಂಪರ್ಕ, ಇತ್ಯಾದಿ ಕೆಲಸಗಳು ಆಗಿವೆ. ದೇಶಪಾಂಡೆಯವರು ರಾಮನಗರ-ಅನಮೋಡ ರಸ್ತೆಯನ್ನು ಸಿರಸಿ-ಸಿದ್ದಾಪುರ ರಸ್ತೆಗೆ ಹೋಲಿಸಿಕೊಂಡಲ್ಲಿ ಗೊತ್ತಾಗುತ್ತದೆ. ದೇಶಪಾಂಡಯವರ ವೈಫಲ್ಯ ಎಷ್ಟಿದೆ ಎಂದು ಕಿಡಿಕಾರಿದರು. ದೇಶಪಾಂಡಯವರು ಉನ್ನತ ಶಿಕ್ಷಣ ಮಂತ್ರಿಯಾಗಿದ್ದಾಗ, ಜಿಲ್ಲೆಗೆ ಏನು ನೀಡಿದ್ದಾರೆ ಎನ್ನುವದನ್ನು ತೋರಿಸಲಿ. ಒಂದು ವಿಶ್ವವಿದ್ಯಾಲಯ, ಹಾಲಿನ ಡೇರಿ, ಸುಸಜ್ಜಿತ ಆಸ್ಪತ್ರೆ, ಹಳಿಯಾಳದ ಸರ್ಕಾರಿ ಆಸ್ಪತ್ರೆಯ ಬಗ್ಗೆ ಯಾವುದೇ ರೀತಿಯಲ್ಲಿ ಗಮನ ಹರಿಸಲಿಲ್ಲ, ಹಳಿಯಾಳದ ಆಸ್ಪತ್ರೆಯಲ್ಲಿ ವೈದ್ಯರಿಲ್ಲದೇ ರೋಗಿಗಳನ್ನು ಹುಬ್ಬಳ್ಳಿ ಅಥವಾ ಧಾರವಾಡಕ್ಕೆ ಕಳುಹಿಸಬೇಕಾದ ಸ್ಥಿತಿ ಇದೆ ಎಂದು ಟೀಕಿಸಿದರು.ಮಾಧ್ಯಮ ಸಂಚಾಲಕ ಕಿಶನ ಕಾಂಬ್ಳೇ, ಸೂರಜ ಸೋನಿ, ನಾಗೇಶ ಕುರಡೇಕರ ಮತ್ತಿತರರು ಇದ್ದರು.

ಆಧುನಿಕ ತಂತ್ರಜ್ಞಾನದ ಬಳಕೆ ಹೆಚ್ಚಾಗಲಿ: ಸದಸ್ಯ ಸಂಕನೂರ

◆ **ಯಲ್ಲಾಪುರ:** ಇಂದಿನ ದಿನಗಳಲ್ಲಿ ಕಲಿಕೆ ಅತ್ಯಂತ ನಿಖರ ಮತ್ತು ಸ್ಪಷ್ಟವಾಗಲು ತಂತ್ರಜ್ಞಾನ ಸ್ಮಾರ್ಟ್ ಬೋರ್ಡ್ ಹಾಗೂ ಅನೇಕ ವಿದ್ಯನ್ಮಾನ ಯಂತ್ರಗಳು ಸಹಾಯಕಾರಿಯಾಗಿದೆ ಉತ್ತಮ ಫಲಿತಾಂಶವನ್ನು ಪಡೆಯಲು ಈ ಸ್ಮಾರ್ಟ್ ಬೋರ್ಡ್ ಸಹಾಯಕಾರಿಯಾಗಲಿ ಎಂದು ವಿಧಾನಪರಿಷತ್ ಸದಸ್ಯ ಎಸ್.ವಿ.ಸಂಕನೂರ ಹೇಳಿದರು.

ಅವರು ಮಂಗಳವಾರ ಪಟ್ಟಣದ ಹೋಲಿ ರೋಜರಿ ಪ್ರೌಢಶಾಲೆಯ ಸ್ಮಾರ್ಟ್ ಕಲಿಕಾ ಬೋರ್ಡ್ ಉದ್ಘಾಟಿಸಿ ಮಾತನಾಡಿ, ಸ್ಪರ್ಧಾತ್ಮಕ ಜಗತ್ತಿನಲ್ಲಿ ಆಧುನಿಕ ತಂತ್ರಜ್ಞಾನಗಳು ಮನುಷ್ಯನ ಬದುಕಿಗೆ ಪೂರಕವಾಗಿ, ಅವನ ಜೀವನ ಮಟ್ಟವನ್ನು ಹೆಚಿಸುವ ದಿಸೆಯಲ್ಲಿ ತುಂಬಾ ಅವಶ್ಯಕವಾಗಿದೆ. ಕೃಷಿ ಹಾಗೂ ಹಲವಾರು ಕ್ಷೇತ್ರಗಳಲ್ಲಿ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನಗಳಿಂದ ಹೆಚ್ಚೆಚ್ಚು ಅನುಕೂಲತೆಗಳು ಉಂಟಾಗಿವೆ. ಮಕ್ಕಳ ಮತ್ತು ಶಿಕ್ಷಕರ ಕಲಿಕೆ ಮತ್ತು ಕಲಿಸುವಿಕೆಯಲ್ಲಿ ಈ ಸ್ಮಾರ್ಟ್ ಬೋರ್ಡ್‌ಗಳ ಪಾತ್ರ ಬಹಳ ಪ್ರಮುಖವಾದದ್ದು, ಆದ್ದರಿಂದ ಉತ್ತಮವಾದ ಫಲಿತಾಂಶ ಹಾಗೂ ಗುಣಾತ್ಮಕವಾದ ಶಿಕ್ಷಣಕ್ಕೆ ಸ್ಮಾರ್ಟ್ ಬೋರ್ಡ್‌ಗಳಿಂದ ಕಲಿಯುವಿಕೆಯಲ್ಲಿ ಉಂಟಾಗುವ ಪ್ರಗತಿಗೆ ಅನುಕೂಲಕರವಾಗಲಿ. ಜೊತೆಯಲ್ಲಿ ಕಲಿಕೆಗೆ ಇದು ಪೂರಕವಾಗಲಿ ಎಂದರು.

ಅಧ್ಯಕ್ಷತೆವಹಿಸಿ ಮುಖ್ಯಾಧ್ಯಾಪಕ ಫಾದರ್ ರೇಮಂಡ್ ಫರ್ನಾಂಡಿಸ್ ಮಾತನಾಡಿ, ನಮ್ಮ ಬೇಡಿಕೆಗೆ ಸ್ಪಂದಿಸಿ ಮಕ್ಕಳ ಕಲಿಕೆಗೆ ಅತ್ಯುತ್ತಮವಾದ ಕೊಡುಗೆಯನ್ನು ನೀಡಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸಿಸುತ್ತೇನೆ ಎಂದರು.



ಕ್ಷೇತ್ರ ಶಿಕ್ಷಣಾಧಿಕಾರಿ ರೇಖಾ ನಾಯ್ಕ, ಸಹ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷ ಅಜಯ್ ನಾಯಕ್, ತಾಲೂಕ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಶೇಖರ್, ಎಸ್‌ಎಸ್‌ಸಿ ವಿಜ್ಞಾನ ಬಳಗದ ಜಿಲ್ಲಾ ಅಧ್ಯಕ್ಷ ಎಂ.ರಾಜಶೇಖರ್, ಅನುದಾನಿತ ಮಾಧ್ಯಮಿಕ ನೌಕರರ ಸಂಘದ ಗೌರವಾಧ್ಯಕ್ಷ ಪ್ರಾ.ಆನಂದ್ ಹೆಗಡೆ ಇದ್ದರು.

ವಿದ್ಯಾರ್ಥಿಗಳು ಪ್ರಾರ್ಥಿಸಿದರು. ವೆಂಕಟ್ರರಮಣ ಭಟ್ ಸ್ವಾಗತಿಸಿದರು. ನೆಲ್ಸನ್ ಗೋನ್ಸಾಲ್ವಿಸ ವಂದಿಸಿದರು. ಚಂದ್ರಶೇಖರ ನಿರ್ವಹಿಸಿದರು. ಈ ಸಂದರ್ಭದಲ್ಲಿ ಶೈಕ್ಷಣಿಕ ಸಮಸ್ಯೆಗಳನ್ನ ಪರಿಹರಿಸುವ ದಿಸೆಯಲ್ಲಿ ವಿಧಾನಪರಿಷತ್ ಸದಸ್ಯರಿಗೆ ಮನವಿ ಸಲ್ಲಿಸಿದರು.

ವಾತ್ಸಲ್ಯ ಮನೆ ನೆಮ್ಮದಿಯ ಅರಮನೆ: ದಿನೇಶ್.ಎಂ

◆ **ಶಿರಸಿ:** ಅಸಹಾಯಕರ ಬಾಳಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಬೆಳಕಾಗುತ್ತಿದೆ. ವಾತ್ಸಲ್ಯ ಮನೆ ಬದುಕಿನ ನೆಮ್ಮದಿಗೆ ಅರಮನೆಯಾಗಿದೆ ಎಂದು ಜಿಲ್ಲಾ ನಿರ್ದೇಶಕ ದಿನೇಶ್ ಎಂ. ಹೇಳಿದರು.

ತಾಲೂಕಿನ ಶಿರಸಿಮಕ್ಕಿ ಸಮೀಪದ ವಡಗೆರೆ ಗ್ರಾಮದ ಫಲಾನುಭವಿ ಮಾದೇವಿ ಗೌಡ ಅವರಿಗೆ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಹಿಳಾ ಜ್ಞಾನ ವಿಕಾಸ ಕೇಂದ್ರದಡಿಯಲ್ಲಿ ನಿರ್ಮಿಸಿದ ವಾತ್ಸಲ್ಯ ಮನೆಯನ್ನು ಭಾನುವಾರ ಹಸ್ತಾಂತರ ಮಾಡಿ ಮಾತನಾಡಿದ ಅವರು, ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯು ಬಡ, ನಿರ್ಗತಿಕ ಮಹಿಳೆಯರ ಬದುಕಿನಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡುತ್ತಿದೆ. ಅನೇಕ ಸಾಮಾಜಿಕ ಕಾರ್ಯಕ್ರಮಗಳ ಮುಖಾಂತರ ಮಹಿಳಾಸಬಲೀಕರಣಕ್ಕಾಗಿ ಮಾತೃಶ್ರೀ ಹೇಮಾವತಿ ಅಮ್ಮನವರು ಹಗಲಿರುಳು ಶ್ರಮಿಸುತ್ತಿರುವುದು ನಮ್ಮೆಲ್ಲರ ಸೌಭಾಗ್ಯವಾಗಿದೆ ಎಂದರು. ಶಿರಸಿಯ ಸುಯೋಗ ಫೌಂಡೇಶನ್‌ನ ಸಂಸ್ಥಾಪಕ ಅಧ್ಯಕ್ಷೆ ಲತಿಕಾ ಭಟ್ ಮಾತನಾಡಿ, ಮಾತೃಶ್ರೀಯವರ ಆಶಯದಂತೆ ಇಂತಹ ಕಾರ್ಯಕ್ರಮಗಳಿಗೆ ಪ್ರತಿಯೊಬ್ಬ ಸಹೃದಯಿಗಳು ತಮ್ಮನ್ನ ತಾವು ತೊಡಗಿಸಿಕೊಂಡಲ್ಲಿ ಶೋಚನೀಯ ಸ್ಥಿತಿಯಲ್ಲಿ ಬದುಕುವ ವ್ಯಕ್ತಿಗಳಿಗೆ ಆಸರೆಯಾಗಬಹುದು ಎಂಬ ಆಶಯ ವ್ಯಕ್ತಪಡಿಸಿದರು.

ವಾತ್ಸಲ್ಯ ಫಲನುಭವಿ ಮಾದೇವಿ ಗೌಡ ಮಾತನಾಡಿ, ನಮ್ಮಂತಹ ಅನಾಥರ ಬಾಳಿಗೆ ಬೆಳಕು ಕಲ್ಪಿಸುತ್ತಿರುವ ಧರ್ಮಸ್ಥಳದ ಪೂಜ್ಯ ದಂಪತಿಗಳಿಗೆ ಕೋಟಿ, ಕೋಟಿ ನಮನ ಸಲ್ಲಿಸುತ್ತೇನೆ ಎಂದು ಭಾವುಕರಾದರು.



ನ್ಯಾಯವಾದಿ ಚಿತ್ರಾ ಭಗತ್, ಯೋಜನಾಧಿಕಾರಿ ರಾಘವೇಂದ್ರ ನಾಯ್ಕ್, ಯಡಹಳ್ಳಿ ಗ್ರಾಪಂನ ಮಾಜಿ ಉಪಾಧ್ಯಕ್ಷೆ ರಾಜೇಶ್ವರಿ, ಜ್ಞಾನ ವಿಕಾಸ ಕೇಂದ್ರದ ತಾಲ್ಲೂಕು ಸಮನ್ವಯಾಧಿಕಾರಿ ಮಲ್ಲಿಕಾ ಶೆಟ್ಟಿ, ಯೋಜನಾ ಕಚೇರಿಯ ವ್ಯವಸ್ಥಾಪಕಿ ರಶ್ಮಿ ಗೌಡ, ಹನುಮಂತಿ ಶೌರ್ಯ ಘಟಕದ ಅಧ್ಯಕ್ಷ ಶ್ರೀಗುರುರಾಜ, ಮೇಲ್ವಿಚಾರಕಿ ರೇಖಾ, ಸೇವಪ್ರತಿನಿಧಿ ಸಾವಿತ್ರಿ ಹಾಗೂ ಶೌರ್ಯ ಘಟಕದ ಸ್ವಯಂ ಸೇವಕರು ಉಪಸ್ಥಿತರಿದ್ದರು.

ಮಹಿಳಾ ಜ್ಞಾನ ವಿಕಾಸ ಕೇಂದ್ರದ ತಾಲೂಕು ಸಮನ್ವಯಾಧಿಕಾರಿ ಮಲ್ಲಿಕಾ ಶೆಟ್ಟಿ ನಿರೂಪಿಸಿ, ಸ್ವಾಗತಿಸಿ, ವಂದಿಸಿದರು.

ಕಿರುಸುದ್ದಿ

ನನ್ನ ಆರೋಗ್ಯ ಸ್ಥಿರವಾಗಿದೆ: ಶಾಸಕ ಶಿವಣ್ಣನವರ



ಬ್ಯಾಡಗಿ: ಅನಾರೋಗ್ಯದಿಂದ ಫೆ.13ರಂದು ಹುಬ್ಬಳ್ಳಿಯ ಆಸ್ಪತ್ರೆಗೆ ದಾಖಲಾಗಿ ಈಗ ನಾನು ಗುಣಮುಖನಾಗಿದ್ದೇನೆ. ವೈದ್ಯರ ಸಲಹೆಯಂತೆ ಇನ್ನೂ ಒಂದು ವಾರ ವಿಶ್ರಾಂತಿ ತೆಗೆದುಕೊಳ್ಳಲು ಸೂಚಿಸಿದ್ದಾರೆ ಎಂದು ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

ಹಾವೇರಿಯ ತಮ್ಮ ನಿವಾಸದಲ್ಲಿ ಸೋಮವಾರ ಸಂಜೆ ಹುಬ್ಬಳ್ಳಿಯ ಖಾಸಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಬಂದ ನಂತರ ಮಾತನಾಡಿದವರು.

ನನ್ನ ಆರೋಗ್ಯ ಸ್ಥಿರವಾಗಿದ್ದು, ನಾನು ವೈದ್ಯರ ಸಲಹೆ ಸೂಚನೆಯಂತೆ 1 ವಾರ ವಿಶ್ರಾಂತಿ ತೆಗೆದುಕೊಳ್ಳಲು ಬೆಂಗಳೂರಿಗೆ ತೆರಳುತ್ತಿದ್ದೇನೆ ಹಾಗಾಗಿ ನನ್ನ ಕ್ಷೇತ್ರ ಜನತೆ ಯಾರು ಆತಂಕ ಪಡುವ ಅಗತ್ಯವಿಲ್ಲ. ಕ್ಷೇತ್ರದ ಜನರ ಆಶೀರ್ವಾದದಿಂದ ನಾನು ಆರೋಗ್ಯವಾಗಿದ್ದು ಶೀಘ್ರದಲ್ಲಿ ಈ ಕ್ಷೇತ್ರಕ್ಕೆ ಮರಳಿ ಆಗಮಿಸಿ ಎಂದನಂತೆ ಎಲ್ಲ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತೇನೆ ಎಂದು ಹೇಳಿದ್ದಾರೆ.

ಅಧ್ಯಾಪಕರ ಸಂಘ ರಚನೆ



ಬ್ಯಾಡಗಿ: ಹಾವೇರಿ ನಗರದ ಕೆಎಲ್ಇ ಸಂಸ್ಥೆಯ ಜಿ.ಹೆಚ್.ಕಾಲೇಜಿನ ಕೇಂದ್ರ ಮೌಲ್ಯಮಾಪನ ಕೇಂದ್ರದಲ್ಲಿ ಮಂಗಳವಾರ ಜರುಗಿದ ಹಾವೇರಿ ವಿಶ್ವವಿದ್ಯಾಲಯ ವ್ಯಾಪ್ತಿಯ ವಾಣಿಜ್ಯ ಅಧ್ಯಾಪಕರ ಸಭೆಯಲ್ಲಿ ಹಾವೇರಿ ವಿಶ್ವವಿದ್ಯಾಲಯ ಕಾಲೇಜುಗಳ ವಾಣಿಜ್ಯ ಅಧ್ಯಾಪಕರ ಸಂಘವನ್ನು (ಏಖಿಇಇಖಿಅ) ಅಧಿಕೃತವಾಗಿ ರಚಿಸಲಾಯಿತು. ಸಭೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ಡಾ. ಮಲ್ಲಿಕಾರ್ಜುನ ಎನ್. ಕಡ್ಡಿಪುಡಿ ಅವರನ್ನು ಸರ್ವಾನುಮತದಿಂದ ಆರಿಸಲಾಯಿತು. ಉಪಾಧ್ಯಕ್ಷರಾಗಿ ಪ್ರೊ.ಆರ್.ಬಿ. ಅಜರಡ್ಡಿ ಹಾಗೂ ಪ್ರೊ.ಶೈಲಜಾ ಹುದ್ದಾರ, ಕಾರ್ಯದರ್ಶಿಯಾಗಿ ಡಾ. ಜಯಾನಂದ ಸ್ವಾಮಿ ಇಂಡಿಮಠ ಮತ್ತು ಖಜಾಂಚಿಯಾಗಿ ಡಾ. ಸಿದ್ಧರಾಮಪ್ಪ ಐ.ಮಲ್ಲಿಗಾರ್ ಆಯ್ಕೆಯಾಗಿದ್ದಾರೆ. ವಾಣಿಜ್ಯ ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಮತ್ತು ಶಿಕ್ಷಕರ ಏಳಿಗೆಗಾಗಿ ಈ ಸಂಘವು ಶ್ರಮಿಸಲಿದೆ ಎಂದು ನೂತನ ಅಧ್ಯಕ್ಷರು ತಿಳಿಸಿದರು.

ಶಿಕ್ಷಣದ ಗುರಿ ಸಾಧಿಸಿ



ರಾಣೇಬೆನ್ನೂರ: ವಿದ್ಯಾರ್ಥಿಗಳು ದೊಡ್ಡ ಗುರಿಗಳನ್ನು ಇಟ್ಟುಕೊಂಡು ಓದಿ ಹೆತ್ತ ತಂದೆ ತಾಯಂದಿರಿಗೂ ಓದಿದ ಶಾಲೆಗೂ ಕೀರ್ತಿ ತರಬೇಕು. ಸಾಮಾಜಿಕ ಜಾಲತಾಣ, ಮೊಬೈಲ್‌ನಿಂದ ದೂರವಿದ್ದು, ಶಿಕ್ಷಣದ ಗುರಿಯನ್ನು ಸಾಧಿಸಬೇಕು ಎಂದು ತಾಪಂ ಇಓ ಡಾ.ವೆಂಕಟೇಶ್ ಸಣ್ಣಬಿದರಿ ಹೇಳಿದರು.

ತಾಲೂಕಿನ ಯರೇಕುಪ್ಪಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಏಳನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿ ಜೀವನದ ಮುಂದಿನ ಸಮಯವನ್ನು ಹಾಳು ಮಾಡಿಕೊಳ್ಳದೇ ಪುಸ್ತಕದ ಓದು ಹಾಗೂ ಶ್ರೇಷ್ಠ ಸಾಧಕರ ಉದಾಹರಣೆ ಇಟ್ಟುಕೊಂಡು ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದರು. ಎಸ್ಡಿಎಂಸಿ ಅಧ್ಯಕ್ಷ ಮಂಜುನಾಥ ಬಡಿಗೇರ ಅಧ್ಯಕ್ಷತೆ ವಹಿಸಿದ್ದರು, ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಚನ್ನಬಸಪ್ಪ ಅಡಿವೆರ, ಶಿಕ್ಷಣ ಸಂಯೋಜಕ ಎಸ್‌ಎಂ ಬನ್ನಿಕೋಡ, ಸಿಆರ್‌ಪಿ ಮಾಲತೇಶ್ ಕಾಕೋಳ, ಮುಖ್ಯಶಿಕ್ಷಕಿ ಎಸ್.ಎನ್.ಪಾಟೀಲ, ಸಹಶಿಕ್ಷಕರಾದ ಎಸ್‌ಬಿ ನೆಗಳೂರ, ಎಂ.ಜಿ.ತೋಟದ, ಅನುರಾಧ ಎಮ್‌ಎಚ್, ಪಾಲಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

236 ಗ್ರಾಂ ಗಾಂಜಾ ವಶ

ರಾಣೇಬೆನ್ನೂರ: ಅಕ್ರಮ ಗಾಂಜಾ ಸಾಗಾಟ ಮಾಡುತ್ತಿದ್ದ ಆರೋಪಿಗಳನ್ನು ಮಾಲು ಸಮೇತ ಪೊಲೀಸರು ಬಂಧಿಸಿದ ಘಟನೆ ನಗರದ ಹೊರವಲಯದ ಬೆನಕನಕೊಂಡ ರಸ್ತೆ ಬಳಿ ನಡೆದಿದೆ.

ಧಾರವಾಡದ ನವೀನ್ ಸುಭಾಸ ಶಲವಡಿ, ಜುಬೇರ ಬಂಧಿತ ಆರೋಪಿಗಳು. ಆರೋಪಿತರು ಮೋಟಾರ್ ಸೈಕಲ್‌ನಲ್ಲಿ ಮಾರಾಟ ಮಾಡಲು ಇಟ್ಟಿದ್ದ 236 ಗ್ರಾಂ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ. ಶಹರ ಠಾಣೆ ಅಪರಾಧ ವಿಭಾಗದ ಪಿಎಸ್ಐ ಎಚ್.ಎನ್. ದೊಡ್ಡಮನಿ ದಾಳಿ ಕೈಗೊಂಡಿದ್ದು, ಈ ಕುರಿತು ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹಾವೇರಿ : ಜಿಲ್ಲಾ ಗುರುಭವನದಲ್ಲಿ ಹಮ್ಮಿಕೊಂಡಿದ್ದ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣಾ ಕಾರ್ಯಾಗಾರ ಹಾಗೂ ಮುಖ್ಯ ಶಿಕ್ಷಕರೊಂದಿಗೆ ಸಂವಾದವನ್ನು ಬಸವರಾಜ ಹೊರಟ್ಟಿ ಉದ್ಘಾಟಿಸಿದರು.

ಫೆ.24ಕ್ಕೆ ವೀರಭದ್ರೇಶ್ವರ ರಥೋತ್ಸವ

ತಡಸ: ಗ್ರಾಮದ ಸುಕ್ಷೇತ್ರ ಶ್ರೀ ವೀರಭದ್ರೇಶ್ವರ ಗದ್ದುಗೆಯ ಗುಗ್ಗಳ, ರಥೋತ್ಸವ ಹಾಗೂ ಸಾಮೂಹಿಕ ವಿವಾಹ ಮಹೋತ್ಸವವು ಫೆ.24ರಂದು ಅತ್ಯಂತ ವೈಭವದಿಂದ ಜರುಗಲಿದೆ ಎಂದು ವೀರಭದ್ರೇಶ್ವರ ಗದ್ದುಗೆ ಸೇವಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಧಾರ್ಮಿಕ ಕಾರ್ಯಕ್ರಮಗಳು: ಫೆ. 24ರಂದು ಬೆಳಗ್ಗೆ ವೀರಭದ್ರೇಶ್ವರ ಗುಗ್ಗಳೋತ್ಸವವು ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ವಾದ್ಯ ವೈಭವ ಹಾಗೂ ವೀರ ಪುರವಂತರ ಸಾಹಸ ಪ್ರದರ್ಶನದೊಂದಿಗೆ ಜರುಗಲಿದೆ. ಮಧ್ಯಾಹ್ನ ವಿವಿಧ ಧಾರ್ಮಿಕ ವಿಧಿವಿಧಾನಗಳು ಹಾಗೂ ಸಾಮೂಹಿಕ ವಿವಾಹ ನೆರವೇರಲಿವೆ. ಅಂದು ಸಂಜೆ 4:30 ಕ್ಕೆ ಪವಿತ್ರ ರಥೋತ್ಸವಕ್ಕೆ ಚಾಲನೆ ದೊರೆಯಲಿದೆ.

ಸಾಂಸ್ಕೃತಿಕ ವೈವಿಧ್ಯ: ಜಾತ್ರಾ ಮಹೋತ್ಸವದ ಅಂಗವಾಗಿ ಫೆ. 24ರ ರಾತ್ರಿ 8 ಗಂಟೆಗೆ ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕಲಾ ತಂಡದಿಂದ ವಿಶೇಷ ಜಾನಪದ ಕಲಾ ಪ್ರದರ್ಶನಗಳು ಏರ್ಪಾಡಾಗಿವೆ. ಫೆ. 25ರ ಸಂಜೆ 'ಕಡುಬಿನ ಕಾಳಗ' ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಭಕ್ತರನ್ನು ಮನರಂಜಿಸಲಿವೆ.

ಜಂಗೀ ಬಯಲು ಕುಸ್ತಿ: ಕ್ರೀಡಾಭಿಮಾನಿಗಳಿಗಾಗಿ ಫೆ. 25ರಿಂದ 27ರ ವರೆಗೆ ಮೂರು ದಿನಗಳ ಕಾಲ 'ಜಂಗೀ ಬಯಲು ಕುಸ್ತಿ' ಪಂದ್ಯಾವಳಿ ಆಯೋಜಿಸಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಭಕ್ತಾದಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀಗಳ ಕೃಪೆಗೆ ಪಾತ್ರರಾಗಬೇಕೆಂದು ಸೇವಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.



ರಾಣೇಬೆನ್ನೂರ: ನಗರದ ಹೊರವಲಯದ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ 22 ವರ್ಷ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಕಂಪ್ಯೂಟರ್ ಸೈನ್ಸ್ ವಿಭಾಗದ ಸಿಬ್ಬಂದಿ ಎಂ.ರಾಜೇಂದ್ರ ಅವರನ್ನು ಮಹಾವಿದ್ಯಾಲಯದ ವತಿಯಿಂದ ಸನ್ಮಾನಿಸಿ ಬೀಳ್ಕೊಡಲಾಯಿತು. ನಿವೃತ್ತ ನೌಕರ ಎಂ. ರಾಜೇಂದ್ರರ, ಡಾ, ಶಿವಕುಮಾರ ಹೊನ್ನಾಳಿ, ಡಾ.ಮುರುಗೇಶ್ ಜಂಬಗಿ, ಪ್ರೊ.ಬಾವನ ಪಾಟೀಲ್, ಪ್ರೊ.ಪುಷ್ಪ ತೆಂಬದ ಮತ್ತಿತರರಿದ್ದರು.

ಪ್ರಗತಿ ಪರಿಶೀಲನಾ ಸಭೆ | ಸಭಾಪತಿ ಬಸವರಾಜ ಹೊರಟ್ಟಿ ಸೂಚನೆ

ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಸುಧಾರಿಸಿ

ಹಾವೇರಿ: ಶಿಕ್ಷಕರು ಯಾವುದೇ ತೊಂದರೆ, ಒತ್ತಡಕ್ಕೆ ಒಳಗಾಗದೆ ನೆಮ್ಮದಿಯಿಂದ ಮತ್ತು ಮಾನಸಿಕವಾಗಿ ಸದೃಢರಾದಾಗ ಮಾತ್ರ ಅತ್ಯುತ್ತಮ ಪಾಠ ಪ್ರವಚನ ಮಾಡಲು ಸಾಧ್ಯ. ಮುಂಬರುವ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಸುಧಾರಣೆಗೆ ಶಿಕ್ಷಕರು ಶ್ರದ್ಧೆ ಮತ್ತು ಶಿಸ್ತಿನಿಂದ, ಮಕ್ಕಳು ಪ್ರಾಮಾಣಿಕವಾಗಿ ಉತ್ತೀರ್ಣರಾಗಲು ಅಗತ್ಯ ಪ್ರಯತ್ನ ಮಾಡಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಜಿಲ್ಲಾಡಳಿತ, ಜಿಪಂ, ಶಾಲಾ ಶಿಕ್ಷಣ ಇಲಾಖೆ ಹಾಗೂ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘ ಜಿಲ್ಲಾ ಘಟಕದಿಂದ ಮಂಗಳವಾರ ನಗರದ ಜಿಲ್ಲಾ ಗುರುಭವನದಲ್ಲಿ ಹಮ್ಮಿಕೊಂಡಿದ್ದ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣಾ ಕಾರ್ಯಾಗಾರ, ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ಮತ್ತು ಮುಖ್ಯ ಶಿಕ್ಷಕರೊಂದಿಗೆ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಆಂಗ್ಲ ಭಾಷಾ ಶಿಕ್ಷಣವನ್ನು ಕಲಿಸಲು ಹೋದರೆ ಕನ್ನಡ ಮಾಧ್ಯಮ ವ್ಯವಸ್ಥೆಯೇ ಉಳಿಯಲ್ಲ. ಸರ್ಕಾರದ ಕೆಲ ತಪ್ಪು ಪ್ರಯೋಗಗಳಿಗೆ ಶಾಲಾ ಮಕ್ಕಳು ಬಲಿಯಾಗುತ್ತಿರುವುದು ವಿಷಾದಕರ. ಈ ವರ್ಷ ಶೇ.33ರಷ್ಟು ಅಂಕ ಪಡೆದರೆ ಎಸ್ಸೆಸ್ಸೆಲ್ಸಿ ಮಕ್ಕಳು ಪಾಸ್ ಆಗುತ್ತಾರೆಂದು ಸರ್ಕಾರದ ನಿಯಮ. ಪ್ರತಿ ವಿಷಯದಲ್ಲಿ 20 ಆಂತರಿಕ ಅಂಕ, 12 ಬಾಹ್ಯ ಅಂಕ ಬಂದರೆ, ಇನ್ನೊಂದು ಅಂಕ ಎಲ್ಲಾದರೂ ಹಾಕಿ ಉತ್ತೀರ್ಣ ಮಾಡ್ತಾರೆ. ಆದರೆ ಮುಂದೆ ಆ ಮಗು ಏನಾಗುತ್ತೆ ಅನ್ನೋದು ಗೊತ್ತಾಗಲ್ಲ. ಇಲಾಖೆಗಳು ಶೇ.100ರಷ್ಟು ಫಲಿತಾಂಶಕ್ಕೆ ಒತ್ತಡ ಹಾಕುತ್ತವೆ, ಆದರೆ ಫಲಪ್ರದ ಆಗುವುದಿಲ್ಲ ಎಂದರು.

ಯಾವುದೇ ಸರ್ಕಾರ ಬರಲಿ, ಮೊದಲು ಎಲ್ಲ ಪ್ರಾಥಮಿಕ ಶಾಲೆಗಳಿಗೆ ವರ್ಗವಾರು ಸಮರ್ಪಕ ಶಿಕ್ಷಕರನ್ನು ಕೊಡಬೇಕು. ಮೂಲ ಪ್ರಾಥಮಿಕ ಶಿಕ್ಷಣ ಗಟ್ಟಿಯಾಗಿದ್ದರೆ, ಮುಂದೆ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಸುಗಮವಾಗಿ ಪಾಸ್ ಮಾಡಿಕೊಳ್ಳಬಹುದು. ಜತೆಗೆ ಶಿಕ್ಷಕರಿಗೆ ನೆಮ್ಮದಿಯಿಂದ ಪಾಠ ಮಾಡುವ ಅವಕಾಶ ಕಲ್ಪಿಸಬೇಕು ಎಂದರು.

ಶಾಲಾ ಶಿಕ್ಷಣ ಇಲಾಖೆ ಧಾರವಾಡ ಆಯುಕ್ತ ಈಶ್ವರ ಉಳ್ಳಾಗಡ್ಡಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಸ್ತುತ ಶೈಕ್ಷಣಿಕ ವರ್ಷ ಪ್ರಾರಂಭವಾದಾಗಿನಿಂದ ಮಕ್ಕಳಿಗೆ ಸೇತುಬಂಧ, ಘಟಕ ಪರೀಕ್ಷೆ, ಸರಣಿ, ಪೂರ್ವ ಸಿದ್ದತಾ ಪರೀಕ್ಷೆ ಹೀಗೆ ನಡೆಸಿಕೊಂಡು ಬರುತ್ತಿದೆ. 29 ಅಂಶಗಳ ಕಾರ್ಯಕ್ರಮವನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿದ್ದೇವೆ. ಇಲಾಖೆ ಮಾರ್ಗದರ್ಶನದಂತೆ ಮಿಶನ್-40 ಅಂಕಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿ ಸಿಬ್ಬಂದಿಗಳು ಶ್ರಮಿಸುತ್ತಿದ್ದಾರೆ. ನೂರಕ್ಕೆ ನೂರರಷ್ಟು ಸಾಧಿಸುವ ನಿಟ್ಟಿನಲ್ಲಿ ಪರಿಶ್ರಮ ಹಾಕಲಾಗುತ್ತಿದೆ. ಮಾರ್ಚ್ 18ರಿಂದ ಪರೀಕ್ಷೆ ಆರಂಭವಾಗಲಿದ್ದು, ಸರ್ಕಾರ ಹಾಗೂ ಇಲಾಖೆ ಆಶಯದಂತೆ ಫಲಿತಾಂಶ ಕೊಡುತ್ತೇವೆ ಎಂದರು.

ಧಾರವಾಡದ ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತ ಈಶ್ವರ ನಾಯಕ್ ಮಾತನಾಡಿದರು. ಧಾರವಾಡದ ಉಪ ನಿರ್ದೇಶಕ ಗಿರೀಶ ಪದಕಿ, ಡಯಟ್ ಪ್ರಾ.ಝುಡ್.ಎಂ. ಖಾಜಿ, ಡಿವೈಪಿಸಿ ನಿರಂಜನ ಮೂರ್ತಿ, ಮಾಧ್ಯಮಿಕ ಶಾಲಾ ನೌಕರರ ಸಂಘದ ಅಧ್ಯಕ್ಷ ಆರ್.ಹೆಚ್. ಬೆಟ್ಟೆಳ್ಳೇರ, ಅಕ್ಷರ ದಾಸೋಹ ಅಧಿಕಾರಿ ಎಂ.ಆರ್.ಪಾಟೀಲ, ಬಿಇಒಗಳು ಮಲ್ಲಿಕಾರ್ಜುನ ಶಾಂತಗಿರಿ, ಕೆಂಚನಗೌಡ್ರ, ಬಿ.ಎಂ. ಬೇವಿನಮರದ, ಕಲ್ಲಮನಿ, ಎನ್.ಎಂ. ಕುಂದೂರು ಸೇರಿದಂತೆ ಮತ್ತಿತರರಿದ್ದರು.



> ಜಿಲ್ಲೆಯಲ್ಲಿ 471 ಪ್ರೌಢ ಶಾಲೆಗಳಿದ್ದು, ಸುಮಾರು 23,358 ವಿದ್ಯಾರ್ಥಿಗಳು ಹೊಸದಾಗಿ ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ. 81 ಪರೀಕ್ಷಾ ಕೇಂದ್ರಗಳನ್ನು ಗುರುತಿಸಲಾಗಿದೆ. ಎಲ್ಲಾ ಶಾಲೆಗಳಿಗೂ ಸಿಸಿಟಿವಿ ಕ್ಯಾಮರಾ ಅಳವಡಿಕೆ ಮಾಡಲಾಗುತ್ತದೆ. ಪ್ರತಿ ಶಾಲೆಗೆ ನೋಡೆಲ್ ಅಧಿಕಾರಿ ನೇಮಿಸಿ, ಹಂತ ಹಂತವಾಗಿ ಮಾರ್ಗದರ್ಶನ ಕೊಡಿಸಲಾಗುತ್ತಿದೆ. ಕಡಿಮೆ ಅಂಕ ಪಡೆದ ಮಕ್ಕಳಿಗೆ ಹೆಚ್ಚಿನ ಮುತುವರ್ಜಿ ವಹಿಸಿ, ಮಿಶನ್-40ರ ಅಡಿಯಲ್ಲಿ ಉತ್ತೀರ್ಣರಾಗಲಿಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ.
>
> ■ ಮೋಹನ್ ದಂಡಿನ, ಡಿಡಿಪಿಐ

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯ

ಹಾವೇರಿ: ಅನುದಾನಿತ ಶಾಲಾ ಕಾಲೇಜುಗಳಲ್ಲಿ ನೇಮಕಾತಿ ಹೊಂದಿ ನಂತರ ಅನುದಾನಕ್ಕೆ ಒಳಪಟ್ಟ ನೌಕರರಿಗೆ ಕಾಲ್ಪನಿಕ ವೇತನ ಬಡ್ತಿ ಮತ್ತು ಹೊಸ ಪಿಂಚಣಿ ಯೋಜನೆ, ಖಾಸಗಿ ಶಾಲೆಗಳ ಮಾನ್ಯತೆ ನವೀಕರಣದ ಸರಳೀಕರಣ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಮಾಧ್ಯಮಿಕ ಶಾಲಾ ನೌಕರರ ಸಂಘ ಜಿಲ್ಲಾ ಘಟಕದ ಪದಾಧಿಕಾರಿಗಳು ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಮನವಿ ಸಲ್ಲಿಸಿದರು.

ನಗರದ ಜಿಲ್ಲಾ ಗುರುಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣಾ ಕಾರ್ಯಾಗಾರಕ್ಕೆ ಆಗಮಿಸಿದ್ದ ವಿಪ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಮನವಿ ಸಲ್ಲಿಸಲಾಯಿತು.

ಸಂಘದ ಜಿಲ್ಲಾಧ್ಯಕ್ಷ ಆರ್.ಎಚ್.ಬೆಟ್ಟೆಳ್ಳೇರ ಹಾಗೂ ಕಾರ್ಯದರ್ಶಿ ಎನ್.ಎನ್.ಕುಂದೂರ ಮಾತನಾಡಿ, ಅನುದಾನಿತ ಶಾಲಾ ಕಾಲೇಜುಗಳಲ್ಲಿ 2006 ಮಾ.31ರ ಪೂರ್ವದಲ್ಲಿ ನೇಮಕಾತಿ ಹೊಂದಿದವರನ್ನು ನಿಯಮಾನುಸಾರ ಪರಿಶೀಲಿಸಬೇಕು. ಈ ಅವಧಿಯಲ್ಲಿ ಬರುವ ಎಲ್ಲಾ ನೌಕರರು ಹಳೆ ಪಿಂಚಣಿ ವ್ಯಾಪ್ತಿಗೆ ಒಳಪಡುತ್ತಾರೆ. ಹಾಗಾಗಿ ಈ ನೌಕರರಿಗೆ ಹಳೆ ನಿಶ್ಚಿತ ಪಿಂಚಣಿ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಬೇಕು. ಅದೇ ರೀತಿ 2006 ಏ.1ರ ನಂತರ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಅನುದಾನ ಸಹಿತವಾಗಿ ನೇಮಕವಾದ ಸಿಬ್ಬಂದಿಯವರಿಗೆ ಯಾವುದೇ ಪಿಂಚಣಿ ಸೌಲಭ್ಯ ಇಲ್ಲ, ಕೊನೆಯ ತಿಂಗಳ ವೇತನದೊಂದಿಗೆ ನಿವೃತ್ತಿ ಹೊಂದುತ್ತಿದ್ದಾರೆ. ಹಾಗಾಗಿ ನೌಕರರ ಇಳಿ ವಯಸ್ಸಿಗೆ ಅವಶ್ಯಕವಾದ ಹಳೆ ನಿಶ್ಚಿತ ಪಿಂಚಣಿ ಮತ್ತು ಹೊಸ ನಿಶ್ಚಿತ ಪಿಂಚಣಿಯನ್ನು ಒದಗಿಸಿಕೊಡಬೇಕೆಂದು ಒತ್ತಾಯಿಸಿದರು.

ಜತೆಗೆ ಖಾಸಗಿ ಶಾಲೆಗಳ ಮಾನ್ಯತೆ ನವೀಕರಣಕ್ಕಾಗಿ ಸರ್ಕಾರ ಹತ್ತು ಹಲವು ಷರತ್ತುಗಳನ್ನು ಹಾಕಿ ಮಾನ್ಯತೆ ನಿರಾಕರಿಸುತ್ತಿದೆ. ಇದರಿಂದ ಗ್ರಾಮೀಣ ಭಾಗದ ಕನ್ನಡ ಮಾಧ್ಯಮ ಶಾಲೆಗಳು ಮುಚ್ಚುವ ಸ್ಥಿತಿ ಉಂಟಾಗಿದೆ. ಹಾಗಾಗಿ ಸರ್ಕಾರ ಅವೈಜ್ಞಾನಿಕ ಷರತ್ತನ್ನು ಸರಳೀಕರಣ ಮಾಡಬೇಕು. ಅನುದಾನಿತ ಶಾಲೆಗಳಲ್ಲಿ ಎಸ್ಸೆಸ್ಸೆಲ್ಸಿ ಪೂರ್ವ ಸಿದ್ದತಾ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ಮುದ್ರಣ ವೆಚ್ಚವನ್ನು ಆಡಳಿತ ಮಂಡಳಿಯೇ ಭರಿಸುತ್ತಿದ್ದು, ಇದು ಆಡಳಿತ ಮಂಡಳಿಗೆ ಹೊರೆಯಾಗುತ್ತಿದೆ. ಹಾಗಾಗಿ ಸರ್ಕಾರವೇ ಅನುದಾನಿತ ಶಾಲೆಗಳಿಗೆ ಪ್ರಶ್ನೆ ಪತ್ರಿಕೆಗಳ ಮುದ್ರಣ ವೆಚ್ಚವನ್ನು ಬಿಡುಗಡೆಗೊಳಿಸಬೇಕೆಂದು ಒತ್ತಾಯಿಸಿ ಮನವಿ ಸಲ್ಲಿಸಿದರು. ಮಾಧ್ಯಮಿಕ ಶಾಲಾ ನೌಕರರ ಸಂಘದ ಪದಾಧಿಕಾರಿಗಳಾದ ರಮೇಶ ಎಂ.ಬಿ., ಎಂ.ಎಚ್. ಕೆಂಚನಗೌಡ್ರ, ಆರ್.ಎಚ್.ದೊಡ್ಡಮನಿ, ಸುನೀಲ ಮಳೆಪ್ಪನವರ, ಡಿ.ಡಿ.ಲಂಗೋಟಿ, ಮಾಂತೇಶ ಚಲವಾದಿ, ಎಸ್.ಸಿ. ಎಲಿ, ಶರಣಪ್ಪ ಇಟಗಿ ಮತ್ತಿತರರಿದ್ದರು.



ನಾಳೆ ಛತ್ರಪತಿ ಶಿವಾಜಿ ಜಯಂತಿ

ಹಾವೇರಿ : ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಾವೇರಿ ಜಿಲ್ಲಾ ಮರಾಠಾ ಸಮಾಜದ ಸಹಯೋಗದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಫೆ.19ರಂದು ಬೆಳಗ್ಗೆ 11 ಗಂಟೆಗೆ ಹಾವೇರಿ ನಗರದ ತಾಲೂಕಾ ಮರಾಠಾ ಭವನದಲ್ಲಿ ಜರುಗಲಿದೆ.

ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರ ಗೌರವಾನ್ವಿತ ಉಪಸ್ಥಿತಿಯಲ್ಲಿ, ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ.

ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಗೌರವ ಉಪಸ್ಥಿತಿಯಲ್ಲಿ, ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಅಧ್ಯಕ್ಷ ಸೈಯದ್ ಅಜೀಮಪೀರ್ ಎಸ್ ಖಾದ್ರಿ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಎಸ್.ಆರ್.ಪಾಟೀಲ, ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ವಿಧಾನ ಪರಿಷತ್ ಶಾಸಕರಾದ ಪ್ರೊ.ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ಶಾಸಕರಾದ ಶ್ರೀನಿವಾಸ ಮಾನೆ, ಯು.ಬಿ. ಬಣಕಾರ, ಪ್ರಕಾಶ ಕೋಳಿವಾಡ, ಯಾಸೀರ ಅಹ್ಮದಖಾನ್ ಪಠಾಣ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂ. ಹಿರೇಮಠ ಹಾಗೂ ತಾಲೂಕು ಅಧ್ಯಕ್ಷ ಎಂ.ಎಂ. ಮೈದೂರ ಅವರು ಭಾಗವಹಿಸಲಿದ್ದಾರೆ. ರೇವತಿ ತಿಳುವಳ್ಳಿ ಉಪನ್ಯಾಸ ನೀಡುವರು.

ಅನುಭಾವದ ಜೀವನಕ್ಕೆ ಶರಣರ ನೀತಿಸಂಹಿತೆ

ಹಾವೇರಿ: 12ನೇ ಶತಮಾನದ ಬಸವಾದಿ ಶಿವಶರಣರು ಅನುಭಾವದ ಜೀವನಕ್ಕೆ ನೀತಿಸಂಹಿತೆಯನ್ನು ಹಾಕಿಕೊಟ್ಟಿದ್ದರು. ಪ್ರತಿಯೊಬ್ಬನೂ ಷಟಸ್ಥಲದ ಮಾರ್ಗಗಳಾದ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗ, ಶರಣನಾಗಿ ಐಕ್ಯನಾಗುತ್ತಾನೆ. ಇಂಥ ಕ್ರಮ ಸಮುಚ್ಚಯವನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ನರನು ಹರನಾಗುತ್ತಾನೆ ಎಂದು ಬೈರನಹಟ್ಟಿ ದೊರೆಸ್ವಾಮಿ ವಿರಕ್ತಮಠದ ಶಾಂತಲಿಂಗ ಶ್ರೀಗಳು ಹೇಳಿದರು.

ಇಲ್ಲಿನ ಸಿಂದಗಿ ಮಠದ ಲಿಂಗೈಕ್ಯ ಶಾಂತವೀರ ಪಟ್ಟಾಧ್ಯಕ್ಷರ 46ನೇ ಪುಣ್ಯ ಸ್ಮರಣೋತ್ಸವದ 6ನೇ ದಿನದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಠಾಧೀಶರಾದವರು ಸಮಾಜದ ಮುಖ್ಯವಾಹಿನಿಯಲ್ಲಿ ನಿಂತು ತಮ್ಮ ಆತ್ಮೋನ್ನತಿ ಮಾಡಿಕೊಳ್ಳುವುದರ ಜತೆಗೆ ಸಮಾಜದ ಅಂಕು-ಡೊಂಕುಗಳನ್ನು ತಿದ್ದಿ ಭಕ್ತರಿಗೆ ಸನ್ಮಾರ್ಗವನ್ನು ತೋರುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಅಂಥ ಸಮಾಜೋದ್ಧಾರಕ ಕಾರ್ಯವನ್ನು ಮಾಡಿದವರು ಲಿಂ.ಸಿಂದಗಿ ಶಾಂತವೀರ ಪಟ್ಟಾಧ್ಯಕ್ಷರು, ಶಾಂತವೀರ ಶ್ರೀಗಳು ಏರು ಬಾಳಿನಿಂದ ಆದರ್ಶ ವ್ಯಕ್ತಿಗಳಾಗಿದ್ದಾರೆ. ನೈತಿಕ ನಡೆನುಡಿಗಳಿಂದ ಜ್ವಲಂತ ಜ್ಯೋತಿಗಳಾಗಿದ್ದಾರೆ, ಅವರ ನಡೆ, ನುಡಿ ನಮ್ಮ ಜೀವನದ ಮುನ್ನುಡಿ ಮತ್ತು ಬಾಳಿನ ಕನ್ನಡಿಯಾಗಬೇಕು ಎಂದು ಹೇಳಿದರು.



ಪ್ರವಚನಕಾರ ಮುಧೋಳ ಸಿದ್ಧಾರೂಢ ಶಿವಯೋಗಾಶ್ರಮದ ಸಿದ್ದರಾಮ ಶ್ರೀಗಳು ಉಪಸ್ಥಿತರಿದ್ದರು. ಹೋತನಹಳ್ಳಿ ಸಿಂದಗಿ ಮಠದ ಶಂಭುಲಿಂಗ ಪಟ್ಟಾಧ್ಯಕ್ಷರು ಸಾನಿಧ್ಯ ವಹಿಸಿದ್ದರು. ಸಮಾಜ ಸೇವೆಯಲ್ಲಿ ತೊಡಗಿಕೊಂಡ ಹಾವೇರಿಯ ಪುಂಡಲಿಕಪ್ಪ ಶಿರೂರ, ಡಾ.ಸಿದ್ದೇಶ್ವರ ಬಾಲೆಹೊಸೂರ, ಸಿದ್ದಪ್ಪ ಕಡೆಮನಿ, ಡಾ.ಮೃತ್ಯುಂಜಯ ತುರಕಾಣಿ, ಲಕ್ಷ್ಮೇಶ್ವರದ ಅಕ್ಕಮ್ಮ ಹಿರೇಮಠ, ಸಿಂದಗಿಯ ಸೋಮನಗೌಡ್ರ ಬಿರಾದಾರ, ವೀರಣ್ಣ ಹಾವಣಗಿ, ಷಟ್‌ಗೋಪಾಲ್, ರಾಜಶೇಖರ ಮಾಗನೂರ, ಕರೀಂಸಾಬ ನದಾಫ್, ಶಾಂತಪ್ಪ ಮೂಲಶೆಟ್ಟರ ಹಾಗೂ ದಾನಪ್ಪಗೌಡ ತೋಟದ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು.

ದಾವಣಗೆರೆ ವೀರೇಶ್ವರ ಪುಣ್ಯಾಶ್ರಮದ ಆನಂದ ಪಾಟೀಲ್ ಇವರಿಂದ ವಿಶೇಷ ಸಂಗೀತ ಸೇವೆ ಜರುಗಿತು. ಬಾಲ ನೃತ್ಯ ಕಲಾವಿದೆ ಅದ್ವಿತಿ ಕೊಪ್ಪಳ ಭರತನಾಟ್ಯ ಜರುಗಿತು. ಜಿ.ಎಸ್. ಭಟ್ ಹಾಗೂ ಜಗದೀಶ್ ಶಾಸ್ತ್ರಿಗಳು ಹಾವಣಗಿ ನಿರ್ವಹಿಸಿದರು.

ಶಿವಯೋಗಿ ಹಿರೇಮಠ ವಂದಿಸಿದರು. ಸಿಂಧಗಿಮಠದ ಸಂಚಾಲಕ ಶಿವಬಸಯ್ಯ ಆರಾಧ್ಯಮಠ, ಚನ್ನಬಸಯ್ಯ ಹಿರೇಮಠ, ಮಹಾಂತೇಶ ಹಿರೇಮಠ, ರಾಮಾಪುರ ಶಾಸ್ತ್ರಿಗಳು, ವೀರಣ್ಣ ಮಹಾರಾಜಪೇಟೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಇಂದು ಜಿಗ್ನಾಸ್ ವಿಜ್ಞಾನಿ ವಿದ್ಯಾರ್ಥಿ ಸಂಪರ್ಕ

ಹಾವೇರಿ: ಜಿಲ್ಲಾಡಳಿತ ಹಾಗೂ ಶಾಲಾ ಶಿಕ್ಷಣ ಇಲಾಖೆ ಮತ್ತು ವಿದ್ಯಾಶಿಲ್ಪ ಇಂಟರ್ ನ್ಯಾಷನಲ್ ಸ್ಕೂಲ್ ಸಹಯೋಗದಲ್ಲಿ ಜಿಗ್ನಾಸ್ ವಿಜ್ಞಾನಿ ವಿದ್ಯಾರ್ಥಿ ಸಂಪರ್ಕ ಕಾರ್ಯಕ್ರಮ ಫೆ.18ರಂದು ಬೆಳಗ್ಗೆ 10 ಗಂಟೆಗೆ ನಗರದ ವಿದ್ಯಾಶಿಲ್ಪ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಜರುಗಲಿದೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ, ಇತರರು ಭಾಗವಹಿಸಲಿದ್ದಾರೆ. ವಿವಿಧ ಪ್ರೌಢ ಶಾಲೆಗಳ 250 ವಿದ್ಯಾರ್ಥಿಗಳು ಭಾಗವಹಿಸಲಿದ್ದು, ಇದೊಂದು ವಿದ್ಯಾರ್ಥಿಗಳ ವಿಜ್ಞಾನ ವಿಕಸಿತ ಬೆಳವಣಿಗೆಗೆ ಸಹಕಾರಿಯಾದ ತರಬೇತಿಯಾಗಿದೆ ಹಾಗೂ ವಿಜ್ಞಾನಿಗಳು ತಮ್ಮ ಅನುಭವನ್ನು ಹಂಚಿಕೊಳ್ಳಲಿದ್ದಾರೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೋಟರಿ ಕ್ಲಬ್: ಹಣ್ಣು ವಿತರಣೆ

ಬ್ಯಾಡಗಿ : ಮಹಾ ಶಿವರಾತ್ರಿ ದಿನ ಸರ್ಕಾರಿ ಆಸ್ಪತ್ರೆಗೆ ಆಗಮಿಸಿ ಒಳ ರೋಗಿಗಳಿಗೆ ರೋಟರಿ ಕ್ಲಬ್ ನಿಂದ ಎಲ್ಲ ತರದ ಹಣ್ಣುಗಳ ವಿತರಣೆ ಮಾಡಿರುವದು ರೋಗಿಗಳಿಗೆ ಮನೆಯ ವಾತಾವರಣ ನಿರ್ಮಾಣ ಆಗಿ ಅವರು ಬೇಗ ಗುಣಮುಖರಾಗಲು ಸಹಾಯಕವಾಗಿದೆ ಎಂದು ಆಸ್ಪತ್ರೆ ವೈದ್ಯರಾದ ಡಾ.ಟಿ.ಎಲ್.ಸುನೀಲ್ ಹೇಳಿದರು.ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣುಗಳನ್ನು ವಿತರಿಸಿ ಮಾತನಾಡಿದರು. ಈ ವೇಳೆ ಕ್ಲಬ್ ಅಧ್ಯಕ್ಷ ಅನಿಲಕುಮಾರ ಬೊಡ್ಡಪಾಟಿ, ರೋಟರಿ ಕ್ಲಬ್ ಮುಂದಿನ ಸಹಾಯಕ ಗೌರ್ನರ್ ಬಸವರಾಜ ಸುಂಕಾಪುರ, ಕಾರ್ಯದರ್ಶಿ ಕಿರಣ ಮಾಳೇನಹಳ್ಳಿ, ಸದಸ್ಯರಾದ ಡಾ.ಎ. ಎಂ ಸೌದಾಗರ, ಮಾಲತೇಶ ಅರಳಿಮಟ್ಟಿ, ಮಂಜುನಾಥ ಉಪ್ಪಾರ, ಆನಂದ ಸೊರಟುರ, ಪ್ರಕಾಶ ಛತ್ರದ ಹಾಗೂ ಆಸ್ಪತ್ರೆ ಸಿಬ್ಬಂದಿ ಉಪಸ್ಥಿತರಿದ್ದರು



ಸಾರಿಗೆ ಬಸ್‌ನ ಹೊಗೆಗೆ ಜನ ಹೈರಾಣ

ಜಿ.ವಿ.ದೀಪಾವಳಿ

ರಾಣೇಬೆನ್ನೂರ: ಪರಿಸರಕ್ಕೆ ಹಾನಿಯಾಗುವಂತೆ ಹೊಗೆಯನ್ನು ಹೊರಹಾಕುತ್ತಿರುವ ಸಾರಿಗೆ ಸಂಸ್ಥೆಯ ಬಸ್ ನಗರದ ಬಸ್ ನಿಲ್ದಾಣದಲ್ಲಿ ಬಸ್ ಚಾಲನೆಗೊಳ್ಳುತ್ತಿದ್ದಂತೆ ಅಪಾರವಾದ ಹೊಗೆ ಕಿತ್ತು ನಿಲ್ದಾಣದಲ್ಲಿರುವ ಪ್ರಯಾಣಿಕರು ಮೂಗು ಮುಚ್ಚಿಕೊಳ್ಳುವ ದೃಶ್ಯ ಕಂಡು ಬಂದಿತು. ಗ್ಯಾರಂಟಿ ಯೋಜನೆಯಿಂದ ಹಳ್ಳ ಹಿಡಿದಿರುವ ವಾಯವ್ಯ ಸಾರಿಗೆ ಸಂಸ್ಥೆಯ ಬಸ್‌ಗಳ ಸ್ಥಿತಿ ನಿಜಕ್ಕೂ ಹೇಳತೀರದಂತಾಗಿದೆ.

ಪರಿಸರಕ್ಕೆ ಹಾನಿಯಾಗುವಂತೆ ಹೊಗೆಯನ್ನು ಹೊರಹಾಕುತ್ತಿರುವ ಈ ಬಸ್ ಬಗ್ಗೆ ಚಾಲಕರಿಗೆ ಹಾಗೂ ತಾಂತ್ರಿಕ ವ್ಯವಸ್ಥಾಪಕರಿಗೆ ಇದು ಗಮನಕ್ಕೆ ಬಂದೇ ಇಲ್ವಾ ಎಂದು ಪ್ರಯಾಣಿಕರು ಬಸ್ ಪರಸ್ಥಿತಿ ನೋಡಿ ಆಡಿಕೊಳ್ಳುವ ಮಾತುಗಳು ಕೇಳಿಬಂದವು.



ದಿಗಂತ ವಿಶೇಷ

ರಾಣೇಬೆನ್ನೂರಿನಿಂದ ತುಮ್ಮಿನಕಟ್ಟಿ ಗ್ರಾಮಕ್ಕೆ ಚಲಿಸುವ ಬಸ್ ನಂ ಕೆಎ 27, ಎಫ್ 0634 ಇದಾಗಿದ್ದು, ಈ ಬಸ್ ಹಿಂದೆ ಹೋದವರ ಗತಿ ಅಯೋಮಯವೇ ಸರಿ. ಇನ್ನೂ ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸಿ ಹೊಗೆ ತಪಾಸಣೆ ಮಾಡುವ ಟ್ರಾಫಿಕ್ ಪೊಲೀಸರಿಗೆ ಈ ಬಸ್ ಕಂಡೇ ಇಲ್ವಾ? ನಿತ್ಯವೂ ಟ್ರಾಫಿಕ್ ಪೊಲೀಸರ ಮುಂದೆ ಚಲಿಸುವ ವಾಹನಕ್ಕೆ ಹೇಳೋರು ಕೇಳೋರು ಯಾರೂ ಇಲ್ವಾ? ಅದೇ ಖಾಸಗಿ ವಾಹನವಾದರೆ ವಾಹನ ತಡೆದ ದಂಡ ವಸೂಲಿ ಮಾಡುವ ಸನ್ನಿವೇಶ ಕಾಣಬಹುದು

> ಅತಿಯಾಗಿ ಹೊಗೆ ಬಿಡುತ್ತಿರುವ ಆ ಬಸ್‌ನ್ನು ಸರಿಪಡಿಸಿ ಬಿಡಲಾಗಿದೆ. ಇನ್ನು ಮುಂದೆ ಅಂತಹ ವಾಹನಗಳನ್ನು ಸರಿಯಾಗಿ ತಪಾಸಣೆ ಮಾಡಿ ರಸ್ತೆಗಿಳಿಸಲಾಗುವುದು.
>
> ■ ಆರ್.ಸಿ.ಪಾಟೀಲ
> ಡಿಪೋ ಮ್ಯಾನೇಜರ್

ಆದರೆ ಸಾರ್ವಜನಿಕರ ಹಾಗೂ ಶಾಲಾ ಕಾಲೇಜು ಮಕ್ಕಳನ್ನು ಕರೆದುಕೊಂಡು ಹೋಗುವ ಬಸ್ ಟ್ರಾಫಿಕ್ ಪೊಲೀಸರ ಕಣ್ಣಿಗೆ ಬೀಳದೆ ಇರುವುದು ನಿಜಕ್ಕೂ ವಿಪರ್ಯಾಸವೇ ಸರಿ. ಒಟ್ಟಿನಲ್ಲಿ ವಾಯುವ್ಯ ಸಾರಿಗೆ ಸಂಸ್ಥೆ ಅಧಿಕಾರಿಗಳ ನಿರ್ಲಕ್ಷ್ಯ ವಹಿಸದೆ ತಾಲೂಕಿನ ಗ್ರಾಮೀಣ ಭಾಗಗಳಿಗೆ ಕಂಡೀಷನ್ ಇರುವಂತಹ ಬಸ್‌ಗಳನ್ನು ಬಿಡಬೇಕು ಇಲ್ಲವಾದಲ್ಲಿ ಎಲ್ಲಂದರಲ್ಲಿ ಬಸ್ 'ಳು ತಾಂತ್ರಿಕ ದೋಷದಿಂದ ನಿಂತು ಶಾಲಾ ಕಾಲೇಜು ಮಕ್ಕಳಿಗೆ ಹಾಗೂ ಪ್ರಯಾಣಿಕರಿಗೆ ತೊಂದರೆಯನ್ನುಂಟು ಮಾಡುತ್ತವೆ. ಈ ಬಗ್ಗೆ ಸಾರಿಗೆ ಅಧಿಕಾರಿಗಳು ಎಚ್ಚೆತ್ತುಕೊಂಡು ಸೂಕ್ತವಾಗಿರುವ ಬಸ್‌ಗಳನ್ನು ಓಡಿಸಬೇಕು ಎಂಬುದು ಸಾರ್ವಜನಿಕರ ಆಶಯ.

ಸಾರ್ವಜನಿಕರ ಆಕ್ರೋಶ

ಡಿಪೋದಲ್ಲಿ ಬಸ್‌ಗಳು ಹೊರಗೆ ಬರಬೇಕಾದರೆ ಎಲ್ಲ ಕಂಡಿಷನ್ ಮತ್ತು ಬಸ್ ವ್ಯವಸ್ಥೆ ನೋಡಿಕೊಂಡೆ ಚಾಲಕರು ಬಸ್ ಹೊರಗಡೆ ತರುತ್ತಾರೆ ಆದರೆ ಪರಿಸರಕ್ಕೆ ವಿನಾಶವಾಗುವಂತಹ ಹೊಗೆಯನ್ನು ಬಿಡುವ ಬಸ್ ಚಾಲಕ ಹೇಗೆ ತಂದರು ಮತ್ತೆ ಇಂತಹ ಬಸ್ ಗಳ ಬಗ್ಗೆ ಡಿಪೋಮ್ಯಾನೇಜರ್ ಅವರ ಗಮನಕ್ಕೆ ಬಂದೇ ಇಲ್ವ ಎಂದು ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಮಾಜಕ್ಕೆ ಕೊಡುಗೆ ನೀಡಿ: ಶಾಸಕ ಕೋಳಿವಾಡ

ರಾಣೇಬೆನ್ನೂರ: ಪ್ರಾಧ್ಯಾಪಕರು ಸಮಾಜದ ಬೆಳವಣಿಗೆಗ ಸಂಶೋಧನೆಯ ಮೂಲಕ ತಮ್ಮದೆ ಆದಂತಹ ಕೊಡುಗೆಯನ್ನು ನೀಡುವುದರ ಮೂಲಕ ಸಮಾಜದಲ್ಲಿ ಬದಲಾವಣೆ ತರುವುದಕ್ಕಾಗಿ ಶ್ರಮಿಸಬೇಕೆಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ನಗರದ ಆರ್‌ಟಿಇಎಸ್ ಪದವಿ ಮಹಾವಿದ್ಯಾಲಯದಲ್ಲಿ ಸತ್ಯಂ ಶಿವಂ ಸುಂದರಂ ತಮಿಳನಾಡು ಮತ್ತು ಉನ್ನತಿ ಎಜ್ಯುಕೇಶನ್ ಟ್ರಸ್ಟ್ ಧಾರವಾಡ ಇವರ ಸಹಯೊಗದಲ್ಲಿ ಸಮಾಜಶಾಸ್ತ್ರದ ವಿಭಾಗದ ವತಿಯಿಂದ ಒಂದು ದಿನದ ಅಂತಾರಾಷ್ಟ್ರೀಯ ವಿಚಾರ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಇಂತಹ ಅಂತಾರಾಷ್ಟ್ರೀಯ ಸಮ್ಮೇಳನಗಳು ಹಮ್ಮಿಕೊಂಡರೆ ಸಹಕಾರವನ್ನು ನೀಡುತ್ತೇವೆ ಎಂದು ತಿಳಿಸಿದರು.



ಸಂಸ್ಥೆಯ ಅಧ್ಯಕ್ಷ ಡಾ.ಸಂಜಯ್ ಸಾವುಕಾರ ಅಧ್ಯಕ್ಷತೆ ವಹಿಸಿದ್ದರು. ಧಾರವಾಡ ಅಂಬೇಡ್ಕರ್ ಅಧ್ಯಯನ ಪೀಠ ಕೋಆರ್ಡಿನೇಟರ್ ಸುಭಾಷ್ ನಾಟೇಕರ, ಡಾ.ಶಿವಕುಮಾರ ಸೋಮ್‌ಸುಂದರ, ಪ್ರೊ. ಸಂಗೀತಾ ಮಾನೆ, ಡಾ.ಎಮ್.ಎಚ್.ಹೆಬ್ಬಾಳದ, ಡಾ.ಆನಂದ ಕಾನಪೇಟ, ಡಾ.ಮಧುಕುಮಾರ.ಆರ್, ಡಾ.ಎಸ್ ನೆಹರು, ಡಾ.ಮಾಲತೇಶ.ಪೂಜಾರ, ಶಿವುಕುಮಾರ ಬೆಣ್ಣಿ, ಬೋಧಕರು ಮತ್ತು ಬೋಧಕೇತರಸಿಬ್ಬಂದಿಮತ್ತು ವಿವಿಧ ಮಹಾವಿದ್ಯಾಲಯುಗಳಿಂದ ಪ್ರಾಧ್ಯಾಪಕ ಪ್ರತಿನಿಧಿಗಳು ಇದ್ದರು.

ಕಿರುಸುದ್ದಿ

ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು ಮನವಿ

ನೇಸರಗಿ: ನೇಸರಗಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಕಲ್ಪಿಸಲು ಆಗ್ರಹಿಸಿ ಸಚಿವ ದಿನೇಶ ಗುಂಡೂರಾವ್ ಅವರಿಗೆ ನೇಸರಗಿ ಭಾಗದ ಕಾಂಗ್ರೆಸ್ ನಾಯಕರು ಹಾಗೂ ಕಾರ್ಯಕರ್ತರು ಮನವಿ ಸಲ್ಲಿಸಿದರು.

ನೇಸರಗಿ ಒಂದು ಜಿಪಂ ಕ್ಷೇತ್ರ ಹಾಗೂ 42 ಹಳ್ಳಿಗಳನ್ನು ಒಳಗೊಂಡ ಪ್ರಮುಖ ಪೊಲೀಸ್ ಠಾಣೆ ಹೊಂದಿರುವ ಸ್ಥಾನ , ವ್ಯಾಪಾರ ವಹಿವಾಟಿನ ಕೇಂದ್ರ ಸ್ಥಳವಾಗಿದ್ದು,ಬೆಳಗಾವಿ, ಬಾಗಲಕೋಟೆ ರಸ್ತೆಯ ಕೇಂದ್ರ ಸ್ಥಾನವಾಗಿದ್ದು, ತಾಲೂಕು ಸ್ಥಾನಕ್ಕೂ ಯೋಗ್ಯವಾದ ಸ್ಥಳ ನೇಸರಗಿ ಗ್ರಾಮ ಆಗಿದ್ದು, ಈ ಭಾಗದ ಸಾರ್ವಜನಿಕರ ಹಲವು ವರ್ಷಗಳ ಬೇಡಿಕೆ ಇಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಆಗದಿರುವುದು ವಿಪರ್ಯಾಸ ವಿಷಯ.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿನಯ ನವಲಗಟ್ಟಿ, ನೇಸರಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಿಂಗಪ್ಪ ಅರಕೇರಿ, ಮುಖಂಡ ಅಡಿವಪ್ಪ ಮಾಳಣ್ಣವರ, ಮಾಜಿ ಎಪಿಎಂಸಿ ಅಧ್ಯಕ್ಷ ಭರಮಣ್ಣ ಸತ್ತೆನ್ನವರ, ನಿಂಗಪ್ಪ ತಳವಾರ, ಬಸವರಾಜ ಚಿಕ್ಕನಗೌಡರ, ಅಶೋಕ ಹತ್ತರಕಿ, ಬಿ.ಬಿ. ಹಿರೇಮಠ ಮಲ್ಲಿಕಾರ್ಜುನ ಕಲ್ಲೊಳ್ಳಿ,ಶ್ರೀಕಾಂತ ತರಗಾರ, ಯಲ್ಲಪ್ಪ ಕೌಜಲಗಿ,ಸೋಮಪ್ಪ ಸತ್ತೆನ್ನವರ ಮುಂತಾದವರು ಹಾಜರಿದ್ದರು.

ಇಂದಿನಿಂದ ಉಚಿತ ವೈದ್ಯಕೀಯ ಶಿಬಿರ

ಸಂಕೇಶ್ವರ: ಸ್ಥಳೀಯ ಸಂಕೇಶ್ವರ ಮಿಷನ್ ಆಸ್ಪತ್ರೆಯಲ್ಲಿ ಫೆ.18ರಿಂದ ಫೆ.21ವರೆಗೆ, ಮಧ್ಯಾಹ್ನ 3ರಿಂದ ಸಂಜೆ 6 ರವರೆಗೆ ಉಚಿತ ವೈದ್ಯಕೀಯ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ವಿಶೇಷವಾಗಿ ಶಿಬಿರದಲ್ಲಿ ಎಲುಬು ಕೀಲು ಶಸ್ತ್ರಚಿಕಿತ್ಸಕರು ಮತ್ತು ಸಂದಿವಾತ ತಜ್ಞರು ಸೇವೆ ನೀಡಲಿದ್ದಾರೆ. ಜನತೆ ಈ ಶಿಬಿರದ ಸದುಪಯೋಗಪಡಿಸಿಕೊಂಡು ತಮ್ಮ ಆರೋಗ್ಯವನ್ನು ತಪಾಸಣೆ ಮಾಡಿಸಿಕೊಂಡು ಉಚಿತ ಸಮಾಲೋಚನೆ ನಡೆಸುವಂತೆ ಆಸ್ಪತ್ರೆಯ ಆಡಳಿತ ಮಂಡಳಿ ಪ್ರಕಟಣೆಗೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಮೊ.08333-273426, 9810912456, 9591461668 ಈ ಸಂಖ್ಯೆಗಳಿಗೆ ಸಂಪರ್ಕಿಸಬಹುದು ಎಂದು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಸೆಂಟ್ರಲ್ ಬೋರ್ಡ್ ಪರೀಕ್ಷೆ: ನಿಷೇಧಾಜ್ಞೆ ಜಾರಿ

ಬೆಳಗಾವಿ: ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್ ನವದೆಹಲಿ ಇವರ ವತಿಯಿಂದ ಫೆ. 17 ರಿಂದ ಏ. 11ರವರೆಗೆ ನಡೆಯುವ 10 ಮತ್ತು 12 ನೇ ತರಗತಿಗಳ ಬೋರ್ಡ್ ಪರೀಕ್ಷೆಗಳ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಭಾರತೀಯ ನ್ಯಾಯ ಸಂಹಿತೆ ಕಲಂ. 163 ಅಡಿಯಲ್ಲಿ ನಿಷೇಧಾಜ್ಞೆ ಹೊರಡಿಸಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಆದೇಶ ಹೊರಡಿಸಿದ್ದಾರೆ.

ರೈತರ ಬ್ಯಾಂಕ್ ಖಾತೆಗೆ ಬಿಲ್ ಜಮಾ: ಪಾಟೀಲ



ಚಿಕ್ಕೋಡಿ: ನಿಪ್ಪಾಣಿ ನಗರದ ಹೊರವಲಯದ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಫೆ. 1ರಿಂದ 12ರ ವರೆಗಿನ 6ನೇ ಪಾಕ್ಷಿಕದಲ್ಲಿ ಕಾರ್ಖಾನೆ 34,785 ಮೆ.ಟನ್ ಕಬ್ಬು ನುರಿಸಿದ್ದು ಆದರ ಬಿಲ್ 11.51 ಕೋಟಿ ರೂ.ಆಯಾ ರೈತರ ಬ್ಯಾಂಕ್ ಖಾತೆಗೆ ಬುಧವಾರ ಫೆ.18 ರಂದು ಜಮೆ ಮಾಡಲಾಗುವುದು ಎಂದು ಕಾರ್ಖಾನೆ ಅಧ್ಯಕ್ಷ ಮಲಗೊಂಡಾ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ಜ. 31ರ ವರೆಗೆ 5,42,887 ಮೆ.ಟನ್ ಕಬ್ಬು ನುರಿಸುದ್ದು ಆದರ ಬಿಲ್ 179.70 ಕೋಟಿ ರೂ.ಆಯಾ ರೈತರ ಬ್ಯಾಂಕ್ ಖಾತೆಗೆ ಈ ಹಿಂದೆ ಸಂದಾಯ ಮಾಡಲಾಗಿದೆ. 2025-26ರ ಹಂಗಾಮಿನ ಮುಕ್ತಾಯದ ವರೆಗೆ ನಮ್ಮ ಕಾರ್ಖಾನೆಯು ಒಟ್ಟು 5,77,672 ಮೆ.ಟನ್. ಕಬ್ಬು ನುರಿಸಿ 3,96,640 ಮೆ.ಟನ್. ಸಕ್ಕರೆಯನ್ನು ಉತ್ಪಾದಿಸಿದೆ. ಬಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ಮತ್ತು ಶಾಸಕಿ ಶಶಿಕಲಾ ಜೊಲ್ಲೆ ಅವರ ಮಾರ್ಗದರ್ಶದಲ್ಲಿ ಕಾರ್ಖಾನೆಯು ಕಬ್ಬು ಕಳುಹಿಸಿದ ರೈತರ ಎಲ್ಲ ಬಿಲ್ ಮೊತ್ತವನ್ನು ಸಂದಾಯ ಮಾಡಿದೆ. ಮತ್ತು ಯಾವುದೇ ತರಹದ ಬಾಕಿ ಉಳಿಸಿಕೊಂಡಿಲ್ಲ ಎಂದು ಈ ಮೂಲಕ ತಿಳಿಸಲಾಗಿದೆ. ಹಲವು ವರ್ಷಗಳಿಂದ ನಾವು ಸರ್ಕಾರದ ಎಲ್ಲ ಆದೇಶ ಪಾಲನೆಯನ್ನು ಮಾಡಿದ್ದು, ಸರ್ಕಾರ ಎಫ್‌ಆರ್‌ಪಿಗಿಂತ ಜಾಸ್ತಿ ದರ ನೀಡಿದ್ದಲ್ಲದೇ ಬಿಲ್ ಮೊತ್ತವನ್ನು ಕೂಡ 5ನೇ ದಿನವೇ ಪಾವತಿ ಮಾಡಿದೆ. ಈ ಮೂಲಕ ರೈತರಿಗೆ ತ್ವರಿತ ಗತಿಯ ಸೇವೆಯನ್ನು ಮಾಡಿದೆ.

ಇಲ್ಲಿಯವರೆಗೆ ಸಹ ವಿದ್ಯುತ್ ಘಟಕ 3,64,60,490 ಕೆ.ಡಬ್ಲೂ.ಹೆಚ್. ಯುನಿಟ್ ವಿದ್ಯುತ್ ಉತ್ಪಾದನೆ ಮಾಡಿದ್ದು ಆ ಪೈಕಿ 1,94,36,720 ಕೆ.ಡಬ್ಲ್ಯೂ.ಹೆಚ್. ಯುನಿಟ್ ಕಾರ್ಖಾನೆ ಸ್ವಂತ ಬಳಿಸಿದ್ದು ಉಳಿದ 1,70,23,770 ಕೆ.ಡಬ್ಲ್ಯೂ.ಹೆಚ್. ಯುನಿಟ್‌ನ್ನು ಕೆಪಿಟಿಸಿಎಲ್‌ಗೆ ಮಾರಿದೆ. ಇನ್ನೂ ಕೂಡ ವಿದ್ಯುತ್ ಉತ್ಪಾದನೆ ಮುಂದುವರೆದಿದೆ ಎಂದು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.



ನೇಸರಗಿ: ನೇಸರಗಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಕಲ್ಪಿಸಲು ಆಗ್ರಹಿಸಿ ಸಚಿವ ದಿನೇಶ ಗುಂಡೂರಾವ್ ಅವರಿಗೆ ನೇಸರಗಿ ಭಾಗದ ಕಾಂಗ್ರೆಸ್ ನಾಯಕರು ಹಾಗೂ ಕಾರ್ಯಕರ್ತರು ಮನವಿ ಸಲ್ಲಿಸಿದರು.

ಸಂಭ್ರಮದ ಮಲ್ಲಿಕಾರ್ಜುನ ಪಲ್ಲಕ್ಕಿ ಉತ್ಸವ

ಯಮಕನಮರಡಿ: ಸಮೀಪದ ಹಂಚಿನಾಳ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾದ ಶ್ರೀ ಮಲ್ಲಿಕಾರ್ಜುನ ಮಂದಿರದಲ್ಲಿ ಮಹಾಶಿವರಾತ್ರಿ ಅಂಗವಾಗಿ 3 ದಿನಗಳವರೆಗೆ ಸುಕ್ಷೇತ್ರ ನೂಲ ತುರುಗಿ ಮಠದ ಗುರುಸಿದ್ಧ ಸ್ವಾಮೀಜಿ ಅವರ ಆಧ್ಯಾತ್ಮ ಪ್ರವಚನ ಮತ್ತು ಪಲ್ಲಕ್ಕಿ ಉತ್ಸವ ಮಹಾಪ್ರಸಾದ ಇತ್ಯಾದಿ ಕಾರ್ಯಕ್ರಮ ನಡೆಯಿತು.

ಫೆ.16ರಂದು ಪುರಾಣಮುಕ್ತಾಯ ಸಮಾರಂಭದ ಅಂಗವಾಗಿ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಶ್ರೀಗಳು ಮಾತನಾಡಿ, ನಮ್ಮ ನಾಡು ಸನಾತನ ಧರ್ಮದಿಂದ ಕೂಡಿದ ನಾಡಾಗಿದೆ. ಗ್ರಾಮದ ಜನರು ಭಕ್ತಿ ಭಾವದಿಂದ 3 ದಿನಗಳ ಕಾಲ ಆಯೋಜಿಸಲಾಗಿದ್ದ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನೆರವೇರಿಸಿದ್ದನ್ನು ಇಲ್ಲ ಸ್ಮರಿಸಬಹುದಾಗಿದೆ.

ಸದರಿ ಹಂಚಿನಾಳ ಗ್ರಾಮವು ಪೂರ್ವದಿಂದಲೂ ಒಕ್ಕಲೂತನ ಕಸುಬಿನಿಂದ ತಮ್ಮ ಉಪಜೀವನ ಸಾಗಿಸುವ ಒಂದು ಗ್ರಾಮವಾಗಿದೆ. ಗ್ರಾಮದ ಎಲ್ಲ ಭಕ್ತಾದಿಗಳು ನಮ್ಮ ಮಠದ ಭಕ್ತರಾಗಿದ್ದು ಪ್ರತಿವರ್ಷವೂ ಸುಮಾರು ಇಡೀ ಗ್ರಾಮದಿಂದ 100 ಜನ ಭಕ್ತಾದಿಗಳು ತಮ್ಮ ಪಾದಯಾತ್ರೆ ಮೂಲಕ ಕ್ಷೇತ್ರ ಶ್ರೀಶೈಲಕ್ಕೆ ಹೋಗಿ ಕಂಬಿಮಲ್ಲಯ್ಯನ ಭಕ್ತಿಹರಿಕೆಯನ್ನು ಮುಟ್ಟಿಸುವ ಸಂಪ್ರದಾಯವು ಆತೀ ಪೂರ್ವದಿಂದಲೂ ಬಂದಿರುವ ಸಂಪ್ರದಾಯವಾಗಿದೆ. ಸದರಿ ಸಂಪ್ರದಾಯವನ್ನು ಇಂದಿನ ಆಧುನಿಕ ಯುಗದಲ್ಲಿಯೂ ಸಹಿತ ಮುಂದುವರೆಸಿಕೊಂಡು ಬಂದಿರುವುದು ಶ್ಲಾಘನೀಯವಾಗಿದೆ. ಕಾರ್ಯಕ್ರಮದಲ್ಲಿ ಗ್ರಾಮದ ಮುಖಂಡರು, ಲೋಕಮಿತ್ರರು ಉಪಸ್ಥಿತರಿದ್ದು, ದೇವಸ್ಥಾನಕ್ಕೆ ಉಚಿತವಾಗಿ ತಮ್ಮ ಜಾಗವನ್ನು ನೀಡಿದಕ್ಕಾಗಿ ಅವರನ್ನು ಶ್ರೀಗಳಿಂದ ಸನ್ಮಾನಿಸಿ ಗೌರವಿಸಲಾಯಿತು.



ಯಮಕನಮರಡಿ: ಸಮೀಪದ ಹಂಚಿನಾಳ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾದ ಶ್ರೀ ಮಲ್ಲಿಕಾರ್ಜುನ ಮಂದಿರದಲ್ಲಿ ಮಹಾಶಿವರಾತ್ರಿ ಅಂಗವಾಗಿ 3 ದಿನಗಳವರೆಗೆ ಸುಕ್ಷೇತ್ರ ನೂಲ ತುರುಗಿ ಮಠದ ಗುರುಸಿದ್ಧ ಸ್ವಾಮೀಜಿ ಅವರ ಅಧ್ಯಾತ್ಮ ಪ್ರವಚನ ಮತ್ತು ಪಲ್ಲಕ್ಕಿ ಉತ್ಸವ, ಮಹಾಪ್ರಸಾದ ಇತ್ಯಾದಿ ಕಾರ್ಯಕ್ರಮ ನಡೆಯಿತು.

ಶೀಘ್ರವೇ ತಾಲೂಕು ಮಟ್ಟಕ್ಕೂ ವಿಸ್ತರಣೆ: ಸಚಿವೆ ಹೆಬ್ಬಾಳ್ಕರ್

ಅಕ್ಕಪಡೆ ಮಹಿಳೆಯರ ಶಕ್ತಿ, ಸ್ವಾಭಿಮಾನದ ಪ್ರತೀಕ

ಬೆಳಗಾವಿ: ಅಕ್ಕಪಡೆ ಮಹಿಳೆಯರ ಶಕ್ತಿ, ಮಹಿಳೆಯರ ಸ್ವಾಭಿಮಾನದ ಪ್ರತೀಕ, ಶೀಘ್ರವೇ ತಾಲೂಕು ಮಟ್ಟಕ್ಕೂ ವಿಸ್ತರಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಬೆಳಗಾವಿ ನಗರದ ಹೃದಯ ಭಾಗ ಕಿತ್ತೂರು ಚೆನ್ನಮ್ಮ ವೃತ್ತದಲ್ಲಿ ಅಕ್ಕಪಡೆಗೆ ಚಾಲನೆ ನೀಡಿ ಮಾತನಾಡಿದ ಅವರು, ಸದ್ಯಕ್ಕೆ ಪ್ರಾಯೋಗಿಕವಾಗಿ ಕೆಲವು ಸ್ಥಳಗಳಲ್ಲಿ ಅಕ್ಕಪಡೆ ಆರಂಭಿಸಿದ್ದು, ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಮುಂಬರುವ ಬಜೆಟನಲ್ಲಿ ಅಂಗೀಕಾರ ಪಡೆದು ತಾಲೂಕು ಮಟ್ಟಕ್ಕೂ ಅಕ್ಕಪಡೆ ವಿಸ್ತರಿಸಲಾಗುವುದು ಎಂದರು.

ಅಕ್ಕಪಡೆ ಸಿಬ್ಬಂದಿ ಸಾರ್ವಜನಿಕ ಸ್ಥಳಗಳಾದ ಮಾಲ್, ಜಾತ್ರಾ, ಮಹೋತ್ಸವ, ಲೇಡಿಸ್ ಹಾಸ್ಟೆಲ್ಗಳು, ಕಾಲೇಜುಗಳು, ಸಮುದಾಯ ಭವನ ಸೇರಿದಂತೆ ಜನನಿಬಿಡ ಪ್ರದೇಶಗಳಿಗೆ ಭೇಟಿ ಕೊಡಲಿದ್ದಾರೆ. ಅಕ್ಕಪಡೆಯ ಉದ್ದೇಶ ಸಫಲವಾಗಬೇಕು ಎಂದರೆ ನಾಗರಿಕ ಸಮಾಜ ಕೂಡ ಇದಕ್ಕೆ ಬೆಂಬಲ ನೀಡಬೇಕು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕರೆ ನೀಡಿದರು.

ಬೇರು ಮಟ್ಟದಿಂದಲೇ ಬಾಲ್ಯವಿವಾಹವನ್ನು ತಡೆಗಟ್ಟುವುದೇ ಅಕ್ಕಪಡೆ ಉದ್ದೇಶ, ಜೊತೆಗೆ ಬಾಲ ಗರ್ಭಿಣಿ, ಪೋಕ್ಸೋ ಕೇಸ್ಗಳನ್ನು ಕಿತ್ತುಹಾಕಬೇಕು. ಮಹಿಳೆಯರು ನಿರ್ಭೀತಿಯಿಂದ ಓಡಾಡಬೇಕು ಎಂಬುದೇ ಅಕ್ಕಪಡೆ ಉದ್ದೇಶ ಎಂದು ಹೇಳಿದರು. ಅಕ್ಕಪಡೆ ಎಂದರೆ ಆಸರೆ, ಶಕ್ತಿ, ಸ್ವಾಭಿಮಾನ, ನಾಗರಿಕ ಸಮಾಜದಲ್ಲಿ ಎಲ್ಲರೂ ಕೂಡ ನ್ಯಾಯಯುತವಾಗಿ ನಡೆದುಕೊಳ್ಳಬೇಕು, ಇದಕ್ಕೆ ಎಲ್ಲರೂ ಸಹಕಾರ ನೀಡಬೇಕು. ದೌರ್ಜನ್ಯಕ್ಕೊಳಗಾಗಿ ದೂರು ನೀಡುವವರ ಹೆಸರನ್ನು ಗೌಪ್ಯವಾಗಿ ಇಡಲಾಗುವುದು ಎಂದರು.



> ಅಕ್ಕಪಡೆ ಎಂದರೆ ಮಹಿಳೆಯರಿಗೆ ಹಾಗೂ ಮಕ್ಕಳ ಪಾಲಿಗೆ ಭರವಸೆ ಇದ್ದಂತೆ. ಜಿಲ್ಲೆಯಾದ್ಯಂತ ಮಹಿಳೆಯರು, ಮಕ್ಕಳು ಸುರಕ್ಷಿತವಾಗಿರಬೇಕು ಎಂಬ ಉದ್ದೇಶದಿಂದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದೀಗ ಅದರ ಮುಂದುವರಿದ ಭಾಗವಾಗಿ ಅಕ್ಕಪಡೆಯನ್ನು ರಚಿಸಲಾಗಿದೆ.
>
> ■ ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

ಮಕ್ಕಳ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ದಿನದ 24 ಗಂಟೆಯೂ ಸಹಾಯವಾಣಿಗಳನ್ನು ತೆರೆಯಲಾಗಿದೆ. ನಮ್ಮ ಇಲಾಖೆಯಿಂದ ಸಹಾಯವಾಣಿ ತೆರೆಯಲಾಗಿದ್ದು, 1098 ಸಂಖ್ಯೆಗೆ ಕರೆ ಮಾಡಬಹುದು. ಅಕ್ಕ ಪಡೆಗೆ ಮಹಿಳಾ ಸಹಾಯವಾಣಿ 181, ಜೊತೆಗೆ ಪೊಲೀಸ್ ಇಲಾಖೆಯ 112 ಸಂಖ್ಯೆಗೆ ಕರೆ ಮಾಡಬಹುದು. ಸಾರ್ವಜನಿಕ ಸ್ಥಳಗಳಲ್ಲಿ ಸಹಾಯವಾಣಿ ಸಂಖ್ಯೆಗಳನ್ನು ಅಂಟಿಸಲಾಗುವುದು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು. ಸಹಾಯವಾಣಿಯನ್ನು ಹೆಣ್ಣುಮಕ್ಕಳು ಸೂಕ್ತರೀತಿಯಲ್ಲಿ ಬಳಸಿಕೊಳ್ಳಬೇಕು, ನಿಮ್ಮ ಮನೆಗಳಲ್ಲಿ ತೊಂದರೆ ಅನುಭವಿಸುತ್ತಿದ್ದರೂ ಸಹಾಯವಾಣಿ ಮೂಲಕ ಅಕ್ಕಪಡೆಯನ್ನು ಸಂಪರ್ಕಿಸಬಹುದು. ಸಂಕಷ್ಟದಲ್ಲಿರುವವರಿಗೆ ಆಸರೆ ನೀಡಲು ಅಕ್ಕಪಡೆ ಎಲ್ಲರ ಜೊತೆಗೆ ಕೈಜೋಡಿಸಲಿದೆ ಎಂದು ಸಚಿವರು ತಿಳಿಸಿದರು.

ರಾಜ್ಯ ಅಕ್ಕಪಡೆಯ ಸಂಯೋಜಕರಾದ ಶ್ರೀಮತಿ ಸೈನಿ ನೇತೃತ್ವದ ಬೀದರ್ ಜಿಲ್ಲೆಯ ಅಕ್ಕಪಡೆಯ ವತಿಯಿಂದ ಆತ್ಮರಕ್ಷಣೆಯ ಕುರಿತು ಸಾಹಸ ಪ್ರದರ್ಶನ ನೋಡುಗರ ಗಮನ ಸೆಳೆಯಿತು.

ಜಿಲ್ಲಾ ಪೊಲೀಸ್ ಆಯುಕ್ತರಾದ ಭೂಷಣ್ ಗುಲಾಬರಾವ್ ಬೋರಸೆ, ಪೊಲೀಸ್ ಅಧೀಕ್ಷಕರಾದ ಕೆ. ರಾಮರಾಜನ್, ಇಲಾಖೆಯ ಜಿಲ್ಲಾ ಉಪ ನಿರ್ದೇಶಕರಾದ ಚೇತನಕುಮಾರ್ ಎಂ.ಎನ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸುಮಿತ್ರಾ, ಇಲಾಖೆಯ ನಿರೂಪಣಾಧಿಕಾರಿ ಅನಿಲಕುಮಾರ್ ಹೆಗ್ಡೆ ಸೇರಿದಂತೆ ಗೃಹರಕ್ಷಕಿಯರು ಉಪಸ್ಥಿತರಿದ್ದರು.

ಮನೆ ಬಾಗಿಲಿಗೆ ಪಡಿತರ ಧಾನ್ಯ ಮುಟ್ಟಿಸಿದ ಆಹಾರ ಇಲಾಖೆ

ಖಾನಾಪುರ: ತಾಲೂಕಿನ ಸಂಗರಗಾಳಿ ಗ್ರಾಮದ 85ಕ್ಕೂ ಮೇಲ್ಪಟ್ಟ ವಯೋವೃದ್ಧರಿಗೆ ಮತ್ತು ಗ್ರಾಮದ ಕೆಲ ವಿಶೇಷ ಅಗತ್ಯತೆಯುಳ್ಳವರ ಮನೆಗಳಿಗೆ ಆಹಾರ ಇಲಾಖೆಯ ಅಧಿಕಾರಿಗಳು ಮತ್ತು ನ್ಯಾಯಬೆಲೆ ಅಂಗಡಿಯವರು ತೆರಳಿ ಪಡಿತರ ಧಾನ್ಯವನ್ನು ಅವರವರ ಮನೆಗಳಿಗೆ ಮುಟ್ಟಿಸಿದ್ದಾರೆ. ಈ ಕುರಿತು ತಾವು ಕಳೆದ ಬುಧವಾರ ಬೆಳಗಾವಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು, ಈ ಹಿನ್ನೆಲೆಯಲ್ಲಿ ಅರ್ಹರಿಗೆ ಸರಕಾರದ ಸೌಲಭ್ಯ ದೊರೆತಂತಾಗಿದೆ ಎಂದು ಕದಂಬ ಫೌಂಡೇಶನ್ ಅಧ್ಯಕ್ಷ ಜಾರ್ಡನ್ ಗೋನ್ಸಾಲ್ವಿಸ್ ಮಾಹಿತಿ ನೀಡಿದರು.

ಪಟ್ಟಣದಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ತಾಲೂಕಿನ ಗುಂಜಿ ಗ್ರಾಪಂ ವ್ಯಾಪ್ತಿಯ ಸಂಗರಗಾಳಿ ಗ್ರಾಮದಲ್ಲಿ ವಾಸಿಸುತ್ತಿರುವ ವಯೋವೃದ್ಧರ ಮನೆಗೆ ಪಡಿತರ ಮುಟ್ಟಿಸಬೇಕು ಎಂದು ಅಲ್ಲಿಯ ನ್ಯಾಯಬೆಲೆ ಅಂಗಡಿಯವರಿಗೆ ವಿನಂತಿಸಿದರೂ ಅವರು ಪಡಿತರ ಪೂರೈಕೆಯತ್ತ ನಿರ್ಲಕ್ಷ್ಯ ವಹಿಸಿದ್ದರು. ಪರಿಣಾಯ ವಯೋವೃದ್ಧರು ಐದಾರು ತಿಂಗಳಿನಿಂದ ಪಡಿತರ ಧಾನ್ಯಗಳಿಂದ ವಂಚಿತರಾಗಿದ್ದರು. ಈ ವಿಷಯವನ್ನು ಖಾನಾಪುರ ತಹಶೀಲ್ದಾರ್ ಕಚೇರಿಯ ಆಹಾರ ಶಾಖೆಯ ಅಧಿಕಾರಿಗೆ ತಿಳಿಸಿ ಕ್ರಮಕ್ಕೆ ವಿನಂತಿಸಿದಾಗ ಅವರೂ ಸಹ ಉಡಾಫೆ ಉತ್ತರ ನೀಡಿದ್ದರು.

ಸಂಗರಗಾಳಿ ಮಾದರಿಯಲ್ಲಿ ತಾಲೂಕಿನ ವಿವಿಧೆಡೆ 85ಕ್ಕೂ ಮೇಲ್ಪಟ್ಟು ವಯೋಮಾನದ ವೃದ್ಧರಿಗೆ ಮತ್ತು ವಿಶೇಷ ಅಗತ್ಯತೆಯುಳ್ಳವರಿಗೆ ಪಡಿತರ ಧಾನ್ಯವನ್ನು ಅವರವರ ಮನೆಗಳಿಗೆ ಮುಟ್ಟಿಸುವ ಯಾವುದೇ ಪ್ರಯತ್ನಗಳು ಆಹಾರ ಶಾಖೆಯಿಂದ ನಡೆಯುತ್ತಿಲ್ಲ ಎಂಬ ಬಗ್ಗೆ ಸ್ಥಾನಿಕ ತನಿಖೆಯಿಂದ ತಿಳಿದ ಬಳಿಕ ತಾವು ಈ ಸಂಗತಿಯ ಬಗ್ಗೆ ಲಿಖಿತ ಮನವಿಯ ಮೂಲಕ ಜಿಲ್ಲಾಧಿಕಾರಿ ಗಮನ ಸೆಳೆದಿದ್ದು, ತಮ್ಮ ಮನವಿಗೆ ಸ್ಪಂದಿಸಿದ ಜಿಲ್ಲಾಧಿಕಾರಿ ಮೊಹಮ್ಮದ ರೋಷನ್ ಆಹಾರ ಶಾಖೆಯ ಅಧಿಕಾರಿಗಳಿಗೆ ಆದೇಶ ನೀಡುವ ಮೂಲಕ ನೊಂದವರಿಗೆ ನ್ಯಾಯ ಒದಗಿಸಿದ್ದಾರೆ'' ಎಂದು ಮಾಹಿತಿ ನೀಡಿದರು.



ಖಣದಾಳ ಶ್ರೀ ಹುಲಿಕಾಂತೇಶರ ಜಾತ್ರೆಯಲ್ಲಿ ಭವ್ಯ ಗಡ್ಡೆ ರಥೋತ್ಸವ

ಮುಗಳಖೋಡ: ಸಮೀಪದ ಖಣದಾಳ ಗ್ರಾಮದ ಆರಾಧ್ಯ ದೇವ ಶ್ರೀ ಹುಲಿಕಾಂತೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಗಡ್ಡೆ ತೇರು ನಡೆಯಿತು. ಶ್ರೀ ಹುಲಿಕಾಂತೇಶ್ವರ ದೇವಸ್ಥಾನದ ಸ್ವಾಮಿಗಳ ಸಮ್ಮುಖದಲ್ಲಿ ರಥೋತ್ಸವಕ್ಕೆ ಚಾಲನೆ ನೀಡಿದರು.

ಗ್ರಾಮದಮುಖಂಡರು, ಹಿರಿಯರು ಹಾಗೂ ಸಾವಿರಾರು ಭಕ್ತರ ಸಮ್ಮುಖದಲ್ಲಿ ಫೆ.17ರಂದು ಸಂಜೆ 6 ಗಂಟೆಗೆ ಅತಿ ವಿಜೃಂಭಣೆಯಿಂದ ಭವ್ಯ ರಥೋತ್ಸವ ನಡೆಯಿತು. ಈ ರಥದಲ್ಲಿ ಕೂಡುವ ಮಠದ ಸ್ವಾಮಿಗಳನ್ನು ಸಕಲ ವಾದ್ಯ ಮೇಳಗಳೊಂದಿಗೆ ಕುದುರೆಯ ಮೇಲೆ ಮೆರವಣಿಗೆ ಮೂಲಕ ಕರೆತಂದು ರಥದಲ್ಲಿ ಕೂರಿಸಿದರು. ಮುಂಬಾಗದಲ್ಲಿ ಗ್ರಾಮದ ಎಲ್ಲ ದೇವರುಗಳ ಪಲ್ಲಕ್ಕಿ, ಆರತಿ ಹಿಡಿದ ಮಹಿಳೆಯರು ಸಾಗಿದರು. ಭಕ್ತರು ರಥಕ್ಕೆ ಖಾರಿಕು, ಬಿಸ್ಕಟ್, ಬತ್ತಸ್ ಹಾಗೂ ಬಾಳೆಹಣ್ಣು ಎಸೆದು ತಮ್ಮ ಭಕ್ತಿಯನ್ನು ಸಮರ್ಪಿಸಿದರು.

ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡ ದೇವಸ್ಥಾನದ ಎಲ್ಲ ಕಾರ್ಯಕರ್ತರು ಸೇವಾ ಸಮಿತಿಯವರನ್ನು ಸತ್ಕರಿಸಿ ಗೌರವಿಸಲಾಯಿತು. ಹಾರೂಗೇರಿ ಪೊಲೀಸ್ ಠಾಣೆಯ ಸಿಬ್ಬಂದಿಯವರು ಯಾವುದೇ ಗಲಾಟೆಗಳಾಗದಂತೆ ಸೂಕ್ತ ಬಂದೋಬಸ್ತ್ ಕೈಗೊಂಡಿದ್ದರು. ಕಾರ್ಯಕ್ರಮವನ್ನು ಗೋಪಾಲ ಬೆಕ್ಕೇರಿ ನಿರೂಪಿಸಿ ವಂದಿಸಿದರು.

ದೇವಸ್ಥಾನದ ಸ್ವಾಮಿಗಳಾದ ಈರಯ್ಯಾ ಹಿರೇಮಠ, ಶಿವಯ್ಯಾ ಹಿರೇಮಠ, ಪಂಚಯ್ಯಾ ಹಿರೇಮಠ, ರಾಮಕೃಷ್ಣ ದಳವಾಯಿ, ಸಂಗಯ್ಯಾ ಹಿರೇಮಠ, ಶಿವಲಿಂಗಯ್ಯಾ ಹಿರೇಮಠ, ಶೇಖರ್ ಹಿರೇಮಠ, ಶಂಕರ್ ಸುತಾರ್, ಷಡಕ್ಷರಿ ಹಿರೇಮಠ, ನಿರುಪಾದಯ್ಯಾ ಹಿರೇಮಠ, ರವಿ ಹಿಡಕಲ್, ರವಿ ಚಿಂಚಲಿ, ಮಲ್ಲಯ್ಯಾ ಹಿರೇಮಠ, ಅರ್ಜುನ್ ಉಗಾರೆ, ರಾಜು ಪಾಟೀಲ, ರಾಮಗೌಡ ಪಾಟೀಲ, ಮಲ್ಲಪ್ಪ ಆಜೂರೆ, ಸತ್ಯಪ್ಪ ಬಡಶೇಟ್ಟಿ, ಬಿಮಶಪ್ಪ ಹೊಸಟ್ಟಿ, ಮಂಡಲಿಕ ದಳವಾಯಿ, ಬಸು ಹುಣಶ್ಯಾಳೆ, ವಿಶ್ವನಾಥ್ ಮುತ್ನಾಳ, ಬಸವರಾಜ ಹಾಲಳ್ಳಿ, ರಾಜು ಪಾಟೀಲ, ಮಾರುತಿ ಚಿಗರಿ ಸೇರಿದಂತೆ ಕಮಿಟಿಯ ಸದಸ್ಯರು, ಸೇವಾ ಸಮಿತಿ ಹಾಗೂ ಅಪಾರ ಭಕ್ತ ಸಮೂಹದವರು ಇದ್ದರು.



ವಿಜ್ಞಾನ ತಂತ್ರಜ್ಞಾನದ ಜೊತೆಗೆ ಹೆಜ್ಜೆ ಹಾಕೋಣ: ಕಾರ್ತಿಕ್

ಸವದತ್ತಿ: ಪ್ರಸ್ತುತ ವಿಜ್ಞಾನ ತಂತ್ರಜ್ಞಾನದ ಜೊತೆಗೆ ನಾವೆಲ್ಲ ಬದುಕುತ್ತಿದ್ದೇವೆ. ಈ ತಂತ್ರಜ್ಞಾನವನ್ನು ನಾವು ಅರಿಯದಿದ್ದರೆ ನಾವು ಡಿಜಿಟಲ್ ಅನಕ್ಷರಸ್ಥರೆನಿಸಿಕೊಳ್ಳುತ್ತೇವೆ. ಇಂದು ಪದವಿ ಪಡೆಯುವವರೆಲ್ಲರೂ ಇಂದಿನ ತಂತ್ರಜ್ಞಾನದ ಜೊತೆಗೆ ಹೆಜ್ಜೆ ಹಾಕಬೇಕಿದೆ ಎಂದು ಮೈಸೂರಿನ ಐಟಿ ಪ್ರೊಫೆಷನಲ್ ಟೆಕ್ನಿಕಲ್ ಟ್ರೈನರ್ ಬಿ.ಎನ್. ಕಾರ್ತಿಕ್ ಹೇಳಿದರು.

ಅವರು ಇಲ್ಲಿನ ಕೆ.ಎಲ್.ಇ. ಸಂಸ್ಥೆಯ ಎಸ್.ವಿ.ಎಸ್ ಬೆಳ್ಳುಬಿ ಮಹಾವಿದ್ಯಾಲಯದ ಬಿ.ಸಿ.ಎ.ವಿಭಾಗವು 'ಫ್ರಂಟೆಂಡ್ ಡೆವಲಪ್‌ಮೆಂಟ್' ವಿಷಯದ ಕುರಿತು ಏರ್ಪಡಿಸಿದ್ದ ಏಳು ದಿನಗಳ ಕಾಲದ ಸರ್ಟಿಫಿಕೇಷನ್ ಕೋರ್ಸಿನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿದರು.

ಪ್ರಸ್ತುತ ಡಿಜಿಟಲ್ ಮತ್ತು ವೆಬ್ ಟೆಕ್ನಾಲಜಿ ಯುಗದಲ್ಲಿ 'ಫ್ರಂಟೆಂಡ್ ಡೆವಲಪ್‌ಮೆಂಟ್' ಕೌಶಲ್ಯಗಳಿಗೆ ಹೆಚ್ಚಿನ ಬೇಡಿಕೆ ಇರುವ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳನ್ನು ಅಗತ್ಯಕ್ಕೆ ತಕ್ಕಂತೆ ಇಂದಿನ ತಂತ್ರಜ್ಞಾನಾಧಾರಿತ ಕಂಪನಿಗಳಿಗೆ ತಯಾರು ಮಾಡುವ ಉದ್ದೇಶದಿಂದ ಈ ತರಬೇತಿ ಹಮ್ಮಿಕೊಳ್ಳಲಾಗಿದೆ. ಈ ಕೋರ್ಸ್‌ನಲ್ಲಿ ಬಿಸಿಎ 2ನೇ ಸೆಮಿಸ್ಟರ್‌ನ 36 ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದರು.

HTML, CSS, Javascript ಬೇಸಿಕ್ಸ್, ರೆಸ್ಪಾನ್ಸಿವ್ ವೆಬ್ ಡಿಸೈನ್, UI ಡೆವಲಪ್‌ಮೆಂಟ್, ವೆಬ್ ಫ್ರೇಮ್‌ವರ್ಕ್ಸ್ ಮತ್ತು ಇಂಡಸ್ಟ್ರಿ ಯೂಸ್ ಕೇಸ್‌ಗಳ ಕುರಿತು ವಿವರವಾದ ಮಾಹಿತಿ ನೀಡಿದರು. ತರಬೇತಿ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಹ್ಯಾಂಡ್ಸ್ ಆನ್ ಸೆಷನ್ಸ್ ಮೂಲಕ ಪ್ರಾಕ್ಟಿಕಲ್ ನಾಲೆಡ್ಜ್ ನೀಡಲಾಗಿದ್ದು, ಮಿನಿ ಪ್ರಾಜೆಕ್ಟ್ ಮತ್ತು ಲೈವ್ ಡೆಮೋಗಳ ಮೂಲಕ ಕಲಿಕೆಯನ್ನು ಪರಿಣಾಮಕಾರಿಯಾಗಿಸಲಾಯಿತು. ವಿದ್ಯಾರ್ಥಿಗಳು ಸಂವಾದದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಸಂದೇಹಗಳನ್ನು ನಿವಾರಿಸಿಕೊಂಡರು. ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಡಾ.ಎನ್.ಆರ್.ಸವತಿಕರ, ಕಿರಣಕುಮಾರ ಲಮಾಣಿ, ಸ್ನೇಹಾ ಗಂಗಾಲ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಶಿವಲಿಂಗ ಶ್ರೀಗಳ ಆಶೀರ್ವಾದ ಪಡೆದ ಭಕ್ತರು

ಚನ್ನಮ್ಮನ ಕಿತ್ತೂರು: ಮಹಾನಂದಿಪುರ ಸುಕ್ಷೇತ್ರ ಚಿಕ್ಕನಂದಿಹಳ್ಳಿಯ ಬಸವೇಶ್ವರ ಜಾತ್ರಾ ಮಹೋತ್ಸವ ಹಾಗೂ ರಥೋತ್ಸವದ ಹಿನ್ನಲೆಯಲ್ಲಿ ದೇವಸ್ಥಾನಕ್ಕೆ ಫೆ.17 ರಂದು ಬೆಳಗ್ಗೆ 10 ಗಂಟೆಗೆ ಶಿವಲಿಂಗ ಸ್ವಾಮೀಜಿಗಳು ಆಗಮಿಸಿ ಭಕ್ತರು ಆಶೀರ್ವಾದ ನೀಡಿದರು.

ಬೆಳಗ್ಗೆ 10 ಘಂಟೆಗೆ ಆಗಮಿಸಿದ ಶಿವಲಿಂಗ ಸ್ವಾಮೀಜಿಗಳು ಬಸವೇಶ್ವರ, ಶಿವಲಿಂಗ ಮುರ್ತಿಯ ಪೂಜಾ ಹಾಗೂ ಭಕ್ತಿಯ ನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನಂತರ ದೇವಸ್ಥಾನದ ಮುಂಭಾಗದಲ್ಲಿರುವ ವೇದಿಕೆಯಲ್ಲಿ ಆಸೀನರಾಗಿ ಬಂದ ಭಕ್ತರಿಗೆ ಆಶೀರ್ವಾದ ಮಾಡುತ್ತಿದ್ದರು. ಶಾಸಕ ಬಾಬಾಸಾಹೇಬ ಪಾಟೀಲ, ಡಿಸಿಸಿಬ್ಯಾಂಕ್ ನಿರ್ದೇಶಕ ನಾನಾಸಾಹೇಬ ಪಾಟೀಲ, ರೋಹಿಣಿ ಪಾಟೀಲ, ಉಳವಪ್ಪ ಉಳ್ಳಾಗಡ್ಡಿ, ನಿಂಗಪ್ಪ ತಡಕೋಡ, ಕಿರಣ ವಾಳದ, ಸೋಮನಾಥ ಸೊಪ್ಪಿಮಠ, ಶ್ರೀಶೈಲ ಯಡಳ್ಳಿ, ಅಜ್ಜಪ್ಪ ಟೋಪನ್ನವರ, ಬಸನಗೌಡ ಪಾಟೀಲ, ಮುಂತಾದವರು ಸೇರಿದಂತೆ ನೂರಾರು ಭಕ್ತರು ಸ್ವಾಮೀಜಿಗಳ ಆಶೀರ್ವಾದ ಪಡೆದುಕೊಂಡರು.



ಇಂದು ಸಾಮೂಹಿಕ ವಿವಾಹ, ರಥೋತ್ಸವ

ಫೆ.18ರಂದು ಕಿತ್ತೂರಿನ ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳರಾಜಯೋಗಿಂದ್ರ ಸ್ವಾಮೀಜಿ ಹಾಗೂ ನಿಚ್ಚಣಕಿ ಮಡಿವಾಳೇಶ್ವರಮಠದ ಪಂಚಾಕ್ಷರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಬೆಳಗ್ಗೆ 10.45ಕ್ಕೆ ಸಾಮೂಹಿಕ ವಿವಾಹ ನಡೆಯುವುದು. ನಂತರ ಮಹಾಪ್ರಸಾದ, ಸಂಜೆ 4 ಗಂಟೆಗೆ ರಥೋತ್ಸವ ನಡೆಯುವುದು.


ಉಪವಾಸ, ಜಾಗರಣೆಯಿಂದ ಮನಸ್ಸು ಶುದ್ಧಿ: ಶ್ರೀಗಳು

ಸಂಕೇಶ್ವರ: ಗಡಿ ಭಾಗದಲ್ಲಿನ ಪ್ರಸಿದ್ಧ ನಿಡಸೋಸಿಯ ದುರದುಂಡೀಶ್ವರ ಸಿದ್ಧ ಸಂಸ್ಥಾನ ಮಠದಲ್ಲಿ ಮಹಾಶಿವರಾತ್ರಿ ಮಹೋತ್ಸವವನ್ನು ಅತ್ಯಂತ ಭಕ್ತಿ ಶ್ರದ್ಧೆಗಳಿಂದ ಆಚರಿಸಲಾಯಿತು. ಮಠದ ಆವರಣವನ್ನು ವಿಶೇಷವಾಗಿ ಅಲಂಕರಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದರ್ಶನ ಪಡೆದರು.

ಭಾನುವಾರ ಶಿವರಾತ್ರಿ ನಿಮಿತ್ತ ಮಠದಲ್ಲಿ ವಿಶೇಷ ಪೂಜಾಭಿಷೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಪ್ರಾತಃಕಾಲದಿಂದಲೂ ಶ್ರೀ ದುರದುಂಡೀಶ್ವರ ಗದ್ದುಗೆಗೆ ಅಭಿಷೇಕ ನಡೆಯಿತು.

ಭಾನುವಾರ ಸಂಜೆಯಿಂದ ಮರುದಿನ ಬೆಳಗಿನವರೆಗೆ ರಾತ್ರಿಯಿಡೀ ಭಜನೆ ಮತ್ತು ಜಾಗರಣೆ ಕಾರ್ಯಕ್ರಮ ಹಾಗೂ ಭಜನಾ ಮಂಡಳಿಗಳ ಶಿವಭಜನೆಗಳನ್ನು ಸಲ್ಲಿಸಿ, ಶಿವಸ್ತೋತ್ರಗಳು ಮತ್ತು ವೇದಘೋಷಗಳಿಂದ ಮಠದ ಆವರಣವು ಪವಿತ್ರವಾಯಿತು. ಭಕ್ತರು ಬಹುಸಂಖ್ಯೆಯಲ್ಲಿ ಭಜನೆಯಲ್ಲಿ ಭಾಗವಹಿಸಿ ಭಕ್ತಿಪೂರ್ವಕವಾಗಿ ಕೀರ್ತನೆ ಪಾಲ್ಗೊಂಡರು.

ಮಹಾಶಿವರಾತ್ರಿ ದಾಸೋಹ ಮಹೋತ್ಸವಕ್ಕೆ ಚಾಲನೆ ನೀಡಿ ಜಗದ್ಗುರು ಪಂಚಮ ಡಾ. ಶಿವಲಿಂಗೇಶ್ವರ ಸ್ವಾಮೀಜಿ ಮಾತನಾಡಿ,



ಮಹಾಶಿವರಾತ್ರಿಯು ಕೇವಲ ಒಂದು ಹಬ್ಬವಲ್ಲ, ಇದು ಆಧ್ಯಾತ್ಮಿಕ ಜಾಗೃತಿಯ ದಿನ. ಈ ದಿನ ಭಗವಾನ್ ಶಿವನ ತತ್ವವನ್ನು ಅರ್ಥಮಾಡಿಕೊಂಡು, ಜೀವನದಲ್ಲಿ ಸತ್ಯ, ಶಿವ, ಸುಂದರದ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಶಿವರಾತ್ರಿಯ ಉಪವಾಸ ಮತ್ತು ಜಾಗರಣೆಯು ಕೇವಲ ದೈಹಿಕ ಕ್ರಿಯೆಗಳಲ್ಲ, ಇದರ ಮೂಲಕ ನಾವು ನಮ್ಮ ಮನಸ್ಸನ್ನು ಶುದ್ಧಿಗೊಳಿಸಿ, ಇಂದ್ರಿಯಗಳನ್ನು ನಿಯಂತ್ರಿಸಿ, ಪರಮಾತ್ಮನೊಂದಿಗೆ ಏಕರೂಪರಾಗಬೇಕು. ಓಂ ನಮಃ ಶಿವಾಯ ಮಂತ್ರದ ಜಪದಿಂದ ಮನಸ್ಸಿಗೆ ಶಾಂತಿ ಮತ್ತು ಶಕ್ತಿ ಪ್ರಾಪ್ತವಾಗುತ್ತದೆ ಎಂದರು.

ಬೆಳ್ಳಿ ಪಲ್ಲಕ್ಕಿ ಉತ್ಸವ: ಮಹೋತ್ಸವದ ಮುಖ್ಯಾಂಶವೆಂದರೆ ಸೋಮವಾರ ಬೆಳಗ್ಗೆ ನಡೆದ ಭವ್ಯ ಬೆಳ್ಳಿ ಪಲ್ಲಕ್ಕಿ ಉತ್ಸವ. ಪುರಾತನ ಕಾಲದಿಂದಲೂ ಮಠದಲ್ಲಿ ಸಂರಕ್ಷಿಸಲಾಗಿರುವ ಅಮೂಲ್ಯವಾದ ಬೆಳ್ಳಿಯ ಪಲ್ಲಕ್ಕಿಯಲ್ಲಿ ಶ್ರೀ ದುರದುಂಡೀಶ್ವರ ದೇವರ ಉತ್ಸವ ಮೂರ್ತಿಯನ್ನು ಅಲಂಕರಿಸಿ ಶೋಭಾಯಾತ್ರೆ ನಡೆಸಲಾಯಿತು.

ವೇದಘೋಷ, ಮಂಗಳವಾದ್ಯ, ತಾಳವಾದ್ಯಗಳ ನಡುವೆ ಪಲ್ಲಕ್ಕಿ ಶೋಭಾಯಾತ್ರೆ ಸಾಗಿತು. ಸಾವಿರಾರು ಭಕ್ತರು ಪಲ್ಲಕ್ಕಿ ಉತ್ಸವದಲ್ಲಿ ಭಾಗವಹಿಸಿ ದರ್ಶನ ಪಡೆದರು. ಪಲ್ಲಕ್ಕಿಯ ಮೇಲೆ ಅದ್ಭುತವಾದ ದೃಶ್ಯ ನಿರ್ಮಾಣವಾಗಿತ್ತು.


ಸಾಂಪ್ರದಾಯಿಕ ಕುದುರೆ ಕುಣಿತ: ಬೆಳ್ಳಿ ಪಲ್ಲಕ್ಕಿ ಉತ್ಸವದ ವಿಶೇಷ ಆಕರ್ಷಣೆಯೆಂದರೆ ಸಾಂಪ್ರದಾಯಿಕ ಕುದುರೆ ಕುಣಿತ. ವಿಶೇಷವಾಗಿ ತರಬೇತಿ ಪಡೆದ ಕುದುರೆಗಳನ್ನು ರಂಗು ರಂಗಿನ ಅಲಂಕಾರಗಳಿಂದ ಅಲಂಕರಿಸಲಾಗಿತ್ತು. ಪರಿಚಯಸ್ತ ಕುದುರೆ ಕುಣಿತಗಾರರು ಲಯಬದ್ಧವಾಗಿ ತಮ್ಮ ಕುದುರೆಗಳನ್ನು ನರ್ತಿಸುತ್ತಾ, ವಿವಿಧ ಕಲಾಕೃತಿಗಳನ್ನು ಪ್ರದರ್ಶಿಸಿದರು.

ಮಹೋತ್ಸವದಲ್ಲಿ ಉತ್ತರಾಧಿಕಾರಿ ನಿಜಲಿಂಗೇಶ್ವರ ಸ್ವಾಮೀಜಿ, ಚಿಕ್ಕೋಡಿ ಸಂಪದನಾ ಸ್ವಾಮೀಜಿ, ಬಸವ ಚೇತನ ದೇವರು ಸೇರಿದಂತೆ ಗಡಿಭಾಗದ ಸಹಸ್ರಾರು ಭಕ್ತರು ಸ್ವಪ್ರೇರಿತ ಭಕ್ತಿಯ ಕಾರ್ಯಗಳಿಂದ ಮಹೋತ್ಸವವನ್ನು ಯಶಸ್ವಿಯಾಗಿಸಿದರು.

ಹೆಣ್ಣುಮಕ್ಕಳ ಕನಸುಗಳಿಗೆ ಪ್ರೋತ್ಸಾಹಿಸಿ: ಸಂಸದೆ ಜಾರಕಿಹೊಳಿ

ಕುಡಚಿ: ಮಹಿಳೆಯರು ಕೂಡ ಪದವಿ ಸ್ನಾತಕೋತ್ತರ ಪದವಿ, ಚಿನ್ನದ ಪದಕಗಳನ್ನು ಪಡೆದು ಸಾಧನೆ ಮಾಡುತ್ತಿದ್ದಾರೆ. ಆದು ಒಳ್ಳೆಯ ವಿಚಾರ. ಆದರೆ, ಮದುವೆಯಾದ ಮೇಲೆ ಪದವಿಗಳನ್ನು ಪಡೆದುಕೊಂಡರು ಕೂಡ ಅವರ ಕಂಡ ಕನಸುಗಳನ್ನು ಈಡೇರಿಸಕ್ಕಾಗಲ್ಲ ಹಾಗಾಗಿಅವಾಗ ಪುರುಷರ ಪಾತ್ರ ಬಹಳ ಪ್ರಮುಖವಾಗಿರುತ್ತದೆ. ಅವರು ಸಹಕಾರ ಮಾಡಿದಾಗಲೇ ಹೆಣ್ಣು ಮಕ್ಕಳು ತಮ್ಮ ವೈಯಕ್ತಿಕ ಜೀವನ ಹಾಗೂ ವೃತ್ತಿ ಜೀವನವನ್ನು ಮುಂದುವರಿಸಿಕೊಂಡು ಹೋಗಬಹುದಾಗಿದೆ. ಇವತ್ತಿನ ದಿನಗಳಲ್ಲಿ ಪುರುಷರಿಗಾಗಲಿ ಮಹಿಳೆಯರಿಗಾಗಿ ಸಾಕಷ್ಟು ಸೌಲಭ್ಯಗಳ ಇವೆ ಅದನ್ನು ಬಳಸಿಕೊಂಡು ಹೆಣ್ಣುಮಕ್ಕಳ ಕನಸಿಗಳಿಗೆ ಸಹಕರಿಸಿ ಯಶಸ್ವಿ ಜೀವನ ಮಾಡುವಂತೆ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಸಲಹೆ ನೀಡಿದರು.

ಕುಡಚಿ ಪಟ್ಟಣದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಹಮ್ಮಿಕೊಂಡ ಶಿವನ ಡಂಗೂರ ಮಹಾಶಿವರಾತ್ರಿ 2026ರ



ಐದನೇಯ ಕೊನೆಯ ದಿನ ಮಹಿಳಾ ಸಬಲೀಕರಣ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ದೀಪ ಪ್ರಜ್ವಲನೆ ಹಾಗೂ ಶಿವ ಧ್ವಜ ಹಾರಿಸುವ ಮೂಲಕ ಅವರು ಮಾತನಾಡಿದರು.

ನಂತರ ರಾಜಯೋಗಿನಿ ಪುಷ್ಪಾ ಅಕ್ಕನವರು ಮಾತನಾಡಿ, ತೊಟ್ಟಿಲು ತೂಗುಕೈ ಜಗತ್ತನ್ನೇ ತೂಗುತ್ತದೆ. ಅಂತಹ ಶಕ್ತಿ ಹೆಣ್ಣಿಗೆ ಇದೆ ಸಾವಿತ್ರಿಬಾಯಿ ಫುಲೆ ಅಂದು ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಪಡೆಯಲು ಹೋರಾಟ ಮಾಡಿರಲಿಲ್ಲ ಅಂದರೆ ಇವತ್ತು ನಾವು ಯಾರು ಈ ವೇದಿಕೆ ಮೇಲೆ ಇರುತ್ತಿರದೆ ನಾಲ್ಕು ಗೋಡೆ ಮಧ್ಯದಲ್ಲಿ ಉಳಿಯಬೇಕಾಗಿತ್ತು ಅವರು ಪಡಬಾರದಂತಹ ಕಷ್ಟಗಳನ್ನು ಅನುಭವಿಸಿ ಭಾರತದ ಮಹಿಳೆಯರಿಗೆ ಹಕ್ಕನ್ನು ಒದಗಿಸಿಕೊಟ್ಟ ದಿಟ್ಟ ಮಹಿಳೆಯಾಗಿದ್ದಾಳೆ. ಎಲ್ಲೇ ಹೋದರು ನಾವು ಭಾರತ್ ಮಾತಾ ಕಿ ಜೈ ಎಂದು ಹೇಳುತ್ತೇವೆ. ಹೀಗೆ ಅನೇಕ ಕಡೆ ಹೆಣ್ಣಿಗೆ ಮಹತ್ವ ಇದ್ದರೂ ಕೂಡ ವಿಪರ್ಯಾಸದ ಸಂಗತಿ ಎಂದರೆ ಎಲ್ಲರೂ ಗಂಡು ಮಗನೇ ಬೇಕು ಅಂತ ಹೇಳುತ್ತಾರೆ ಎಂದರು.

ಗೌರವ ಅತಿಥಿಯಾಗಿ ಡಾ.ರತ್ನಾ ಬಾಳಪ್ಪನವರ ಮಹಿಳೆಯರ ಕುರಿತು ಮಾತನಾಡಿದರು. ಮೊದಲಿಗೆ ಆಕರ್ಷಣೆಯ ಕೇಂದ್ರವಾದ ತೆಂಗಿನ ಕಾಯಿಯಲ್ಲಿ ನಿರ್ಮಾಣ ಮಾಡಿದ 21 ಅಡಿ ಎತ್ತರದ ಶಿವಲಿಂಗಕ್ಕೆ ಪೂಜೆ ಸಲ್ಲಿಸಿ, ಭವ್ಯ ಮಂಟಪಗಳಲ್ಲಿ ನಿರ್ಮಿಸಿರುವ ಹನ್ನೆರಡು ಜ್ಯೋತಿರ್ಲಿಂಗಗಳ ದರ್ಶನ ಪಡೆದರು. ಕಾರ್ಯಕ್ರಮದಲ್ಲಿ ರಾಯಲ್ ಇಂಡಿಯನ್ ಅಕ್ಯಾಡಮಿ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

ಕೊನೆಯದಾಗಿ ಐದು ದಿನಗಳ ಮಹಾಶಿವರಾತ್ರಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಪ್ರತ್ಯಕ್ಷವಾಗಿ, ಪರೋಕ್ಷವಾಗೀ ಸಹಕರಿಸಿದ ಸರ್ವರನ್ನು ಸತ್ಕರಿಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಭಾಗಿಯಾದ ಎಲ್ಲ ಶಿವಭಕ್ತರಿಗೂ ಶಿವ ಬ್ರಹ್ಮಾ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

ಅಧ್ಯಕ್ಷತೆಯನ್ನು ರಾಜಯೋಗಿನಿ ಬಿ.ಕೆ.ವಿದ್ಯಾ ಅಕ್ಕನವರು, ಡಾ.ರತ್ನಾ ಬಾಳಪ್ಪನವರ, ಅರ್ಜುನ ನಾಯಿಕವಾಡಿ, ಪಿ.ಎಸ್.ಐ ರೂಪಾ ಗುಡೋಡಗಿ, ಕಾಂಚನಾ ಕದ್ದು, ಡಾ.ಸುಷ್ಮಾ ಪಾಟೀಲ, ಖುಷಿ ಬುಸಗುಂಡೆ, ಅಭಿಯಂತೆ ಕು. ಕರುಣಾ ಕದ್ದು, ನ್ಯಾಯವಾದಿಗಳಾದ ಪ್ರಶಾಂತಿನಿ ಸನದಿ, ವಿದ್ಯಾ ಸಾಸಣೆ, ಅಶ್ವಿನಿ ಕಟ್ಟಿಮನಿ, ಅಪೂರ್ವಾ ಬಸಾಪೂರೆ ಉಪಸ್ಥಿತರಿದ್ದರು.

ಬಿ.ಕೆ. ಶೋಭಾ ಸನದಿ ಸ್ವಾಗತಿಸಿದರೆ, ಯಲ್ಲಪ್ಪ ಯಲ್ಲಟ್ಟಿ ನಿರೂಪಿಸಿದರು.

ಕಿರುಸುದ್ದಿ

ರಾಜ್ಯಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿ



ರಾಯಬಾಗ: ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ರಾಜ್ಯ ಘಟಕ ಹಾಗೂ ಗದಗ ಜಿಲ್ಲಾ ಘಟಕ ಇವರ ವತಿಯಿಂದ ಫೆ.15ರಂದು ಗದಗ ಶಹರನಲ್ಲಿ ನಡೆದ ಸಾವಿತ್ರಿಬಾಯಿ ಫುಲೆ ಅವರ 195ನೇ ಜಯಂತಿ ಅಂಗವಾಗಿ ಶಾಲಾ ಶಿಕ್ಷಣ ಇಲಾಖೆಯಲ್ಲಿ ಚಿತ್ರಕಲಾ ಶಿಕ್ಷಕಿಯಾಗಿ ಉತ್ತಮ ಸೇವೆ ಸಲ್ಲಿಸಿದ್ದಕ್ಕಾಗಿ ರಾಯಬಾಗ ತಾಲೂಕಿನ ಚಿಂಚಲಿ ಪಟ್ಟಣದವರಾದ ವಿದ್ಯಾ ದೇಶಪಾಂಡೆ ಸರ್ಕಾರಿ ಉರ್ದು ಮಾದರಿ ಪ್ರಾಯೋಗಿಕ ಶಾಲೆ ಟಿಸಿಡಬ್ಲ್ಯೂ ಧಾರವಾಡ ಅವರಿಗೆ ರಾಜ್ಯಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಶಿಕ್ಷಕಿಯನ್ನು ಶಾಲಾ ಮುಖ್ಯೋಪಾಧ್ಯಾಯರು ಸಿಬ್ಬಂದಿ ವರ್ಗ ಹಾಗೂ ಸ್ನೇಹಿತರು ಅಭಿನಂದಿಸಿರುತ್ತಾರೆ.

ಇಂದಿನಿಂದ 3ನೇ ಕನ್ನಡ ಸಾಹಿತ್ಯ ಸಮ್ಮೇಳನ

ಯರಗಟ್ಟಿ: ಕನ್ನಡ ಸಾಹಿತ್ಯ ಪರಿಷತ್ತಿನ ಯರಗಟ್ಟಿ ತಾಲೂಕು ಘಟಕದ ವತಿಯಿಂದ ಯರಗಟ್ಟಿ ತಾಲೂಕು 3ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಫೆ.18ರಂದು ಸಮೀಪದ ತಲ್ಲೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಆವರಣದಲ್ಲಿ ಆಯೋಜಿಸಲಾಗಿದೆ.

ಬೆಳಿಗ್ಗೆ 7.30ಕ್ಕೆ ರಾಷ್ಟ್ರಧ್ವಜಾರೋಹಣವನ್ನು ಮಾಜಿ ಸೈನಿಕ ಬಸಪ್ಪ ಅಂಗಡಿಯವರು, ಕನ್ನಡ ಸಾಹಿತ್ಯ ಪರಿಷತ್ತಿನ ಧ್ವಜಾರೋಹಣವನ್ನು ಜಿಲ್ಲಾ ಅಧ್ಯಕ್ಷೆ ಮಂಗಲಾ ಮೆಟಗುಡ್ಡ ಹಾಗೂ ನಾಡ ಧ್ವಜಾರೋಹಣವನ್ನು ತಾಲೂಕು ಅಧ್ಯಕ್ಷ ತಮ್ಮಣ್ಣ ಕಾಮಣ್ಣವರ ನೆರವೇರಿಸುವರು. ಸ್ವಾತಂತ್ರ್ಯ ಹೋರಾಟಗಾರ ತಲ್ಲೂರು ರಾಯನಗೌಡ ಪಾಟೀಲ ಅವರ ಪುತ್ಥಳಿಯನ್ನು ಸೌದತ್ತಿ ಎಲ್ಲಮ್ಮ ವಿಧಾನಸಭಾ ಕ್ಷೇತ್ರದ ಶಾಸಕ ವಿಶ್ವಾಸ ವೈದ್ಯ ಅವರು ಅನಾವರಣಗೊಳಿಸಲಿದ್ದಾರೆ. ಹಿರಿಯ ಸಾಹಿತಿ ನೀಲಕಂಠ ಮಲಕಣ್ಣವರ ಅವರ ಸರ್ವಾಧ್ಯಕ್ಷತೆಯಲ್ಲಿ ನಡೆಯುವ ಸಮ್ಮೇಳನವನ್ನು ಡಾ. ಸಿ.ಕೆ. ನಾವಲಗಿಯವರು ಉದ್ಘಾಟಿಸಲಿದ್ದಾರೆ. ಸವದತ್ತಿ ವಿಧಾನಸಭಾ ಕ್ಷೇತ್ರದ ಶಾಸಕ ವಿಶ್ವಾಸ ವೈದ್ಯ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಡಾ. ರಾಜಶೇಖರ ಬಿರಾದ ಅವರ ಯರಗಟ್ಟಿ ಕಾವ್ಯ ಕುಸುಮ ಹಾಗೂ ಆರ್. ಎಸ್. ಕಲ್ಲಣ್ಣವರ ಅವರ ಮಕರಂದ ಕೃತಿಗಳು ಲೋಕಾರ್ಪಣೆಗೊಳ್ಳಲಿವೆ. ನಂತರ ಕವಿಗೋಷ್ಠಿ, ಚಿಂತಾನಗೋಷ್ಠಿಗಳು ನಡೆಯಲಿವೆ. ತಾಲೂಕಿನ ಹಿರಿ-ಕಿರಿಯ ಕವಿಗಳು ತಮ್ಮ ಸ್ವರಚಿತ ಕವಿತೆಗಳನ್ನು ವಾಚನ ಮಾಡಲಿದ್ದಾರೆ. ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಗುವುದು.ತಾಲೂಕಿನ ಎಲ್ಲಾ ಕನ್ನಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕು ಎಂದು ಕಾರ್ಯದರ್ಶಿ ದೇವೇಂದ್ರ ಕಮ್ಮಾರ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಟ್ರ್ಯಾಕ್ಟರ್‌ಗಳಲ್ಲಿನ ಧ್ವನಿವರ್ಧಕ ತೆರವುಗೊಳಿಸಲು ಆದೇಶ



ಯಮಕನಮರಡಿ: ಟ್ರ್ಯಾಕ್ಟರ್‌ಗಳಿಗೆ ಅಳವಡಿಸಲಾದ ಧ್ವನಿವರ್ಧಕಗಳನ್ನು ಪೊಲೀಸರು ತೆರವುಗೊಳಿಸಲು ಪೊಲೀಸ್ ಇಲಾಖೆ ಆದೇಶಿಸಿದ್ದು ಈಗಾಗಲೇ ಕೆಲವೊಂದು ಟ್ರ್ಯಾಕ್ಟರ್‌ಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ ಎಂದು ಯಮಕನಮರಡಿ ಪೊಲೀಸರು ತಿಳಿಸಿದ್ದಾರೆ.

ನಿಧನ ಸುದ್ದಿ

ಬಾಜಿರಾವ ಸುಳಕುಡೆ



ಚಿಕ್ಕೋಡಿ: ತಾಲೂಕಿನ ಕರೋಶಿ ಗ್ರಾಮದ ನಿವಾಸಿ ಬಾಜಿರಾವ ಸುಳಕುಡೆ (36) ಮಂಗಳವಾರ ನಿಧನರಾದರು. ಯಕೃತ್ತು ಸಮಸ್ಯೆಯಿಂದ ಬಳಲುತ್ತಿದ್ದ ಸಹೋದರ ಬಾಜಿರಾವ ಅವರಿಗೆ ಕಳೆದ ಮೂರು ವರ್ಷಗಳ ಹಿಂದೆ ಪತ್ರಕರ್ತ ಕಾಶಿನಾಥ ಸುಳಕುಡೆ ದಾನಿಗಳಿಂದ ಹಣ ಸಂಗ್ರಹಿಸಿ 20 ಲಕ್ಷ ರೂ. ಕ್ಕೂ ಹೆಚ್ಚು ವೆಚ್ಚ ಮಾಡಿ ಚಿಕಿತ್ಸೆ ಕೊಡಿಸಿ ಮಾನವೀಯತೆ ಮೆರೆದಿದ್ದರು. ಮೃತರಿಗೆ ಪತ್ರಕರ್ತ ಸಹೋದರ ಕಾಶಿನಾಥ ಸುಳಕುಡೆ ಸೇರಿದಂತೆ ತಾಯಿ, ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಹೊಂದಿದ್ದಾರೆ.



ಸವದತ್ತಿ: ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ 33 ಕೋಟಿ ರೂ.ವೆಚ್ಚದ ಸಾರ್ವಜನಿಕ ಆಸ್ಪತ್ರೆಯ ಸಂಕುಸ್ಥಾಪನೆ ಸಮಾರಂಭಕ್ಕೆ ಆಗಮಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರನ್ನು ಹಾಗೂ ಶಾಸಕ ವಿಶ್ವಾಸ ವೈದ್ಯರವರನ್ನು ಸವದತ್ತಿ ತಾಲೂಕು ಅಖಿಲ ಬ್ರಾಹ್ಮಣ ಸಮಾಜದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಅಖಿಲ ಬ್ರಾಹ್ಮಣ ಸಮಾಜದ ಮುಖಂಡರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಮಿಸ್ ಕಾಲ್ ಮಾಡಿರಿ ಉತ್ತರ ಪಡೆಯಿರಿ

ಗೋಕಾಕ: ಎಸ್‌ಎಸ್‌ಎಲ್‌ಸಿ ಫಲಿತಾಂಶದ ಸುಧಾರಣೆಗೆ ಮಿಸ್ ಕಾಲ್ ಮಾಡಿ ಉತ್ತರ ಪಡೆಯಿರಿ ಕಾರ್ಯಕ್ರಮ ಸಹಕಾರಿಯಾಗಿದೆ ಎಂದು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಪರಶುರಾಮ ಗಸ್ತೆ ಹೇಳಿದರು.

ಸೋಮವಾರದಂದು ನಗರದ ಮಯೂರ ಶಾಲೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಲಯ ಗೋಕಾಕ ವತಿಯಿಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಮಿಸ್ ಕಾಲ್ ಮಾಡಿರಿ ಉತ್ತರ ಪಡೆಯಿರಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ 11 ವರ್ಷಗಳಿಂದ ಈ ಕಾರ್ಯಕ್ರಮ ಅದೆ ಉತ್ಸಾಹದಿಂದ ನಡೆಯುತ್ತಿರುವುದು ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲಕರವಾಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಪಾಲಕರು, ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಸವಾಲಿನ ಕಾರ್ಯವಾಗಿರುತ್ತದೆ.ಯಾವುದೇ ಕಾರ್ಯದಲ್ಲಿ ಯಾರು ಪರಿಪೂರ್ಣರಲ್ಲ, ಇಂತಹ ವಿನೂತನ ಕಾರ್ಯಕ್ರಮಗಳು ಪದೆ ಪದೇ ಜರುಗುವುದರಿಂದ ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಲಾಭ ಪಡೆದುಕೊಳ್ಳಬೇಕು. ಗೋಕಾಕ ಶೈಕ್ಷಣಿಕ ವಲಯ ವಿದ್ಯಾರ್ಥಿಗಳಿಗಾಗಿ ನಿರಂತರವಾಗಿ ಬೇರೆ ಬೇರೆ ಚಟುವಟಿಕೆಗಳು ಮಾಡುವ ಮೂಲಕ ಇತರರಿಗೆ ಮಾದರಿಯಾಗಿದೆ ಎಂದು ಹೇಳಿದರು. ಅಧ್ಯಕ್ಷತೆಯನ್ನು ಶಿಕ್ಷಣಾಧಿಕಾರಿ ಪ್ರಕಾಶ್ ಹಿರೇಮಠ ವಹಿಸಿದ್ದರು. ಸಿಡಿಪಿಓ ಡಿ.ಎಸ್.ಕೂಡವಕ್ಕಲಿಗ, ಎಸ್.ವ್ಹಿ.ಕುಲಕರ್ಣಿ, ಎಂ.ಎಲ್. ಜನ್ಮಟ್ಟಿ, ಎಂ.ಬಿ.ಬಳಿಗಾರ, ಪ್ರಾಚಾರ್ಯ ಸುಚಿತ್ರಾ ಹತಪಾಕಿ, ಎ.ಎನ್.ತೋಟಗಿ, ಬಸವರಾಜ ಮುರಗೋಡ, ಬಿ.ಟಿ.ಭಡವಣಿ, ಅಶ್ವಥ ದಳವಾಯಿ ಉಪಸ್ಥಿತರಿದ್ದರು.



ಗೋಕಾಕ: ನಗರದ ಮಯೂರ ಶಾಲೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಲಯ ಗೋಕಾಕ ವತಿಯಿಂದ ಸೋಮವಾರ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಮಿಸ್ ಕಾಲ್ ಮಾಡಿರಿ ಉತ್ತರ ಪಡೆಯಿರಿ ಕಾರ್ಯಕ್ರಮವನ್ನು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಪರಶುರಾಮ ಗಸ್ತೆ ಉದ್ಘಾಟಿಸಿದರು. ಶಿಕ್ಷಣಾಧಿಕಾರಿ ಪ್ರಕಾಶ್ ಹಿರೇಮಠ, ಸಿಡಿಪಿಓ ಡಿ.ಎಸ್.ಕೂಡವಕ್ಕಲಿಗ, ಎಸ್.ವ್ಹಿ.ಕುಲಕರ್ಣಿ, ಎಂ.ಎಲ್.ಜನ್ಮಟ್ಟಿ, ಎಂ.ಬಿ.ಬಳಿಗಾರ, ಪ್ರಾಚಾರ್ಯ ಸುಚಿತ್ರಾ, ಹತಪಾಕಿ, ಎ.ಎನ್.ತೋಟಗಿ, ಬಸವರಾಜ ಮುರಗೋಡ, ಬಿ.ಟಿ.ಭಡವಣಿ, ಅಶ್ವಥ ದಳವಾಯಿ ಉಪಸ್ಥಿತರಿದ್ದರು.

ಬಾಲ್ಯ ವಿವಾಹ ತಡೆಗೆ ಸಾಮಾಜಿಕ ಅರಿವು ಅತ್ಯಗತ್ಯ: ಸಂದೀಪ ಪಾಟೀಲ

ಬೆಳಗಾವಿ: ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸ್ಪಂದನ ಅಸೋಸಿಯೇಶನ್ ಇವರ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಕನ್ನಡ ಸಾಹಿತ್ಯ ಭವನದ ಆವರಣದಲ್ಲಿ ನಡೆದ ಬಾಲ್ಯ ವಿವಾಹ ಮುಕ್ತಿ ರಥ ಜಾಥಾ ಕಾರ್ಯಕ್ರಮಕ್ಕೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಂದೀಪ ಪಾಟೀಲ ಅವರು ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಬಾಲ್ಯ ವಿವಾಹ ಮತ್ತು ಬಾಲ ಕಾರ್ಮಿಕ ಪದ್ಧತಿಯನ್ನು ನಿಷೇಧಿಸಬೇಕು. ಸರ್ಕಾರ ಹೆಣ್ಣುಮಕ್ಕಳಿಗೆ 18 ಹಾಗೂ ಗಂಡು ಮಕ್ಕಳಿಗೆ 21 ವರ್ಷ ಪೂರ್ಣಗೊಂಡ ಮೇಲೆ ವಿವಾಹ ಮಾಡಬೇಕು ಎಂದು ಕಾಯ್ದೆ ಜಾರಿಯಲ್ಲಿದೆ. ಯುವಕ-ಯುವತಿಯರು ದೈಹಿಕ ಸದೃಢವಾಗಿ ಬೆಳೆದ ನಂತರ ವಿವಾಹ ಮಾಡಬೇಕು. ಇಲ್ಲವಾದಲ್ಲಿ ಅವರ ದೈಹಿಕ ಬೆಳವಣಿಗೆ ಮೇಲೆ ಪರಿಣಾಮ ಬೀರುತ್ತದೆ. ನಮ್ಮ ಕುಟುಂಬದ ಜೊತೆಗೆ ಸಮಾಜದ ಅಭಿವೃದ್ಧಿ ಕೈಜೋಡಿಸಬೇಕು. ಕೇವಲ ನಮಗಾಗಿ ಬದುಕುವುದಲ್ಲ ಸಮಾಜಕ್ಕಾಗಿ ಬದುಕಬೇಕು ಎಂದು ಸಂದೀಪ ಪಾಟೀಲ ತಿಳಿಸಿದರು.

ಶಾಲಾ, ಕಾಲೇಜು ಬಾಲ್ಯ ವಿವಾಹದ ಅರಿವು ಪಡೆದುಕೊಳ್ಳಬೇಕು. ನಿಮ್ಮ ಸುತ್ತ-ಮುತ್ತ ಬಾಲ್ಯ ವಿವಾಹಗಳು ಕಂಡುಬಂದಲ್ಲಿ ಕೂಡಲೆ ಸ್ಥಳೀಯ ಪೊಲೀಸ್ ಕರೆ ಮಾಡಿ ಅಥವಾ ಮಕ್ಕಳ ರಕ್ಷಣಾ ಸಹಾಯವಾಣಿ ಸಂಪರ್ಕಿಸಿ ಬಾಲ್ಯ ವಿವಾಹ ತಡೆಗೆ ಮುಂದಾಗಬೇಕು ಎಂದು ಡಿಸಿಪಿ ನಾರಾಯಣ ಭರಮಣಿ ಅವರು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಬಾಲ್ಯ ವಿವಾಹ ಕುರಿತು ಬಿದಿನಾಟಕ ಮಾಡಿದರು.



» ಕನ್ನಡ ಸಾಹಿತ್ಯ ಭವನದ ಆವರಣದಲ್ಲಿ ನಡೆದ ಬಾಲ್ಯ ವಿವಾಹ ಮುಕ್ತಿ ರಥ ಜಾಥಾ ಕಾರ್ಯಕ್ರಮಕ್ಕೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಂದೀಪ ಪಾಟೀಲ ಅವರು ಚಾಲನೆ ನೀಡಿದರು.

ಮತ್ತು ರಾಣಿ ಚನ್ನಮ್ಮ ವೃತ್ತದಿಂದ ಬೋಗರವೆಸ್ ವರೆಗೂ ಮಕ್ಕಳ ರಕ್ಷಣೆ ನಮ್ಮೆಲ್ಲರ ಹೊಣೆ, ಬಾಲ್ಯ ವಿವಾಹ ನಿಲ್ಲಿಸಿ ಅವರನ್ನು ಶಾಲೆಗೆ ಕಳುಹಿಸಿ, ಮಕ್ಕಳ ಮೇಲೆ ಆಗುವ ಹಿಂಸೆ ಮತ್ತು ದೌರ್ಜನ್ಯವನ್ನು ಕೊನೆಗೊಳಿಸಿ ನಾಮಫಲಕವನ್ನು ಪ್ರದರ್ಶಿಸುತ್ತ ಕಾಲ್ನಡಿಗೆ ಮೂಲಕ ಜಾತಾ ಹಮ್ಮಿಕೊಳ್ಳಲಾಯಿತು.

ಈ ವೇಳೆ ಸ್ಪಂದನ ಸಂಸ್ಥೆ ಕಾರ್ಯದರ್ಶಿ ವಿ. ಸುಶೀಲ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸಂತೋಷ ಪಾಟೀಲ ಹಾಗೂ ರಾಣಿ ಚನ್ನಮ್ಮ ಪ್ರಾಧ್ಯಾಪಕಿ ದೇವತಾ ಗಸ್ತಿ ಸೇರಿದಂತೆ ಎನ್. ಎಸ್.ಎಸ್ ಘಟಕ 2 ಸ್ವಯಂ ಸೇವಕರು, ವಿವಿಧ ಗ್ರಾಮೀಣ ಮಹಿಳೆಯರು ಜಾಥಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮಕ್ಕಳಿಗೆ ಶಿಕ್ಷಣದೊಂದಿಗೆ ಸಂಸ್ಕಾರ ನೀಡಿ

ಚಿಕ್ಕೋಡಿ: ಡಿಜಿಟಲ್ ಯುಗದಲ್ಲಿ ಮಾಹಿತಿಗೆ ಕೊರತೆ ಇಲ್ಲ, ಆದರೆ, ಶಿಕ್ಷಣದೊಂದಿಗೆ ಸಂಸ್ಕಾರ ನೀಡುವುದು ಇಂದಿನ ಅವಶ್ಯಕತೆಯಾಗಬೇಕಿದೆ ಎಂದು ಕಲಬುರ್ಗಿಯ ಕೇಂದ್ರೀಯ ವಿಶ್ವವಿದ್ಯಾಲಯದ ಮುಖ್ಯಸ್ಥ ಡಾ. ಜಿ.ಆರ್. ಅಂಗಡಿ ಹೇಳಿದರು.

ನಿಪ್ಪಾಣಿ ನಗರದ ಕೆಎಲ್‌ಇ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ ಸಭಾಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಬುದ್ಧಿಮಟ್ಟ ಅರಿತು ಶಿಕ್ಷಕರು ಬೋಧಿಸಬೇಕು. ಪ್ರಶಿಕ್ಷಣಾರ್ಥಿಗಳಾದ ತಾವು ಕಲಿಕೆಯ ಮಜಲುಗಳನ್ನು ಅರ್ಥ ಮಾಡಿಕೊಳ್ಳಬೇಕು. ಮಕ್ಕಳ ಮನಸ್ಸು ಅರಳಿಸುವ ಕಲಿಕೆ ತಮ್ಮದಾಗಿರಬೇಕು ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಬೈಲಹೊಂಗಲ ರಾಣಿಚನ್ನಮ್ಮ ಶಿಕ್ಷಣ ಮಹಾವಿದ್ಯಾಲಯ ನಿವೃತ್ತ ಉಪನ್ಯಾಸಕ ಪಿ.ಎಂ. ಅಯಾಚಿತ ಮಾತನಾಡಿ, ಕಲಿಕೆಯು ಪ್ರತಿಯೊಬ್ಬ ವ್ಯಕ್ತಿಯ ನಿರಂತರ ಪ್ರಕ್ರಿಯಾಗಿದೆ. ಇದಕ್ಕೆ ಕೊನೆ ಎಂಬುವುದಿಲ್ಲ, ಶಿಕ್ಷಕರಾಗಲೀ, ವಿದ್ಯಾರ್ಥಿಗಳಾಗಲೀ ಹೊಸ ಹೊಸ ವಿಷಯ ಗ್ರಹಿಸಿಕೊಳ್ಳಬೇಕು. ಶಿಕ್ಷಣದಿಂದಲೇ ಬದಲಾವಣೆ ಎಂಬುವದನ್ನು ಪ್ರಶಿಕ್ಷಣಾರ್ಥಿಗಳು ಅರಿತುಕೊಳ್ಳಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಬಿ.ಬಿ. ಪೊಲೀಸಪಾಟೀಲ ಮಾತನಾಡಿ, ಪ್ರಶಿಕ್ಷಣಾರ್ಥಿಗಳು ಶಿಸ್ತು, ಸಂಯಮ, ಸಮಯಪ್ರಜ್ಞೆ ಬೆಳೆಸಿಕೊಳ್ಳಬೇಕು. ಇದು ತಮ್ಮನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತದೆ. ಶಿಕ್ಷಕರನ್ನು ಸಮಾಜ ಅನುಕರಿಸುತ್ತದೆ. ಹಾಗಾಗಿ ಶಿಕ್ಷಕ ವೃತ್ತಿ ಬಹು ಜವಾಬ್ದಾರಿಯುತವಾಗಿದೆ ಎಂದರು.

ಮಹಾವಿದ್ಯಾಲಯದ 2026-27ನೇ ಸಾಲಿನ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಿಗೆ ಪ್ರಾಚಾರ್ಯ ಡಾ. ಬಿ.ಬಿ. ಪೊಲೀಸಪಾಟೀಲ ಪ್ರತಿಜ್ಞಾವಿಧಿ ಬೋಧಿಸಿದರು. ಪ್ರಶಿಕ್ಷಣಾರ್ಥಿಗಳು ನಾಟಕ, ನೃತ್ಯ, ಹಾಡು ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರೇಕ್ಷಕರನ್ನು ರಂಜಿಸಿದರು. ಎಂ.ಕೆ. ಹಂಚಿನಾಳ, ವಿದ್ಯಾರ್ಥಿ ಪ್ರತಿನಿಧಿ ಮಲ್ಲಿಕಾರ್ಜುನ ಹರಿಜನ, ಮಹಿಳಾ ಪ್ರತಿನಿಧಿ ಹೇಮಲತಾ ಪೂಜಾರಿ, 3ನೇ ಸೆಮಿಸ್ಟರ್ ಪ್ರತಿನಿಧಿ ಲಕ್ಷ್ಮಿ ಬಂಬಲವಾಡಿ, ಮಹಿಳಾ ಪ್ರತಿನಿಧಿ ಅಮೃತಾ ಕೋಷ್ಟಿ, ಉಪನ್ಯಾಸಕ ಎಸ್.ಎಂ. ವಾರೆಪ್ಪನವರ, ಎಂ.ಎ. ಮಹಾಜನ, ಪಿ.ಎಸ್. ಉಪಾಧ್ಯೆ, ಕೆ.ಬಿ. ಗಿರಿಮಲ್ಲನವರ, ಎಸ್. ಎನ್. ನಾರಾಯಣಕರ, ಪಿ.ಆರ್. ಖೋತ, ಎಸ್.ಎಂ. ಪಾಟೀಲ, ಎ.ಎ. ಕೌಜಲಗಿ, ವಿ.ಕೆ. ನಡುಗೇರಿ ಇದ್ದರು. ಉಪನ್ಯಾಸಕ ಎಂ.ಕೆ. ಹಂಚಿನಾಳ ಸ್ವಾಗತಿಸಿದರು. ಪೂಜಾ ಕಿಲ್ಲೇದಾರ, ಪ್ರತಿಮಾ ಟಿ.ಎಸ್. ಪ್ರಾರ್ಥನೆ ಹಾಡಿದರು. ಪ್ರಶಿಕ್ಷಣಾರ್ಥಿ ಅಲ್ಮಾಸ್ ಪಿಂಜಾರ್ ನಿರೂಪಿಸಿದರು. ಅಸ್ಮಿತಾ ಗಾಂಗಳೆ ವಂದಿಸಿದರು.



ಮಕ್ಕಳ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಿ: ಕಡಾಡಿ

ಮೂಡಲಗಿ: ಪಾಲಕರು ಮಕ್ಕಳ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡುವ ಮೂಲಕ ಅವರನ್ನು ಸಸ್ಪಚಿಯನ್ನಾಗಿಸುವಲ್ಲಿ ಶಿಕ್ಷಕರೊಂದಿಗೆ ಪಾಲಕರ ಪಾತ್ರವು ಮಹತ್ವದಾಗಿದೆ ಎಂದು ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಹೇಳಿದರು.

ಇಲ್ಲಿಯ ವಿಶ್ವಭಾರತಿ ಶಿಕ್ಷಣ ಸಂಸ್ಥೆಯ ಶಾಂತಿನಿಕೇತನ ಕನ್ನಡ ಮಾಧ್ಯಮ ಪೂರ್ವ ಹಾಗೂ ಹಿರಿಯ ಪ್ರಾಥಮಿಕ ಶಾಲೆಗೆ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ನೂತನವಾಗಿ ನಿರ್ಮಿಸಿರುವ ಶಾಲಾ ಕೊಠಡಿಗಳನ್ನು ಉದ್ಘಾಟಿಸಿ ನಂತರ ಶಾಲೆಯ ಸ್ನೇಹ ಸಮ್ಮೇಳನದಲ್ಲಿ ಭಾವಹಿಸಿ ಮಾತನಾಡಿದ ಅವರು, ಮಕ್ಕಳಿಗೆ ದೇಶದ ಇತಿಹಾಸ, ಪರಂಪರೆ, ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸಬೇಕು ಎಂದರು.

ರಾಜ್ಯಸಭಾ ಸದಸ್ಯತ್ವದ ಅಧಿಕಾರ ಅವಧಿಯಲ್ಲಿ ಮೂಡಲಗಿ ಮತ್ತು ಗೋಕಾಕ ತಾಲೂಕು ಸೇರಿದಂತೆ ವಿವಿಧೆಡೆ ಸಮುದಾಯ ಭವನ, ಬಸ್ ತಂಗುದಾಣ, ಶಾಲೆಗಳಿಗೆ ಪೀಠೋಪಕರಣ, ಜಿಮ್‌ಗಳು ಹೀಗೆ ನಿರಂತರವಾಗಿ ಜನಪರ ಅಭಿವೃದಿಗೆ ಆದ್ಯತೆ ನೀಡಲಾಗಿದೆ.ದೇಶದ ಸಂಸದರ ಮೌಲ್ಯಾಂಕಣದಲ್ಲಿ ನನ್ನ ಕಾರ್ಯಗಳ ಬಗ್ಗೆ ಪ್ರಧಾನಿ ಮೋದಿಜೀ ಪ್ರಶಂಸೆ ಮಾಡಿರುವುದು ಹೆಮ್ಮೆ ಎನಿಸಿದೆ ಎಂದರು.

ಸಂಸ್ಥೆಯಿಂದ ಸಂಸದ ಈರಣ್ಣಾ ಕಡಾಡಿ ಅವರನ್ನು ಸನ್ಮಾನಿಸಿ ಗೌರವಿಸಿದರು. ಮುಖ್ಯ ಅತಿಥಿಗಳಾಗಿ ಸಾಹಿತಿ ಡಾ.ಮಹಾದೇವ ಜಿಡ್ಡಿಮನಿ, ಬಾಲಶೇಖರ ಬಂದಿ ಮಾತನಾಡಿದರು.

ಸಾನ್ನಿಧ್ಯವಹಿಸದ್ದ ಹಳೇ ಹುಬ್ಬಳ್ಳಿಯ ಜಗದ್ಗುರು ಶಿವಶಂಕರ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು. ಶಿವಾನಂದ ಸ್ವಾಮೀಜಿ ಸಾನ್ನಿಧ್ಯವಹಿಸಿದ್ದರು.

ಭೂದಾನಿ ಪಾರವ್ವ ಒಂಟಗೂಡಿ, ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಈಶ್ವರ ಮುರಗೋಡ, ಮುಖ್ಯ ಅತಿಥಿಗಳಾಗಿ ಕುರುಹಿನಶೆಟ್ಟಿ ಕೋ. ಆಪ್. ಸೊಸೈಟಿ ಅಧ್ಯಕ್ಷ ಸುಭಾಷ ಬೆಳಕೂಡ, ಉಪಾಧ್ಯಕ್ಷ ಇಸ್ಮಾಯಿಲ್ ಕಳ್ಳಿಮನಿ, ಬಸವರಾಜ ಢವಳೇಶ್ವರ, ಜಿ.ವಿ. ನಾಗರಾಜ, ಶಿಕ್ಷಣ ಇಲಾಖೆಯ ನಾಗರಾಜ ಗಡಾದ, ಸಮೀರ ದಬಾಡಿ, ಮಸಗುಪ್ಪಿಯ ಬಸವರಾಜ ಗಾಡವಿ, ಬಸವರಾಜ ಪಾಲಬಾವಿ, ಮಲ್ಲಪ್ಪ ಮದಗುಣಕಿ, ಮಲ್ಲಪ್ಪ ನೇಮಗೌಡರ, ಜಿ.ಕೆ. ಮುರಗೋಡ, ಈಶ್ವರ ಮುಗಳಖೋಡ, ಚನ್ನಪ್ಪ ಒಂಟಗೂಡಿ, ಸುರೇಶ ಬೆಳಕೂಡ, ಶಂಕರ ಬೆಳಕೂಡ, ಬಿ.ಬಿ. ಬೆಳಕೂಡ, ರಮೇಶ ವಂಟಗೂಡಿ ಇದ್ದರು. ಎನ್.ಎಂ.ನದಾಫ್ ಸ್ವಾಗತಿಸಿದರು, ಬಸವರಾಜ ಸಸಾಲಟ್ಟಿ ನಿರೂಪಿಸಿದರು.



ಭಕ್ತಿ,ಜಾಗರಣೆ, ಆತ್ಮ ಚಿಂತನೆಗಳ ಮಹೋತ್ಸವವೇ ಮಹಾಶಿವರಾತ್ರಿ

ಚನ್ನಮ್ಮನ ಕಿತ್ತೂರು: ಭಕ್ತಿ, ಜಾಗರಣೆ ಮತ್ತು ಆತ್ಮ ಚಿಂತನೆಗಳ ಮಹೋತ್ಸವವೇ ಮಹಾಶಿವರಾತ್ರಿಯಾಗಿದ್ದು, ಪ್ರತಿಯೊಬ್ಬರು ಈ ಪವಿತ್ರ ದಿನದಂದು ಉಪವಾಸ, ಭಜನೆ, ಶಿವ ಪೂಜೆಗಳ ಮೂಲಕ ಶಿವನ ಧ್ಯಾನ ಮಾಡಬೇಕೆಂದು ಪುಟ್ಟರಾಜ ಗವಾಯಿಗಳ ಶಿಷ್ಯ ಸಿದ್ದರಾಮ ಶಾಸ್ತ್ರಿ ಹಿರೇಮಠ ಹೇಳಿದರು.

ಸ್ಥಳೀಯ ಕಲ್ಮಠದ ಶಂಕರ ಚಂದರಗಿ ಸಭಾ ಭವನದಲ್ಲಿ ಭಾನುವಾರ ನಡೆದ ರಾಜಗುರು ಸಂಸ್ಥಾನ ಕಲ್ಮಠ ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತುಗಳ ಸಂಯುಕ್ತ ಆಶ್ರಯದಲ್ಲಿ ಮಹಾಶಿವರಾತ್ರಿಯ ಪ್ರಯುಕ್ತ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಹಾಶಿವರಾತ್ರಿಯ ಮಹಿಮೆಯನ್ನು ಶಿವ ಕೀರ್ತನೆಯ ಮೂಲಕ ತಿಳಿಸಿದರು.

ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ ಮಾತನಾಡಿ, ಭಕ್ತಿಯಿಂದ ಪ್ರತಿ ನಿತ್ಯ ಶಿವ ಸ್ಮರಣೆ ಮಾಡಿದರೆ ಶಿವ ಖಂಡಿತ ಮೆಚ್ಚಿ ನಮ್ಮ ಇಷ್ಟಾರ್ಥಗಳನ್ನು ಈಡೇರಿಸುತ್ತಾನೆ ಮತ್ತು ಶಿವನ ನಾಮಸ್ಮರಣೆ ನಿರಂತರವಾಗಿರಬೇಕೆಂದರು.

ನಿಚ್ಚಣಕಿಯ ಮಡಿವಾಳೇಶ್ವರ ಮಠದ ಪಂಚಾಕ್ಷರಿ ಸ್ವಾಮೀಜಿ ಕಸಾಪ ಅಧ್ಯಕ್ಷ ಡಾ. ಎಸ್.ಬಿ. ದಳವಾಯಿ, ಡಾ. ಜಗದೀಶ ಹಾರುಗೊಪ ಮಾತನಾಡಿದರು.

ಹಿರೇನಂದಿಹಳ್ಳಿಯ ಸದ್ಗುರು ನಾಗಭೂಷಣ ಶಿವಯೋಗಿಗಳ ಭಜನಾ ತಂಡದೊಂದಿಗೆ ಸಿಪಿಐ ಶಿವಾನಂದ ಗುಡಗನಟ್ಟಿ ಭಾಗವಹಿಸಿ ತಮ್ಮ ಸಂಗೀತ ಕಲೆಯ ಮೂಲಕ ಎಲ್ಲರನ್ನು ಮನರಂಜಿಸಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ಕಿತ್ತೂರ ನಾಡಿನ ಶರಣ ಶರಣೆಯರು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಈಶ್ವರ ಗಡಿಬಿಡಿ ಮತ್ತು ಪ್ರಹ್ಲಾದ ಸಿಗ್ಗಾಂವಿ ಪ್ರಾರ್ಥನೆ, ಬಸವಪ್ರಭು ಪಾಟೀಲ ನಿರೂಪಿಸಿದರು, ಮಹೇಶ್ವರ ಹೊಂಗಲ ಸ್ವಾಗತಿಸಿದರು. ಉಮಾದೇವಿ ಬಿಕ್ಕಣ್ಣವರ ವಂದಿಸಿದರು.



ಪಿ. ಸುಜ್ಞಾನ ಮೂರ್ತಿಗೆ ಆತ್ಮೀಯ ಸನ್ಮಾನ

ಗೋಕಾಕ: ಕರ್ನಾಟಕ ಸರ್ಕಾರದ ವಿಶ್ವಕರ್ಮ ನಿಗಮ ಮಂಡಳಿ ಅಧ್ಯಕ್ಷ ಪಿ. ಸುಜ್ಞಾನ ಮೂರ್ತಿ ಅವರು ನಗರದ ಶ್ರೀ ಕಾಳಿಕಾ ದೇವಿ ದೇವಸ್ಥಾನಕ್ಕೆ ಭೇಟಿ ನೀಡಿ, ಸಮಾಜದ ಮುಖಂಡರು ಹಾಗೂ ಹಿರಿಯರು ಕಾರ್ಯಕರ್ತರನ್ನು ಭೇಟಿ ಮಾಡಿದರು.

ಇದೇ ಸಂದರ್ಭದಲ್ಲಿ ಶ್ರೀ ಕಾಳಿಕಾದೇವಿ ದೇವಸ್ಥಾನದ ಆಡಳಿತ ಮಂಡಳಿಯವರು ವಿಶ್ವಕರ್ಮ ನಿಗಮ ಮಂಡಳಿ ಅಧ್ಯಕ್ಷ ಪಿ. ಸುಜ್ಞಾನ ಮೂರ್ತಿ ಅವರನ್ನು ಆತ್ಮೀಯವಾಗಿ ಸತ್ಕರಿಸಿದರು. ಶೀ ಕಾಳಿಕಾ ದೇವಿ ದೇವಸ್ಥಾನದ ಅಧ್ಯಕ್ಷ ಸುರೇಶ ಪತ್ತಾರ, ಉಪಾಧ್ಯಕ್ಷ ವಿನಾಯಕ ಪೋತದಾರ ಹಾಗೂ ವಿಶ್ವಸ್ಥ ಮಂಡಳಿ ಸದಸ್ಯರು ಹಾಗೂ ಸಲಹಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಅನಂತ ಸತ್ತಿಗೇರಿ, ಸಹ ಕಾರ್ಯದರ್ಶಿ ಶಿವಾನಂದ ಪತ್ತಾರ, ವಿಶ್ವಕರ್ಮ ಅಭಿವೃದ್ಧಿ ಸಂಘದ ಅಧ್ಯಕ್ಷ ಪ್ರಕಾಶ ಕುಂಬಾರ ಹಾಗೂ ಉಪಾಧ್ಯಕ್ಷ ವಿಜಯ ಬಡಿಗೇರ ಹಾಗೂ ಸಮಾಜದ ಮುಖಂಡರು ಮತ್ತು ಹಿರಿಯರು ಉಪಸ್ಥಿತರಿದ್ದರು.



ಪ್ರಣಯ ಪೂಜಾರಿ ಸ್ಪೋರ್ಟ್ಸ್ ಕ್ಲಬ್‌ಗೆ ಪ್ರಥಮ ಸ್ಥಾನ

ಕಾಗವಾಡ: ಮಾಜಿ ಡಿಸಿಎಂ ಹಾಗೂ ಅಥಣಿ ಶಾಸಕ ಲಕ್ಷ್ಮಣ ಸವದಿಯವರ 66ನೇ ಜನ್ಮದಿನ ಪ್ರಯುಕ್ತ ರಾಷ್ಟ್ರಮಟ್ಟದ ಎ ಗ್ರೇಡ್ ಕಬಡ್ಡಿ ಪಂದ್ಯಾವಳಿಗಳನ್ನು ಸೋಮವಾರ ಐನಾಪೂರ ಪಟ್ಟಣದಲ್ಲಿ ಏರ್ಪಡಿಸಲಾಗಿತ್ತು.

ಫೈನಲ್ ಪಂದ್ಯದಲ್ಲಿ ಮಹಾರಾಷ್ಟ್ರ ಬಾರಮತಿಯ ಅನಿಕೇತ ಪಾಟೀಲ ತಂಡವನ್ನು ಅಂತರದಿಂದ ಬೆಳಗಾವಿಯ ಪ್ರಣಯ ಪೂಜಾರಿ ಸ್ಪೋರ್ಟ್ಸ್ ಕ್ಲಬ್ ದವರು ಸೋಲಿಸಿ ಪ್ರಥಮ ಸ್ಥಾನ ಪಡೆದರು.

2ನೇ ಸ್ಥಾನಕ್ಕೆ ಪಾಟೀಲ ಬಾರಮತಿಯ ಅನಿಕೇತ ತಂಡ ತೃಪ್ತಿ ಪಡೆಯಿತು. 3ನೇ ಸ್ಥಾನವನ್ನು ಬಾರಮತಿ ಅಕಾಡಾಮಿಯ ತಂಡ ಹಾಗೂ ಬೆಂಗಳೂರಿನ ರೈಜಿಂಗ್ ಬುಲ್ಸ್ ತಂಡ ಸಮನಾಗಿ ಹಂಚಿಕೊಂಡರು.

ಬೆಸ್ಟ್ ಆಲರೌಂಡರ್ ಆಗಿ ಬೆಳಗಾವಿಯ ಪ್ರಣಯ ಪೂಜಾರಿ ಸ್ಪೋರ್ಟ್ಸ್ ತಂಡದ ಗಣೇಶ ಪಡೆದಿಕೊಂಡರು, ಬೆಸ್ಟ್ ರೈಡರ್ ಬಾರಮತಿ ಅಕಾಡೆಮಿಯ ತಂಡದ ವಿರೇಂದ್ರ ಹಾಗೂ ಉತ್ತಮ ಕ್ಯಾಚರ್ (ಹಿಡಿತಗಾರ) ಬೆಂಗಳೂರಿನ ರೈಜಿಂಗ್ ಬುಲ್ಸ್ ತಂಡದ ರಜತ್ ಪಡೆದುಕೊಂಡರು.

ಈ ಸಂದರ್ಭದಲ್ಲಿ ಶಿವಕುಮಾರ ಸವದಿ, ಪ್ರವೀಣ ಗಾಣಿಗೇರ, ಅರುಣ ಗಾಣಿಗೇರ, ಸಂಜು ಕುಚಿಜೂರೆ, ಸಂಜು ಭಿರಡಿ, ದಾದಾ ಜಂತೆನ್ನವರ, ಸುಭಾಷ ಪಾಟೀಲ, ಚಮನರಾವ ಪಾಟೀಲ, ರಾಜೇಂದ್ರ ಪೋತದಾರ, ಶಿವು ಗುಡ್ಡಾಪೂರ, ರಮೇಶ ಚೌಗಲಾ, ವಿನಾಯಕ ಚೌಗಲಾ, ನವೀನ ಗಾಣಿಗೇರ, ಗುಂಡು ಖಿವಟಕೊಪ್ಪ, ಸತೀಶ ಅಪರಾಜ, ಮುನ್ನಪ್ಪಾ ಲೋಂಡೆ, ಹಣಮಂತ ಗುರವ, ಪ್ರಕಾಶ ಗಾಣಿಗೇರ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಬಡ್ಡಿ ಅಮೋಚೂರ ಸಂಸ್ಥೆಯ ಶಿವಣ್ಣ ಎಂ.ಕೆ. ಶಿರಗುಪ್ಪಿ, ಅಪ್ಪು ಪೂಜಾರಿ, ಸುರೇಶ ವಾಘಮೋಡೆ, ಕಬಡ್ಡಿ ಪಂದ್ಯಾಟಗಳ ನೇತೃತ್ವವನ್ನು ವಹಿಸಿ ಯಶಸ್ವಿಗೊಳಿಸಿದರು.



ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ



ಬೆಳಗಾವಿ: ಮಣ್ಣೂರು ಗ್ರಾಮದಲ್ಲಿ ಸುಮಾರು ಒಂದು ಕೋಟಿ ರೂ.ಗಳ ವೆಚ್ಚದಲ್ಲಿ ರಸ್ತೆ ನಿರ್ಮಾಣದ ಕಾಮಗಾರಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಂಗಳವಾರ ಭೂಮಿಪೂಜೆ ನೆರವೇರಿಸಿ, ಚಾಲನೆ ನೀಡಿದರು.

ಗ್ರಾಮಸ್ಥರಬಹುದಿನಗಳಬೇಡಿಕೆಯಾಗಿದ್ದ ಈ ರಸ್ತೆ ನಿರ್ಮಾಣಕ್ಕಾಗಿ ಲಕ್ಷ್ಮೀ ಹೆಬ್ಬಾಳ್ಕರ್ ಅವರು ವಿಶೇಷ ಪ್ರಯತ್ನ ಮಾಡಿ ಅನುದಾನ ಮಂಜೂರು ಮಾಡಿಸಿದ್ದಾರೆ. ಪ್ರತಿಯೊಂದು ಗ್ರಾಮಗಳ ಅಭಿವೃದ್ಧಿ ಮೂಲಕ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪಣತೊಟ್ಟಿದ್ದೇನೆ. ವರ್ಷದ 365 ದಿನವೂ ಗ್ರಾಮೀಣ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಜನಪ್ರತಿನಿಧಿಯಾದವರು ಮನಸ್ಸು ಮಾಡಿದರೆ ಯಾವರೀತಿಯಲ್ಲಿ ಕ್ಷೇತ್ರವನ್ನು ಅಭಿವೃದ್ಧಿಪಡಿಸಬಹುದು ಎನ್ನುವುದನ್ನು ತೋರಿಸುತ್ತಿದ್ದೇನೆ ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಕಾಡಾ ಅಧ್ಯಕ್ಷರಾದ ಯುವರಾಜ ಕದಂ, ಎಸ್.ಎಲ್.ಚೌಗಲೆ, ಅಶೋಕ ಚೌಗಲೆ, ಮುಕುಂದ ತೆರಳೆ, ಜಯವಂತ ಬಾಳಕುಂದ್ರಿ, ದತ್ತು ಚೌಗಲೆ, ಜ್ಯೋತಿಬಾ ಚೌಗಲೆ, ಮಂಡಲೀಕ ಬಾಂದುರಗಿ, ಲಲಿತಾ ನಾಯ್ಕ, ಬಾಗಣ್ಣ ನರೋಟಿ, ಸುಚೇತಾ ಸಾಂಬ್ರೇಕರ, ರಾಮು ಚೌಗಲೆ, ಕೇದಾರಿ ಚೌಗಲೆ, ಗ್ರಾಮ ಪಂಚಾಯತಿ ಎಲ್ಲ ಸರ್ವ ಸದಸ್ಯರು ಉಪಸ್ಥಿತರಿದ್ದರು.

ಅಥಣಿ ಶಾಸಕ ಲಕ್ಷ್ಮಣ ಸವದಿ ಜನ್ಮದಿನಾಚರಣೆ

ಸ್ವಚ್ಛತಾ ಅಭಿಯಾನ, ಸೀರೆ ವಿತರಣೆ

ತೆಲಸಂಗ: ರೈತಕುಲದ ರಕ್ಷಕ ಲಕ್ಷ್ಮಣ ಸವದಿ ಅವರು ನೀರಾವರಿ ಮೂಲಕ ಮಡ್ಡಿ ಜಮೀನಿನಲ್ಲಿ ಬಂಗಾರದ ಕಡ್ಡಿ ಬೆಳೆಯುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ತೆಲಸಂಗ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಮೋಘಸಿದ್ದ ಖೊಬ್ರಿ ಹೇಳಿದರು.



ಗ್ರಾಮದಲ್ಲಿ ಲಕ್ಷ್ಮಣ ಸವದಿ ಅಭಿಮಾನಿ ಬಳಗದ ವತಿಯಿಂದ ಮಂಗಳವಾರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ, ಬಡ ಮತ್ತು ನಿರ್ಗತಿಕ ಮಹಿಳೆಯರಿಗೆ ಉಚಿತ ಸೀರೆಗಳನ್ನು ವಿತರಿಸುವ ಕಾರ್ಯಕ್ರಮ ಸೇರಿದಂತೆ ವಿವಿಧ ಸಮಾಜಮುಖಿ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಅವರು ಮಾತನಾಡಿ, ಗಡಿ ಭಾಗದ ಅಥಣಿ ತಾಲೂಕು ಇಂದು ರಾಜ್ಯವೇ ತಿರುಗಿ ನೋಡುವಂತೆ ಅಭಿವೃದ್ಧಿಯಾಗಿದೆ ಎಂದರೆ ಅದಕ್ಕೆ ಕಾರಣ ಲಕ್ಷ್ಮಣ ಸವದಿ ಅವರ ಪರಿಶ್ರಮ. ರಸ್ತೆ, ಶಿಕ್ಷಣ, ನೀರಾವರಿ, ಆರೋಗ್ಯ ಮತ್ತು ವಿದ್ಯುತ್ ಕ್ಷೇತ್ರದಲ್ಲಿ ಅವರು ತಂದ ಕ್ರಾಂತಿ ಅಳಿಸಲಾಗದ ಇತಿಹಾಸ. ತನ್ನ ಮನೆ ಬಾಗಿಲಿಗೆ ಸಮಸ್ಯೆ ಹೊತ್ತು ಬಂದ ಯಾರೊಬ್ಬರನ್ನೂ ಅವರು ಬರಿಗೈಲಿ ವಾಪಸ್ ಕಳಿಸಿಲ್ಲ, ಅಧಿಕಾರ ಇರಲಿ ಬಿಡಲಿ, ಜನರ ಸೇವೆಯೇ ಜನಾರ್ದನ ಸೇವೆ ಎಂದು ಬದುಕುತ್ತಿರುವ ಇವರು ಇಂದಿನ ಯುವ ರಾಜಕಾರಣಿಗಳಿಗೆ ನಿಜವಾದ ಮಾದರಿ.

ಶಾಸಕರ ಜನ್ಮದಿನವನ್ನು ಕೇವಲ ಆಚರಣೆಗೆ ಸೀಮಿತಗೊಳಿಸದೆ, ಅರ್ಥಪೂರ್ಣವಾಗಿ ಆಚರಿಸುವ ಉದ್ದೇಶದಿಂದ ತೆಲಸಂಗ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಬೆಳಿಗ್ಗೆ ಅಭಿಮಾನಿ ಬಳಗದ ಸದಸ್ಯರು ಮತ್ತು ಗ್ರಾಮಸ್ಥರು ಒಗೂಡಿ ಗ್ರಾಮದ ದೇವಸ್ಥಾನದ ಆವರಣ ಹಾಗೂ ಸರ್ಕಾರಿ ಶಾಲಾ ಮೈದಾನವನ್ನು ಸ್ವಚ್ಛಗೊಳಿಸುವ ಮೂಲಕ ಪರಿಸರ ಜಾಗೃತಿ ಮೂಡಿಸಿದರು. ಗ್ರಾಮದ ಬಡ ಮತ್ತು ನಿರ್ಗತಿಕ ಮಹಿಳೆಯರಿಗೆ ಉಚಿತವಾಗಿ ಸೀರೆಗಳನ್ನು ವಿತರಿಸಿದರು.

ಗ್ರಾಮದ ಮುಖಂಡರು, ಶಾಸಕರ ಅಭಿಮಾನಿ ಬಳಗದ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

ಕಿರುಸುದ್ದಿ

ಪ್ರತಿಭಾ ಪುರಸ್ಕಾರ ಇಂದು

ಬೀಳಗಿ: ಪಟ್ಟಣದ ಬಸವ ಪೂರ್ವ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆ ಮತ್ತು ಬಸವ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಫೆ.18ರಂದು ಸಂಜೆ 4ಕ್ಕೆ ಜರುಗಲಿದೆ. ಕಲ್ಮಠದ ಗುರುಪಾದ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಬಸವ ಎಜ್ಯುಕೇಶನ್ ಸೊಸೈಟಿ ಅಧ್ಯಕ್ಷ ವಿರುಪಾಕ್ಷ ರೇವಡಿಗಾರ ಅಧ್ಯಕ್ಷತೆ ವಹಿಸುವರು. ತಹಶೀಲ್ದಾರ ವಿನೋದ ಹತ್ತಳ್ಳಿ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಎಸ್. ಆದಾಪೂರ, ಕ್ಷೇತ್ರ ಸಮನ್ವಯಾಧಿಕಾರಿ ಶಿವಾಜಿ ಕಾಂಬಳೆ, ಶಿಕ್ಷಣ ಸಂಯೋಜಕ ಕೆ. ಎಸ್. ಗೌಡರ, ಬಿಆರ್‌ಪಿ ಬಿ. ಆರ್. ಲಮಾಣಿ, ಸಿಆರ್‌ಪಿ ಬಿ. ಎಸ್. ಕಠಾಣಿ, ವಿದ್ಯಾ ಸಂಸ್ಥೆ ಉಪಾಧ್ಯಕ್ಷೆ ಕಮಲಾ ಹಳ್ಳೂರ, ವಿಶೇಷ ಸನ್ಮಾನಿತರಾಗಿ ಸ್ವಾಮಿ ವಿವೇಕಾನಂದ ರಾಜ್ಯ ಸದ್ಭಾವನಾ ಪ್ರಶಸ್ತಿ ಪುರಸ್ಕೃತರಾದ ಡಿ. ಎಂ. ಸಾಹುಕಾರ ಆಗಮಿಸುವರೆಂದು ಬಸವ ಎಜ್ಯುಕೇಶನ್ ಸೊಸೈಟಿ ಕಾರ್ಯದರ್ಶಿ ಪ್ರಭಾಕರ ರೇವಡಿಗಾರ ತಿಳಿಸಿದ್ದಾರೆ.

ಇಂದಿನಿಂದ ನಾಟಕ ಪ್ರದರ್ಶನ

ಗುಳೇದಗುಡ್ಡ: ಕೋಟೆಕಲ್ಲನ ಶ್ರೀ ಹೊಳೆಹುಚ್ಚೇಶ್ವರ ಸಂಸ್ಥಾನಮಠ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ಸಾಣೆಹಳ್ಳಿಯ ಶ್ರೀ ಶಿವಕುಮಾರ ಕಲಾಸಂಘದವರಿಂದ ಫೆ. 18ರಿಂದ 20ರವರೆಗೆ ನಿತ್ಯ ಸಂಜೆ 7ಕ್ಕೆ ಶಿವಸಂಚಾರ ನಾಟಕ ಪ್ರದರ್ಶನ ಸಮೀಪದ ಕೋಟೆಕಲ್ಲ ಗ್ರಾಮದ ಹೊಳೆಹುಚ್ಚೇಶ್ವರಮಠದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹನಮಂತ ಮಾವಿನಮರದ ಹೇಳಿದರು. ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಪ್ರತಿವರ್ಷ ಸಾಣೆಹಳ್ಳಿಯ ಕಲಾತಂಡದಿಂದ ಶಿವಸಂಚಾರ ನಾಟಕ ಪ್ರದರ್ಶನ ಕೋಟೆಕಲ್ಲ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಈ ಬಾರಿ ಫೆ. 18ರಂದು ಜಂಗಮದೆಡೆಗೆ, ಫೆ.19ರಂದು ಕಳ್ಳರ ಸಂತೆ, ಫೆ.20ರಂದು ಶಿವಯೋಗಿ ಸಿದ್ಧರಾಮೇಶ್ವರ ನಾಟಕವನ್ನು ಶ್ರೀ ಶಿವಕುಮಾರ ಕಲಾಸಂಘದವರು ಪ್ರದರ್ಶನ ನೀಡಲಿದ್ದಾರೆ ಎಂದರು. ಸಂಘದ ಸಂಗಪ್ಪ ಹಡಪದ, ಲಕ್ಷ್ಮಣ ಹಾಲನ್ನವರ, ಸಂತೋಷ ತಿಪ್ಪಾ ಇದ್ದರು.

ವಾರ್ಷಿಕ ಸ್ನೇಹ ಸಮ್ಮೇಳನ



ಮಹಾಲಿಂಗಪುರ: ಅತಿ ಕಡಿಮೆ ಶುಲ್ಕದಲ್ಲಿ ಕನ್ನಡ ಮಾಧ್ಯಮದಲ್ಲಿ ಸಂಸ್ಕಾರ ಭರಿತ ಗುಣಮಟ್ಟದ ಶಿಕ್ಷಣ ನೀಡುತ್ತಾ ನೂರಾರು ಬಡ ಮಕ್ಕಳ ಬಾಳಿಗೆ ಬೆಳಕಾಗಿರುವ ಪಾಂಡುರಂಗ ಶಾಲೆಯ ಕಾರ್ಯ ಶ್ಲಾಘನೀಯ ಎಂದು ಜಿಪಂ ಮಾಜಿ ಅಧ್ಯಕ್ಷ ಮಹಾಂತೇಶ ಹಿಟ್ಟಿನಮಠ ಹೇಳಿದರು. ಸ್ಥಳೀಯ ಪಾಂಡುರಂಗ ಶಾಲಾ ಆವರಣದಲ್ಲಿ ಜರುಗಿದ 18ನೇ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯಾದರೂ ಛಲ ಬಿಡದೆ ಸಂಸ್ಥೆ ಕಟ್ಟಿ ನಿರಂತರ 18 ವರ್ಷಗಳಿಂದ ಶಿಕ್ಷಣ ನೀಡುತ್ತಿರುವುದು ಸಂಸ್ಥೆಯ ಅಧ್ಯಕ್ಷೆ ಸುವರ್ಣ ಕರೆನ್ನವರ ಅವರು ಶ್ರೇಷ್ಠ ಸೇವಾ ಕಾರ್ಯ, ಛಲ, ಪರಿಶ್ರಮ ಮಾದರಿ ಎಂದರು. ಕವಿತಾ ಕೊಣ್ಣೂರ, ಪುರಸಭಾ ಮಾಜಿ ಉಪಾಧ್ಯಕ್ಷ ಚನ್ನಬಸು ಹುರಕಡ್ಲಿ, ನಂದಾದೀಪ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ಸರೋಜ ಶಿರೋಳ ಮಾತನಾಡಿದರು. ಶಿರೋಳ ತೋಟದ ಅಡಿವೇಶ ಮಹಾರಾಜರು, ಸಂಸ್ಥೆಯ ಅಧ್ಯಕ್ಷೆ ಸುವರ್ಣ ಕರೆನ್ನವರ, ಮುಖಂಡರಾದ ಮಹಾಲಿಂಗಪ್ಪ ಕಲಾಗತಿ, ಶ್ರೀಶೈಲ ಬಳಗಾರ, ಭೀಮಪ್ಪ ಪೂಜೇರಿ, ಮಹಾಲಿಂಗಪ್ಪ ಕಂಠಿ, ರಾಮಪ್ಪ ನ್ಯಾಮಗೌಡ, ರಾಜು ಮಲಾವಡಿ ಇದ್ದರು. ಆರೀಫಾ ಜಮಾದಾರ ಮತ್ತು ಸಂಗಡಿಗರು ಪ್ರಾರ್ಥಿಸಿ, ಪಿ.ಭೀ.ಕರೆನ್ನವರ ವಂದಿಸಿದರು.

ಮತದಾರರ ಮ್ಯಾಪಿಂಗ್ ಕಾರ್ಯಕ್ಕೆ ಸಹಕರಿಸಿ

ಬಾಗಲಕೋಟೆ: ಬಾಗಲಕೋಟೆ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಮತದಾರರ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಅಂಗವಾಗಿ ಎಲ್ಲ ಮತದಾರರ ಮ್ಯಾಪಿಂಗ್ ಮತ್ತು ಪ್ರೊಜನಿ ಕಾರ್ಯ ಕೈಗೊಂಡ ಹಿನ್ನಲೆಯಲ್ಲಿ ಎಲ್ಲ ಸಾರ್ವಜನಿಕರು ತಮ್ಮ ವ್ಯಾಪ್ತಿಯ ಮತಗಟ್ಟೆ ವ್ಯಾಪ್ತಿಯ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ತಮ್ಮ ಕುಟುಂಬದ ಎಲ್ಲ ಅರ್ಹ ಮತದಾರರ ಮಾಹಿತಿಯನ್ನು ಒದಗಿಸಿ ಮ್ಯಾಪಿಂಗ್ ಮತ್ತು ಪ್ರೊಜನಿ ಕಾರ್ಯವನ್ನು ಯಶಸ್ವಿಗೆ ಸಹಕರಿಸುವಂತೆ ತಹಶೀಲ್ದಾರ ವಾಸುದೇವ ಸ್ವಾಮಿ ಪ್ರಕಟಣೆಯಲ್ಲಿ ಕೋರಿದ್ದಾರೆ.



ಬಾದಾಮಿ: ಪಟ್ಟಣದ ಸ್ಟೇಶನ್ ರಸ್ತೆಯ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ನೂತನ ಮೈಲಾರಲಿಂಗೇಶ್ವರ ಮೂರ್ತಿಯನ್ನು ಬನಶಂಕರಿ ದೇವಸ್ಥಾನದ ಅರ್ಚಕ ಆನಂದ ಜೋಶಿ ಅವರ ತಂಡ ಪೂಜಾ ವಿಧಿವಿಧಾನಗಳಿಂದ ಪ್ರತಿಷ್ಠಾಪಿಸಲಾಯಿತು. ದಾನಿ ಮನೋಜ್ ಪತ್ತಾರ, ದೇವಸ್ಥಾನ ಸಮಿತಿ ಸದಸ್ಯರಾದ ಬಸವರಾಜ ನಾಯನೇಗಲಿ, ವಿರುಪಾಕ್ಷಪ್ಪ ಮೂಲಿಮನಿ, ಕುಮಾರ ಅಸೂಟಿ, ನಾಗರಾಜ ಹೊಸಮನಿ ಮೊದಲಾದವರು ಉಪಸ್ಥಿತರಿದ್ದರು.

ಮತದಾರರು ಸರ್ಕಾರದ ಯಂತ್ರದಲ್ಲಿ ಇರಲ್ಲ

ಬಾಗಲಕೋಟೆ: ರಾಜ್ಯದಲ್ಲಿ ಹಿಂದೆ ಉಪಚುನಾವಣೆ ಎದುರಾದಾಗ ಆಡಳಿತ ಪಕ್ಷವಿದ್ದರೂ ಅಭ್ಯರ್ಥಿಗಳು ಸೋತ ಉದಾಹರಣೆ ಇದೆ. ಆಡಳಿತ ಯಂತ್ರ ಸರ್ಕಾರದೇ ಇರಬಹುದು ಆದರೆ, ಮತ ಹಾಕುವವರು ಸರ್ಕಾರದ ಯಂತ್ರದಲ್ಲಿ ಇರಲ್ಲ ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಹೇಳಿದರು.



ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮತದಾನ ಮಾಡುವ ಪ್ರತಿಯೊಬ್ಬರೂ ಸ್ವತಂತ್ರ ಇದ್ದಾರೆ. ಹೀಗಾಗಿ ಆಡಳಿತ ಪಕ್ಷದವರು ಉಪಚುನಾವಣೆಯಲ್ಲಿ ಗೆಲ್ಲಬೇಕಂತ ಏನಿಲ್ಲ, ಮತದಾನ ಯಾರಿಗೆ ಬೇಕಾದರೂ ಮತದಾನ ಮಾಡಬಹುದು ಎಂದರು. ಇತ್ತೀಚೆಗೆ ರಾಜ್ಯಾಧ್ಯಕ್ಷರು ಜಿಲ್ಲೆಗೆ ಭೇಟಿ ನೀಡಿ ಬಾಗಲಕೋಟೆ ಉಪಚುನಾವಣೆ ಗೆಲ್ಲುತ್ತೇವೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದರಲ್ಲಿ ಏನೂ ತಪ್ಪಿಲ್ಲ, ಬಿಜೆಪಿ ಅಭ್ಯರ್ಥಿ ಗೆಲ್ಲುತ್ತಾರೆ. ಪಾರ್ಟಿಯಿಂದ ಕ್ಷೇತ್ರದಲ್ಲಿ ಪಕ್ಷದ ಸಂಘಟನೆ ನಡೆಯುತ್ತಿದೆ. ಅಭ್ಯರ್ಥಿ ಆಯ್ಕೆ ಚುನಾವಣೆ ಘೋಷಣೆಯಾದ ಬಳಿಕ ಆಗಬಹುದು ಎಂದರು. ಬಾಗಲಕೋಟೆ ನಗರದಲ್ಲಿ ಮತದಾನ ಕಡಿಮೆಯಾಗಿಲ್ಲ, ಕೆಲವೊಂದು ಕಡೆ ಡಬಲ್ ಮತದಾನ ಯಾದಿಯಲ್ಲಿ ಹೆಸರು, ಸತ್ತವರು ಡಿಲೀಟ್ ಆಗದೇ ಇರುವುದು, ಕೆಲವರು ನಗರದಿಂದ ಬೇರೆಡೆ ಸ್ಥಳಾಂತರ ಆಗಿದ್ದಾರೆ. ಹೀಗಾಗಿ ಮತದಾನ ಕಡಿಮೆಯಾಗುತ್ತಿದೆ. ಪ್ರತಿ ಭಾರಿ ನಡೆಯುವಷ್ಟು ಮತದಾನ ನಗರದಲ್ಲಿ ಆಗಿಯೇ ಆಗುತ್ತಿದೆ ಎಂದರು. ಶೀಘ್ರದಲ್ಲೇ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸಮ್ಮುಖದಲ್ಲಿ ನಗರದಲ್ಲಿ ಕಾರ್ಯಕರ್ತರು, ಮುಖಂಡರ, ಬೂತ್ ಕಮಿಟಿಯವರ ಸಮಾವೇಶ ನಡೆಯಲಿದೆ ಎಂದರು.



ಬಾಗಲಕೋಟೆ: ಮಾಧವ ಸೇವಾಕೇಂದ್ರ ವತಿಯಿಂದ ಮಹಾಶಿವರಾತ್ರಿ ಅಂಗವಾಗಿ ನಗರದ ಹೊಳೆ ಆಂಜನೇಯ ದೇವಸ್ಥಾನ ಆವರಣದಲ್ಲಿ ಆಯೋಜಿಸಿದ್ದ ನೃತ್ಯಸಂಗೀತ ಕಾರ್ಯಕ್ರಮದಲ್ಲಿ ಗುಳೇದಗುಡ್ಡದ ಗಾಯಕ ಜ್ಞಾನೇಶ್ವರ ಬೊಂಬಲೇಕರ (ಗವಾಯಿ), ದತ್ತಾತ್ರೇಯ ಶಿಂತ್ರೆ, ಹುಚ್ಚೇಶ್ ಮೇಟಿ ಹಾಗೂ ಸಂಗಡಿಗರು ಭಕ್ತಿ ಸಂಗೀತವನ್ನು ಪ್ರಸ್ತುತಪಡಿಸಿದರು.

ಪೂರ್ವಭಾವಿ ಸಭೆಯಲ್ಲಿ ಅಧಿಕಾರಿಗಳಿಗೆ ಡಿಸಿ ಸಂಗಪ್ಪ, ಸಿಇಒ ಕುರೇರ ಸೂಚನೆ

ಕಾರ್ಯಕ್ರಮ ಅಚ್ಚುಕಟ್ಟಾಗಿರಲಿ

ಫೆ.20ರಂದು ಗ್ಯಾರಂಟಿ ಯೋಜನೆ ಕಾರ್ಯಾಗಾರ-ಉತ್ಸವ ಆಯೋಜನೆ



ಬಾಗಲಕೋಟೆ: ನವನಗರದ ಜಿಲ್ಲಾ ಕಲಾಭವನದಲ್ಲಿ ಫೆ.20ರಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಕಾರ್ಯಾಗಾರ-ಉತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಸಲು ಅಗತ್ಯವಾದ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಜಂಟಿಯಾಗಿ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತಿ ನೂತನ ಸಭಾಭವನದಲ್ಲಿ ಮಂಗಳವಾರ ಜರುಗಿದ ಪಂಚ ಗ್ಯಾರಂಟಿ ಯೋಜನೆಯ ಕಾರ್ಯಾಗಾರ-ಉತ್ಸವ ಕಾರ್ಯಕ್ರಮದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸಹಯೋಗದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದ್ದು, ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಸಲು ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಸಮಿತಿಗೆ ವಹಿಸಿಕೊಟ್ಟ ಕಾರ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸುವಂತೆ ಸೂಚನೆ ನೀಡಿದರು.

ರಾಜ್ಯ ಸರಕಾರ ಅನುಷ್ಠಾನಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳ ಯಶಸ್ಸನ್ನು ಸಾರಲು ಹಾಗೂ ಅರ್ಹ ಫಲಾನುಭವಿಗಳಿಗೆ ಮಾಹಿತಿ ನೀಡುವ ಉದ್ದೇಶದಿಂದ ಜಿಲ್ಲಾ ಮಟ್ಟದಲ್ಲಿ ಗ್ಯಾರಂಟಿ ಯೋಜನೆ ಕಾರ್ಯಾಗಾರ-ಉತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಜಿಲ್ಲೆಯಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಲು ಎಲ್ಲ ರೀತಿಯ ಸಿದ್ಧತೆ ಮಾಡಿಕೊಳ್ಳುವಂತೆ ಸಂಬಂಧಿಸಿದ ಸಮಿತಿಗಳಿಗೆ ತಿಳಿಸಿದರು. ಜಿಲ್ಲಾ ಉಸ್ತುವಾರಿ ಸಚಿವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆಂದು ತಿಳಿಸಿದರು.

ಕಾರ್ಯಕ್ರಮಕ್ಕೆ 3 ಸಾವಿರಕ್ಕೂ ಹೆಚ್ಚು ಯೋಜನೆಗಳ ಫಲಾನುಭವಿಗಳು ಆಗಮಿಸುತ್ತಿದ್ದು, ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಬಸ್‌ಗಳ ವ್ಯವಸ್ಥೆ ಮಾಡುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಜಿಲ್ಲಾ ಸಂಚಾರಿ ಅಧಿಕಾರಿಗಳಿಗೆ ತಿಳಿಸಿದರು. ಕಲಾಭವನದ ಆವರಣದಲ್ಲಿ ಗ್ಯಾರಂಟಿ ಯೋಜನೆಗಳ ಮಾಹಿತಿ ಸೇರಿದಂತೆ ವಿವಿಧ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಹಾಕುವ ವ್ಯವಸ್ಥೆ ಆಗಬೇಕು ಎಂದರು. ಕಾರ್ಯಕ್ರಮದಲ್ಲಿ ಜಿಲ್ಲೆಯ ಗ್ಯಾರಂಟಿ ಯೋಜನೆಯ ಸದುಪಯೋಗ ಪಡೆದುಕೊಂಡ ಫಲಾನುಭವಿಗಳನ್ನು ಪಟ್ಟಿ ನೀಡಿದಲ್ಲಿ ಅವರಿಗೆ ಅನಿಸಿಕೆಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿ, ಜಿಲ್ಲೆಯ ಎಲ್ಲ ತಾಲೂಕಾ ಮಟ್ಟದ ಅನುಷ್ಠಾನ ಪ್ರಾಧಿಕಾರದ ಸದಸ್ಯರುಗಳು ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಫಲಾನುಭವಿಗಳ ಕರೆತರುವ ಕೆಲಸ ಮಾಡಬೇಕು. ಉತ್ಸವದಲ್ಲಿ ವಿವಿಧ ಕಲಾತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಗೆ ಕ್ರಮಕೈಗೊಳ್ಳಲು ಸಭೆಗೆ ತಿಳಿಸಿದರು.

ಸಭೆಯಲ್ಲಿ ಜಿ.ಪಂ ಉಪ ಕಾರ್ಯದರ್ಶಿ ಎನ್.ವೈ.ಬಸರಿಗಿಡದ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಜಿಲ್ಲಾ ಉಪಾಧ್ಯಕ್ಷರಾದ ಜಯಶ್ರೀ ತಿಮ್ಮಾಪೂರ, ರಫೀಕ್ ಇಸ್ಮಾಯಿಲ್ ಸಾಬ್ ಬೈರಕದಾರ್, ಶಿವಪ್ಪ ಕೋನೇರಿ, ರವೀಂದ್ರ ಯಡಹಳ್ಳಿ, ಜಿಪಂ ಯೋಜನಾ ನಿರ್ದೇಶಕ ಎಸ್. ಎಂ.ಕಾಂಬಳೆ, ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು ಸೇರಿದಂತೆ ತಾಲೂಕಾ ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷರು, ಯೋಜನೆ ಅನುಷ್ಠಾನ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಐಟಿಇಪಿ ಕೋರ್ಸ್ ಆರಂಭ: ಚರಂತಿಮಠ

ಬಾಗಲಕೋಟೆ: ಪ್ರಸಕ್ತ ಶೈಕ್ಷಣಿಕ ವರ್ಷದಿಂದ ನಗರದ ಪ್ರತಿಷ್ಠಿತ ಬಿವ್ಹಿವ್ಹಿ ಸಂಘದ ಮೂರು ಮಹಾವಿದ್ಯಾಲಯಗಳಲ್ಲಿ ನಾಲ್ಕು ವರ್ಷಗಳ ಸಂಯುಕ್ತ ಶಿಕ್ಷಕರ ಶಿಕ್ಷಣ ಪದವಿ (ಐಟಿಇಪಿ) ಕೋರ್ಸ್ ಪ್ರಾರಂಭಿಸಲಾಗುತ್ತಿದೆ ಎಂದು ಬಿವ್ಹಿವ್ಹಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿವ್ಹಿವ್ಹಿ ಸಂಘದ ಮೂರು ಮಹಾವಿದ್ಯಾಲಯಗಳಲ್ಲಿ ನಾಲ್ಕು ವರ್ಷದ ಬಿ.ಎ.ಬಿ.ಎಡ್, ಬಿಎಸ್ಸಿ, ಬಿಎಡ್ ಪದವಿ ಪ್ರಾರಂಭಿಸಲು ಕೇಂದ್ರ ಸರ್ಕಾರದ ಎನ್‌ಸಿಟಿಇ ಅನುಮತಿ ನೀಡಿದೆ ಎಂದು ತಿಳಿಸಿದರು.

ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಬಿ.ಎ.ಬಿ.ಎಡ್, ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಲ್ಲಿ ಬಿಎಸ್ಸಿ ಬಿಎಡ್ ಹಾಗೂ ಮುಧೋಳದ ಬಿವ್ಹಿವ್ಹಿ ಸಂಘದ ಎಸ್.ಆರ್.ಕಂಠಿ ಕಲಾ ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯದಲ್ಲಿ ಬಿ.ಎ.ಬಿಎಡ್, ಬಿಎಸ್ಸಿ, ಬಿಎಡ್, ಹೊಸ ಪದವಿ ಕೋರ್ಸ್ ಪ್ರಾರಂಭಿಸಲಾಗುತ್ತಿದೆ ಎಂದರು.

ವಿದ್ಯಾರ್ಥಿಗಳು ಪದವಿ ಜೊತೆಗೆ ಬಿಎಡ್ ಮುಗಿಸಿಕೊಳ್ಳುವ ವಿಶೇಷ ಅವಕಾಶವಿದ್ದು, ಪ್ರತ್ಯೇಕ ಬಿಎಡ್ ಕಲಿಕೆಗಿಂತ ಒಂದು ವರ್ಷ ಕಡಿಮೆ ಆಗಲಿದೆ. ಪಿಯುಸಿ ದ್ವಿತೀಯ ವರ್ಷದಲ್ಲಿ ಶೇ.50ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾದವರು ಅಥವಾ ಪರೀಕ್ಷೆಗೆ ಹಾಜರಾದವರು, ನ್ಯಾಷನಲ್ ಟೆಸ್ಟಿಂಗ್ ಏಜನ್ಸಿಯವರು ನಡೆಸುವ ಆನ್‌ಲೈನ್ ಸಲ್ಲಿಸಬಹುದು. ಈ ಪರೀಕ್ಷೆಯು ಕಂಪ್ಯೂಟರ್ ಆನ್‌ಲೈನ್ ಪರೀಕ್ಷೆಯಾಗಿರುತ್ತದೆ ಎಂದರು.

ನಾಲ್ಕು ವರ್ಷಗಳ ಸಂಯುಕ್ತ ಶಿಕ್ಷಕರ ಶಿಕ್ಷಣ ಪದವಿ ಪಡೆದ ಬಳಿಕ ದೇಶದ ಯಾವುದೇ ರಾಜ್ಯಗಳಲ್ಲಿ ಶಿಕ್ಷಕರಾಗುವ ಅರ್ಹತೆ ಪಡೆಯುತ್ತಾರೆ. ಅರ್ಜಿ ಸಲ್ಲಿಸಲು ಮಾ.10 ಕೊನೆಯ ದಿನವಾಗಿದೆ. ಪರೀಕ್ಷೆಯು ಏ.17ರಂದು ನಡೆಯಲಿದೆ. ಪ್ರವೇಶ ಹಾಗೂ ಎನ್‌ಟಿಎ ಪರೀಕ್ಷೆ ಅರ್ಜಿ ಮತ್ತು ಹೆಚ್ಚಿನ ಮಾಹಿತಿಗಾಗಿ (Àwww.nta.ac.in.+https://exams.nta.ac.in/ncet) ವೆಬ್‌ಸೈಟ್ ಸಂಪರ್ಕಿಸಿ ಎಂದರು. ಹೆಚ್ಚಿನ ಮಾಹಿತಿಗಾಗಿ ಬಾಗಲಕೋಟೆ (ಮೊ: 9480596549, 9449897903, 97407 50896, ಮುಧೋಳ: 98803 23018, 9980374399) ಇವರನ್ನು ಸಂಪರ್ಕಿಸಬಹುದು ಎಂದರು. ಬಿವ್ಹಿವ್ಹಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಸಿದ್ದರಾಮ ಮನಹಳ್ಳಿ, ಗಾಂವಕರ ಇದ್ದರು.




ಸಂತ ಸೇವಾಲಾಲರ ತತ್ವ, ಆದರ್ಶ ಪಾಲಿಸಿ: ಶಾಸಕ ಜೆಟಿಪಾ

ಬೀಳಗಿ: ಶಿಕ್ಷಣ ಪಡೆದು ಮೌಢ್ಯ, ಕಂದಾಚಾರಗಳಿಗೆ ಬಲಿಯಾಗದೆ ಎಲ್ಲರೂ ಸಮಾಜದ ಮುಂಚೂಣಿ ಕಾರ್ಯದಲ್ಲಿ ಭಾಗವಹಿಸಬೇಕು ಎನ್ನುವ ಸಂತ ಸೇವಾಲಾಲರ ತತ್ವ, ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು ಎಂದು ಶಾಸಕರು, ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷ ಜೆ. ಟಿ. ಪಾಟೀಲ ಹೇಳಿದರು.

ತಾಲೂಕು ಆಡಳಿತ ಸೌಧದಲ್ಲಿ ತಾಲೂಕಾಡಳಿತ, ಸಮಾಜ ಕಲ್ಯಾಣ ಇಲಾಖೆ ಮತ್ತು ಪಟ್ಟಣ ಪಂಚಾಯತ ಸಹಯೋಗದಲ್ಲಿ ನಡೆದ ಸಂತ ಸೇವಾಲಾಲರ 287ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಅಂದಿನ ಕಾಲದಲ್ಲಿಯೇ ತಂಡಗಳನ್ನು ರಚಿಸಿಕೊಂಡು ಒಗ್ಗಟ್ಟಾಗಿ ನಾವೆಲ್ಲರೂ ಹೇಗೆ ಬದುಕಿ ಸಮಾಜ ಕಟ್ಟಬೇಕು ಮತ್ತು ಪರೋಪಕಾರಿ ಜೀವನದ ಮೂಲಕ ಜೀವನವನ್ನು ಸಾರ್ಥಕ ಮಾಡಿಕೊಳ್ಳುವ ಉದ್ದೇಶವನ್ನು ಸಂತ ಸೇವಾಲಾಲರು ತಿಳಿಸಿದ್ದರು. ಯಾವುದೇ ದುಶ್ಚಟಗಳಿಗೆ ಮಕ್ಕಳನ್ನು ಬಲಿಯಾಗದಂತೆ ಪಾಲಕರು ನೋಡಿಕೊಳ್ಳುವುದು ಮತ್ತು ಸಂಸ್ಕಾರಯುತ ಶಿಕ್ಷಣವನ್ನು ನೀಡಲು ಮುಂದಾಗುವಂತೆ ಕರೆ ನೀಡಿದ್ದರು ಎಂದರು.

ತಹಶೀಲ್ದಾರ ವಿನೋದ ಹತ್ತಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿ, ಶಿಕ್ಷಣ, ಸಮಾನತೆ ಮತ್ತು ಏಕತೆ ದುಡಿಮೆಯ ಶಕ್ತಿಯ ಬಗೆಗೆ ಸಂತ ಸೇವಾಲಾಲರು ತಿಳಿಸಿದ್ದರೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ತಾಲೂಕಾಧ್ಯಕ್ಷ ಅಣವೀರಯ್ಯ ಪ್ಯಾಟೀಮಠ, ಜಿಪಂ ಕೆಡಿಪಿ ಸದಸ್ಯ ಜಿ. ಆರ್. ಪಾಟೀಲ, ಮುಖಂಡರಾದ ಶಿವಾನಂದ ಮಾದರ, ಮುತ್ತಪ್ಪ ಲಮಾಣಿ, ಭೀಮಶಿ ಲಮಾಣಿ, ಸಿದ್ದು ಮೇಟಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಿವಾಸ ಪಾಟೀಲ, ಬಿಇಒ ಆರ್. ಎಸ್. ಆದಾಪೂರ, ಪಪಂ ಮುಖ್ಯಾಧಿಕಾರಿ ದೇವೇಂದ್ರ ಧನಪಾಲ, ಸಮಾಜ ಕಲ್ಯಾಣಾಧಿಕಾರಿ ಸಿ. ಎಸ್. ಗಡ್ಡದೇವರಮಠ, ರವಿ ಚವ್ಹಾಣ, ಶಿವು ಲಮಾಣಿ, ವಿವಿಧ ಇಲಾಖೆ ಅಧಿಕಾರಿಗಳು, ಗಣ್ಯರು, ಲಂಬಾಣಿ ಸಮಾಜ ಮುಖಂಡರು ಸೇರಿದಂತೆ ಮತ್ತಿತರಿದ್ದರು.



ಕಾಮಗಾರಿಗಳ ಬಗ್ಗೆ ಗ್ರಾಮಸ್ಥರು ನಿಗಾವಹಿಸಲಿ: ಶಾಸಕ ಪಾಟೀಲ

ಕೆರೂರ: ಗ್ರಾಮದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿ ನಡೆದರೆ ಗ್ರಾಮಸ್ಥರ ನಿಗಾವಹಿಸಬೇಕು. ಕಳಪೆ ಕಾಮಗಾರಿಯಾದರೆ ನನಗೆ ಮಾಹಿತಿ ನೀಡಿರಿ ಎಂದು ಶಾಸಕ ಜೆ.ಟಿ. ಪಾಟೀಲ ಹೇಳಿದರು.



ಅವರು ಸಮೀಪದ ಅನವಾಲ, ಕಾಡರಕೊಪ್ಪ, ಯಂಡಿಗೇರಿ, ಕರಡಿಗುಡ್ಡ ಎಸ್.ಎ. ಗ್ರಾಮದಲ್ಲಿ ವಿವಿಧ ಕಾಮಗಾರಿ ಭೂಮಿಪೂಜೆ ಹಾಗೂ ಇನಾಂಯರಗೊಪ್ಪ, ಮಾಲಗಿ ಗ್ರಾಮಗಳಲ್ಲಿ ಸೋಮವಾರ ನೂತನ ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿದರು.

ಅನವಾಲ ಗ್ರಾಮದಲ್ಲಿ ಸುಮಾರ 10 ಲಕ್ಷ ರೂ.ಗಳ ವೆಚ್ಚದಲ್ಲಿ ಗ್ರಂಥಾಲಯ ಮತ್ತು 10 ಲಕ್ಷ ರೂ.ಗೂ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ, ಕಾಡರಕೊಪ್ಪ ಗ್ರಾಮದಲ್ಲಿ 13 ಲಕ್ಷರೂ.ಗಳ ವೆಚ್ಚದಲ್ಲಿ ಎರಡು ಶಾಲಾ ಕೊಠಡಿ ನಿರ್ಮಾಣ, ಯಂಡಿಗೇರಿ ಗ್ರಾಮದಲ್ಲಿ 10 ಲಕ್ಷ ರೂ.ಗಳ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ,50 ಲಕ್ಷರೂ.ಗಳ ವೆಚ್ಚದಲ್ಲಿ ಕರಡಿಗುಡ್ಡ ಎಸ್.ಎ. ಗ್ರಾಮದಿಂದ ನಿರಬೂದಿಹಾಳ ಹಾಗೂ ಯಂಡಿಗೇರಿ ಗ್ರಾಮಕ್ಕೆ ಹೋಗುವ ಮುಖ್ಯ ರಸ್ತೆ ಕಾಮಗಾರಿಗಳಿಗೆ ಶಾಸಕರು ಭೂಮಿಪೂಜೆ ನೆರವೇರಿಸಿದರು.

ಇನಾಂಯರಗೋಪ್ಪ ಗ್ರಾಮದಲ್ಲಿ ನಿರ್ಮಾಣವಾದ ಎರಡು ಪ್ರಾಥಮಿಕ ಶಾಲಾ ಕೊಠಡಿ, ಮಾಲಗಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾದ ಅಂಗನವಾಡಿ ಕಟ್ಟಡ ಉದ್ಘಾಟಿಸಿದರು.

ಹಲಕುರ್ಕಿ ಗ್ರಾಮದಲ್ಲಿ ದಿಗಂಬರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ನವ ವಧು-ವರರಿಗೆ ಆಶೀರ್ವದಿಸಿದರು. ಈ ವೇಳೆ ಧರ್ಮಣ್ಣ ಭಗವತಿ, ಪ್ರವೀಣ ಚಿಕ್ಕೂರ, ಶಿಕ್ಷಕ ರಸುಲ್ ಬಡೆಖಾನ, ಅಶೋಕ ರೂಗಿ, ಗದಿಗೆಪ್ಪ ತೊರಗಲ್, ಬಿ.ಎಸ್. ಮಾಚಾ, ಗೀತಾ ಉಪ್ಪಾರ, ಮಾಂತೇಶ ಹಡಪದ, ಪಿಡಿಒಗಳಾದ ಚೇತನ ಹೊಸಮನಿ, ಸುಮಂಗಲಾ ಮಳಿಯನ್ನವರ, ಪಿಡಬ್ಲೂಡಿ ಇಂಜಿನಿಯರ ಅಜಿತ ಹಾಗೂ ಗ್ರಾಮಸ್ಥರು ಇದ್ದರು.

ಅದ್ದೂರಿ ಶಿವ ಜಯಂತಿ ಆಚರಣೆ: ಡಾ.ಸಂಜಯ ಘಾರಗೆ

ಮುಧೋಳ: ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಉತ್ಸವ ಮಂಡಳಿ ವತಿಯಿಂದ ಫೆ.19.ರಂದು ಶಿವ ಜಯಂತ್ಯುತ್ಸವ ಸೌಹಾರ್ದತೆ ಹಾಗು ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಮರಾಠಾ ಸಮಾಜದ ಅಧ್ಯಕ್ಷ ಡಾ.ಸಂಜಯ ಘಾರಗೆ ಹೇಳಿದರು.



ನಗರದ ಕಾನಿಪ ಕಚೇರಿಯಲ್ಲಿ ಮಾತನಾಡಿದ ಅವರು, ಎಲ್ಲ ಸಮಾಜದವರು ಈ ಉತ್ಸವದಲ್ಲಿ ಪಾಲ್ಗೊಂಡು ಸಾರ್ವಜನಿಕವಾಗಿ ಒಂದು ಉತ್ತಮ ಸಂದೇಶ ನೀಡುವ ಉದ್ದೇಶವಿದೆ. ಒಂದೇ ಸಮಾಜಕ್ಕೆ ಸೀಮಿತ ಆಗಿರದ ಶಿವಾಜಿ ಅವರು ಹಿಂದವಿ ಸಮಾಜದ ರೂವಾರಿಗಳಾಗಿದ್ದರು, 396ನೇ ಶಿವಾಜಿ ಜಯಂತ್ಯುತ್ಸವ ನಿಮಿತ್ಯ ಅಂದು ಶಿವಾಜಿ ವೃತ್ತದಲ್ಲಿ ಬೆ.9ಕ್ಕೆ ವಿಶೇಷ ಪೂಜೆ, ಪುರಸ್ಕಾರ, ಅಭಿಷೇಕ, ವಿವಿಧ ಧಾರ್ಮಿಕ ಕಾರ್ಯಗಳು ನಡೆಯಲಿವೆ.

ಬೃಹತ್ ಶೋಭಾಯಾತ್ರೆ: ಸಂಜೆ 4.ಘಂಟೆಗೆ ನಗರದ ಉತ್ತರ ಗೇಟದಿಂದ ತಂಬಾಕ ಚೌಕ, ಗಾಂಧಿ ಚೌಕ ಮಾರ್ಗವಾಗಿ ಶಿವಾಜಿ ಸರ್ಕಲ್‌ವರೆಗೆ ಡೋಲಕ್, ಚಾಂಪಥ್, ಸಂತ ಭಜನೆ, ವಿವಿಧವಾದ್ಯಮೇಳದೊಂದಿಗೆ ಬೃಹತ್ ಶೋಭಾಯಾತ್ರೆ ಜರುಗಲಿದೆ.

ಮಕ್ಕಳು ಭಾಗಿ: ಈ ಸಂದರ್ಭದಲ್ಲಿ ಪ್ರಮುಖ ವೃತ್ತಗಳಲ್ಲಿ ಶಿವಾಜಿ ಮಹಾರಾಜರ, ಇತರೆ ಮಹಾಪುರುಷರ ವೇಷಭೂಷಣ ಜತೆ ಮಕ್ಕಳು ಸಹ ಭಾಗವಹಿಸಲಿದ್ದಾರೆ, ತಾಲೂಕಿನ ಮಹಿಳೆಯರು ಸೇರಿದಂತೆ ಎಲ್ಲ ಸಮಾಜದ ಬಾಂಧವರು ಉತ್ಸವದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಲು ಡಾ.ಸಂಜಯ ಮನವಿ ಮಾಡಿದ್ದಾರೆ.

ಮುಖಂಡರಾದ ಬಸವಂತ ಕಾಟೆ, ರಾಘು ಮೊಕಾಶಿ, ಎ.ಬಿ. ಘೋರ್ಪಡೆ, ಭೀಮು ಕುಮಕಾಲೆ, ಸತೀಶ ಘೋರ್ಪಡೆ, ಪ್ರಶಾಂತ ಕಾಳೆ, ನಗರಸಭೆ ಸದಸ್ಯ ಸಂತೋಷ ಪಾಲೋಜಿ, ಪರಶು ನಿಗಡೆ, ಪರಶುರಾಮ ಕದಂ ಇತರರು ಇದ್ದರು.

ಮೊಬೈಲ್, ಟಿವಿ ಬಂದ್‌ಗೆ ಕಸ ವಿಲೇ ವಾಹನದಲ್ಲಿ ಜಾಗೃತಿ

ಕಲಾದಗಿ: ರಾಜ್ಯಾದ್ಯಂತ ನಡೆಯಲಿರುವ ಪಿಯುಸಿ, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಪರೀಕ್ಷೆ ಇನ್ನೇನು ಕೆಲವೇ ದಿನಗಳಲ್ಲಿ ಪ್ರಾರಂಭವಾಗಲಿದ್ದು ಸಾರ್ವಜನಿಕ ಶಿಕ್ಷಣ ಇಲಾಖೆಯ ಆದೇಶದಂತೆ ಗ್ರಾಮದ ವಿದ್ಯಾರ್ಥಿಗಳ ಫಲಿತಾಂಶ ಹೆಚ್ಚಿಸಲು ಹೆಚ್ಚಿನ ಅಭ್ಯಾಸಕ್ಕಾಗಿ ವಿನೂತನ ಪ್ರಯೋಗದ ಮೂಲಕ ಕಳೆದೆರಡು ದಿನಗಳಿಂದ ಗ್ರಾಪಂ ಕಸ ವಿಲೇವಾರಿ ವಾಹನದ ಮೈಕ್‌ಗಳಿಂದ ಗ್ರಾಮದಲ್ಲಿ ಪ್ರತಿನಿತ್ಯ ಮನೆಯಲ್ಲಿ ಸಂಜೆ 7ರಿಂದ 9ಗಂಟೆಯವರೆಗೆ ಮನೆಯ ಟಿವಿ, ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಿ ಪ್ರಶಾಂತ ವಾತಾವರಣ ನಿರ್ಮಿಸುವುದು. ಪಾಲಕರು ಮಕ್ಕಳ ಕೈಗೆ ಮೊಬೈಲ್ ನೀಡದೆ ಓದಿಗೆ ಹೆಚ್ಚು ಒತ್ತು ಕೊಡಬೇಕು. ವಿದ್ಯಾರ್ಥಿಗಳನ್ನು ಓದಲು ಪ್ರೋತ್ಸಾಹಿಸುವುದರ ಮೂಲಕ ಮುಂಬರುವ ಪರೀಕ್ಷೆ ತಯಾರಿಗಾಗಿ ಹೆಚ್ಚಿನ ಸಮಯ ನೀಡಲು ಅವರ ಓದಿಗೆ ತೊಂದರೆಯಾಗದಂತೆ ಸಹಕರಿಸಬೇಕು. ರಸ್ತೆಗಳಲ್ಲಿ ಸಂಚರಿಸುವ ಆಟೋ, ಟ್ರ್ಯಾಕ್ಟರ ಇತರೇ ವಾಹನಗಳು ಹೆಚ್ಚಿನ ಶಬ್ದ ಮಾಡದಂತೆ ತ್ಯಾಜ್ಯ ವಿಲೇವಾರಿ ವಾಹನದ ಮೂಲಕ ಜಾಗೃತಿ ಮೂಡಿಸುತ್ತಿರುವ ಗ್ರಾಪಂ ಪ್ರಭಾರಿ ಪಿಡಿಒ ಕೆ.ಎಚ್.ಮುಲ್ಲಾ, ಸಿಬ್ಬಂದಿಗಳ ಕಾರ್ಯಕ್ಕೆ ಗ್ರಾಮಸ್ಥರಿಂದ ಮೆಚ್ಚುಗೆ ವ್ಯಕ್ತವಾಗುತ್ತಿದೆ.



ತೆರಿಗೆ ವಸೂಲಾತಿ ಅಭಿಯಾನ: ಫೆ.16 ರಿಂದ ಸರ್ಕಾರದ ಆದೇಶದ ಮೇರೆಗೆ ಜಿಪಂ, ತಾಪಂ ಬಾಗಲಕೋಟೆ ನಿರ್ದೇಶನದಂತೆ ಕಲಾದಗಿ ಗ್ರಾಪಂ ವ್ಯಾಪ್ತಿಯಲ್ಲಿ ತೆರಿಗೆ ವಸೂಲಾತಿ ಅಭಿಯಾನ ಹಮ್ಮಿಕೊಳ್ಳಲಾಗಿರುವ ಬಗ್ಗೆ ತ್ಯಾಜ್ಯ ವಿಲೇವಾರಿ ವಾಹನದ ಮೂಲಕ ಸಾರ್ವಜನಿಕರಿಗೆ ಮಾಹಿತಿ ನೀಡಲಾಗುತ್ತಿದ್ದು ಸಕಾಲದಲ್ಲಿ ಕಂದಾಯವನ್ನು ಪಾವತಿಸಿ ತಮ್ಮ ಸ್ವತ್ತುಗಳನ್ನು ಖಾತ್ರಿಪಡಿಸಿಕೊಳ್ಳಲು ಬಿಲ್ ಕಲೆಕ್ಟರಗಳು ಮನೆ ಹತ್ತಿರ ಬಂದಾಗ ಮನೆ ಕಂದಾಯ ಹಾಗೂ ನೀರಿನ ಕಂದಾಯವನ್ನು ಪಾವತಿಸಿ ಗ್ರಾಮದ ಅಭಿವೃದ್ಧಿಗೆ ಸಹಕರಿಸಬೇಕೆಂದು ಗ್ರಾಪಂ ಪ್ರಕಟಣೆ ಮೂಲಕ ಗ್ರಾಮದ ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡಿದೆ.

ಕರ ವಸೂಲಾತಿಗೆ ವೇಗ ಹೆಚ್ಚಿಸಿ: ಬಸರಿಗಿಡದ

ಗುಳೇದಗುಡ್ಡ: ಗ್ರಾಮ ಪಂಚಾಯತಿ ಸಿಬ್ಬಂದಿ ಮುತುವರ್ಜಿವಹಿಸಿ ಕರ ವಸೂಲಾತಿ ವೇಗ ಹೆಚ್ಚಿಸಿ, ಹೆಚ್ಚು ಕರ ವಸೂಲಾತಿ ಮಾಡಬೇಕು ಎಂದು ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಎನ್.ವೈ. ಬಸರಿಗಿಡದ ಸೂಚಿಸಿದರು.

ಸೋಮವಾರ ತಾಲೂಕಿನ ಮಂಗಳಗುಡ್ಡ, ನಾಗರಾಳ ಎಸ್.ಪಿ, ಲಾಯದಗುಂದಿ ಗ್ರಾಮ ಪಂಚಾಯತಿ ಗೆ ಭೇಟಿ ಅಲ್ಲಿನ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ಸಿಬ್ಬಂದಿಯೊಂದಿಗೆ ಸಭೆ ನಡೆಸಿ, ಕರ ವಸೂಲಿಯನ್ನು ಶೇಕಡಾವಾರು ಗುರಿ ಸಾಧನೆಗೆ ಸೂಚನೆ ನೀಡಿದರು.

ಗ್ರಾಮದ ಸಮಗ್ರ ಅಭಿವೃದ್ಧಿಗೆ ಸ್ಥಳೀಯ ತೆರಿಗೆ ಸಂಗ್ರಹ ಅತ್ಯಂತ ಮುಖ್ಯ. ಸಂಗ್ರಹಿಸಿದ ಹಣವನ್ನು ರಸ್ತೆ, ನೀರು, ಸ್ವಚ್ಛತೆ ಹಾಗೂ ಬೀದಿ ದೀಪಗಳ ನಿರ್ವಹಣೆಗೆ ಸಮರ್ಪಕವಾಗಿ ಬಳಸಬೇಕು ಎಂದರು.

ಕರ ಬಾಕಿದಾರರಿಗೆ ನೋಟಿಸ್ ಜಾರಿಗೊಳಿಸುವುದು, ಸಾರ್ವಜನಿಕ ಜಾಗೃತಿ ಮೂಡಿಸುವುದು ಹಾಗೂ ಪಾರದರ್ಶಕ ದಾಖಲೆ ವ್ಯವಸ್ಥೆ ಅನುಸರಿಸುವ ಕುರಿತು ಮಾರ್ಗದರ್ಶನ ನೀಡಿ, ಮನೆಮನೆಗೆ ತೆರಳಿ ಕರ ವಸೂಲಿ ಕಾರ್ಯವಿಧಾನ, ದಾಖಲೆ ನಿರ್ವಹಣೆ ಹಾಗೂ ಬಾಕಿ ತೆರಿಗೆ ಸಂಗ್ರಹದ ಸ್ಥಿತಿಗತಿ ಪರಿಶೀಲಿಸಿದರು.

ತಾಪಂ ಇಒ ಮಲ್ಲಿಕಾರ್ಜುನ ಬಡಿಗೇರ, ಸಹಾಯಕ ನಿರ್ದೇಶಕ ರಾಮಚಂದ್ರ ಮೈತ್ರಿ, ಮಂಗಳಗುಡ್ಡ ಗ್ರಾಪಂ ಪಿಡಿಒಗಳಾದ ಮಲ್ಲು ಪಾರದ, ಮಹಾಂತೇಶ ಕೋಟಿ, ಗೋಪಾಲಕೃಷ್ಣ ನಾಯಕ, ಗೂಳಪ್ಪ ಹರದೊಳ್ಳಿ, ಗ್ರಾಪಂ ಸಿಬ್ಬಂದಿ ಕರ ವಸೂಲಿಗಾರರು ಇದ್ದರು.



ಕಾರ್ಮಿಕ ಆತ್ಮಹತ್ಯೆಗೆ ಯತ್ನ: ಆರೋಗ್ಯಾಧಿಕಾರಿ ಭೇಟಿ

ಜಮಖಂಡಿ: ನಗರದ ಸರಕಾರಿ ಆಸ್ಪತ್ರೆಯಲ್ಲಿ ನಡೆದ ಹೊರಗುತ್ತಿಗೆ ಕಾರ್ಮಿಕರ ಆತ್ಮಹತ್ಯೆಯ ಪ್ರಕರಣಕ್ಕೆ ಜಿಲ್ಲಾ ಆರೋಗ್ಯಾಧಿಕಾರಿ ಮಂಜುನಾಥ ಡಿ.ಎನ್. ಭೇಟಿ ನೀಡಿದರು.

ನಗರದ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಮಾತನಾಡಿದ ಅವರು ಕೆಲವು ದಿನಗಳ ಹಿಂದೆ ಸರಕಾರಿ ಆಸ್ಪತ್ರೆ ಡಿ ದರ್ಜೆ ಹೊರಗಿತ್ತಿಗೆ ನೌಕರರು ನಮ್ಮನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ ಎಂದು ಮನನೊಂದು ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ ಅವರ ಆರೋಗ್ಯದಲ್ಲಿ ಏರುಪೇರುವಾಗಿ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿತ್ತು ಖಾಸಗಿ ಆಸ್ಪತ್ರೆಗೆ ಭೇಟಿ ನೀಡಿ ಅವರ ಆರೋಗ್ಯದ ಬಗ್ಗೆ ಪರಿಶೀಲಿಸಿದಾಗ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ ಎಂದರು.

ಅವರನ್ನು ಕೂಡಲೇ ಮರು ನೇಮಕ ಮಾಡಿ ಕರ್ತವ್ಯ ನಿರ್ವಹಿಸಲು ತಿಳಿಸಲಾಗಿದೆ. ಅವರ ಚಿಕಿತ್ಸೆ ವೆಚ್ಚ ಕೂಡ ಭರಿಸಲಾಗುವದು. ಎಂದಿನಂತೆ ಅವರಿಗೆ ನಾಳೆಯಿಂದಲೇ ಕರ್ತವ್ಯಕ್ಕೆ ಹಾಜರಾಗಲು ತಿಳಿಸಲಾಗಿದೆ. ಕೆಲವು ದಿನಗಳ ಹಿಂದೆ ಜಿಲ್ಲಾಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿದಾಗ ಕೆಲವು ಆಸ್ಪತ್ರೆಯಲ್ಲಿ ಸ್ವಚ್ಛತೆ ಸೇರಿದಂತೆ



ಕೆಲವು ನ್ಯೂನ್ಯತೆಗಳು ಕಂಡುಬಂದಿವೆ ಎಂದು ತಿಳಿಸಿದ್ದಾರೆ ಅವುಗಳನ್ನು ಸರಿಪಡಿಸಲಾಗುವುದು ಎಂದು ತಿಳಿಸಿದರು

ವೈದ್ಯರ ಕರ್ತವ್ಯದಲ್ಲಿ ಹಾಗೂ ರೋಗಿಗಳ ಸಮಸ್ಯೆಗಳನ್ನು ಸಾರ್ವಜನಿಕರು ಹೇಳಿದ್ದಾರೆ ಅದನ್ನು ಕೂಡ ಸರಿಪಡಿಸಲಾಗುವುದು. ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿಗಳ ಕರ್ತವ್ಯದ ಬಗ್ಗೆ ಆರೋಪಗಳು ಕೇಳಿಬಂದಿವೆ ಪ್ರತ್ಯೇಕವಾಗಿ ಎರಡು ತನಿಖಾ ತಂಡವನ್ನು ರಚಿಸಿ ತನಿಖೆ ಮಾಡಲಾಗುವುದು ಅದರಲ್ಲಿ ಮುಖ್ಯವೈದ್ಯಾಧಿಕಾರಿಗಳ ಕಾರ್ಯವೈಖರಿಯಲ್ಲಿ ಲೋಪದೋಷ ಕಂಡು ಬಂದಲ್ಲಿ ಅವರ ಮೇಲೆ ಕಾನೂನು ಪ್ರಕಾರ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು.

ತಾಲೂಕಾ ಆರೋಗ್ಯ ಅಧಿಕಾರಿ ಗೈಬುಸಾಬ ಗಲಗಲಿ, ಶಹರ ಠಾಣೆ ಪಿಎಸ್ಐ ಅನೀಲ ಕುಂಬಾರ ಇದ್ದರು.

ಕಿರುಸುದ್ದಿ

ವಿಠ್ಠಲಗೆ ಆರೂಢಶ್ರೀ ಪ್ರಶಸ್ತಿ



◆ **ಬಸವನಬಾಗೇವಾಡಿ:** ಕಳೆದ ನಾಲ್ಕು ದಶಕಗಳಿಂದ ಪತ್ರಿಕಾ ಸೇವೆಯಲ್ಲಿರುವ(ವಿತರಣೆ) ಪಟ್ಟಣದ ವಿಠ್ಠಲ ಕುಲಕರ್ಣಿ ಅವರನ್ನು ಶ್ರೀಗುರು ಆರೂಢ ಸೇವಾ ಸಂಸ್ಥೆ 2026ನೇ ಸಾಲಿನ ಆರೂಢ ಶ್ರೀಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯನ್ನು ಫೆ.22ರಂದು ಬೆಳಗ್ಗೆ 10.30ಕ್ಕೆ ಪಟ್ಟಣದ ಜಗನ್ಮಾತೆ ಶ್ರೀಕಾಳಿಕಾದೇವಿ ಸಮುದಾಯ ಭವನದಲ್ಲಿ ಪೂಜ್ಯರ ಸಮ್ಮುಖದಲ್ಲಿ ಪ್ರದಾನ ಮಾಡಲಾಗುವುದು ಎಂದು ಸಂಸ್ಥೆಯ ಅಧ್ಯಕ್ಷ ನ್ಯಾಯವಾದಿ ಗುರುರಾಜ ಕನ್ನೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಸಾಧನೆ





◆ **ವಿಜಯಪುರ:** ಜೆಇಇ ಪರೀಕ್ಷೆ- 1 ರಲ್ಲಿ ಕವಲಗಿಯ ಸಿದ್ದೇಶ್ವರ ಸಂಸ್ಥೆಯ ಸಂಗನಬಸವ ವಸತಿ ಪಿಯು ಕಾಲೇಜ್ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದಾರೆ. ವಿದ್ಯಾರ್ಥಿಗಳಾದ ಜಗದೀಶ ಶಿಲಿನ್ ಭೌತಶಾಸ್ತ್ರ (ಶೇ.92.15), ಪವನ್‌ಕುಮಾರ ಕೌಲಗಿ ಗಣಿತ (ಶೇ.94.64), ಪ್ರೀತಮ್ ಬಾಲಗಾವಿ ಗಣಿತ (ಶೇ. 95.14), ಸಂಜನಾ (ಶೇ. 77.50), ಆಕಾಶ ಕಂಟೆಕೂರ್ (ಶೇ.74.58), ಲಕ್ಷ್ಮೀ ಹಚಡದ (ಶೇ. 70.75) ಅವರು ಜೆಇಇ ಪರೀಕ್ಷೆಯಲ್ಲಿ ವಿಶೇಷ ಸಾಧನೆ ಮಾಡಿದ್ದಾರೆ. ಆಡಳಿತ ಮಂಡಳಿಯ ಅಧ್ಯಕ್ಷ, ಶಾಸಕ ಬಸನಗೌಡ ಪಾಟೀಲ ಯತ್ನಾಳ, ಚೇರ್‌ಮನ್ ಬಸಯ್ಯ ಹಿರೇಮಠ ಸೇರಿದಂತೆ ಎಲ್ಲ ಪದಾಧಿಕಾರಿಗಳು, ಸದಸ್ಯರು, ಕಾಲೇಜು ಪ್ರಾಂಶುಪಾಲರು ಹಾಗೂ ಇತರ ಸಿಬ್ಬಂದಿ ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿದ್ದಾರೆ.

ಕುದಿಯುವ ಅನ್ನ ಕೈಯಿಂದ ಹೊರ ತೆಗೆದು ಪವಾಡ



ನಾಲತವಾಡ: ಅಡವಿ ಸೋಮನಾಳ ಗ್ರಾಪಂ ವ್ಯಾಪ್ತಿಯ ಸಮೀಪದ ಡೊಂಕಮಡು ಗ್ರಾಮದ ಗಿರಿಯಪ್ಪ ಮುತ್ಯಾನ ಜಾತ್ರೆಯಲ್ಲಿ ಭಕ್ತರಿಗೆ ಸಿದ್ಧಪಡಿಸುತ್ತಿದ್ದ ಪಾಯಸಾ ಅನ್ನ ಸಾರು ಕುದಿಯುತ್ತಿದ್ದ ವೇಳೆ ಪವಾಡ ಪುರುಷ ದ್ಯಾಮಣ್ಣ ದಿಂಡವಾರ ಬೋಗೋಣಿಯಲ್ಲಿ ಕೈ ಹಾಕಿ ಕುದಿಯುವ ಅನ್ನ ಹೊರ ತಗೆಯುವ ಮೂಲಕ ಸೇರಿದ್ದ ಭಕ್ತರಲ್ಲಿ ಅಚ್ಚರಿ ಮೂಡಿಸಿದ ಘಟನೆ ಮಂಗಳವಾರ ನಡೆಯಿತು.

ದೇವಸ್ಥಾನದ ಬಳಿ ಡೊಳ್ಳಿನ ನಿನಾದ ಮಧ್ಯೆ ದೇವವಾಣಿ ನುಡಿದ ನಂತರ ಅಡುಗೆ ಸಿದ್ಧತೆ ಸ್ಥಳಕ್ಕೆ ಭಕ್ತರೊಂದಿಗೆ ಬಂದ ಪವಾಡ ಪುರಷರಾದ ದ್ಯಾಮಣ್ಣ ದಿಂಡವಾರ ಅವರು ಒಲೆಯ ಮೇಲೆ ಕುದಿಯುವ ವೇಳೆ ನಾನಾ ಬಗೆಯ ಪ್ರಸಾದಗಳನ್ನು ತಟ್ಟೆಯಲ್ಲಿ ಬೊಗಸೆಗಟ್ಟಲೇ ಹೊರ ತೆಗೆದರು. ದೇವವಾಣಿ: ಈ ವರ್ಷವೂ ಮಳೆ ಬೆಳೆ ಹುಲುಸಾಗಿದ್ದು ಮುಂಬರುವ ದಿನಗಳಲ್ಲಿ ಗ್ರಾಮದಲ್ಲಿ ಬಂಗಾರದ ಹೊಗೆ ಬಸಪ್ಪ ಕುಂಬಾರ ದೇವವಾಣಿ ನುಡಿದರು. ಸುಮಾರು ವರ್ಷಗಳಿಂದ ನಡೆಯುತ್ತಿರುವ ಗಿರಿಯಪ್ಪ ಮುತ್ಯಾನ ಜಾತ್ರೆಗೆ ಅಡವಿ ಸೋಮನಾಳ, ಅಡವಿ ಹುಲಗಬಾಳ, ಚವನಬಾವಿ, ಕ್ಯಾತನಡೋಣಿ, ಗಡಿ ಜಿಲ್ಲೆಯ ಬಸಾಪೂರ, ಮನ್ನಾಳ ಸೇರಿದಂತೆ ಸಹಸ್ರ ಭಕ್ತರು ತಮ್ಮ ಕಾಯಿಲೆಗಳನ್ನು ವಾಸಿ ಮಾಡಿಕೊಂಡು ಗುಣಮುಖರಾಗಿದ್ದಾರೆ ಎಂದು ಸ್ಥಳೀಯರು ತಿಳಿಸಿದರು.

ಬೈಕ್-ಲಾರಿ ಡಿಕ್ಕಿ: ಮಹಿಳೆ ಸಾವು

◆ **ವಿಜಯಪುರ:** ಬೈಕ್-ಲಾರಿ ಡಿಕ್ಕಿಯಾಗಿ ಮಹಿಳೆಯೊಬ್ಬಳು ಸ್ಥಳದಲ್ಲಿಯೇ ಸಾವಿಗೀಡಾದ ದಾರುಣ ಘಟನೆ ಜಿಲ್ಲೆಯ ಬಬಲೇಶ್ವರ ತಾಲೂಕಿನ ಸಾರವಾಡ ಗ್ರಾಮದ ಸಂಗಾಪುರ ಕ್ರಾಸ್ ಬಳಿ ನಡೆದಿದೆ. ಮೃತಪಟ್ಟವಳನ್ನು ಅಡವಿ ಸಂಗಾಪುರ ಗ್ರಾಮದ ಬಾಳವ್ವ ದಳವಾಯಿ (50) ಎಂದು ಗುರುತಿಸಲಾಗಿದೆ. ಬಾಳವ್ವ ದಳವಾಯಿ ತಮ್ಮ ಸಂಬಂಧಿಕರೊಂದಿಗೆ ಬೈಕ್‌ನಲ್ಲಿ ತೆರಳುತ್ತಿದ್ದಾಗ, ಈ ಅವಘಡ ನಡೆದಿದ್ದು, ಬಾಳವ್ವ ಸ್ಥಳದಲ್ಲಿಯೇ ಅಸುನೀಗಿದ್ದಾಳೆ. ಬೈಕ್ ಚಾಲಕ ಗಂಭೀರ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ರವಾನಿಸಲಾಗಿದೆ. ಘಟನಾ ಸ್ಥಳಕ್ಕೆ ಬಬಲೇಶ್ವರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಬಲೇಶ್ವರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.



ವಿಜಯಪುರ: ಜಿಲ್ಲೆಯ ಬಬಲೇಶ್ವರ ತಾಲೂಕಿನ ಕಾಖಂಡಕಿ ಗ್ರಾಮದಲ್ಲಿ ಶಿವರಾತ್ರಿ ಹಬ್ಬದ ಪ್ರಯುಕ್ತ ಶಿವ- ಪಾರ್ವತಿಯ ದೇವಾಲಯದ ಕಳಸಾರೋಹಣ, ಪ್ರಪ್ರಥಮ ನೂತನ ರಥೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಮರೆಗುದ್ದಿಯ ನಿರುಪಾದೇಶ್ವರ ಮಹಾಸ್ವಾಮೀಜಿ, ಗಿರಿಸಾಗರದ ರುದ್ರಮುನಿ ಶಿವಾಚಾರ್ಯ, ಕಾಖಂಡಕಿ ಗುರುದೇವ ಆಶ್ರಮದ ಶಿವಯೋಗೇಶ್ವರ ಸ್ವಾಮೀಜಿ, ಮಸೂತಿಯ ಪ್ರಭು ಕುಮಾರ ಶಿವಾಚಾರ್ಯ, ಪುರಾಣ ಪಂಡಿತ ನಿಜಲಿಂಗಯ್ಯ ಶಾಸ್ತ್ರಿಗಳು, ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ರಾಮನಗೌಡ ಪಾಟೀಲ ಇದ್ದರು.

ಕಾಮಗಾರಿ ಪರಿಶೀಲಿಸಿದ ಶಿವಾನಂದ ಪಾಟೀಲ

◆ **ಕೊಲ್ಹಾರ:** ತಾಲೂಕಿನ ಹಳ್ಳದ ಗೆಣ್ಣೂರು ಗ್ರಾಮದ ಹತ್ತಿರ ಮುಳವಾಡ ಏತನೀರಾವರಿಯ ಕಾಲುವೆ ಒಡೆದ ಸ್ಥಳಕ್ಕೆ ಸೋಮವಾರ ಸಂಜೆ ಸಚಿವ ಶಿವಾನಂದ ಪಾಟೀಲ ಭೇಟಿ ನೀಡಿ ಪರಿಶೀಲನೆ ಮಾಡಿದರು. ನಂತರ ಮಾತನಾಡಿದ ಅವರು, 2007ರಲ್ಲಿ ಪ್ರಾರಂಭಗೊಂಡಿರುವ ಕಾಮಗಾರಿ ಕುರಿತು ಅಧಿಕಾರಿಗಳಿಗೆ ಕಳಪೆಗೊಂಡಿರುವ ಕಾಮಗಾರಿಯ ಗುತ್ತಿಗೆದಾರರಿಗೆ ಶೀಘ್ರವೇ ನೋಟಿಸ್ ಜಾರಿಗೆಗೊಳಿಸಿ. ಕಾಲುವೆ ಕಾಮಗಾರಿ ಕುರಿತು ಎಸ್ಟಿಮೇಟ್ ಪ್ರತಿಗಳ ನೀಡಬೇಕು. ಕಾಲುವೆ ಯಾವ ಕಾರಣಕ್ಕೆ ಒಡೆಯಿತು? ಇದರ ಹಿನ್ನಲೆಯೇನು ಎಂದು ತನಿಖೆ ಮಾಡಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ, ಶೀಘ್ರದಲ್ಲಿ ಕಾಮಗಾರಿಯನ್ನು ಗುಣಮಟ್ಟದಿಂದ ಕಟ್ಟು ನಿಟ್ಟಾಗಿ ಪೂರ್ಣಗೊಳಿಸಿ ಎಂದರು. ಮುಖ್ಯ ರಸ್ತೆಯಿಂದ ಗ್ರಾಮಕ್ಕೆ ತಲುಪುವ ರಸ್ತೆಯನ್ನು ಸುಧಾರಿಸಿ ಎಂದು ಮುಂದಿನ ಬೆಳೆಗಳಿಗೆ ಒಣಗದಂತೆ ಸಣ್ಣ ಪ್ರಮಾಣದಲ್ಲಿ ಕಾಲುವೆಗೆ ನೀರು ಹರಿಸಿ ರೈತರ ಸಮ್ಮುಖದಲ್ಲಿ ಅಧಿಕಾರಿಗಳಿಗೆ ವಿವರಿಸಿದರು. ಜಮೀನುಗಳಿಗೆ ನೀರು ನುಗ್ಗಿ ಹಾನಿಯಾಗಿರುವ ರೈತರಿಗೆ ಶೀಘ್ರದಲ್ಲಿ ಪರಿಹಾರ ವಿತರಿಸುವಂತೆ ಸರಕಾರಕ್ಕೆ ಒತ್ತಾಯಿಸುತ್ತೇನೆ ಎಂದರು. ಈ ವೇಳೆಯಲ್ಲಿ ತಾಲೂಕು ತಹಶೀಲ್ದಾರ್ ಎಸ್‌ಎಮ್ ಮ್ಯಾಗೇರಿ, ಪಿಎಸ್‌ಐ ಅಶೋಕ್ ನಾಯಕ್, ಸೋಮು ಬಿರಾದಾರ್, ರವಿ ಗೊಳಸಂಗಿ, ಮಾತೇಶ ಗಿಡ್ಡಪ್ಪಗೋಳ, ರಮೇಶ ಸಂಗಳದ, ಮಹೇಶ್ ಪಾಟೀಲ್, ಮಂಜುನಾಥ್ ಪಾಟೀಲ್, ಸಂಗಮೇಶ್ ಬಗಲಿ, ಶ್ರೀಕಾಂತ್ ಗಣಿ ಮತ್ತು ಆಲಮಟ್ಟಿ, ಮಟ್ಟಿಹಾಳ ಕೆಬಿಜೆನಲ್ ಅಧಿಕಾರಿಗಳು ಗುತ್ತಿಗೆದಾರರು ಇದ್ದರು.



ಕೊಲ್ಹಾರ: ತಾಲೂಕಿನ ಹಳ್ಳದ ಗೆಣ್ಣೂರು ಗ್ರಾಮದ ಹತ್ತಿರ ಮುಳವಾಡ ಏತ ನೀರಾವರಿಯ ಕಾಲುವೆ ಒಡೆದ ಸ್ಥಳಕ್ಕೆ ಸೋಮವಾರ ಸಂಜೆ ಸಚಿವ ಶಿವಾನಂದ ಪಾಟೀಲ ಭೇಟಿ ನೀಡಿ ಪರಿಶೀಲನೆ ಮಾಡಿದರು.ತಾಲೂಕು ತಹಶೀಲ್ದಾರ್ ಎಸ್‌ಎಮ್ ಮ್ಯಾಗೇರಿ, ಪಿಎಸ್‌ಐ ಅಶೋಕ್ ನಾಯಕ್, ಸೋಮು ಬಿರಾದಾರ್, ರವಿ ಗೊಳಸಂಗಿ, ಮಾತೇಶ ಗಿಡ್ಡಪ್ಪಗೋಳ, ರಮೇಶ ಸಂಗಳದ, ಮಹೇಶ್ ಪಾಟೀಲ್, ಮಂಜುನಾಥ್ ಪಾಟೀಲ್, ಸಂಗಮೇಶ್ ಬಗಲಿ, ಶ್ರೀಕಾಂತ್ ಗಣಿ ಮತ್ತು ಆಲಮಟ್ಟಿ, ಮಟ್ಟಿಹಾಳ ಕೆಬಿಜೆನಲ್ ಅಧಿಕಾರಿಗಳು ಗುತ್ತಿಗೆದಾರರು ಇದ್ದರು.

ಏಪ್ರಿಲ್‌ನಲ್ಲಿ ರಾಜ್ಯ ಮಟ್ಟದ ಮಹಿಳಾ ಸಾಂಸ್ಕೃತಿಕ ಉತ್ಸವ: ಡಿಸಿ

◆ **ವಿಜಯಪುರ:** ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಉಪಯೋಜನೆಯಡಿ ಹಾಗೂ ಸಾಮಾನ್ಯ ಯೋಜನೆಯಡಿ ಜಿಲ್ಲೆಯಲ್ಲಿ ರಾಜ್ಯಮಟ್ಟದ ಮಹಿಳಾ ಸಾಂಸ್ಕೃತಿಕ ಉತ್ಸವ ಏಪ್ರಿಲ್ ಕೊನೆಯ ವಾರದಲ್ಲಿ ತೊರವಿಯ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿದ್ದು, ಕಾರ್ಯಕ್ರಮದ ಅಗತ್ಯ ರೂಪುರೇಷೆ- ಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ಕಾರ್ಯಕ್ರಮವನ್ನು ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಆಚರಿಸಲಾಗುತ್ತಿದ್ದು, ಕಾರ್ಯಕ್ರಮದಲ್ಲಿ ಮಹಿಳಾ ಸಂಘ- ಸಂಸ್ಥೆಗಳು ಪಾಲ್ಗೊಳ್ಳುವ ಕುರಿತು ಅಗತ್ಯ ರೂಪುರೇಷೆ ಸಿದ್ಧಪಡಿಸುವಂತೆ ಕಾರ್ಯಕ್ರಮ ಅಚ್ಚುಕಟ್ಟಾಗಿ ಹಾಗೂ ವ್ಯವಸ್ಥಿತವಾಗಿ ನಡೆಯಲು ಅಧಿಕಾರಿಗಳನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಿ, ಜವಾಬ್ದಾರಿಗಳನ್ನು ವಹಿಸಿಕೊಂಡು ಕಾರ್ಯಕ್ರಮ ಆಯೋಜನೆಗೆ ಸೂಚಿಸಲಾಯಿತು.



ಕಾರ್ಯಕ್ರಮದಲ್ಲಿ ಮಹಿಳಾ ಕಲಾವಿದರು ಹಾಗೂ ಸ್ಥಳೀಯ ಮಹಿಳಾ ಕಲಾವಿದರನ್ನೊಳಗೊಂಡ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ, ಮಹಿಳಾ ಕವಿಗೋಷ್ಠಿ, ವಿಚಾರ ಗೋಷ್ಠಿ, ಕಾವ್ಯ ಕುಂಚ ಗಾಯನ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳಾ ಸಾಧಕಿಯರೊಂದಿಗೆ ಸಂವಾದ ಕಾರ್ಯಕ್ರಮ ಹಾಗೂ ವಿಶೇಷ ಉಪನ್ಯಾಸ, ವಿದ್ಯಾರ್ಥಿನಿಯರಿಂದ ಚಿತ್ರಕಲಾ ಶಿಬಿರ ಸ್ಪರ್ಧೆ, ಮಹಿಳಾ ಉತ್ಪನ್ನಗಳ ಪ್ರದರ್ಶನ ಮೇಳ, ಖಾದಿ, ಕಸೂತಿ, ಕರಕುಶಲ ವಸ್ತುಗಳು ಮತ್ತು ಮಹಿಳೆಯರು ಸಿದ್ಧಪಡಿಸಿರುವ ಸ್ಥಳೀಯ ಹಾಗೂ ದೇಸಿ ತಿಂಡಿ-ತಿನಿಸು, ಉಡುಗೆ-ತೊಡುಗೆ ಹಾಗೂ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳ ಸ್ಥಾಪನೆ, ವಿದ್ಯಾರ್ಥಿನಿಯರಿಂದ ರಸಪ್ರಶ್ನೆ, ಭಾಷಣ, ಆಶುಭಾಷ, ಪ್ರಬಂಧ, ರಂಗೋಲಿ ಸೇರಿದಂತೆ ವಿವಿಧ ಸ್ಪರ್ಧೆ ಏರ್ಪಡಿಸುವ ಕುರಿತಾಗಿ ಚರ್ಚಿಸಲಾಯಿತು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ಮಹಿಳಾ ವಿಶ್ವವಿದ್ಯಾಲಯದ ಉಪ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ, ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಶಂಕರಗೌಡ ಸೋಮನಾಳ, ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಕೆ.ಕೆ. ಚವ್ಹಾಣ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ವೀರಯ್ಯ ಸಾಲಿಮಠ, ಡಿಎಚ್‌ಒ ಸಂಪತ್ ಗುಣಾರಿ, ಆಹಾರ ಇಲಾಖೆಯ ಉಪ ನಿರ್ದೇಶಕ ವಿನಯಕುಮಾರ ಪಾಟೀಲ, ತೋಟಗಾರಿಕಾ ಇಲಾಖೆ ಜಂಟಿ ನಿರ್ದೇಶಕ ರಾಹುಲ್ ಬಾವಿದೊಡ್ಡಿ, ಮಹಿಳಾ ವಿಶ್ವವಿದ್ಯಾಲಯದ ಪ್ರೊ.ಓಂಕಾರ ಕಾಕಡೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಕ್ರೀಡಾಧಿಕಾರಿ ರಾಜಶೇಖರ ಧೈವಾಡಿ ಇದ್ದರು.

ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಿ: ಎಂಬಿಪಾ

◆ **ವಿಜಯಪುರ:** ಶಾಲೆಗಳಿಗೆ ಶಿಕ್ಷಕರು ಹೃದಯವಿದ್ದ ಹಾಗೆ, ಮಕ್ಕಳ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಗುಣಮಟ್ಟದ ಶಿಕ್ಷಣ ದೊರಕಿಸಲು ಶಿಕ್ಷಕರು ಯೋಜನಾ ಬದ್ಧವಾಗಿ ಪಾಠ ಬೋಧನೆಗೆ ಆದ್ಯತೆ ನೀಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಹೇಳಿದರು.

ನಗರದ ಹೆಮರಡ್ಡಿ ಮಲ್ಲಮ್ಮ ಕಲ್ಯಾಣ ಮಂಟಪದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಶಾಲಾ ಶಿಕ್ಷಣ ಇಲಾಖೆ ಆಶ್ರಯದಲ್ಲಿ ಗ್ರಾಮೀಣ ವಲಯದ ಎಸ್ ಎಸ್‌ಎಲ್‌ಸಿ 2026 ಪರೀಕ್ಷೆ ಫಲಿತಾಂಶ ಸುಧಾರಣೆ, ತಾಲೂಕು ಮಟ್ಟದಲ್ಲಿ ಎಸ್ ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅವರು ಮಾತನಾಡಿದರು.

ಪಾಲಕರು ಕಡ್ಡಾಯವಾಗಿ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು. ಗುಣಮಟ್ಟದ ಶಿಕ್ಷಣ ಒದಗಿಸುವ ಮೂಲಕ ಮಕ್ಕಳ ಶೈಕ್ಷಣಿಕ ಮಟ್ಟದ ಬೆಳವಣಿಗೆಗಾಗಿ ಪಾಲಕರು, ಶಿಕ್ಷಕರು ವಿಶೇಷ ಗಮನ ಹರಿಸಬೇಕು ಎಂದರು.

ಗ್ರಾಮೀಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ತಳವಾರ ಮಾತನಾಡಿ, ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುವ ಸಚಿವರ ಆಶಯದಂತೆ ಸಿಎಸ್‌ಆರ್ ಅನುದಾನವನ್ನು ಬಳಸಿಕೊಂಡು ಸುಸಜ್ಜಿತ ಸ್ಮಾರ್ಟ್‌ಕ್ಲಾಸ್ ಕೊಠಡಿಗಳನ್ನು ನಿರ್ಮಾಣ ಮಾಡಿ, ಮಕ್ಕಳ ಆತ್ಮವಿಶ್ವಾಸ ಹೆಚ್ಚಿಸಿ ಪ್ರೋತ್ಸಾಹಿಸಲಾಗುತ್ತಿದೆ ಎಂದರು.

ಚಾಣಕ್ಯ ಕರಿಯರ್ ಅಕಾಡೆಮಿಯ ಮುಖ್ಯಸ್ಥ ಎನ್.ಎಂ ಬಿರಾದಾರ ಮಾತನಾಡಿ, ವಿದ್ಯಾರ್ಥಿಗಳು ಪ್ರೇರಣೆ ಹೊಂದಿ, ಆಸಕ್ತಿಯನ್ನು ಮೈಗೂಡಿಸಿಕೊಂಡು ಏಕಾಗ್ರತೆ ಸಾಧಿಸಿಕೊಂಡು ನೆನಪಿನಶಕ್ತಿ ಹೆಚ್ಚಿಸಿಕೊಳ್ಳಬೇಕು. ಎಲ್ಲ ವಿಷಯಗಳನ್ನು ಕರಗತ ಮಾಡಿಕೊಂಡು, ಜೀವನದಲ್ಲಿ ಉತ್ತಮ ಸಾಧನೆ ಮಾಡಿ ಎಂದರು.

2024-25ನೇ ಸಾಲಿನಲ್ಲಿ ತಾಲೂಕು ಮಟ್ಟದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ತಲಾ 50,000 ರೂ.ಗಳ ಚೆಕ್ ಹಾಗೂ 2023-24ನೇ ಸಾಲಿನಲ್ಲಿ ಎಸೆಸೆಲ್ಸಿ ಪರೀಕ್ಷೆಯಲ್ಲಿ ತಾಲೂಕ ಮಟ್ಟದ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಯಿತು. ಜಿಪಂ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ವೀರಯ್ಯ ಸಾಲಿಮಠ, ವಿಜಯಪುರದ ಡಯಟ್ ಪ್ರಾಂಶುಪಾಲರಾದ ಉಮಾದೇವಿ ಸೊನ್ನದ, ಅಶೋಕ ಮಲಘಾಣ, ಮಾಚಪ್ಪನವರ, ಕೆ.ಬಿ. ಪಾಟೀಲ ಇದ್ದರು.



ತಪ್ಪದೇ ಎಲ್ಲರೂ ಮತದಾನ ಮಾಡಿ: ಶಾಸಕ ಯತ್ನಾಳ

◆ **ವಿಜಯಪುರ:** ನಗರದ ಸುರಕ್ಷತೆಗಾಗಿ ಮತದಾರರು ಜಾಗೃತವಾಗಿ ಆಲಸ್ಯತನ ಮಾಡದೇ ತಪ್ಪದೆ ಎಲ್ಲರೂ ಮತದಾನ ಮಾಡಬೇಕು. ಒಮ್ಮೆ ಕಳೆದುಕೊಂಡರೆ ನಗರದ ಅಭಿವೃದ್ಧಿಯ ವಾತಾವರಣ ಮತ್ತೆ 20 ವರ್ಷ ಹಿಂದಕ್ಕೆ ಹೋಗುತ್ತದೆ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ನಗರಕ್ಕೆ 3ನೇ ಹಂತದ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕಾಗಿ ಬರುವ ಅಧಿವೇಶನದಲ್ಲಿ ಧ್ವನಿ ಎತ್ತುವೆ. ಮಹಾನಗರ ಪಾಲಿಕೆ ವ್ಯಾಪ್ತಿ ವಿಸ್ತರಣೆಗೊಂಡಿದ್ದು, ಎಲ್ಲ ಭಾಗಕ್ಕೂ ನಿರಂತರ ಮತ್ತು ಸಮರ್ಪಕವಾಗಿ ನೀರು ಒದಗಿಸಲು 3ನೇ ಹಂತದ ಯೋಜನೆ ಅನುಷ್ಠಾನ ಅಗತ್ಯವಿದೆ ಎಂದರು.

ಧೂಳಾಪುರವಾಗಿದ್ದ ವಿಜಯಪುರ ನಗರದಲ್ಲಿ ನಿರೀಕ್ಷೆ ಮೀರಿ ಅಭಿವೃದ್ಧಿ ಕಾರ್ಯ ಮಾಡಿದ್ದರಿಂದ ಮಾದರಿ ನಗರವಾಗಿ ನಿರ್ಮಾಣಗೊಂಡಿದೆ. ಇಂದು ಕೂಡ 325 ಲಕ್ಷ ರೂ. ವೊತ್ತದಲ್ಲಿ ವಾರ್ಡ್ ನಂ.22ರಲ್ಲಿ ಬರುವ ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿಯಿಂದ ದೇವರಾಜ ಅರಸು ವೃತ್ತದ ವರೆಗೆ (ಜಲನಗರ ಮುಖ್ಯರಸ್ತೆ) ಸಿಸಿ ರಸ್ತೆ ಅಭಿವೃದ್ಧಿ, 20 ಲಕ್ಷ ರೂ. ಮೊತ್ತದಲ್ಲಿ ರಾಷ್ಟ್ರವೀರ ವೀರಮಹಾರಾಣಾ ಪ್ರತಾಪ್ ಸಿಂಹ ಜಿ ವೃತ್ತದ ಸುತ್ತಲೂ ಆವರಣ ಗೋಡೆ, ಕೋಬಲ್ ಪೆವಿಂಗ್ ಅಭಿವೃದ್ಧಿಗೆ ಭೂಮಿಪೂಜೆ ನೆರವೇರಿಸಲಾಗಿದೆ.

ಅದೇ ರೀತಿ 150 ಲಕ್ಷ ರೂ.ಗಳಲ್ಲಿ ವಾರ್ಡ್ ನಂ.21 ರ ಈಶ್ವರ ದೇವಸ್ಥಾನದ ಮೂಲಕ ಏಳು ಮಕ್ಕಳ ತಾಯಿ ಗುಡಿ ವರೆಗಿನ ಪ್ರಮುಖ ಸಿಸಿ ರಸ್ತೆ, ರೇಣುಕಾ ನಗರ ಆಂತರಿಕ ಸಿಸಿ ರಸ್ತೆ, 150 ಲಕ್ಷ ರೂ. ಗಳಲ್ಲಿ ಗುರುದೇವ ನಗರ ಪೂರ್ವ ಭಾಗದ ಆಂತರಿಕ ರಸ್ತೆಗಳ ಡಾಂಬರೀಕರಣ, 200 ಲಕ್ಷ ರೂ.ಗಳಲ್ಲಿ ಗುರುದೇವ ನಗರದ ಮೂಲಕ ಕೊಲ್ಹಾರ ರಸ್ತೆ ಕೂಡುವ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಗಿದೆ ಎಂದರು.

ಇದೇ ಸಂದರ್ಭ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳಗೆ ಸನ್ಮಾನಿಸಿ ಗೌರವಿಸಲಾಯಿತು. ಪಾಲಿಕೆ ಮೇಯರ್ ಎಂ.ಎಸ್. ಕರಡಿ, ಸದಸ್ಯರಾದ ಪ್ರೇಮಾನಂದ ಬಿರಾದಾರ, ಕುಮಾರ ಗಡಗಿ, ಗಿರೀಶ ಬಿರಾದಾರ, ಮುಖಂಡರಾದ ಶಂಕರ ಹೂಗಾರ, ಚಂದ್ರಶೇಖರ ಚೌಧರಿ, ಮಡಿವಾಳ ಯಾಳವಾರ, ಸಂತೋಷ ತಲಕೇರಿ, ರಾಜಶೇಖರ ಭಜಂತ್ರಿ ಇದ್ದರು.



ರೈಲ್ವೆ ಓವರ್ ಬ್ರಿಡ್ಜ್ ಕಾಮಗಾರಿ ಪರಿಶೀಲಿಸಿದ ಸಂಸದ ಜಿಗಜಿಣಗಿ

◆ **ವಿಜಯಪುರ:** ಇಂಡಿ ರಸ್ತೆ ಅಲಿಯಾಬಾದ್ ಕ್ರಾಸ್ ಬಳಿ ನಿರ್ಮಿಸಲಾಗುತ್ತಿರುವ ರೈಲ್ವೇ ಓವರ್ ಬ್ರಿಡ್ಜ್ ಕಾಮಗಾರಿಯನ್ನು ಗುಣಮಟ್ಟದಿಂದ ಕೈಗೊಂಡು, ನಿಗದಿತ 2027ರಲ್ಲಿ ಪೂರ್ಣಗೊಳಿಸಿ ಲೋಕಾರ್ಪಣೆಗೊಳಿಸುವಂತೆ ಅಧಿಕಾರಿ ಹಾಗೂ ಸಂಬಂಧಿಸಿದ ಗುತ್ತಿಗೆದಾರರಿಗೆ ಸಂಸದ ರಮೇಶ ಜಿಗಜಿಣಗಿ ಸೂಚಿಸಿದರು.

ಜಿಲ್ಲಾಧಿಕಾರಿ ಡಾ.ಕೆ. ಆನಂದ ಸೇರಿದಂತೆ ಹಲವು ಅಧಿಕಾರಿಗಳ ಸಮ್ಮುಖದಲ್ಲಿ ಇಂಡಿ ರಸ್ತೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಆರ್‌ಒಬಿ ಕಾಮಗಾರಿ ಖುದ್ದು ಪರಿಶೀಲನೆ ನಡೆಸಿದರು. ಕಾಮಗಾರಿಯ ಹಂತ ಮೊದಲಾದ ವಿವರಗಳನ್ನು ಪಡೆದುಕೊಂಡರು.

ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು. ಯಾವ ಕಾರಣಕ್ಕೂ ವಿಳಂಬ ನೀತಿ ಅನುಸರಿಸಬೇಡಿ. ನಿಗದಿತ 2027ರ ಜನವರಿ ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ ಆರ್‌ಒಬಿ ಲೋಕಾರ್ಪಣೆಯಾಗುವಂತೆ ನೋಡಿಕೊಳ್ಳಿ. ಯಾವ ಲೋಪದೋಷ ಇರಬಾರದು, ಗುಣಮಟ್ಟ ಕಾಯ್ದುಕೊಳ್ಳಬೇಕು ಎಂದರು.

ಸಂಚಾರ ದಟ್ಟಣೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಆರ್‌ಒಬಿಗಳು ಪ್ರಮುಖ ಪಾತ್ರ ವಹಿಸುತ್ತಿದ್ದು, ಇಬ್ರಾಹಿಂಪುರದಲ್ಲಿ ಆರ್‌ಒಬಿ ನಿರ್ಮಾಣದಿಂದ ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆಯಾಗಿದೆ. ಹೀಗಾಗಿ ಪ್ರಸ್ತುತ ಆರ್‌ಒಬಿ ಕಾಮಗಾರಿಯನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸಿ ಎಂದರು.



ಆರ್‌ಒಬಿ ಕಾಮಗಾರಿಯ ಭೌತಿಕ ಪ್ರಗತಿಯ ಕುರಿತು ವಿವರಣೆ ನೀಡಿದ ಎನ್ ಎಚ್‌ಎಐ ಕಾರ್ಯನಿರ್ವಾಹಕ ಅಭಿಯಂತರ ವಿಜಯಕುಮಾರ ಪಾಟೀಲ, ಪ್ರಸ್ತುತ ಶೇ.50 ರಷ್ಟು ಕಾಮಗಾರಿಗಳು ಪೂರ್ಣಗೊಂಡಿದ್ದು, ಒಟ್ಟು 957.09 ಕೋಟಿ ರೂ. ವೆಚ್ಚದಲ್ಲಿ ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಪೂರಕವಾದ ರಸ್ತೆ, ಬಸ್ ಬೇಯ್, 15 ಪ್ರಮುಖ ಜಂಕ್ಷನ್ ಮೊದಲಾದ ಕಾಮಗಾರಿಗಳನ್ನು ಇದರಲ್ಲಿ ಕೈಗೆತ್ತಿಕೊಳ್ಳಲಾಗುತ್ತದೆ ಎಂದರು. ಎಇಇ ವಿವೇಕ ಮಠ, ಪಾಲಿಕೆ ಸದಸ್ಯ ಮಳುಗೌಡ ಪಾಟೀಲ, ವಿಜಯ ಜೋಶಿ, ಉದಯ ಕನ್ನೊಳ್ಳಿ ಇದ್ದರು.

ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿ

◆ **ಇಂಡಿ:** ಇಂದಿನ ದಿನಮಾನಗಳಲ್ಲಿ ಮಕ್ಕಳಿಗೆ ಒಳ್ಳೆಯ ಸಂಸ್ಕಾರಯುತ ಮಾನವೀಯ ಮೌಲ್ಯಗಳನ್ನು ಬೋಧನೆ ಮಾಡುವುದು ಅತಿ ಅವಶ್ಯಕವಾಗಿದೆ. ಆ ಮೂಲಕ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕಾಗಿರುವುದು ಮುಖ್ಯವಾಗಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲರು ಹೇಳಿದರು.

ನಗರದ ಶ್ರೀ ವೀರ ಭಾರತಿ ವಿದ್ಯಾಕೇಂದ್ರದ ಪ್ರೌಢಶಾಲೆ ವಿಭಾಗದಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಮಾತನಾಡಿ, ತಾಂತ್ರಿಕತೆ ಯುಗವಾದ ಇಂದು ಹೆಚ್ಚಿದ ಸಾಮಾಜಿಕ ಜಾಲತಾಣದ ಹಾವಳಿಗೆ ಮಕ್ಕಳು ಸಿಲುಕಿ ಮಾನವೀಯ ಮೌಲ್ಯಗಳ ಮರೆಯುತ್ತಿದ್ದಾರೆ. ಗುರು ಹಿರಿಯನ್ನು ಗೌರವ ಆಧರದಿಂದ ಕಾಣವಂತಾಗಬೇಕು. ಆ ನಿಟ್ಟಿನಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಪಾಲಕ, ಪೋಷಕರು ಮಕ್ಕಳಿಗೆ ಪ್ರೀತಿ ಆಧಾರದಿಂದ ಕಾಣುವಂತಾಗಬೇಕು. ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಂಡು ಅವರೊಳಗಿರುವ ಸೂಕ್ತ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಮಾಡಬೇಕು. ಕೇವಲ ಹಣದ ಹಿಂದೆ ಬೀಳುವ ಬದಲಾಗಿ ತಮ್ಮ ಮಕ್ಕಳನ್ನು ಗಮನದಲಿಟ್ಟುಕೊಂಡು ಅವರ ಅಭಿರುಚಿಗೆ ತಕ್ಕಂತೆ ಶಿಕ್ಷಣ ಕೊಡಿಸುವುದು ಮುಖ್ಯ ಎಂದರು.



ಹುಬ್ಬಳ್ಳಿ ಎ.ಜಿ.ಎಂ ಇಂಜಿನಿಯರಿಂದ ಮಹಾವಿದ್ಯಾಲಯದ ಪ್ರಾಚಾರ್ಯ ಸಂದೀಪ ಕ್ಯಾತನವರ, ಬೆಂಗಳೂರಿನ ವೈದ್ಯ ಮಂಜುನಾಥ ಮುಸಳಿ, ರತನಚಂದ ಕೋಟಿ, ಸಂಸ್ಥೆಯ ಅಧ್ಯಕ್ಷ ಅಭಿನಂದನ ಧನಶೆಟ್ಟಿ, ಕ್ಯಾತನ ಗುರುಗಳು ಮಾತನಾಡಿದರು.

ಲಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಭೀಮಣ್ಣ ಕವಲಗಿ, ಸಂಸ್ಥೆಯ ನಿರಂಜನ ಶಹಾ, ವಿದ್ಯಾಸಾಗರ ಧನಶೆಟ್ಟಿ, ಅಜೀತ ಧನಶೆಟ್ಟಿ, ಲಕ್ಷ್ಮೀಕಾಂತ ದುರ್ಗಿ, ಸಚೀನ ಶಹಾ, ಲಾಲಬಹಾದ್ದೂರ ಧನಶೆಟ್ಟಿ, ಸಂತೋಷ ವರ್ಧಮಾನ ರಾಹುಲ್ ಪಂಡಿತ, ಸುರೇಶ ಅಂಗಡಿ, ಮುಖ್ಯ ಗುರುಗಳಾದ ಶಿವಾನಂದ ಭೀಮನಗರ, ಶಿವು ಮದರಖಂಡಿ ಮತ್ತಿತರಿದ್ದರು.

ಹಕ್ಕಿಗಳ ಸಂತತಿ, ವಲಸೆ ವಿರಳ: ಕಳವಳ

▶ ರವೀಂದ್ರ ನಂದೆಪ್ಪನವರ

◆ **ಮುದ್ದೇಬಿಹಾಳ:** ಒಣ ಬೇಸಾಯ, ಕೃಷಿ ಹಿನ್ನೆಲೆಯ ತಾಲೂಕಿನಲ್ಲಿ ನೂರಾರು ಕೆರೆಗಳು, ಕೃಷ್ಣಾ ನದಿಯ ಹಿನ್ನೀರು, ಕಾಲುವೆ, ನೀರಿನ ಹರಿವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಆದರೆ ವರ್ಷದಿಂದ ವರ್ಷಕ್ಕೆ ಪಕ್ಷಿಗಳ ಕಲರವ, ವಿದೇಶಿ ಹಕ್ಕಿಗಳ ವಲಸೆ ಪ್ರಮಾಣ ಗಣನೀಯ ಕಡಿಮೆ ಆಗಿರುವುದು ಮಾನವ ಮತ್ತು ಪಕ್ಷಿ ಪ್ರಪಂಚದ ನಡುವಿನ ಕೊಂಡಿ ಕಳಚಿರುವುದಕ್ಕೆ ಸಾಕ್ಷಿಯಾಗಿ, ಪಕ್ಷಿ ಪ್ರಿಯರ ಕಳವಳಕ್ಕೆ ಕಾರಣವಾಗಿದೆ.

ತಾಲೂಕಿನ ಮುಖ್ಯ ಕೇಂದ್ರದಲ್ಲಿ ಎರಡು ಕೆರೆಗಳು ಇವೆ. ಪ್ರತಿವರ್ಷ ಚಳಿಗಾಲ ಮತ್ತು ಹೊಸ ವರ್ಷದ ಪ್ರಾರಂಭದಲ್ಲಿ ಸಾವಿರಾರು ಪಕ್ಷಿಗಳು ವಲಸೆಬರುವುದುವಾಡಿಕೆ. ಆದರೆ ಊರಲ್ಲಿ ಪ್ಲಾಸ್ಟಿಕ್ ಪರಿಸರ ಬೆಳೆಯುತ್ತಿರುವುದರಿಂದ ಘನತ್ಯಾಜ್ಯದಲ್ಲಿ ಹಕ್ಕಿಗಳು ಕೀಟಗಳನ್ನು ಹುಡುಕುವಂತಾಗಿದೆ. ಕೃಷಿ ಮತ್ತು ಅದಕ್ಕೆ ಹೊಂದಿಕೊಂಡು ಪ್ರಾಣಿ-ಪಕ್ಷಿಗಳು ಮಾನವನೊಂದಿಗೆ ಹೊಂದಿಕೊಂಡು ಬಾಳುವ ಚಟುವಟಿಕೆ ಕಡಿಮೆ ಆಗಿವೆ. ವಾಣಿಜ್ಯೀಕರಣ, ಭೂಮಿಯ ಅಪ ಬಳಕೆ ಮಾಡುತ್ತಾ ಬಂದಿದ್ದಾನೆ. ಈ ಕಾರಣಕ್ಕೆ ಇಂದು ಅರಣ್ಯ ಬಹಳಷ್ಟು ಕಡಿಮೆಯಾಗಿದೆ. ದೇಶಿಯ ಗುಬ್ಬಿ, ಕಾಗೆ,



ಬೆಳ್ಳಕ್ಕಿ ಸೇರಿದಂತೆ ದೇಶ ವಿದೇಶಗಳಿಂದ ಹಕ್ಕಿಗಳು ಬರುತ್ತಿದ್ದ ಕಾಲವನ್ನು ನೆನಪಿಸಿಕೊಂಡು ಬದುಕುವದಾಗಿದೆ.

ಕೃಷಿ ಚಟುವಟಿಕೆಯಲ್ಲಿ ರಾಸಾಯನಿಕ, ಕ್ರಿಮಿನಾಶಕಗಳನ್ನು ಬಳಕೆ ಮಾಡುವುದರಿಂದ ಹಕ್ಕಿಗಳ ಜೀವನ ಕ್ರಮದ ಮೇಲೆ ಪರಿಣಾಮ ಬೀರಿದೆ. ಈ ಹಿನ್ನೆಲೆಯಲ್ಲಿ ವರ್ಷದಿಂದ ವರ್ಷಕ್ಕೆ ಬೇರೆ ಕಡೆಯಿಂದ ಬರುತ್ತಿದ್ದ ಹಕ್ಕಿಗಳ ವಲಸೆ ತೀವ್ರ ಕುಸಿತ ಕಂಡಿದೆ. ಗುಂಪು ಗುಂಪಾಗಿ ಬರುತ್ತಿದ್ದ ಹಕ್ಕಿಗಳು ಕಾಣುತ್ತಿಲ್ಲ. ಇಂದು ಆಕಾಶ ಬಣಗುಟ್ಟುತ್ತಿದೆ. ಇಂದಿನ ಯುವ ಪೀಳಿಗೆಗೆ ಪರಿಸರದ ಸಮತೋಲನ, ಪಕ್ಷಿಗಳ ಮಹತ್ವ ಗಮನಕ್ಕೆ ಬರುತ್ತಿಲ್ಲ. ಅಸಮತೋಲನದಿಂದ ಉಂಟಾಗುವ ಕಾರಣ, ಪರಿಣಾಮದ ಬಗ್ಗೆ ಎಚ್ಚರಿಸುವವರು ಯಾರು ಎಂಬ ಪ್ರಶ್ನೆ ಹುಟ್ಟಿದೆ.

ಗುಂಪು ಗುಂಪಾಗಿ ಹಾರಿ ಬರುತ್ತಿದ್ದ ಪಕ್ಷಿಗಳ ಹಿಂಡು ಕಾಣದಾಗಿ ವರ್ಷಗಳೇ ಕಳೆದಿವೆ. ಪಕ್ಷಿಗಳ ಇರುವುದನ್ನು ಗಮನಿಸದೇ ಮಾನವ ನಗರೀಕರಣದಲ್ಲಿ ತಲ್ಲೀನನಾಗಿದ್ದು ಪಕ್ಷಿಗಳ ವಿನಾಶ, ಮಾನವನ ಅವನತಿಗೆ ಕಾರಣವಾಗಬಹುದು.

■ ನಾಗಭೂಷಣ ನಾವದಗಿ, ಹಸಿರು ತೋರಣ ಬಳಗದ ಸದಸ್ಯ

ಹಕ್ಕಿಗಳು ಮೊದಲಿನಂತೆ ಹಿಂಡಾಗಿ ಬರುವುದಿಲ್ಲ. ಕೃಷಿ ಚಟುವಟಿಕೆ ಮಾಡುವಾಗ ಅಲ್ಲೊಂದು ಇಲ್ಲೊಂದು ಹಕ್ಕಿಗಳು ಕೀಟಗಳನ್ನು ತಿನ್ನಲು ಬರುತ್ತವೆ. ಕೀಟನಾಶಕ ಬಳಕೆ, ಆಹಾರ ಕೊರತೆಯಿಂದ ವಲಸೆ ಇತ್ತೀಚೆಗೆ ಕಡಿಮೆಯಾಗಿದೆ.

■ ಬಸವರಾಜ್ ಹಾದಿಮನಿ, ಕಾಳಗಿ ಗ್ರಾಮದ ಪ್ರಗತಿಪರ ರೈತ

ಕೀಟನಾಶಕ ಬಳಕೆ, ಭೇಟೆ, ಮಾನವ ಅಡ್ಡಿಗಳಿಂದ ಪಕ್ಷಿ ಪ್ರಭೇದಗಳು ಅಪಾಯದಲ್ಲಿವೆ ಆದ್ದರಿಂದ ಗೂಡು ಪ್ರದೇಶಗಳ ರಕ್ಷಣೆ, ಮರಕಡಿತ ನಿರ್ಬಂಧ, ಜಲಾವಳಿ ಹಣ್ಣು-ಹೂ ನೀಡುವ ಸಸ್ಯ ನೆಡುವಿಕೆ, ನಿಯಮಿತ ಪಕ್ಷಿ ಗಣನೆ, ಜನಜಾಗೃತಿ ಮೂಲಕ ಸ್ಥಳೀಯರ ಸಹಭಾಗಿತ್ವ ಬೇಕಿದೆ.

■ - ಬಸನಗೌಡ ಬಿರಾದಾರ್, ಪ್ರಾದೇಶಿಕ ವಲಯ ಅರಣ್ಯ ಅಧಿಕಾರಿ

ಜೆಇಇ ಫಲಿತಾಂಶ: ನಿತಿನ್ ಭಂಡರಕವಟೆ ಸಾಧನೆ

◆ **ಚಡಚಣ:** ಜಂಟಿ ಪ್ರವೇಶ ಪರೀಕ್ಷೆ (ಜೆಇಇ) ಫಲಿತಾಂಶದಲ್ಲಿ ಚಡಚಣ ಪಟ್ಟಣದ ನಿತಿನ್ ನೀಲಕಂಠ ಭಂಡರಕವಟೆ ಅವರು ಶೇ.98.88 ಅಂಕ ಪಡೆದು



ಗಮನಾರ್ಹ ಸಾಧನೆ ಮಾಡಿದ್ದಾರೆ. ಅವರ ಈ ಸಾಧನೆಗೆ ಪಟ್ಟಣದಾದ್ಯಂತ ಹರ್ಷ ವ್ಯಕ್ತವಾಗಿದೆ. ವಿಷಯವಾರು ಅಂಕಗಳಲ್ಲಿ ಭೌತಶಾಸ್ತ್ರದಲ್ಲಿ ಶೇ.95.5, ರಸಾಯನ ಶಾಸ್ತ್ರದಲ್ಲಿ ಶೇ.99.14 ಹಾಗೂ ಗಣಿತದಲ್ಲಿ ಶೇ.99.08 ಅಂಕ ಗಳಿಸಿ ಕೀರ್ತಿ ತಂದಿದ್ದಾರೆ. ನಿತಿನ್ ಅವರ ತಂದೆ ನೀಲಕಂಠ ಭಂಡರಕವಟೆ ಅವರು ಚಡಚಣ ಪಟ್ಟಣದಲ್ಲಿ ಸರಾಫ ವ್ಯಾಪಾರಿಯಾಗಿದ್ದು, ತಾಯಿ ಗೃಹಿಣಿಯಾಗಿದ್ದಾಳೆ. ತಂದೆಯ ಆಶಯದಂತೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಐಎಎಸ್ ಅಧಿಕಾರಿಯಾಗುವ ಗುರಿಯನ್ನು ನಿತಿನ್ ಹೊಂದಿದ್ದಾರೆ ಎಂದರು. ನಿರಂತರ ಪರಿಶ್ರಮ, ಒತ್ತಡರಹಿತ ಅಧ್ಯಯನವೇ ತನ್ನ ಯಶಸ್ಸಿನ ರಹಸ್ಯ ಎಂದು ನಿತಿನ್ ಹೇಳಿದರು. ನಿತಿನ್ ಸಾಧನೆಗೆ ಶಿಕ್ಷಕರು, ಸ್ನೇಹಿತರು, ಪಟ್ಟಣದ ಗ್ರಾಮಸ್ಥರು, ಸರಾಫ ವ್ಯಾಪಾರಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

ಸಾಧಕರಿಗೆ ಗೌರವ: ಸಮಾಜದ ಜವಾಬ್ದಾರಿ



◆ **ತಾಳಿಕೋಟೆ:** ಸಮಾಜದ ಹಿತಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡು ಸೇವೆ ಮಾಡುತ್ತಿರುವ ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ ಗೌರವಿಸುವ ಕಾರ್ಯ ಸಮಾಜದಿಂದಾಗಬೇಕು ಎಂದು ಶಾಸಕ ಅಪ್ಪಾಜಿ ನಾಡಗೌಡ ಹೇಳಿದರು.

ಪಟ್ಟಣದ ಟಿಪ್ಪು ನಗರದ ಆವರಣದಲ್ಲಿ ಡಾ.ಎಪಿಜೆ ಅಬ್ದುಲ್ ಕಲಾಂ ಫೌಂಡೇಶನ್ 9ನೇ ವಾರ್ಷಿಕೋತ್ಸವ ಅಂಗವಾಗಿ ಹಮ್ಮಿಕೊಂಡ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ, ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಪುರಸಭೆ ಮಾಜಿ ಸದಸ್ಯ ಪ್ರಭುಗೌಡ ಮದರ್ಕಲ್, ಮುಸ್ಲಿಂ ಬ್ಯಾಂಕ್ ನಿರ್ದೇಶಕ ಇಬ್ರಾಹಿಂ ಮನ್ಸೂರ್ ಮಾತನಾಡಿದರು. ವಿವಿಧ ಸಾಧಕರಿಗೆ, ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ, ಫೌಂಡೇಶನ್ ಅಧ್ಯಕ್ಷ ಮೊಹಮ್ಮದ್ ಶಫೀಕ ಇನಾಮದಾರ, ಮುಖಂಡ ಸಿದ್ದನಗೌಡ ಪಾಟೀಲ(ನಾವದಗಿ), ಸಂಗನಗೌಡ ಲಿಂಗದಳ್ಳಿ, ಸಂಗನಗೌಡ ಅಸ್ಕಿ, ಮುಸ್ಲಿಂ ಬ್ಯಾಂಕ್ ಅಧ್ಯಕ್ಷ ಮಹಿಬೂಬ ಕೆಂಭಾವಿ, ನಿರ್ದೇಶಕ ಆದಮಸಾಬ ಅತ್ತಾರ, ಮಹೆಬೂಬ ಖಾದ್ರಿ, ಮಹಲ್ ಗಲ್ಲಿ ಅಧ್ಯಕ್ಷ ಹಸನಸಾಬ ಕೊರ್ಕಿ, ಕೃಷಿ ಅಧಿಕಾರಿ ಮಹೇಶ ಜೋಶಿ, ಅಬ್ದುಲ್ ರಜಾಕ್ ಮನಗೂಳಿ, ಶಾಸಕರ ಆಪ್ತ ಕಾರ್ಯದರ್ಶಿ ಬಾಗೇವಾಡಿ, ಪುರಸಭೆ ಮಾಜಿ ಅಧ್ಯಕ್ಷ ಎಂ.ಕೆ.ಚೋರಗಸ್ತಿ, ಮೋದಿನಸಾ ನಗಾರ್ಚಿ, ನಾಸೀರಹುಸೇನ ಇನಾಮದಾರ, ಮೌ. ಮೊಹಮ್ಮದ್ ಯೂಸುಫ್ ಡೋಣಿ, ಕಾರ್ಯದರ್ಶಿ ಪೀರಮಹಮದ್ ಖಾಜಿ, ಅಬ್ಬಾಸಲಿ ನೀರಲಗಿ, ಶೌಕತ್ ಲಾಹೋರಿ, ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ಆಸೀಫ ಕೆಂಭಾವಿ, ಸಚಿನ ಎಚ್.ಪಾಟೀಲ, ಮಹಾಂತೇಶ ಮುರಾಳ, ಸೈಯದ್ ಇರ್ಫಾನ್ ಖಾಜಿ, ಮೊಹಮ್ಮದ್ ಅಶ್ಫಾಕ್ ನಮಾಜಕಟ್ಟಿ, ಜಾವೀದ ಕೆಂಭಾವಿ, ಗುಲಾಮ ಡೋಣಿ, ಯಾಸೀನ ಮಕಾಂದಾರ, ಹನೀಫ ಜಮಾದಾರ, ಫೌಂಡೇಶನ್ ಪದಾಧಿಕಾರಿಗಳು ಇದ್ದರು.

ಕಿರು ಸುದ್ದಿ

ವಿದ್ಯುತ್ ಪೂರೈಸಲು ರೈತರ ಆಗ್ರಹ

ಕುಕನೂರು: ಜೆಸ್ಕಾಂ ವತಿಯಿಂದ ರೈತರಿಗೆ ಅನುಕೂಲವಾಗುವಂತೆ ವಿದ್ಯುತ್ ಪೂರೈಸಬೇಕು ಎಂದು ಆಗ್ರಹಿಸಿ ತಾಲೂಕಿನ ಮಂಗಳೂರು ಗ್ರಾಮದ ವಿದ್ಯುತ್ ಉಪಕೇಂದ್ರದ ಎದುರು ಭೈರನಾಯಕನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ರೈತರು ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ್ದಾರೆ. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ನಸುಕಿನ ಜಾವ 5 ಗಂಟೆಗೆ ವಿದ್ಯುತ್ ಪೂರೈಕೆ ಮಾಡುತ್ತಿರುವ ಕ್ರಮದಿಂದ ತೊಂದರೆ ಉಂಟಾಗುತ್ತಿದೆ. ನಮ್ಮ ಭಾಗದಲ್ಲಿ ಕರಡಿ ಸೇರಿ ಕಾಡುಪ್ರಾಣಿಗಳ ಹಾವಳಿ ಇರುವುದರಿಂದ ನಸುಕಿನಲ್ಲಿ ಹೊಲಗಳಿಗೆ ತೆರಳುವುದು ಅಪಾಯಕಾರಿಯಾಗಿದ್ದು, ರೈತರ ಸುರಕ್ಷತೆ ಅರಿತು ಬೆಳಗ್ಗೆ 9 ಗಂಟೆಗೆ ವಿದ್ಯುತ್ ಪೂರೈಕೆ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಮಲ್ಲನಗೌಡ ಕೋನನಗೌಡ್ರ ನೇತೃತ್ವದಲ್ಲಿ ನಡೆದ ಪ್ರತಿಭಟನೆ ನಡೆಯಿತು. ಸಣ್ಣಾಹನುಮಂತ, ಶಿವಾನಂದಪ್ಪ ಮಾರುತಿ, ಶಂಕ್ರಪ್ಪ ಚಿಂಚರ್, ಗವಿಸಿದ್ದಪ್ಪ ಜಿನ್ನಾಪುರ, ಬಸವರಾಜ, ಹನುಮಂತಪ್ಪ ಮಾಮನಿ, ಮುನಿಯಪ್ಪ ಶಿವನಗೌಡ, ಅಂಬ್ರಪ್ಪ ಮದ್ದೂರ್, ಗವಿಸಿದ್ದಪ್ಪ ಮರಿಯಪ್ಪ, ಈರಪ್ಪ, ವಿರೂಪಾಕ್ಷಿ ಹರಿಜನ, ಚೆನ್ನಪ್ಪ, ಷಣ್ಮುಖಪ್ಪ ಹನುಮಂತಪ್ಪ ಡಗ್ಗಿ, ದ್ಯಾಮಣ್ಣ ಶಿವೂ, ಹನುಮಂತಪ್ಪ ಶರಣಪ್ಪ ಮೊದಲಾದವರು ಉಪಸ್ಥಿತರಿದ್ದರು.

ನಾಳೆ ಹಿಂದೂ ಸಮ್ಮೇಳನ: ಡಾ.ಅಮರೇಶ


ಗಂಗಾವತಿ: ನಗರದಲ್ಲಿ ಫೆ.19ರಂದು ಸಂಜೆ 5 ಗಂಟೆಗೆ ಡಾ.ಬಾಬು ಜಗಜೀವನರಾಮ್ ವೃತ್ತದಲ್ಲಿ ನಗರದ ಪೂರ್ವಭಾಗದ ಹಿಂದೂ ಸಮ್ಮೇಳನ ಆಯೋಜಿಸಲಾಗಿದೆ.



ಸಮ್ಮೇಳನದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ವಿದ್ಯಾರ್ಥಿಗಳಿಂದ ಸಾಹಸ ಪ್ರದರ್ಶನ ಮತ್ತು ಮಠಾಧೀಶರ ಆಶೀರ್ವಚನ, ವಕ್ತಾರರ ಭಾಷಣ ನಡೆಯಲಿದೆ. ಹಿಂದೂ ಸಮಾಜ ಸೇರಿದಂತೆ ನಗರದ ವಿವಿಧ ಸಮಾಜದ ಗಣ್ಯರು, ಯುವಕರು, ಮಾತೆಯರು ಭಾಗವಹಿಸಬೇಕು ಎಂದು ಹಿಂದೂ ಸಮ್ಮೇಳನ ಸಮಿತಿಯ ನಗರ ಸಂಯೋಜಕ ಡಾ.ಅಮರೇಶ ಪಾಟೀಲ ಹೇಳಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ನೂರು ವರ್ಷದ ಹಿನ್ನೆಲೆಯಲ್ಲಿ ವರ್ಷಪೂರ್ತಿ ವಿವಿಧ ಕಾರ್ಯಕ್ರಮಗಳು ನಡೆಯುತ್ತಿವೆ. ಶತಾಬ್ದಿ ಅಂಗವಾಗಿ ಈಗ ರಾಜ್ಯಾದ್ಯಂತ ಹಿಂದು ಸಮ್ಮೇಳನಗಳನ್ನು ಆಯೋಜಿಸಲಾಗಿದೆ. ಅದರಂತೆ ಗಂಗಾವತಿ ನಗರದಲ್ಲೂ ಸಹ ಹಿಂದೂ ಸಮಾಜದ ಜಾಗೃತಿ, ಹಿಂದೂ ಸಮಾಜದಲ್ಲಿ ಸಂಸ್ಕಾರ, ಸಾಮರಸ್ಯ, ಪರಿಸರ ಮತ್ತು ನಾಗರಿಕ ಶಿಷ್ಟಾಚಾರಗಳನ್ನು ಪಾಲಿಸಲು ಜಾಗೃತಿ ಮೂಡಿಸುವ ದೃಷ್ಟಿಯಿಂದ ಸಮ್ಮೇಳನಗಳನ್ನು ನಡೆಸಲಾಗುತ್ತಿದೆ. ಸಂಜೆ 5 ಗಂಟೆಗೆ 25 ರಿಂದ 35 ವಾರ್ಡ್‌ಗಳ ಪೂರ್ವಭಾಗದ ಸಮಿತಿಯಿಂದ ಹಿಂದೂ ಸಮ್ಮೇಳನವನ್ನು ನಗರದ ಡಾ.ಬಾಬು ಜಗಜೀವನರಾಮ್ ವೃತ್ತದಲ್ಲಿ ಆಯೋಜಿಸಲಾಗಿದೆ. ಈ ಸಮ್ಮೇಳನದಲ್ಲಿ ವಿವಿಧ ಸಾಂಸ್ಕೃತಿ ಕಾರ್ಯಕ್ರಮಗಳು ಮತ್ತು ವಿಕಲಚೇತನ ಮಕ್ಕಳ ಮಲ್ಲಕಂಭ ಸಾಹಸ ಪ್ರದರ್ಶನ, ತಾಯಂದಿರ ಉಡಿ ತುಂಬುವ ಕಾರ್ಯಕ್ರಮಗಳು ನಡೆಸಲಾಗುತ್ತಿದೆ. ಜೊತೆಗೆ ಗಿಣಿಗೇರಿಯ ಅಭಿನವ ಶ್ರೀಕಂಠಸ್ವಾಮಿಗಳ ಸಾನಿಧ್ಯದಲ್ಲಿ ರಾಷ್ಟ್ರೀಯ ಯುವ ಚಿಂತಕ ಕಿರಣಕುಮಾರ ವಿವೇಕ ವಂಶಿ ಅವರಿಂದ ವಿಶೇಷ ಭಾಷಣ ನಡೆಯಲಿದೆ ಎಂದರು.

ಸರ್ವಾಧ್ಯಕ್ಷರಾಗಿ ಸಾಹಿತಿ ಡಾ.ಬಸವಪ್ರಭು ಆಯ್ಕೆ

ಮಾನ್ವಿ: ಮಾನ್ವಿ ತಾಲೂಕು 11ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಹಿರಿಯ ಸಾಹಿತಿ ಡಾ.ಬಸವಪ್ರಭು ಪಾಟೀಲ ಅವರನ್ನು ತಾಲೂಕು ಕಸಾಪ ಕಾರ್ಯಕಾರಿ ಸಮಿತಿಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಕಸಾಪ ಅಧ್ಯಕ್ಷ ಶರಣಬಸವ ನೀರಮಾನ್ವಿ ತಿಳಿಸಿದ್ದಾರೆ.



ಫೆ.28ರಂದು ನೀರಮಾನ್ವಿ ಗ್ರಾಮದ ಶ್ರೀಸಿದ್ಧಾರೂಢ ಮಠದ ಮೈದಾನದಲ್ಲಿ ನಡೆಯುವ 11ನೇ ಮಾನ್ವಿ ತಾಲೂಕ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಡಾ.ಬಸವಪ್ರಭು ಪಾಟೀಲ ಅವರನ್ನು ಆಯ್ಕೆ ಮಾಡಿರುವುದು ಸಾಹಿತ್ಯಿಕ ಬಳಗದಲ್ಲಿ ತುಂಬಾ ಹರ್ಷವನ್ನುಂಟು ಮಾಡಿದೆ ಎಂದರು. ಫೆ.28ರಂದು ನಡೆಯುವ 11ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನವು ಕನ್ನಡ ನಾಡು ನುಡಿಯ ಜಾತ್ರೆಯಾಗಿದ್ದು ಕನ್ನಡ ಪ್ರೇಮಿಗಳು ಕನ್ನಡ ಅಭಿಮಾನಿಗಳು ಎಲ್ಲರೂ ಒಗ್ಗೂಡಿ ಸಮ್ಮೇಳನ ಯಶಸ್ಸಿಗೆ ಶ್ರಮಿಸಬೇಕಿದೆ ಎಂದು ಶರಣಬಸವ ನೀರಮಾನ್ವಿ ಮನವಿ ಮಾಡಿದ್ದಾರೆ.



ಕುಕನೂರು: ಜೆಸ್ಕಾಂ ವತಿಯಿಂದ ರೈತರಿಗೆ ಅನುಕೂಲವಾಗುವಂತೆ ವಿದ್ಯುತ್ ಪೂರೈಸಬೇಕು ಎಂದು ಆಗ್ರಹಿಸಿ ತಾಲೂಕಿನ ಮಂಗಳೂರು ಗ್ರಾಮದ ವಿದ್ಯುತ್ ಉಪಕೇಂದ್ರದ ಎದುರು ಭೈರನಾಯಕನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ರೈತರು ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ್ದಾರೆ.

ಸಂಭ್ರಮದಿಂದ ನಡೆದ ಮಹಾಶಿವರಾತ್ರಿ

ಯಲಬುರ್ಗಾ: ತಾಲೂಕಿನಾದ್ಯಂತ ಭಕ್ತಿಭಾವದಿಂದ ಭಾನುವಾರ ಸಂಜೆ ಮಹಾಶಿವರಾತ್ರಿ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಿದರು. ಬೆಳಿಗ್ಗೆಯಿಂದಲೇ ಸಾರ್ವಜನಿಕರು ದೇವಸ್ಥಾನಗಳಿಗೆ ತೆರಳಿ ಭಕ್ತಿಯಿಂದ ಪೂಜೆ ಸಲ್ಲಿಸಿದರು. ಪಟ್ಟಣದ ಪಪಂ ಆವರಣದ ಹತ್ತಿರ ಇರುವ ಬೃಹತ್‌ಕಾರದ ಶಿವನಮೂರ್ತಿಗೆ ಸಂಜೆ ವಿಶೇಷ ಪೂಜೆ ಹಾಗೂ ಸ್ಥಳೀಯ ಶ್ರೀಧರ ಮುರಡಿ ಹಿರೇಮಠ, ಶಿವಾ,ಪಾರ್ವತಿ ದೇವಸ್ಥಾನ, ವಿಜಯದುರ್ಗಾದೇವಿ, ಬಸವೇಶ್ವರ ನಗರದ ಈಶ್ವರ ದೇವಸ್ಥಾನ ಬಳಿ ನೂರಾರು ಸಂಖ್ಯೆಯಲ್ಲಿ ಭಕ್ತರು ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಪಪಂ ವತಿಯಿಂದ ಶಿವನಮೂರ್ತಿಗೆ ವಿಶೇಷ ಪೂಜೆಗೆ ಪಪಂ ಮುಖ್ಯಾಧಿಕಾರಿ ನಾಗೇಶ್ ಚಾಲನೆ ನೀಡಿದರು. ಸಿಬ್ಬಂದಿಗಳಾದ ವನರಾಜ, ರಮೇಶ ಬೇಲೇರಿ, ಸುಭಾಷ ಭಾವಿಮನಿ, ಸುಮಾ, ವನರಾಜ ಸೇರಿದಂತೆ ಪಟ್ಟಣದ ಅನೇಕ ಮಹಿಳೆಯರು ಪೂಜೆ ಸಲ್ಲಿಸಿದರು. ಶಿವರಾತ್ರಿ ಹಿನ್ನೆಲೆ ಮಾರುಕಟ್ಟೆಯಲ್ಲಿ ಹಣ್ಣು ಹೂವುಗಳು ಮಾರಾಟ ಭರ್ಜರಿಯಾಗಿ ನಡೆಯಿತು. ದ್ರಾಕ್ಷೀ, ಕಲಂಗಡಿ, ಕರಬೂಜ, ಬಾಳೆಹಣ್ಣು, ಕಜೂರ ಸೇರಿದಂತೆ ವಿವಿಧ ತರಹದ ಹಣ್ಣು ಹೂವುಗಳು ಹೆಚ್ಚಿನ ದರಕ್ಕೆ ಮಾರಾಟವಾದವು.





ಹನುಮಸಾಗರ: ಹಂಪಿ ಉತ್ಸವದಲ್ಲಿ ಹನುಮಸಾಗರದ ಸಿರಿಗನ್ನಡ ಸ್ವರ ಸಂಗೀತ ಪಾಠಶಾಲೆಯ ಸಂಗೀತ ಕಲಾವಿದ ಗ್ಯಾನಪ್ಪ ತಳವಾರ ಸೇಬಿನಕಟ್ಟಿ ತಂಡದವರಿಂದ ಶ್ರೀವಿರೂಪಾಕ್ಷೇಶ್ವರ ವೇದಿಕೆಯಲ್ಲಿ ಸುಗಮ ಸಂಗೀತ ಕಾರ್ಯಕ್ರಮ ಜರುಗಿತು. ವಿನೋದ ಪಾಟೀಲ ಕೀಬೋರ್ಡ್, ಶಂಕರ್ ಬಸೂದೆ ರಿದಂಪ್ಯಾಡ್, ಮಣಿಕಂಠ ವಿಶ್ವಕರ್ಮ ತಬಲಾ ಸಾಥ್ ನೀಡಿದರು. ತಿಪ್ಪಣ್ಣ ಕಬ್ಬರಗಿ ತಾಳವಾದ್ಯ ಮೂಲಕ ಪ್ರಸ್ತುತ ಪಡಿಸಿದರು.

ಜಿಲ್ಲಾ ಗ್ಯಾರಂಟಿ ಕಾರ್ಯಾಗಾರ | ಸಚಿವ ತಂಗಡಗಿ ಅಭಿಪ್ರಾಯ

ಗ್ಯಾರಂಟಿಯಿಂದ ಜೀವನಮಟ್ಟ ಸುಧಾರಣೆ

ಕೊಪ್ಪಳ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಐದು ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಹೆಣ್ಣುಮಕ್ಕಳು ಸ್ವಾಭಿಮಾನದಿಂದ ಬದುಕು ಸಾಗಿಸಲು ಸಾಧ್ಯವಾಗಿದ್ದು, ಅವರ ಜೀವನದ ಗುಣಮಟ್ಟ ಸುಧಾರಿಸಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ಎಸ್.ತಂಗಡಗಿ ಅಭಿಪ್ರಾಯಪಟ್ಟರು.



ನಗರದಮಧುಶ್ರೀ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಜಿಲ್ಲಾ ಗ್ಯಾರಂಟಿ ಕಾರ್ಯಾಗಾರ ಉತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದ ಪ್ರತಿಯೊಂದು ಮನೆಯಲ್ಲೂ ನೆಮ್ಮದಿ ವಾತಾವರಣ ನಿರ್ಮಾಣವಾಗಿದ್ದರೆ, ಅದು ಗ್ಯಾರಂಟಿ ಯೋಜನೆಯಿಂದ ಮಾತ್ರ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ನಮ್ಮ ಸರ್ಕಾರ ನೀಡಿರುವ ಗ್ಯಾರಂಟಿ ಯೋಜನೆಯಿಂದ ಬಿಜೆಪಿಯವರಿಗೆ ತಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ, ಯೋಜನೆ ಹೀಗೆ ಮುಂದುವರೆದರೆ ರಾಜ್ಯದಲ್ಲಿ ಅವರಿಗೆ ಭವಿಷ್ಯವಿಲ್ಲ ಎಂದು ಗೊತ್ತು. ಹೀಗಾಗಿ ಗ್ಯಾರಂಟಿ ಯೋಜನೆಯಿಂದ ರಾಜ್ಯ ಸರ್ಕಾರ ದಿವಾಳಿಯಾಗಿದೆ ಎಂದು ಇಲ್ಲ- ಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಬಿಜೆಪಿ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

ತಾವು ಪಡೆಯುತ್ತಿರುವ ಐದು ಗ್ಯಾರಂಟಿ ಯೋಜನೆಗಳ ಬಗ್ಗೆ ನಿಮ್ಮ ಮನೆ ಬಾಗಿಲಿಗೆ ಬರುವ ಬಿಜೆಪಿಗರಿಗೆ, ನೀವು ಮೂರೂವರೆ ವರ್ಷ ಅಧಿಕಾರದಲ್ಲಿದ್ರಿ. ಯಾವ ಯೋಜನೆಯನ್ನು ಕೊಟ್ಟಿದ್ದೀರ ಎಂದು ಪ್ರಶ್ನೆ ಮಾಡಬೇಕು ಎಂದು ಕರೆಕೊಟ್ಟರು.

ಕೇಂದ್ರ ಸರ್ಕಾರದ್ದು ಎಲ್ಲವೂ ಹಣ ವ್ಯಯಿಸದ ಯೋಜನೆಗಳಾಗಿವೆ. ಸ್ವಚ್ಛ ಭಾರತ ಯೋಜನೆ, ಪೊರಕೆಯೂ ನಮ್ಮದೆ, ಕಸವೂ ನಮ್ಮದೆ, ಕಸ ಬಳಿಯುವವರು ಕೂಡ ನಾವೇ. ಯೋಜನೆ ಮಾತ್ರ ಕೇಂದ್ರದ್ದು. ಇನ್ನು ಬೇಟಿ ಬಚಾವೋ-ಬೇಟಿ ಪಡಾವೋ ಯೋಜನೆ ಬಗ್ಗೆ ಪ್ರತಿಕ್ರಿಯಿಸಿ, ಮಕ್ಕಳು ನಮ್ಮದ್ದು, ಯೋಜನೆ ಮಾತ್ರ ಅವರದ್ದು ಎಂದು ವ್ಯಂಗ್ಯವಾಡಿದರು.

ಬಿಜೆಪಿಯವರಿಗೆ ಬಡವರು ನೆಮ್ಮದಿಯಾಗಿ ಬದುಕುವುದು ಇಷ್ಟವಿಲ್ಲ, ಹೀಗಾಗಿ ಯುಪಿಎ ನೇತೃತ್ವದ ಸರ್ಕಾರ ಜಾರಿಗೆ ತಂದಿದ್ದ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿಯ ಯೋಜನೆಯ ಹೆಸರು ಬದಲಾಯಿಸಿ, ಕಾಯ್ದೆಗೆ ತಿದ್ದುಪಡಿ ತಂದಿದ್ದಾರೆ. ಅವರು ಯೋಜನೆಗಳನ್ನು ನೀಡುವುದು ಕೇವಲ ಉಳ್ಳವರಿಗೆ ಮಾತ್ರ. ಅವರ ಕಣ್ಣಿಗೆ ಕಾಣುವುದು ಕೇವಲ ಅಂಬಾನಿ, ಅದಾನಿ ಮಾತ್ರ ಎಂದು ಛೇಡಿಸಿದರು.

ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ, ಜಿಲ್ಲಾ ಗ್ಯಾರಂಟಿ ಯೋಜನೆ ಉಪಾಧ್ಯಕ್ಷ ಮೆಹರೋಜ್ ಖಾನ್, ಸಂಸದ ರಾಜಶೇಖರ್ ಹಿಟ್ನಾಳ್, ಜಿಲ್ಲಾ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಅಧ್ಯಕ್ಷ ರೆಡ್ಡಿ ಶ್ರೀನಿವಾಸ್, ಉಪಾಧ್ಯಕ್ಷ ಮಹರೋಜ್ ಖಾನ್, ಜಿಲ್ಲಾಧಿಕಾರಿ ಸುರೇಶ್ ಇಟ್ನಾಳ್, ಸಿಇಒ ವರ್ಣಿತ್ ನೇಗಿ ಇದ್ದರು.

ಬಿಜೆಪಿಯಿಂದ ಯೋಜನೆಗೆ ಕುತ್ತು

ಗ್ಯಾರಂಟಿ ಯೋಜನೆಯಿಂದ ಮಹಿಳೆಯರ ಜೀವನ ಗುಣಮಟ್ಟ ಸುಧಾರಣೆ ಮಾಡಿದೆ. ಬಿಜೆಪಿ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ, ಗ್ಯಾರಂಟಿ ಯೋಜನೆಗೆ ಕುತ್ತು ಬರಲಿದೆ. ಕಾಂಗ್ರೆಸ್ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ನಿಮ್ಮ ಖಾತೆಗೆ ಹಣ ಬರುವುದು ಮುಂದುವರೆಯಲಿದೆ ಎಂದು ಮಾರ್ಮಿಕವಾಗಿ ಹೇಳಿದರು.

ನಮಗೆ ರಾಜ್ಯದ ಹೆಣ್ಣು ಮಕ್ಕಳ ಮೇಲೆ ನಂಬಿಕೆ ಮತ್ತು ವಿಶ್ವಾಸ ಹೆಚ್ಚಿದೆ. ನಾವು ಕಾಂಗ್ರೆಸ್‌ಗೆ ಮತ ನೀಡಿದವರಿಗೆ ಮಾತ್ರ ಗ್ಯಾರಂಟಿ ಯೋಜನೆ ಕೊಟ್ಟಿದ್ದೆವೆಯೇ? ಬಿಜೆಪಿಗೆ ಮತ ಹಾಕಿದವರಿಗೂ ಗ್ಯಾರಂಟಿ ಯೋಜನೆ ತಲುಪಿದೆಯಲ್ಲ.

■ ಶಿವರಾಜ್ ತಂಗಡಗಿ, ಜಿಲ್ಲಾ ಉಸ್ತುವಾರಿ ಸಚಿವ

ಸಂಭ್ರಮದಿಂದ ನಡೆದ ಮಹಾರಥೋತ್ಸವ

ಕುಷ್ಟಗಿ: ತಾಲೂಕಿನ ದೋಟಿಹಾಳ ಗ್ರಾಮದ ಅವಧೂತ ಶುಖಮುನಿ ಸ್ವಾಮಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಮಹಾರಥೋತ್ಸವ ಸಡಗರ ಸಂಭ್ರಮದಿಂದ ಜರುಗಿತು.



ಜಾತ್ರಾ ಮಹೋತ್ಸವ ಅಂಗವಾಗಿ ಬೆಳಿಗ್ಗೆ ದೇವಾಲಯದಲ್ಲಿ ಪಂಚಾಮೃತಾಭಿಷೇಕ, ಬಿಲ್ವಾರ್ಚನೆ, ಮಹಾಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ವಿಧಿ ವಿಧಾನಗಳು ಪೂಜಾ ಕಾರ್ಯಕ್ರಮಗಳು ನೆರವೇರಿದವು. ರಥದ ಮುಂದೆ ಹೋಮ ಹವನಗಳು ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು.

ಮಹಾರಥೋತ್ಸವ ಜರುಗುವ ಮುಂಚಿತವಾಗಿ ಪಲ್ಲಕ್ಕಿಯು ದೋಟಿಹಾಳ ಹಾಗೂ ಕೇಸೂರು ಗ್ರಾಮಗಳ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ರಥದ ಬೀದಿಗೆ ಬಂದು ಭೂಮಿ ತಾಯಿಗೆ ಬಲಿ ಅನ್ನದ ಸಮರ್ಪಣೆ ಮಾಡುವ ಮೂಲಕ ರಥದ ಬೀದಿಯಲ್ಲಿ ಪಲ್ಲಕ್ಕಿಯು ಅದ್ದೂರಿಯಾಗಿ ಸಡಗರ ಸಂಭ್ರಮದಿಂದ ಸಂಚರಿಸಿತು.

ರಥೋತ್ಸವಕ್ಕೆ ಶಾಸಕ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಅವರು ಚಾಲನೆ ನೀಡಿದರು.

ಮಾಜಿ ಸಂಸದ ಸಂಗಣ್ಣ ಕರಡಿ, ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪೂರು, ಕಾಡಾ ನಿಗಮ ಅಧ್ಯಕ್ಷ ಹಸನಸಾಬ ದೋಟಿಹಾಳ, ದೊಡ್ಡ ಬಸವನಗೌಡ ಬಯ್ಯಾಪೂರ, ಅಶೋಕ ಶಿಗ್ಗಾಂವಿ, ಅಬ್ದುಲರಜಾಕ್ ಮದಲಗಟ್ಟಿ, ಬಸವರಾಜ ಕ್ಯಾವಟರ್, ಮಹಾಂತೇಶ ಬಾದಾಮಿ, ಕೆ.ಮಹೇಶ ಅಶೋಕ ಬಳೂಟಗಿ, ಶುಖಮುನಿಗೌಡ ಗುರುವಿನ ಮಹೇಶ ಕಾಳಗಿ, ಸುರೇಶ ಕುಂಟನಗೌಡ್ರ, ವಿಜಯನಾಯಕ, ಸೇರಿದಂತೆ ದೋಟಿಹಾಳ ಹಾಗೂ ಕೇಸೂರು ಗ್ರಾಮದ ಗಣ್ಯರು, ಸಾರ್ವಜನಿಕರು ಇದ್ದರು. ವಿವಿಧ ಜಿಲ್ಲೆಗಳಿಂದ ವಿವಿಧ ಗ್ರಾಮಗಳಿಂದ 60 ಸಾವಿರಕ್ಕೂ ಹೆಚ್ಚು ಭಕ್ತರು ಪಾಲ್ಗೊಂಡಿದ್ದರು.

ಕುಷ್ಟಗಿ ಪ್ರಭಾರಿ ಸಿಪಿಐ ಡಿ.ಎಸ್. ಆಂಜನೇಯ, ಪಿಎಸ್ಸೈ ಹನಮಂತಪ್ಪ ತಳವಾರ, ಹನುಮಸಾಗರ ಪಿಎಸ್ಸೈ ಧನುಂಜಯ, ತಾವರಗೇರಾ ಪಿಎಸ್ಸೈ ಚಂದ್ರಪ್ಪ, ಎಎಸ್ಸೈ ತಾಯಪ್ಪ, ಮುತ್ತಣ್ಣ ಸೇರಿದಂತೆ 400ಕ್ಕೂ ಅಧಿಕ ಜನ ಪೊಲೀಸರು ಹಾಗೂ ಗೃಹರಕ್ಷಕ ದಳ ಸಿಬ್ಬಂದಿ ಪೊಲೀಸ್ ಬಂದೋಬಸ್ತ್ ಒದಗಿಸಿದ್ದರು.

ಮಾರ್ಕಂಡೇಶ್ವರ ರಥೋತ್ಸವ ಅದ್ದೂರಿ

ಮುನಿರಾಬಾದ್: ಶಿವಪುರ ಗ್ರಾಮದಲ್ಲಿ ಶಿವರಾತ್ರಿಯ ಹಬ್ಬದ ಮರುದಿನ ಮಾರ್ಕಂಡೇಶ್ವರ ಸ್ವಾಮಿ ಜಾತ್ರೆ ವಿಜೃಂಭಣೆಯಿಂದ ಜರುಗಿತು.

ದೇವಸ್ಥಾನದ ಧ್ವಜವನ್ನು ಸವಾಲು ಮಾಡಲಾಯಿತು. ಸುಮಾರು 35 ಸಾವಿರಗಳಿಗೆ ಕೂಗಿದಂತ ಡಾ.ಶ್ರೀನಿವಾಸ್ ಬೇವಿನಹಳ್ಳಿ ಅವರಿಗೆ ಹಸ್ತಾಂತರ ಮಾಡಲಾಯಿತು. ನಂತರ ಸಂಜೆ 6 ಗಂಟೆಗೆ ಗುರುಗಳಿಂದ ಧ್ವಜಾರೋಹಣ ಮಾಡುವುದರ ಮುಖಾಂತರ ಪ್ರಾರಂಭಗೊಂಡು ಉತ್ತರಾಭಿಮುಖವಾಗಿ ಶ್ರೀಮಾರ್ಕಂಡೇಶ್ವರ ರಥೋತ್ಸವ ಪಾದಗಟ್ಟೆ ತಲುಪಿ ಮರಳಿ ಸ್ವಸ್ಥಾನಕ್ಕೆ ಆಗಮಿಸಿತು. ಭಕ್ತರು ಜಯ ಘೋಷಣೆ ಕೂಗುತ್ತಾ ಬಾಳೆಹಣ್ಣು, ಉತ್ತುತ್ತಿ ಎಸೆದು ಶ್ರೀಮಾರ್ಕಂಡೇಶ್ವರ ಸ್ವಾಮಿಯ ಕೃಪೆಗೆ ಪಾತ್ರರಾದರು. ಜಾತ್ರಾ ಮಹೋತ್ಸವದ ಅಂಗವಾಗಿ ಬೆಳಗಿನ ಜಾವಾ ಸ್ವಾಮಿಗೆ ಅಭಿಷೇಕ, ಬಿಲ್ವಾರ್ಚನೆ ಗಂಗೆಪೂಜೆ ನಂತರ ಬಂದಂತ ಭಕ್ತಾದಿಗಳಿಗೆ ಮಧ್ಯಾಹ್ನ ಅನ್ನ ದಾಸೋಹ ಮತ್ತು ಇನ್ನಿತರ ಧಾರ್ಮಿಕ ಪೂಜೆ ಕಾರ್ಯಕ್ರಮಗಳು ಜರುಗಿದವು. ಸುತ್ತಮುತ್ತಲಿನ ಗ್ರಾಮಗಳಾದ ಶಿವಪುರ, ಬಂಡಿ ಹರ್ಲಾಪುರ್, ಅಗಳಕೇರಾ, ಹುಲಿಗಿ, ಕಂಪಸಾಗರ ಗ್ರಾಮದ ಜನರು ದೇವಸ್ಥಾನಕ್ಕೆ ಆಗಮಿಸಿ ದೇವರ ದರ್ಶನ ಪಡೆದು ರಥೋತ್ಸವದಲ್ಲಿ ಭಾಗಿಯಾದರು. ಪ್ರತಿವರ್ಷದಂತೆ ಅತ್ಯಂತ ಅದ್ದೂರಿಯಾಗಿ ಜಾತ್ರೆ ನಡೆಯುತ್ತಿರುವ

ಸಾನಿಧ್ಯ ನಗರಗಡ್ಡಿಮಠದ ಶಾಂತಲಿಂಗೇಶ್ವರ ಸ್ವಾಮೀಜಿ, ಕುಕನೂರಿನ ಅನ್ನದಾನೇಶ್ವರ ಶಾಖಾ ಮಠದ ಡಾ.ಮಹಾದೇವ ಸ್ವಾಮೀಜಿ, ಅಭಿನವ ನಾಗಭೂಷಣ ದೇಶಿಕರು ಶ್ರೀಶೈಲ ಶಾಖಾಮಠ ಕಂಪಸಾಗರ, ಗ್ರಾಪಂ ಅಧ್ಯಕ್ಷ ರವಿ ಬಾಬು ಚಲಸಾನಿ, ಕೆ.ರಾಮರಾವ್, ಪಿಎಸಿಎಸ್ ಅಧ್ಯಕ್ಷರು, ಚನ್ನಪ್ಪ ಗೌಡ್ರು, ಮಾರ್ಕಂಡಪ್ಪ ಶೆಲೂಡಿ, ಗಿರೀಶ್ ಹಿರೇಮಠ್ ಶಹಾಪುರ್, ಸೋಮು ಹಿಟ್ನಾಳ್ ಕಾಂಗ್ರೆಸ್ ಯುವ ಮುಖಂಡರು, ಕಂದಾಯ ನಿರೀಕ್ಷಕ ಬಸವರಾಜ, ಬಸವರಾಜ ಹೋಳಿಗೆ, ಶೇಖಬಾಬು, ಹನುಮಂತಪ್ಪ ಮಾಸ್ತರ್, ಹನುಮೇಶ ಉಪ್ಪಾರ, ಹನುಮೇಶ್ ಶಿವಪುರ ಮತ್ತು ಊರಿನ ಗುರುಹಿರಿಯರು ಮುಖಂಡರು ಉಪಸ್ಥಿತರಿದ್ದರು.



ಸಮಾಜದ ಸೌಹಾರ್ದತೆಗೆ ಜಾತ್ರೆ, ಉತ್ಸವಗಳು ಸಹಕಾರಿ

ಕುಕನೂರು: ಸಮಾಜದಲ್ಲಿ ಉತ್ತಮ ಭಾಂದವ್ಯ ಮತ್ತು ಸೌಹಾರ್ದತೆಗೆ ಜಾತ್ರೆ ಉತ್ಸವಗಳು ಸಹಕಾರಿಯಾಗಲಿವೆ ಎಂದು ಯಲಬುರ್ಗಾ ಶ್ರೀಧರ ಮುರಡಿಮಠದ ಬಸವಲಿಂಗೇಶ್ವರ ಮಹಾ ಸ್ವಾಮಿಗಳು ಹೇಳಿದರು.



ಅವರು ಮಂಗಳವಾರ ತಾಲೂಕಿನ ಮಂಡಲಗಿರಿ ಶ್ರೀವೀರಭದ್ರೇಶ್ವರ ಜಾತ್ರಾ ಮಹೋತ್ಸವದಲ್ಲಿ ರಥೋತ್ಸವದ ಧ್ವಜಾರೋಹಣ ನೆರವೇರಿಸಿ ಚಾಲನೆ ನೀಡಿ ಮಾತನಾಡಿ, ಜಾತ್ರೆ, ಉತ್ಸವಗಳು ಯಶಸ್ವಿಯಾಗಬೇಕಾದರೆ ಇಲ್ಲಿಯ ಸಾಕಷ್ಟು ಜನರ ಶ್ರಮ ಸಾಕಷ್ಟು ಜನರ ಮಾರ್ಗದರ್ಶನದಿಂದ ಯಶಸ್ವಿಯಾಗುತ್ತವೆ ಎಂದು ಹೇಳಿದರು.


ಭಕ್ತರು ತಾಳ್ಮೆಯಿಂದ ಶ್ರದ್ಧೆಯಿಂದ ಆರಾಧ್ಯ ದೈವ ವೀರಭದ್ರೇಶ್ವರ ಜಾತ್ರೆಯ ತೇರನ್ನು ಸಾಂಗವಾಗಿ ಎಳೆಯಬೇಕು ಎಂದು ತಿಳಿಸಿದರು.

ನಂತರ ಕುಕನೂರು ಅನ್ನದಾನೀಶ್ವರ ಮಠದ ಮಹಾದೇವಯ್ಯ ಸ್ವಾಮಿಗಳು ಆಶೀರ್ವಚನ ನೀಡಿ ಮಾತನಾಡಿ, ಸಮಾಜದಲ್ಲಿ ಜಾತ್ರೆಗಳಿಂದ ಜನರಲ್ಲಿ ಸಾಮರಸ್ಯ ಜೊತೆಗೆ ಅವಿನಾಭಾವ ಸಂಬಂಧಗಳು ಗಟ್ಟಿಗೊಳ್ಳುತ್ತವೆ. ಈ ಮಂಡಲಗಿರಿ ಗ್ರಾಮದಲ್ಲಿನ ಸರ್ವ ಸಮುದಾಯದವರು ಜಾತ್ರೆ, ಉತ್ಸವಗಳನ್ನು ಅತಿ ಅಚ್ಚುಕಟ್ಟಾಗಿ ಆಚರಿಸುತ್ತಾ ಬಂದಿರುವುದು ವಿಶೇಷವಾದರೇ ಇದು ಕಲಾವಿದರ ತವರೂರಾಗಿದೆ. ಈ ನಾಡಿಗೆ ಅನೇಕ ಕಲಾವಿದರನ್ನು ಕವಿಗಳನ್ನು ಕೊಡುಗೆಯಾಗಿ ನೀಡಿದ ಮಣ್ಣಾಗಿದೆ ಎಂದರು. ಭಟಪನಹಳ್ಳಿ ಗ್ರಾಮದ ಹಗ್ಗ ಗೊರ್ಲೆಕೊಪ್ಪ ಗ್ರಾಮದ ನಂದಿಕೋಲು ಆಗಮಿಸಿದ ನಂತರ ರಥೋತ್ಸವ ನೆರವೇರಿತು.

ಕಂಪ್ಲಿ ಶ್ರೀಗಳು, ಅಗಳಕೇರಿ ಶ್ರೀಗಳು, ಮುಖಂಡರಾದ ಈರಪ್ಪ ಬಿಸನಳ್ಳಿ, ಕಳಕಪ್ಪ ಕಂಬಳಿ, ಹಂಚ್ಯಾಳಪ್ಪ ತಳವಾರ, ನವೀನ ಗುಳಗಣ್ಣವರ್, ವೆಂಕಟೇಶ ಈಳಗೇರ, ಶ್ರೀಧರ ಹೊಸಮನಿ, ಬಸಯ್ಯ ಸಸಿಮಠ, ಮಕ್ಕದ ರಫಿ, ಉದಯ ರಾಯರಡ್ಡಿ, ಬಸನಗೌಡ ಪಾಟೀಲ್, ಪ್ರಕಾಶಗೌಡ ಹೊರಪೇಟೆ, ಬಸವರಾಜ ಬಿನ್ನಾಳ ಇದ್ದರು. ಶಿಕ್ಷಕ ವೀರಣ್ಣ ಉಪ್ಪಾರ ನಿರ್ವಹಿಸಿದರು.

ರಾಜ್ಯದಲ್ಲಿ ಅಭಿವೃದ್ಧಿ ಸ್ಥಗಿತ: ಅಶೋಕ್ ಬಗಲಿ ಆಕ್ರೋಶ

ಕಲಬುರಗಿ: ಕಾಂಗ್ರೆಸ್ ಸರ್ಕಾರದ ಸಾವಿರ ದಿನ ಸಾವಿರ ಸಮಸ್ಯೆ, ಸಾವಿರ ಸುಳ್ಳು ಹಾಗೂ ಸಾವಿರ ಹಗರಣ ಸೃಷ್ಟಿಯಾಗಿವೆ. ರಾಜ್ಯದಲ್ಲಿ ಅಭಿವೃದ್ಧಿ ಸ್ಥಗಿತಗೊಂಡಿದೆ. ಭ್ರಷ್ಟಾಚಾರ ತಾಂಡವವಾಡುತ್ತಿದೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಹೀಗಿರುವಾಗ ಸಾವಿರ ದಿನಗಳ ಸಾಧನೆ ಯಾವ ಪುರುಷಾರ್ಥಕ್ಕೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ ಪ್ರಶ್ನಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ರೈತರ ಸಂಕಷ್ಟ ಹೆಚ್ಚಾಗಿದೆ. ಯುವಕರ ಭವಿಷ್ಯ ಆಪತ್ತಿನಲ್ಲಿ ಸಿಲುಕಿದೆ ಮತ್ತು ಮಹಿಳೆಯರ ಸುರಕ್ಷತೆ ಪಾತಾಳಕ್ಕೆ ಕುಸಿದೆ. ಇದರ ನಡುವೆಯು ಸಾವಿರ ದಿನಗಳ ಸಂಭ್ರಮಿಸಲು ಹೊರಟಿರುವುದು ಕಾಂಗ್ರೆಸ್ ಸರ್ಕಾರದ ಲಜ್ಜಗೇಡಿತನದ ಪರಮಾವಧಿಯಾಗಿದೆ. ಭ್ರಷ್ಟಾಚಾರ ಕೂಪವನ್ನಾಗಿಸಿದ



ಕಾಂಗ್ರೆಸ್ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಆರೋಪ ಹೊತ್ತಿರುವ ಮುಡಾ ಹಗರಣ, ವಾಲ್ಮೀಕಿ ನಿಗಮದ ರೂ. 187 ಕೋಟಿ ಹಣ ಲೂಟಿ ಮತ್ತು 155568 ಕೋಟಿ ಮೌಲ್ಯದ ಸ್ಮಾರ್ಟ್ ಮೀಟರ ಹಗರಣವು ಈ ಸಕಾರವನ್ನು ಭ್ರಷ್ಟಾಚಾರದ ಅಡ್ಡೆಯನ್ನಾಗಿಸಿದೆ ಎಂದರು.

ಶಾಸಕ ಬಸವರಾಜ ಮತ್ತಿಮಡು ಮಾತನಾಡಿ, ಕಾಂಗ್ರೆಸ್ ಸರ್ಕಾರದ ಹಿಂದು ವಿರೋಧಿ ನಡೆ ಮತ್ತು ಮುಸ್ಲಿಂ ಓಲೈಕೆ ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆಯ ಮಾರಣ ಹೋಮ ಯತೆಚ್ಛವಾಗಿ ರಾಜ್ಯದಲ್ಲಿ ನಡೆಯುತ್ತಿರುವುದರಿಂದ ಸರ್ಕಾರ ಎಲ್ಲಾ ರಂಗಗಳಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಸಚಿವ ಪ್ರಿಯಾಂಕ ಖರ್ಗೆಯವರು ಆರ್‌ಎಸ್‌ಎಸ್ ಇಲ್ಲವಾದರೆ ಬಿಜೆಪಿ ಜೆಡಿಎಸ್ ಪಕ್ಷಕ್ಕಿಂತ ಹೀನ ಸ್ಥಿತಿ ತಲುಪುತ್ತದೆ ಎಂದು ಹೇಳಿರುವುದು ಹಾಸ್ಯಾಸ್ಪದವಾಗಿದೆ ಎಂದರು.

ನಾಟಕೋತ್ಸವ ಯಶಸ್ಸಿಗೆ ಸಮನ್ವಯತೆಯಿಂದ ಕಾರ್ಯನಿರ್ವಹಿಸಿ

ಕಲಬುರಗಿ: ರಂಗಚಟುವಟಿಕೆಗಳಿಗೆ ಪ್ರೋತ್ಸಾಹಿಸುವುದು ಮತ್ತು ಕಲಬುರಗಿ ನಗರವನ್ನು ಸಾಂಸ್ಕೃತಿಕ ನಗರವನ್ನಾಗಿಸುವ ನಿಟ್ಟಿನಲ್ಲಿ ಇದೇ ಮೊದಲ ಬಾರಿಗೆ ಕಲಬುರಗಿ ನಗರದಲ್ಲಿ ಫೆಬ್ರವರಿ 21 ರಿಂದ 28ರ ವರೆಗೆ ಎಂಟು ದಿನಗಳ ಕಾಲ ಬೆಂಗಳೂರಿನ ರಂಗ ಶಂಕರ ಸಹಯೋಗದೊಂದಿಗೆ ಕಲಬುರಗಿ ನಾಟಕೋತ್ಸವ-2026 ಕಾರ್ಯಕ್ರಮ ಆಯೋಜಿಸಲಾಗಿದ್ದು, ನಾಟಕೋತ್ಸವ ಯಶಸ್ವಿಗೆ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸುವಂತೆ ಡಿಸಿ ಬಿ.ಫೌಜಿಯಾ ತರನ್ನುಮ್ ಸೂಚನೆ ನೀಡಿದರು.



ಕಲಬುರಗಿ ನೆಕ್ಸ್ಟ್ ಫೌಂಡೇಷನ್ ಪ್ರಸ್ತುತಪಡಿಸುವ ಈ ನಾಟಕೋತ್ಸವ ಕಲಬುರಗಿ ರಂಗಭೂಮಿ ವಿಸ್ತಾರಕ್ಕೆ ದಿಕ್ಸೂಚಿಯಾಗಿರಲಿದೆ. ಸ್ಥಳೀಯ ರಂಗಕರ್ಮಿಗಳಿಗೆ ನಾಟಕದ ಅನೇಕ ಮಜಲುಗಳನ್ನು ಪರಿಚಯಿಸುವುದು ಮತ್ತು ಪ್ರೇಕ್ಷಕ ವೃಂದ ವಿಸ್ತಾರ ಮತ್ತು ಸ್ಥಳೀಯರಲ್ಲಿ ಕಲೆ, ಸಾಹಿತ್ಯ, ನಾಟಕ ಅಭಿರುಚಿ ಬೆಳೆಸುವ ನಿಟ್ಟಿನಲ್ಲಿ ವಿನೂತನ ಪ್ರಯೋಗ ಇದಾಗಿದೆ. ದೇಶ-ವಿದೇಶದಲ್ಲಿ ಪ್ರದರ್ಶನ ನೀಡಿದ ಕಲಾವಿದರು ಮತ್ತು ಖ್ಯಾತ ನಾಟಕ ಸಂಸ್ಥೆಗಳು ಇಲ್ಲಿ ನಾಟಕ ಪ್ರಸ್ತುತ ಪಡಿಸಲಿದ್ದು, ಎಲ್ಲರು ಒಟ್ಟಾಗಿ ಕೆಲಸ ಮಾಡಿದಲ್ಲಿ ಕಲಬುರಗಿ ಜನರತ್ತ ರಂಗಭೂಮಿ ತೆಗೆದುಕೊಂಡು ಹೋಗಬಹುದಾಗಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಫೆ.21 ರಂದು ಸಂಜೆ 5.30 ಗಂಟೆಗೆ ಡಾ.ಎ.ಎಂ.ಪಂಡಿತ್ ರಂಗಮಂದಿರದಲ್ಲಿ ನಾಟಕೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಪ್ರತಿ ದಿನ ಸಂಜೆ 7 ಗಂಟೆಗೆ ವಯಸ್ಕರು ವೀಕ್ಷಿಸುವ ನಾಟಕ ಪ್ರದರ್ಶನವಾಗಲಿದ್ದು, ಇದಕ್ಕೆ ದರ ನಿಗದಿ ಮಾಡಲಾಗಿದೆ. ಅದೇ ರೀತಿ ಕಲಬುರಗಿ ರಂಗಾಯಣದಲ್ಲಿ ಪ್ರತಿದಿನ ಬೆಳಿಗ್ಗೆ 11 ಗಂಟೆಗೆ ಮಕ್ಕಳ ನಾಟಕ ಪ್ರದರ್ಶನ ಸಹ ಇರಲಿದೆ. ಇದಲ್ಲದೆ ರಂಗಕರ್ಮಿ, ರಂಗಾಸಕ್ತರಿಗೆ ನಾಟಕ, ರಂಗಭೂಮಿ ಇನ್ನು ಆಳವಾಗಿ ಅಭ್ಯಾಸ ಮಾಡಲು ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ನಾಟಕ ಸಂವಾದ ಸಹ ಆಯೋಜಿಸಿದೆ ಎಂದು ತಿಳಿಸಿದರು.

ನಾಟಕೋತ್ಸವದ ಹಿನ್ನೆಲೆಯಲ್ಲಿ ಡಾ.ಎಸ್. ಎಂ.ಪಂಡಿತ್ ರಂಗಮಂದಿರ, ಕಲಬುರಗಿ ರಂಗಾಯಣ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಕಚೇರಿ ಮೂರು ಸ್ಥಳದಲ್ಲಿ ಪ್ರತಿನಿತ್ಯ ಕಾರ್ಯಕ್ರಮ ಸುಲಲಿತವಾಗಿ ಜರುಗುವಂತೆ ಪೂರ್ವಸಿದ್ಧತೆ ಕೈಗೊಳ್ಳಲು ಈಗಾಗಲೆ ಅಧಿಕಾರಿಗಳನ್ನೊಳಗೊಂಡ 7 ಸಮಿತಿಗಳನ್ನು ರಚಿಸಲಾಗಿದೆ. ಅಧಿಕಾರಿಗಳು ತಮಗೆ ವಹಿಸಿದ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಬೇಕು. ಪ್ರತಿ ದಿನ ನಾಟಕ ಪ್ರದರ್ಶನ ಮುನ್ನ ಧ್ವನಿ-ಬೆಳಕು ವ್ಯವಸ್ಥೆ ಪರಿಶೀಲಿಸಬೇಕು. ಸಾರ್ವಜನಿಕರಿಗೆ ಕುಡಿಯುವ ನೀರು ಪೂರೈಸಬೇಕು. ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಲಬುರಗಿ ರಂಗಾಯಣದ ನಿರ್ದೇಶಕಿ ಸುಜಾತಾ ಜಂಗಮಶೆಟ್ಟಿ, ಹೆಚ್ಚುವರಿ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಕಲಬುರಗಿ ಉಪ ವಿಭಾಗದ ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಸವರಾಜ ಹೂಗಾರ, ಉಪನಿರ್ದೇಶಕಿ ಜಗದೀಶ್ವರಿ, ರಂಗಾಯಣ ಆಡಳಿತಾಧಿಕಾರಿ ಸಿದ್ದರಾಮ ಶಿಂಧೆ, ಜಿಲ್ಲಾ ಕೈಗಾರಿಕೆ ಕೇಂದ್ರದ ಜಂಟಿ ನಿರ್ದೇಶಕ ಮತ್ತು ಕಲಬುರಗಿ ನೆಕ್ಸ್ಟ್ ಫೌಂಡೇಷನ್ ಸದಸ್ಯ ಕಾರ್ಯದರ್ಶಿ ಅಬ್ದುಲ್ ಅಜೀಮ್ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಇದ್ದರು.

ಸ್ವಾತಂತ್ರ್ಯ ಸಂವಿಧಾನ ನೀಡಿರುವ ಅದ್ಭುತ ಕೊಡುಗೆ

ರಾಯಚೂರು: ಪ್ರತಿಯೊಬ್ಬ ಭಾರತೀಯರು ತಮ್ಮ ಮೂಲಭೂತ ಹಕ್ಕುಗಳನ್ನು ಪಡೆಯುವುದು ಸಂವಿಧಾನದ ಆಶಯವಾಗಿದೆ. ಕಾನೂನು ಸೇವಾ ಪ್ರಾಧಿಕಾರ ಸೇರಿದಂತೆ ಸರ್ಕಾರದ ಸವಲತ್ತು ಮುಟ್ಟಿಸುವ ಕೆಲಸವನ್ನು ಅರೆಕಾಲಿಕ ಸೇವಾ ಸ್ವಯಂ ಸೇವಕರು ಮಾಡಬೇಕೆಂದು 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಮಹಾವರಕರ್ ಗುಲ್ಜರ್ ಲಾಲ್ ಹೇಳಿದರು.



ಸೋಮವಾರ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ನಡೆದ ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ 4 ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಪ್ರತಿಯೊಬ್ಬರು ಅನುಭವಿಸುತ್ತಿರುವ ಸ್ವಾತಂತ್ರ್ಯವು ಸಂವಿಧಾನ ನೀಡಿರುವ ಅದ್ಭುತ ಕೊಡುಗೆಯಾಗಿದೆ. ಇದರ ಜೊತೆಗೆ ವ್ಯಕ್ತಿಗೆ ಸಿಗಬೇಕಾದ ಸೌಲಭ್ಯ, ಮಾಹಿತಿ, ಸೇವೆಗಳನ್ನು ನೀಡಲು ನಿಯಮಿತ ಜವಾಬ್ದಾರಿ ಇರುತ್ತದೆ. ಇದನ್ನು ಒದಗಿಸಲು ಹಲವಾರು ಇಲಾಖೆಗಳು ಕಾರ್ಯನಿರ್ವಹಿಸುತ್ತಿವೆ. ಆದರೂ ಸಹ ಕೆಲವರಿಗೆ ಕಾನೂನು ಅರಿವಿನ ಕೊರತೆಯಿಂದ ಸೌಲಭ್ಯ, ಸೇವೆ ಪಡೆಯಲು ಆಗುತ್ತಿಲ್ಲ, ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸಿಗಬೇಕಾದ ಸಾಮಾನ್ಯ ಕಾನೂನಿನ ಜ್ಞಾನವನ್ನು ಒದಗಿಸಿ ಆತನನ್ನು ತೊಂದರೆಗಳಿಂದ ಪಾರು ಮಾಡುವ ಗುರುತರ ಜವಾಬ್ದಾರಿಯನ್ನು ಸ್ವಯಂ ಸೇವಕರು ತೆಗೆದುಕೊಳ್ಳಬೇಕು. ಸಮಾಜ ಸೇವೆ ಮಾಡುವ ಮನಸ್ಥಿತಿಯುಳ್ಳವರು ಮುಂದೆ ಬಂದಿರುವುದು ಶ್ಲಾಘನೀಯವಾಗಿದೆ ಎಂದರು.

ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನ್ಯಾ.ಎಚ್.ಎ.ಸಾತ್ವಿಕ್ ಮಾತನಾಡಿ, ಸಾರ್ವಜನಿಕರಿಗೆ ಕಾನೂನುಗಳ ಸಲಹೆಗಳನ್ನು ಉಚಿತವಾಗಿ ನೀಡುವುದು ಈ ತರಬೇತಿಯ ಉದ್ದೇಶವಾಗಿದೆ. ಕೆಲವೊಂದು ಸಂದರ್ಭದಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ಸಹ ತೆಗೆದುಕೊಳ್ಳಲು ಸಾರ್ವಜನಿಕರಿಗೆ ಮಾಹಿತಿ ಗೊತ್ತಿರುವುದಿಲ್ಲ, ಅಂತವರಿಗೆ ಸರಿಯಾದ ಮಾಹಿತಿ ಸಲಹೆಗಳನ್ನು ಅರೆಕಾಲಿಕ ಸೇವಾ ಸ್ವಯಂ ಸೇವಕರು ನೀಡಿ, ಸರ್ಕಾರದ ವಿವಿಧ ಸೌಲಭ್ಯವನ್ನು ಒದಗಿಸಬೇಕು ಎಂದರು.

ಡಿಎಚ್ಒ ಡಾ.ಸುರೇಂದ್ರ ಬಾಬು ಮಾತನಾಡಿದರು. ಕುಟುಂಬ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶ ಶ್ರೀಕಾಂತ್.ಎಸ್.ವಿ., ಬೆಂಗಳೂರಿನ ಔಟ್ ಲಾಡ್ ಇಂಡಿಯಾ ಸಂಸ್ಥೆಯ ವೆಂಕಟೇಶ ಎಚ್., ಜೋಮಿ ಜಾಯ್ ಸೇರಿದಂತೆ ಇತರರಿದ್ದರು. ವಕೀಲರಾದ ಮಾಲತಿ ನಿರೂಪಿಸಿದರು, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪನವರ ಸ್ವಾಗತಿಸಿದರು, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ ವಂದಿಸಿದರು.

ಕಿರುಸುದ್ದಿ

ಮಹಾಶಿವರಾತ್ರಿ: ವಿಶೇಷ ಪೂಜೆ

ಗಾದಿಗನೂರು: ಮಹಾಶಿವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ಗ್ರಾಮದ ಶ್ರೀಕಾಶೀಶ್ವರ ದೇವಸ್ಥಾನ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ಗ್ರಾಮದ ಶ್ರೀರೇವಣಸಿದ್ದೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಹಬ್ಬದ ಪ್ರಯುಕ್ತ ಬೆಳಗ್ಗೆ ವಿವಿಧ ಪೂಜೆಗಳು ನೆರವೇರಿದವು. ಬೆಳಗ್ಗೆ ವಿಶೇಷವಾಗಿ ಅಭಿಷೇಕ ಅರ್ಚನೆ ಮಹಾಮಂಗಳಾರತಿ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆದವು. ಗ್ರಾಮದ ಭಕ್ತಾದಿಗಳು ಶಿವನಿಗೆ ಹಣ್ಣು ಹೂವು, ಕಾಯಿಗಳನ್ನು ಅರ್ಪಿಸಿದರು. ಭಕ್ತಾದಿಗಳು ಸೇರಿಕೊಂಡು ಇಡೀ ರಾತ್ರಿ, ಭಜನಾ ಕಾರ್ಯಕ್ರಮವನ್ನು ಈಶ್ವರ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮಕ್ಕೆ ಆಗಮಿಸಿದ ಭಕ್ತಾದಿಗಳಿಗೆ ಪ್ರಸಾದ ವಿತರಣೆ ಮಾಡಲಾಯಿತು. ಊರಿನ ಗುಡ್ಡದಲ್ಲಿ ನೆಲೆಸಿರುವ ಶರಣೀರನಬಂಡೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಪೂಜೆ ಅಭಿಷೇಕ ಕಾರ್ಯಕ್ರಮಗಳು ಜರಗಿದವು. ಪೂಜಾ ಕಾರ್ಯಕ್ರಮಕ್ಕೆ ಹತ್ತಾರು ಹಳ್ಳಿಗಳಿಂದ ಆಗಮಿಸಿದ ಭಕ್ತಾದಿಗಳು ನಂಬಂಡೇಶ್ವರನಿಗೆ ಹಣ್ಣು ಕಾಯಿಗಳನ್ನು ಅರ್ಪಿಸಿದರು.

ತೋಂಟದಾರ್ಯ ಸ್ವಾಮಿ ರಥೋತ್ಸವ ಅದ್ಧೂರಿ



ಹಗರಿಬೊಮ್ಮನಹಳ್ಳಿ: ತಾಲೂಕಿನ ತಂಬ್ರಹಳ್ಳಿ ಗ್ರಾಮದಲ್ಲಿ ಶಿವರಾತ್ರಿ ಅಮಾವಾಸ್ಯೆ ಪ್ರಯುಕ್ತ ಜರುಗಿದ ಜಗದ್ಗುರು ತೋಂಟದಾರ್ಯ ಸ್ವಾಮಿಯ ರಥೋತ್ಸವವು ಮಂಗಳವಾರ ಸಂಜೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು. ಮಂಗಳವಾರ ರಥೋತ್ಸವದ ನಿಮಿತ್ತ ಬೆಳಗ್ಗೆ ಸ್ವಾಮಿಗೆ ಪಂಚಾಮೃತ ಅಭಿಷೇಕ ಮಹಾರುದ್ರಾಭಿಷೇಕ ಹಾಗೂ ವಿಶೇಷ ಪೂಜಾ ಕಾರ್ಯಕ್ರಮಗಳು ಶ್ರೀಕೊಟ್ಟೂರೇಶ್ವರ ದೇವಸ್ಥಾನದಲ್ಲಿ ಜರುಗಿದವು. ಭಕ್ತರು ಹೂ ಕಾಯಿ ಹಣ್ಣುಗಳನ್ನು ಸಮರ್ಪಿಸಿದರು. ಸಂಜೆ ರಥೋತ್ಸವದ ಮುನ್ನ ನಡೆದ ಪಟಾಕ್ಷಿ ಹರಾಜಿನಲ್ಲಿ ಗ್ರಾಮದ ಟಿ.ಎಚ್ ಮಹಾಂತಯ್ಯ ಇವರಿಗೆ 32101 ರೂ ಗಳಿಗೆ ಪಡೆದರು. ಬಳಿಕ ತೋಂಟದಾರ್ಯ ಸ್ವಾಮಿಯ ಭವ್ಯ ರಥೋತ್ಸವ ಸಹಸ್ರಾರು ಭಕ್ತರ ಜಯಘೋಷಗಳ ಮಧ್ಯೆ ಅದ್ಧೂರಿಯಿಂದ ಜರುಗಿತು. ಗದ್ದಿಕೇರಿ ಚರಂತೇಶ್ವರ ಸ್ವಾಮೀಜಿ, ಚರಂತೇಶ್ವರಯ್ಯ ಹಾಲಸಿದ್ದೇಶ್ವರ ಸ್ವಾಮೀಜಿ, ಬಾಚಿಗೊಂಡನಹಳ್ಳಿ ಸ್ವಾಮೀಜಿ, ಕ್ಷೇತ್ರದ ಶಾಸಕ ಕೆ.ನೇಮಿರಾಜ್ ನಾಯ್ಕ್, ಪುರಸಭೆ ಬಿ.ಗಂಗಾಧರ, ಐಟಿ.ಕೊಟ್ರೇಶ್, ಗ್ರಾಮದ ಮುಖಂಡರಾದ ಅಕ್ಕಿ ಶಿವಕುಮಾರ, ಅಕ್ಕಿ ತೋಟೇಶ್, ಗೌರಜ್ಜನವರ ಬಸವರಾಜಪ್ಪ, ಎಚ್.ಬಿ.ಗಂಗಾಧರಗೌಡ, ಬಣಕಾರ ಕೊಟ್ರೇಶ್, ಎಸ್.ವಿ.ಪಾಟೀಲ ಕಡ್ಡಿ ಚನ್ನಬಸಪ್ಪ, ಉದಯ ಭಾಸ್ಕರ್ ರಾವ್, ತಳವಾರ ವೆಂಕೋಬಪ್ಪ, ಡಿಎಂ ತೋಟಯ್ಯ, ಗಡ್ಡಿ ಮಲ್ಲಿಕಾರ್ಜುನ, ಬಾಳೆಕಾಯಿ ವಿರೇಶ್, ಬಿ.ದೇವಿಪ್ರಸಾದ್ ಬಣಕಾರ ಗವಿಸಿದ್ದೇಶ್, ಅರ್ಚಕರಾದ ಮಲ್ಲಯ್ಯ ಸ್ವಾಮಿ ಕೆಎಚ್‌ಎಂ.ಪಂಚಯ್ಯ, ಟಿಎಚ್ ಎಂ.ನಾಗಭೂಷಣಯ್ಯ, ತಂಬ್ರಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಹಿರಿಯರು ಮಹಿಳೆಯರು ಮಕ್ಕಳು ಯುವಕರು ಪಾಲ್ಗೊಂಡಿದ್ದರು.

ಕೇಂದ್ರ ಆಡಿಟ್ ತಂಡ ಭೇಟಿ

ರಾಯಚೂರು: ತಾಲೂಕಿನ ಚಂದ್ರಬಂಡಾ ಹಾಗೂ ಬಾಯಿದೊಡ್ಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯಡಿ ಅನುಷ್ಠಾನಗೊಂಡ ಕಾಮಗಾರಿಗಳನ್ನು ಕೇಂದ್ರ ಆಡಿಟ್ ತಂಡದ ಅಧಿಕಾರಿ ಕುಮುದ್ ದುಬೆ ಭೇಟಿ ನೀಡಿ ಪರಿಶೀಲನೆ ಮಾಡಿದರು. ಚಂದ್ರಬಂಡಾ ಗ್ರಾಪಂ ಕಚೇರಿಗೆ ಭೇಟಿ ನೀಡಿ ಕಾಮಗಾರಿ ಕಡತ, ನೋಂದಣಿ, ಎನ್ ಎಂಎಂಎಸ್ ಹಾಜರಾತಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪಡೆದುಕೊಂಡರು. ನಂತರ ಆರಿಸಿಗೇರಾ ತಾಂಡದಲ್ಲಿರುವ ದನದ ಕೊಟ್ಟಿಗೆ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯನ್ನು ಪರಿಶೀಲಿಸಿದರು. ನಾಗನದೊಡ್ಡ ಗ್ರಾಮದಲ್ಲಿರುವ ಸಾಮಾಜಿಕ ಅರಣ್ಯದಲ್ಲಿ ಕಂದಕ ಬದು ನಿರ್ಮಾಣ, ದನದ ಕೊಟ್ಟಿಗೆ ಹಾಗೂ ಚಿಂತಲ ಕುಂಟ ಅಮೃತ ಸರೋವರ ಕೆರೆ ಕಾಮಗಾರಿಗಳನ್ನು ವೀಕ್ಷಿಸಿದರು. ಚಂದ್ರಬಂಡಾ ಗ್ರಾಮದಲ್ಲಿರುವ ಕೀರಾಕುಂಟ ಅಮೃತ ಸರೋವರ ಕೆರೆ ಕಾಮಗಾರಿಯನ್ನು ಪರಿವೀಕ್ಷಣೆ ಮಾಡಿದರು. ಬಾಯಿ ದೊಡ್ಡ ಗ್ರಾಮ ಪಂಚಾಯತಿಯ ಕಡಗಂದೊಡ್ಡಿ ಗ್ರಾಮದ ಮೆಟಲ್ ರಸ್ತೆ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಿದರು. ಕುರಬದೊಡ್ಡಿ ಗ್ರಾಮದ ಕೆರೆ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕೂಲಿ ಕಾರ್ಮಿಕರ ಎನ್‌ಎಂಎಂಎಸ್ ಹಾಜರಾತಿ, ಉದ್ಯೋಗ ಚೀಟಿ ಮತ್ತು ಕೆಲಸದ ಪ್ರಮಾಣವನ್ನು. ಚಂದ್ರಬಂಡಾ ಗ್ರಾಮ ಪಂಚಾಯತಿಯ ಕಟ್ಲಟ್ಕೂರು ಗ್ರಾಮದಲ್ಲಿ ಚರಂಡಿ ನಿರ್ಮಾಣ ಕಾಮಗಾರಿಯನ್ನು ವೀಕ್ಷಿಸಿದರು. ತಾಪಂ ಇಒ ಚಂದ್ರಶೇಖರ ಪವಾರ, ಸಹಾಯಕ ನಿರ್ದೇಶಕರು ಹನುಮಂತ, ಪಿಡಿಒ, ಡಿಪಿಎಮ್, ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕರು, ಐಇಸಿ ಸಂಯೋಜಕರು ಸೇರಿದಂತೆ ಗ್ರಾಪಂ ಸಿಬ್ಬಂದಿ ಇದ್ದರು.



ಕುರುಗೋಡು: ಶಿರಿಗೇರಿ ಗ್ರಾಮದ ಶ್ರೀಶಂಭುಲಿಂಗೇಶ್ವರ ರಥೋತ್ಸವ ಕಾರ್ಯಕ್ರಮವನ್ನು ಮಹಾಶಿವರಾತ್ರಿ ಪ್ರಯುಕ್ತ ಸಂಭ್ರಮದಿಂದ ನೆರವೇರಿಸಲಾಯಿತು. ದೇವಸ್ಥಾನದಲ್ಲಿ ಬೆಳಗಿನ ಜಾವದಿಂದ ಗಂಗೆಸ್ಥಳ ಪೂಜೆ, ಅಭಿಷೇಕ, ವಿಶೇಷ ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸಲಾಯಿತು. ಸಂಜೆ ಶಂಭುಲಿಂಗೇಶ್ವರ ದೇವಸ್ಥಾನದಿಂದ ಶ್ರೀನಾಗನಾಥೇಶ್ವರ ದೇವಸ್ಥಾನದವರೆಗೆ ರಥೋತ್ಸವ ಕಾರ್ಯಕ್ರಮ ಸಂಭ್ರಮದಿಂದ ನೆರವೇರಿಸಲಾಯಿತು.

ಸರ್ವಧರ್ಮ ಸಮನ್ವಯ ಧಾರ್ಮಿಕ ಸಭೆ

ಹೂವಿನಹಡಗಲಿ: ಭಕ್ತರನ್ನು ಉದ್ಧರಿಸಲು ಭಗವಂತನು ಗುರುವಿನ ರೂಪದಲ್ಲಿ ಅವತರಿಸುತ್ತಾನೆ ಎಂದು ಹಿರೇಮಲ್ಲನಕೇರಿ ಮಠದ ಚನ್ನಬಸವ ಸ್ವಾಮೀಜಿ ಹೇಳಿದರು. ತಾಲೂಕಿನ ಕೊಂಬಳಿ ಗ್ರಾಮದ ಚೌಕಿಮಠದಲ್ಲಿ ಶಿವರಾತ್ರಿ ಹಬ್ಬದ ಅಂಗವಾಗಿ ನಡೆದ ಸರ್ವಧರ್ಮ ಸಮನ್ವಯ ಧಾರ್ಮಿಕಸಭೆ ಉದ್ಘಾಟಿಸಿ ಮಾತನಾಡಿದ ಅವರು, ಭಕ್ತರಹಿತವನ್ನು ಕಾಪಾಡುವ ಸಂತರ ಸದ್ಗುರುಗಳ ಮಾರ್ಗದರ್ಶನದಲ್ಲಿ ಜೀವನ ಸಾಗಿಸಿದರೆ ನೆಮ್ಮದಿಯ ಬದುಕು ದೊರೆಯುತ್ತದೆ ಎಂದು ತಿಳಿಸಿದರು. ಉಪನ್ಯಾಸಕ ಪ್ರಭು ಸೊಪ್ಪಿನ ಮಾತನಾಡಿ, ದೇಹ ಶುದ್ಧತೆಗೆ ಆದ್ಯತೆ ಕೊಡುವ ನಾವು ಮನಶುದ್ಧತೆಗೆ ಪ್ರಾಮುಖ್ಯತೆ ನೀಡುತ್ತಿಲ್ಲ. ಅಂತರಂಗ ಹಾಗೂ ಬಹಿರಂಗ ಶುದ್ಧತೆಗೆ ಗುರುಗಳ ಸಂಪರ್ಕದಲ್ಲಿ ಸದಾ ಇರಬೇಕು ಎಂದರು. ಚೌಕಿಮಠದ ಸದ್ಗುರು ಗಾಡಿತಾತನವರು ಮಾತನಾಡಿ, ಎಲ್ಲರೂ ಸ್ವಾರ್ಥವನ್ನ ತ್ಯಜಿಸಿ ನಿಸ್ವಾರ್ಥದಿಂದ ಯೋಚನೆ ಮಾಡಿದರೆ ಸ್ವಸ್ಥ ಸಮಾಜ ನಿರ್ಮಾಣವಾಗುತ್ತದೆ. ನಮ್ಮ ನಡುವಿನ ಕಚ್ಚೆಗಳನ್ನು ಮೀರಿ ನಿಂತಾಗ ಏಕ್ಯತೆಯ ನಾಡನ್ನು ಕಟ್ಟಬಹುದು ಎಂದು ಹೇಳಿದರು. ರಾಮಸ್ವಾಮಿ ದೇವಸ್ಥಾನದ ಧರ್ಮಕರ್ತರಾದ ರಾಜಶೇಖರಯ್ಯ ರಾಮಸ್ವಾಮಿ ಆಶೀರ್ವಚನ ನೀಡಿದರು. ಆರಳಹಳ್ಳಿ ಗ್ರಾಮದ ತಿರುಕಪ್ಪ ಉಪನ್ಯಾಸ ನೀಡಿದರು. ಕಾರ್ಯಕ್ರಮಕ್ಕೂ ಮುನ್ನ ಸಕಲ ವಾದ್ಯಗಳೊಂದಿಗೆ ಸದ್ಗುರು ಗಾಡಿತಾತನವರ ಭವಾನಿತ್ಯ ಮೆರವಣಿಗೆ ತುಂಗಭದ್ರ ನದಿಗೆ ಸಾಗಿ ಗಂಗೆಯನ್ನು ತಂದು ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಆರಳಹಳ್ಳಿ ಗ್ರಾಮದಿಂದ ಬಂದ ಹಳಿಬಂಡಿ ಮೆರವಣಿಗೆ ಗಮನ ಸೆಳೆಯಿತು.



ಹೂವಿನಹಡಗಲಿ: ತಾಲೂಕಿನ ಕೊಂಬಳಿ ಗ್ರಾಮದ ಚೌಕಿಮಠದಲ್ಲಿ ಶಿವರಾತ್ರಿ ಹಬ್ಬದ ಅಂಗವಾಗಿ ನಡೆದ ಸರ್ವಧರ್ಮ ಸಮನ್ವಯ ಧಾರ್ಮಿಕ ಸಭೆಯನ್ನು ಹಿರೇಮಲ್ಲನಕೇರಿ ಮಠದ ಚನ್ನಬಸವ ಸ್ವಾಮೀಜಿ ಉದ್ಘಾಟಿಸಿದರು.

ಕುರುಗೋಡು ಉತ್ಸವಕ್ಕೆ ಚಾಲನೆ | ಸತೀಶ್ ಜಾರಕಿಹೊಳಿ ಹೇಳಿಕೆ

ಉತ್ಸವಗಳಿಂದ ನಾಡಿನ ಕಲೆ ಅನಾವರಣ

ಕುರುಗೋಡು: ರಾಜ್ಯದಲ್ಲಿ ಹಮ್ಮಿಕೊಳ್ಳಲಾಗುತ್ತಿರುವ ಎಲ್ಲ ಉತ್ಸವಗಳ ಮೂಲಕ ನಾಡಿನ ಕಲೆ-ಸಂಸ್ಕೃತಿಗೆ ಪ್ರೋತ್ಸಾಹಿಸುವ ಕೆಲಸ, ಬೆಳಕು ಚೆಲ್ಲುವ ಕಾರ್ಯವನ್ನು ನಮ್ಮ ಸರ್ಕಾರ ಮಾಡುತ್ತಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಕಂಪ್ಲಿ ರಸ್ತೆಯ ಶ್ರೀಖಾದರ್‌ಲಿಂಗ ದರ್ಗಾ ಹತ್ತಿರದ ಶ್ರೀದೊಡ್ಡ ಬಸವೇಶ್ವರ ವೇದಿಕೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಆಯೋಜಿಸಿದ್ದ ಕುರುಗೋಡು ಉತ್ಸವಕ್ಕೆ ಸೋಮವಾರ ಸಂಜೆ ಚಾಲನೆ ನೀಡಿ ಮಾತನಾಡಿದರು.

ನಾಡಿನ ಪ್ರಮುಖ ಉತ್ಸವಗಳಾದ ಹಂಪಿ ಉತ್ಸವ, ಕಿತ್ತೂರು ಉತ್ಸವ, ಸಂಗೊಳ್ಳಿ ರಾಯಣ್ಣ ಉತ್ಸವ, ಲಕ್ಕುಂಡಿ ಉತ್ಸವ ಮತ್ತು ಮೈಸೂರು ದಸರಾ ಮಹೋತ್ಸವದಂತೆ ಪ್ರಾಚೀನ ಐತಿಹ್ಯ ಹೊಂದಿರುವ ಈ ಭಾಗದ ಕುರುಗೋಡು-ಕಂಪ್ಲಿ ಉತ್ಸವಗಳು ಇತಿಹಾಸದ ಪುಟ ಸೇರಲಿ ಎಂದು ಆಶಿಸಿದರು.

ಶಾಸಕ ರಾಘವೇಂದ್ರ ಹಿಟ್ನಾಳ್ ಮಾತನಾಡಿ, ಬಹುದಿನಗಳ ಬೇಡಿಕೆಯಾದ ಕಂಪ್ಲಿ-ಗಂಗಾವತಿ ತುಂಗಭದ್ರಾ ಸೇತುವೆಯು ಲೋಕೋಪಯೋಗಿ ಸಚಿವರ ಅಶ್ವಾಸನೆಯಿಂದ 120 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಕ್ಕೆ ಅನುಮೋದನೆ ದೊರಕಿಸಿಕೊಂಡಿರುವುದು ಈ ಕ್ಷೇತ್ರದ ಶಾಸಕರ ಆಸಕ್ತಿ, ಕ್ರಿಯಾಶೀಲ ಕೆಲಸ ವ್ಯಕ್ತಿತ್ವ ಬಿಂಬಿಸುತ್ತಿದೆ ಎಂದರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಮಾತನಾಡಿ, ಎಲ್ಲ ಇಲಾಖೆಗಳ ಸಚಿವರನ್ನು ವಿಶ್ವಾಸಕ್ಕೆ ಪಡೆದು ರಾಜ್ಯದ 224 ಕ್ಷೇತ್ರಗಳಲ್ಲಿಯೇ ಅತಿಹೆಚ್ಚು ಅನುದಾನ ತಂದು ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಒತ್ತು ನೀಡುತ್ತಿರುವ ಶಾಸಕರೆಂದರೆ ಅದು ಜೆ.ಎನ್.ಗಣೇಶ್ ಈ ಭಾಗದಲ್ಲಿ ಅಭಿವೃದ್ಧಿಯ ಪರ್ವವೇ ನಡೆಯುತ್ತಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಸಮಾರಂಭದಲ್ಲಿ ಗಣ್ಯರು 'ಕುರುಗೋಡು ಉತ್ಸವ ಐತಿಹಾಸಿಕ ದೇವಸ್ಥಾನಗಳ ದರ್ಶನ' ಪುಸ್ತಕ ಬಿಡುಗಡೆ ಮಾಡಿದರು. ಬೆಳಗಾವಿ ಉತ್ತರ ಕ್ಷೇತ್ರ ಶಾಸಕ ಆಸೀಫ್ ಸೇಟ್, ಕಿತ್ತೂರು ಕ್ಷೇತ್ರ ಶಾಸಕ ಬಾಬಾ ಸಾಹೇಬ್ ಪಾಟೀಲ್, ಕುರುಗೋಡು ಪುರಸಭೆ ಅಧ್ಯಕ್ಷ ಟಿ.ಶೇಖಣ್ಣ, ಬಳ್ಳಾರಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಕುರುಗೋಡು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಸವನಗೌಡ, ಪುರಸಭೆ ಉಪಾಧ್ಯಕ್ಷ ಚನ್ನಪಟ್ಟಣ ಮಲ್ಲಿಕಾರ್ಜುನ, ಡಿಸಿ ನಾಗೇಂದ್ರ ಪ್ರಸಾದ್ ಕೆ., ಎಡಿಸಿ ಮಹಮ್ಮದ್ ಝುಬೇರ್ ಎನ್., ಸಹಾಯಕ ಆಯುಕ್ತ ರಾಜೇಶ್ ಎಚ್.ಡಿ., ಕುರುಗೋಡು ತಹಶೀಲ್ದಾರ್ ನರಸಪ್ಪ, ಕಂಪ್ಲಿ ತಹಶೀಲ್ದಾರ್ ಜೂಗಲ ಮಂಜುನಾಯ್ಕ, ಸಂಡೂರು ತಹಶೀಲ್ದಾರ್ ಅನಿಲ್‌ಕುಮಾರ್ ಸೇರಿದಂತೆ ಪುರಸಭೆ ಸದಸ್ಯರು, ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಗಣ್ಯರು ಇದ್ದರು.



ಸಿಂಧರ ನಾಡು ಕುರುಗೋಡು ಪಟ್ಟಣದ ಇತಿಹಾಸ ಈಗಿನ ಪೀಳಿಗೆಗೆ ತಿಳಿಯಪಡಿಸುವ ಕೆಲಸವಾಗಬೇಕು ಎಂಬುದು ಕ್ಷೇತ್ರದ ಜನರ ಬಹುದಿನಗಳ ಒತ್ತಾಸೆಯಾಗಿತ್ತು. ಸತತ ಮೂರು ತಿಂಗಳ ಪ್ರಯತ್ನದಿಂದ ಉತ್ಸವ ಆಯೋಜನೆಗೆ ಕಾಲ ಈಗ ಕೂಡಿಬಂದಿತು.

■ ಜೆ.ಎನ್.ಗಣೇಶ್, ಕಂಪ್ಲಿ ಶಾಸಕ

ಮರಿಶಾಂತ ವೀರ ಸ್ವಾಮೀಜಿಗೆ ಪಟ್ಟಾಭಿಷೇಕ

ಹಗರಿಬೊಮ್ಮನಹಳ್ಳಿ: ಸ್ವಇಚ್ಚೆಯಿಂದ ಸನ್ಯಾಸ ಸ್ವೀಕರಿಸಿ ಭಕ್ತಿ ಸಂಬಂಧವನ್ನು ಉಳಿಸಿಕೊಳ್ಳಲು ರಕ್ತ ಸಂಬಂಧವನ್ನು ತೊರೆದು ನಿಮ್ಮೂರಿನ ಗವಿಮಠಕ್ಕೆ ನೂತನ ಪೀಠಾಪತಿಗಳಾಗಿ ಬಂದಿರುವ ಮರಿಶಾಂತ ವೀರ ಸ್ವಾಮೀಜಿಯವರ ಮನಸ್ಸು ನೋಯದಂತೆ ಕಣ್ಣಲ್ಲಿ ನೀರು ಬಾರದಂತೆ ನೋಡಿಕೊಳ್ಳಿ ಎಂದು ಕೊಪ್ಪಳ ಮಹಾಸಂಸ್ಥಾನ ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ತಾಲೂಕಿನ ಕಡಲಬಾಳು ಗ್ರಾಮದ ಗವಿಸಿದ್ದೇಶ್ವರ ಸ್ವಾಮಿ ಶಾಖಾ ಮಠದ ನೂತನ ಪೀಠಾಪತಿಗಳಾಗಿ ಪುರ ಪ್ರವೇಶ ಹಾಗೂ ಧರ್ಮಸಭೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮರಿಶಾಂತ ವೀರ ಸ್ವಾಮೀಜಿಯವರು ವಿದ್ಯಾವಂತರು ವಿನಯಶೀಲರು ಸೇವಾ ಮನೋಭಾವದ ಜೊತೆ ಸಮಾಜ ಕಟ್ಟಬೇಕೆಂಬ ಛಲ ಇದೆ. ಯುವ ಯತಿಯನ್ನು ಸರ್ವ ಪೂಜ್ಯರ ಸಮ್ಮುಖದಲ್ಲಿ ನಿಮ್ಮ ಉಡಿಯೊಳಗೆ ಹಾಕಿದ್ದು ಕಡಲಬಾಳು ಜನತೆಗೆ ಸುವರ್ಣಯುಗ ಪ್ರಾರಂಭವಾಗಲಿದೆ ಎಂದರು.

ನೂತನ ಪೀಠಾಪತಿ ಮರಿ ಶಾಂತ ವೀರ ಸ್ವಾಮೀಜಿ ಮಾತನಾಡಿ, ಮನುಷ್ಯರಾಗಿ ಹುಟ್ಟಿದ ಮೇಲೆ ಋಣವನ್ನು ಮುಟ್ಟಿಸುವ ಕೆಲಸ ಮಹತ್ವದ್ದಾಗಿದ್ದು ಅನ್ನ ಆಶ್ರಯ ಅಕ್ಷರ ನೀಡಿ ದೊಡ್ಡ ಸ್ಥಾನ ಅಲಂಕರಿಸಲು ನೆರವಾದ ಗವಿ ಸಿದ್ದೇಶ್ವರ ಸ್ವಾಮಿಯವರ ಋಣ ನನ್ನ ಮೇಲಿದ್ದು, ಸಣ್ಣಪುಟ್ಟ ಸಮಾಜ ಸೇವೆ, ಬಡ ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಋಣ ತೀರಿಸುವ ಕೆಲಸ ಮಾಡುತ್ತೇನೆ ಎಂದರು.

ಶಾಸಕ ಕೆ ನೇಮಿರಾಜ್ ನಾಯ್ಕ್ ಮಾತನಾಡಿ, ಇಲ್ಲಿನ ಶಾಖಾ ಮಠಕ್ಕೆ ಪೀಠಾಪತಿಗಳನ್ನು ನೇಮಿಸಬೇಕೆಂಬುದು ಇಲ್ಲಿನ ಜನರ ಬಹು ದಿನಗಳ ಬೇಡಿಕೆ ಇಂದಿನ ಪೂಜ್ಯರ ಕಾರ್ಯಕ್ರಮದಿಂದ ಈಡೇರಿದಂತಾಗಿದೆ ಎಂದರು. ಹೂವಿನ ಹಡಗಲಿಯ ಹಿರಿ ಶಾಂತವೀರ ಸ್ವಾಮೀಜಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಉತ್ತಂಗಿಯ ಸೋಮಶಂಕರ ಸ್ವಾಮೀಜಿ, ಗುರುಬಸವ ಸ್ವಾಮಿ, ಚೇರಟಗಿ ಮಹಾಂತ ಸ್ವಾಮಿ ಸೊನ್ನದ ಶಿವಾನಂದ ಸ್ವಾಮೀಜಿ, ಕೆಂಚ ಬಸವ ಸ್ವಾಮೀಜಿ ನೇಲೋಗಿ ಸ್ವಾಮೀಜಿ, ಚನ್ನವೀರ ಶರಣರು ಹೆಬ್ಬಾಳದ ನಾಗಭೂಷಣ ಸ್ವಾಮೀಜಿ, ಬಾಚಿಗೊಂಡನಹಳ್ಳಿಯ ಸ್ವಾಮೀಜಿ, ಮಹೇಶ್ವರ ಸ್ವಾಮೀಜಿ ಹಾಲಸಿದ್ದೇಶ್ವರ ಸ್ವಾಮೀಜಿ, ಹಂಪಸಾಗರದ ಸ್ವಾಮೀಜಿ ಇತರರಿದ್ದರು. ಗವಿಸಿದ್ದಯ್ಯ ನಿರ್ವಹಿಸಿದರು. ನೂತನ ಶ್ರೀಗಳ ತಾಯಿಯನ್ನು ಸನ್ಮಾನಿಸಲಾಯಿತು.



ಹಳೆ ಪಿಂಚಣಿ ಯೋಜನೆ ಜಾರಿಗೆ ಪ್ರಯತ್ನ

ಬಳ್ಳಾರಿ: ರಾಜ್ಯ ಸರ್ಕಾರಿ ನೌಕರರ ಬಹುನಿರೀಕ್ಷಿತ ಬೇಡಿಕೆಯಾಗಿರುವ ಹಳೆಯ ಪಿಂಚಣಿ ಯೋಜನೆಯನ್ನು ಮತ್ತೆ ಮರಳಿ ಜಾರಿಗೆ ತರಲು ರಾಜ್ಯ ಸರ್ಕಾರ ಕ್ರಮ ವಹಿಸಲಿದೆ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಪಂ, ಯುವ ಜನ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಮತ್ತು ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಸರ್ಕಾರಿ ನೌಕರರಿಗಾಗಿ ಆಯೋಜಿಸಿದ್ದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಚಾಲನೆ ನೀಡಿ ಮಾತನಾಡಿದರು.

ಹಳೆಯ ಪಿಂಚಣಿ ಯೋಜನೆಯ ಜಾರಿಗೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಈಗಾಗಲೇ ಸಮಿತಿಯನ್ನು ರಚಿಸಿ, 5 ರಾಜ್ಯಗಳಲ್ಲಿರುವ ವ್ಯವಸ್ಥೆಯನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಲು ಸೂಚಿಸಿದ್ದಾರೆ, ರಾಜ್ಯ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ, ಈ ವರ್ಷದ ಬಜೆಟ್ ಅಧಿವೇಶನದ ವೇಳೆ ನಾನು, ಮಾಜಿ ಸಚಿವ ಬಿ.ನಾಗೇಂದ್ರ ಹಾಗೂ ಶಾಸಕ ಜೆ.ಎನ್.ಗಣೇಶ್ ಒಟ್ಟಾಗಿ ಸರ್ಕಾರದ ಗಮನ ಸೆಳೆಯುತ್ತೇವೆ ಎಂದರು.

ಜಿಲ್ಲೆಯಲ್ಲಿ ಸುಸಜ್ಜಿತವಾದ ಸರ್ಕಾರಿ ನೌಕರರ ಭವನ ನಿರ್ಮಾಣಕ್ಕೆ ಕ್ರಮ ವಹಿಸುತ್ತೇನೆ, ಇದಲ್ಲದೇ ಸರ್ಕಾರಿ ನೌಕರರ ಗೃಹ ನಿರ್ಮಾಣಕ್ಕಾಗಿ ಖರೀದಿಯಾಗಿರುವ ಜಮೀನಿಗೆ ಸಂಬಂಧಿಸಿದ ಅನುಮೋದನೆ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ವಿವಿಧ ತಾಲೂಕುಗಳಿಂದ ಬಂದಿದ್ದ ತಂಡಗಳು ಪಥ ಸಂಚಲನ ನಡೆಸಿ, ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಿದರು.

ಈ ವೇಳೆ ಸರ್ಕಾರಿ ವಿವಿಧ ನೌಕರರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಸರ್ಜನ್ ಡಾ.ಬಸರೆಡ್ಡಿ, ಜಿಲ್ಲಾ ಆರೋಗ್ಯ-ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶಬಾಬು, ಎಡಿಎಸ್ಪಿ ರವಿಕುಮಾರ್, ಶಿಕ್ಷಕರ ಸಂಘದ ಮಲ್ಲೇಶ್, ಸುರೇಶ್, ಎಲ್.ಎನ್.ಶಾಸ್ತ್ರಿ ಪಾಲಿಕೆಯ ಸದಸ್ಯರಾದ ಮಿಂಚು ಸೀನಾ, ಎಂ.ರಾಜೇಶ್ವರಿ, ಮುಖಂಡ ಸುಬ್ಬರಾಯುಡು ಸೇರಿದಂತೆ ಇತರರಿದ್ದರು.



ಕೊಟ್ಟೂರೇಶ್ವರ ಸ್ವಾಮಿ ದರ್ಶನಕ್ಕೆ ಹರಿದು ಬಂದ ಭಕ್ತ ಸಾಗರ

ಕೊಟ್ಟೂರು: ಶಿವರಾತ್ರಿ ಅಮಾವಾಸ್ಯೆಯ ಪ್ರಯುಕ್ತ ಕೊಟ್ಟೂರಿನ ಅಧಿದೇವತೆ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ದರ್ಶನಕ್ಕೆ ಭಕ್ತ ಸಾಗರವೇ ಹರಿದು ಬಂದಿತು.

ಬೆಳಗಿನ ಬ್ರಾಹ್ಮಿ ಮುಹೂರ್ತದಲ್ಲಿ ಕ್ರಿಯಾಮೂರ್ತಿಗಳಾದ ಶ್ರೀಶಿವಪ್ರಕಾಶ ಕೊಟ್ಟೂರು ದೇವರ ನೇತೃತ್ವದಲ್ಲಿ ಪೂಜಾ ಕೈಂಕರ್ಯಗಳು ನೆರವೇರಿದವು. ಬೆಳಗಿನ ಜಾವದಿಂದಲೇ ಪುರುಷ ಮತ್ತು ಮಹಿಳಾ ಭಕ್ತರು ಪ್ರತ್ಯೇಕ ಸಾಲಿನಲ್ಲಿ ನಿಂತು ಶ್ರೀಸ್ವಾಮಿಯ ದರ್ಶನ ಪಡೆದುಕೊಂಡರು.

ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ಉಳಿದ ಮಠಗಳಾದ ತೊಟ್ಟಿಲು ಮಠ, ಗಚ್ಚಿನ ಮಠ, ಮೂರ್ ಕಲ್ಲು ಮಠ, ಹಾಗೂ ಮರಿ ಕೊಟ್ಟೂರೇಶ್ವರ ದೇವಸ್ಥಾನಗಳಲ್ಲಿ ಸಾವಿರಾರು ಭಕ್ತರು ದರ್ಶನ ಪಡೆದುಕೊಂಡರು. ಹಿರೇಮಠ, ಗಚ್ಚಿನ ಮಠ ಹಾಗೂ ಮರಿಕೊಟ್ಟುರೇಶ್ವರ ದೇವಸ್ಥಾನಗಳಲ್ಲಿ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿದ್ದಿತ್ತು. ಬಂದಂತಹ ಭಕ್ತರು ಸ್ವಾಮಿಯ ದರ್ಶನ ಪಡೆದು ಪ್ರಸಾದ ಸ್ವೀಕರಿಸಿ ಪುನೀತರಾದರು. ಅನೇಕ ಭಕ್ತರು ದೀಡು ನಮಸ್ಕಾರದ ಮೂಲಕ ಹರಕೆ ತೀರಿಸಿದರು.

ರಥೋತ್ಸವದ ನಂತರ ಬರುವಂತಹ ಅಮಾವಾಸ್ಯೆ ಇದಾಗಿದ್ದು ರಥೋತ್ಸವಕ್ಕೆ ಬಾರದೆ ಇರುವ ಭಕ್ತರುಗಳು ಅಮಾವಾಸ್ಯೆ ಯಂದು ಶ್ರೀಸ್ವಾಮಿಯ ದರ್ಶನ ಪಡೆದುಕೊಳ್ಳುವುದು ಪದ್ಧತಿಯಾಗಿದೆ. ರಥೋತ್ಸವದ ಧಾರ್ಮಿಕ ಕಾರ್ಯಗಳಲ್ಲಿ ಅಮಾವಾಸ್ಯೆಯು ಕೊನೆಯ ಧಾರ್ಮಿಕ ಕಾರ್ಯವಾಗಿರುತ್ತದೆ. ಹಾಗಾಗಿ ಸಾವಿರಾರು ಭಕ್ತರು ದೇವರ ದರ್ಶನ ಪಡೆದುಕೊಂಡರು. ದೇವಸ್ಥಾನದ ಆವರಣದಲ್ಲಿರುವ ಚೌಡೇಶ್ವರಿ ದೇವಿಗೆ ಉಡಿ ತುಂಬುವುದರ ಮೂಲಕ ಹರಕೆ ತೀರಿಸಿದರು.



ಅದೇ ರೀತಿಯಾಗಿ ಪಂಚಪೀಠಗಳಲ್ಲಿ ಒಂದಾದ ಕೊಟ್ಟೂರು ತಾಲೂಕಿನ ಶ್ರೀಉಜ್ಜಯಿನಿ ಮರುಳಸಿದ್ದೇಶ್ವರ ಸ್ವಾಮಿಯ ಹಾಗೂ ಗೌರ ದೇವಿಯ ದರ್ಶನವನ್ನು ಪಡೆದುಕೊಂಡರು. ಉಜ್ಜೈನಿ ಸದ್ಧರ್ಮ ಸಿಂಹಾಸನಾದೀಶ್ವರ ಸಾವಿರದ ಎಂಟು ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ ದರ್ಶನ ಆಶೀರ್ವಾದವನ್ನು ಪಡೆದುಕೊಂಡರು.

ಪ್ರತಿಭೆ ಗುರುತಿಸುವ ಕೆಲಸವಾಗಲಿ: ಶಿಕ್ಷಕ ಅಶೋಕ

ಹುಣಸಗಿ: ವಿದ್ಯಾರ್ಥಿಗಳು ಸ್ಪಷ್ಟವಾದ ಗುರಿಯನ್ನು ಹೊಂದಿದಾಗ ಮಾತ್ರ ಜೀವನ ಯಶಸ್ಸು ಸಾಧ್ಯ ಎಂದು ಶಿಕ್ಷಕ ಅಶೋಕ ರಾಜನಕೋಳೂರು ಹೇಳಿದರು.

ಪಟ್ಟಣದ ಮೌಲಾನಾ ಆಜಾದ ಮಾದರಿಯ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಾಲಾ ವಾರ್ಷಿಕೋತ್ಸವ ಹಾಗೂ ಹತ್ತನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪ್ರತಿಯೊಬ್ಬ ವಿದ್ಯಾರ್ಥಿಗಳಲ್ಲಿರುವ ವಿಶೇಷ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ಕಾರ್ಯ ಶಿಕ್ಷಕರಿಂದ ಆಗಬೇಕು ಎಂದು ಹೇಳಿದರು.

ಪ್ರಪಂಚದ ವಿವಿಧ ಸಾಧಕರ ಜೀವನ ಶೈಲಿಯನ್ನು ವಿವರಿಸುವ ಮೂಲಕ ಮಕ್ಕಳಿಗೆ ಪ್ರೇರಣೆಯ ನುಡಿಯನ್ನು ನುಡಿದರು.

ಮುಖ್ಯ ಅತಿಥಿ ನಿಂಗಣ್ಣ ಸಾಹು ಬಳಿ ಮಾತನಾಡಿ, ಮಕ್ಕಳು ಸದಾ ಶ್ರದ್ಧಾ, ಭಕ್ತಿಯಿಂದ ವಿದ್ಯಾಭ್ಯಾಸದಲ್ಲಿ ತೊಡಗಬೇಕು. ಪ್ರತಿಯೊಬ್ಬ ಮಗು ಶಿಕ್ಷಣದ ಜೊತೆಗೆ ಸಂಸ್ಕಾರ ಮಾನವೀಯ ಮೌಲ್ಯಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಬದುಕು ಸಾರ್ಥಕ ಆಗುತ್ತದೆ ಎಂದು ಹೇಳಿದರು.



ಶಾಲೆಯ ಮುಖ್ಯ ಗುರು ಮೌಲಾಲಿ ಮಸೂತಿ ಅಧ್ಯಕ್ಷತೆ ವಹಿಸಿದ್ದರು. ನಿಂಗಣ್ಣ ಸಾಹು ಬಳಿ, ಬಾಬು ಹವಲ್ದಾರ, ಅಮೀದ್ ಡೆಕ್ಕನ್, ಮಹಿಬೂಬಸಾಬ ಚೌಧರಿ, ಸಿಬ್ಬಂದಿ ವರ್ಗ, ಪಾಲಕರು, ವಿದ್ಯಾರ್ಥಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಶಿಕ್ಷಕ ರುದ್ರಣ್ಣ ಸ್ವಾಗತಿಸಿದರು. ಸಂಪತಕುಮಾರ ವಂದಿಸಿದರು. ಬೈಲಪ್ಪ ನಾಗನಟಗಿ ನಿರೂಪಿಸಿದರು.

ಕನ್ನಡ ಜಾತ್ಯತೀತ ಭಾಷೆ: ಬರಗೂರು ರಾಮಚಂದ್ರಪ್ಪ

ವಿಜಯನಗರ: ಕನ್ನಡ ಜಾತ್ಯಾತೀತ ಭಾಷೆ. ಎಲ್ಲಾ ಜಾತಿ, ಧರ್ಮದ ಜನರು ಕನ್ನಡ ಸಾಹಿತ್ಯವನ್ನು ಕಟ್ಟುತ್ತಾ ಬಂದಿದ್ದಾರೆ. ಕನ್ನಡ ಸಮಾಜದೊಳಗೆ ಕ್ರಿಯಾಶೀಲರಾಗಿದ್ದಾರೆ. ಆದ್ದರಿಂದ ಕನ್ನಡವನ್ನು ಕೇಂದ್ರವನ್ನಾಗಿಟ್ಟುಕೊಂಡಿರುವ ಮತ್ತು ಸಂಶೋಧನೆಯನ್ನು ಜೀವಾಳವಾಗಿಸಿಕೊಂಡಿರುವ ಕನ್ನಡ ವಿಶ್ವವಿದ್ಯಾಲಯಕ್ಕೆ ಹೆಚ್ಚು ಬೆಂಬಲ ಸಿಗಬೇಕು ಎಂದು ಹಿರಿಯ ವಿದ್ವಾಂಸರು ಮತ್ತು ಸಂಸ್ಕೃತಿ ಚಿಂತಕರಾದ ನಾಡೋಜ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ 34ನೇ ನುಡಿಹಬ್ಬದ ಪ್ರಯುಕ್ತ ಮಂಟಪ ಸಭಾಂಗಣದಲ್ಲಿ ಮಂಗಳವಾರ ಪ್ರಸಾರಾಂಗದಿಂದ ಹಮ್ಮಿಕೊಂಡಿದ್ದ ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇಂದು ಪ್ರಸಾರಾಂಗಗಳು ಭೂತ ಮತ್ತು ಭವಿಷ್ಯದ ಚಿಂತನೆಗಳ ಜೊತೆಗೆ ಹೆಚ್ಚು ಹೆಚ್ಚು ವರ್ತಮಾನದ ಜೊತೆ ಮುಖಾಮುಖಿಯಾಗುವ, ಅನುಸಂಧಾನಗೊಳ್ಳುವ ಪುಸ್ತಕಗಳ ಪ್ರಕಟಣೆಗೆ ಒತ್ತು ನೀಡಬೇಕು. ಇತ್ತೀಚಿಗೆ ವಾಣಿಜ್ಯ, ವಾಸ್ತುಶಿಲ್ಪ, ಫ್ಯಾಶನ್ ತಂತ್ರಜ್ಞಾನ, ಹೊಟೇಲ್ ಮ್ಯಾನೇಜ್‌ಮೆಂಟ್ ಶಿಸ್ತುಗಳು ಮುನ್ನಲೆಯಲ್ಲಿದ್ದು, ಮಾನವಿಕ ಶಿಸ್ತುಗಳನ್ನು ಅಧ್ಯಯನ ಮಾಡುವವರ ಪ್ರಮಾಣ ಶೇ.5ರಷ್ಟಿದೆ. ಮಾನವಿಕ ಜ್ಞಾನ ಶಿಸ್ತುಗಳಿಗೆ ಹಿನ್ನಡೆಯಾಗುತ್ತಿದೆ. ಬದುಕನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಮಾನವಿಕ ಜ್ಞಾನಗಳ ಅಗತ್ಯವಿದೆ. ತಂತ್ರಜ್ಞಾನ ಇಂದು ಜ್ಞಾನವಾಗಿ ಉಳಿದಿಲ್ಲ, ಉದ್ಯಮವಾಗಿ ಹೋಗಿದೆ.



ಮನುಷ್ಯ ಜ್ಞಾನಕ್ಕಿಂತ ತಂತ್ರಜ್ಞಾನ ಮೇಲುಗೈ ಪಡೆದಿದೆ. ತಂತ್ರಜ್ಞಾನವನ್ನು ವಿವೇಕ ಮತ್ತು ಔಚಿತ್ಯಪೂರ್ಣವಾಗಿ ಬಳಸಬೇಕು. ಎಂದಿಗೂ ಮನುಷ್ಯ ಜ್ಞಾನಕ್ಕೆ ಮೊದಲ ಆದ್ಯತೆ ಸಿಗಬೇಕು ಎಂದರು.

ಕನ್ನಡ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಪತಿಗಳಾದ ನಾಡೋಜ ಡಾ. ಚಂದ್ರಶೇಖರ ಕಂಬಾರ ಮಾತನಾಡಿ, ವಿಶ್ವವಿದ್ಯಾಲಯದ ಪ್ರಸಾರಾಂಗದ ಪುಸ್ತಕಗಳನ್ನು ಬಿಡುಗಡೆ ಮಾಡಲು ನನ್ನನ್ನು ಆಹ್ವಾನಿಸಿರುವುದು ನನಗೆ ಖುಷಿ ನೀಡಿದೆ. ವಿಶ್ವವಿದ್ಯಾಲಯಕ್ಕೆ ಒಳಿತಾಗಲಿ ಎಂದು ಶುಭ ಹಾರೈಸಿದರು. ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ, ಪ್ರಸಾರಾಂಗದ ನಿರ್ದೇಶಕ ಡಾ.ಪಿ.ಮಹಾದೇವಯ್ಯ ಮಾತನಾಡಿದರು. ಕುಲಸಚಿವ ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಸಹಾಯಕ ಕುಲಸಚಿವ ಎಂ.ಎಂ.ಶಿವಪ್ರಕಾಶ್, ಪ್ರಕಟಣಾ ಸಹಾಯಕ ಡಾ.ಎಸ್. ಮೋಹನ್, ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರು, ಪ್ರಾಧ್ಯಾಪಕರು ಉಪಸ್ಥಿತರಿದ್ದರು.

ಗಮನ ಸೆಳೆದ ಪರಶುರಾಮ, ಜಮದಗ್ನಿ ಸಂಭಾಷಣೆ

▶ ಪುಷ್ಪವತಿ ಜಿ.ಎಂ.ಬಸಯ್ಯ

ವಿಜಯನಗರ: ಹಂಪಿ ಉತ್ಸವದಲ್ಲಿ ನಡೆದ ಜಮದಗ್ನಿ ನಾಟಕದ ಪರಶುರಾಮ ಮತ್ತು ಜಮದಗ್ನಿ ನಡುವಿನ ಸಂಭಾಷಣೆಯನ್ನು ಎಮ್ಮಿಗನೂರಿನ ಪೀರ್ ಸಾಬ್ ಮತ್ತು ತಂಡ ಅತ್ಯಂತ ಭಾವನಾತ್ಮಕವಾಗಿ ಅಭಿನಯಿಸಿತು. ಪ್ರತಿ ಪಾತ್ರಧಾರಿಗಳು ನೋಡುಗರನ್ನು ಕಟ್ಟಿಹಾಕಿದಲ್ಲದೇ ಹಂಪಿಯ ಕಲ್ಲು ಬಂಡೆಗಳಲ್ಲಿ ಮಾರ್ದನಿಸಿತು. ಒಟ್ಟಾರೆ ಪ್ರೇಕ್ಷಕರನ್ನು ಗಮನಸೆಳೆಯಿತು.



ಅದೇ ರೀತಿಯಾಗಿ 'ಆಚಾರವಿಲ್ಲದ ನಾಲಿಗೆ...' ದಾಸರ ಪದ ಹೊಸಪೇಟೆಯ ವೆಂಕಟಾದ್ರಿ ಭಜನಾ ಮಂಡಳಿ ಮಹಿಳೆಯರ ಬಾಯಿಯಲ್ಲಿ ಕೇಳುವುದು ಸೊಗಸು. ವೇದಿಕೆಯಲ್ಲಿ ಮಧುರ ಭಾವ ಕೆಲ ಹೊತ್ತು ವಿಶ್ರಮಿಸಿತು. ಬಳ್ಳಾರಿಯ ಗಾದಿಲಿಂಗನಗೌಡ ತಂಡ ಅತ್ಯಂತ ಕಡಿಮೆ ಅವಧಿಯಲ್ಲಿ 'ಕುರುಕ್ಷೇತ್ರ' ಯುದ್ಧಕ್ಕೆ ಅರ್ಜುನ, ದುರ್ಯೋಧನ ಶ್ರೀಕೃಷ್ಣನ ಸಹಾಯ ಕೋರುವ ದೃಶ್ಯವನ್ನು ಅಚ್ಚುಕಟ್ಟಾಗಿ ಕಟ್ಟಿಕೊಟ್ಟರು. ಹೊಸಪೇಟೆಯ ಸಹನ ಪಿಂಜಾರ್ ಮತ್ತು ತಂಡದ 'ನೀಲಿ ಹೂ' ನಾಟಕ ಹೊಸ ಚಿಂತನೆಗೆ ನಾಂದಿ ಹಾಡಿತು. ಮಗಿಮಾವಿನಹಳ್ಳಿಯ ಕೆ.ಪಂಪಾಪತಿ ಮತ್ತು ತಂಡದ ಕೋಲಾಟದ ಸದ್ದು ರೇಣುಕಾದೇವಿಯ ಶಿರ ಕಡಿಯುವ ಮುನ್ನ ಕೂಡ್ಲಿಗಿಯ ತನುಜಾ ಮತ್ತು ತಂಡದ ಸುಗಮ ಸಂಗೀತಕ್ಕೆ ಪ್ರೇಕ್ಷಕರು ತಲೆದೂಗಿದರು. ಅಣ್ಣ ಬಸವಣ್ಣನ ದೃಶ್ಯಾವಳಿ, ಶ್ರೀಕೃಷ್ಣ ಪಾರಿಜಾತ ಪ್ರೇಕ್ಷಕರ ಕರತಾಡನ ಗಿಟ್ಟಿಸಿದವು. ರಾಜಶೇಖರ್ ಕೆ.ಸುಜಾತಾ ನಿರೂಪಣೆ ಕಲಾ ಪ್ರದರ್ಶಕ್ಕೆ ಜೀವ ತುಂಬಿತು.

ಫೆ.22ಕ್ಕೆ ಶ್ರೀವಿಶ್ವಾರಾಧ್ಯರ ಭವ್ಯ ರಥೋತ್ಸವ

ಯಾದಗಿರಿ: ಅಣಿಮಾದಿ ಅಷ್ಟಸಿದ್ಧಿ ಪುರುಷ ಶ್ರೀವಿಶ್ವಾರಾಧ್ಯರ ಜಾತ್ರೆಗೆ ಅಬ್ಬೆ ತುಮಕೂರು ಸಜ್ಜುಗೊಳ್ಳುತ್ತಿದೆಯೆಂದು ಮಠದ ಪೀಠಾಧಿಪತಿ ಡಾ.ಗಂಗಾಧರ ಸ್ವಾಮೀಜಿ ಹೇಳಿದರು.

ಮಂಗಳವಾರ ಅಬ್ಬೆತುಮಕೂರಿನ ಅನುಗ್ರಹಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಮಾಧ್ಯಮ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಶ್ರೀವಿಶ್ವಾರಾಧ್ಯರು ಜಾತಿ-ಮತಗಳನ್ನು ಮೀರಿ ನಿಂತ ಮಹಾಂತರು. ಇಂತಹ ವಿಭೂತಿ ಪುರುಷನ ಜಾತ್ರೆ ಇದೆ ಫೆ.22ರಂದು ಜರುಗಲಿದ್ದು ಜಾತ್ರಾ ಮಹೋತ್ಸವದ ಸಿದ್ಧತೆಗಳು ಶ್ರೀಮಠದಲ್ಲಿ ಭರದಿಂದ ಸಾಗಿದ್ದು, ಅನೇಕ ಸೇವಾಧಾರಿಗಳು ವಿವಿಧ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆಂದು ಹೇಳಿದರು.

ಈಗಾಗಲೇ ಶ್ರೀವಿಶ್ವಾರಾಧ್ಯರ ಪುರಾಣ ಪ್ರವಚನ ಶ್ರೀಮಠದಲ್ಲಿ ಪ್ರಾರಂಭಗೊಂಡಿದ್ದು, ಮಲ್ಲಿಕಾರ್ಜುನ ಶಾಸ್ತ್ರಿ ಐನಾಪುರ ಅವರ ಸಾಹಿತ್ಯ ಸಂಗೀತದೊಂದಿಗೆ ನಿರಂತರ 11 ದಿನಗಳ ಕಾಲ ಸಾಗಿ ಫೆ.21 ರಂದು ಮಹಾಮಂಗಲಗೊಳ್ಳುತ್ತದೆ. ಅಂದು ಬೆಳಿಗ್ಗೆ ರಥೋತ್ಸವ ಮಹಾ ಪೂಜೆ ಮತ್ತು ರಥಾಂಗ ಹೋಮವನ್ನು ಶ್ರೀಮಠದ ಪರಮಾಪ್ತ ಭಕ್ತರಾದ ದುಧನಿಯ ಮೇತ್ರೆ ಕುಟುಂಬದವರು ನಡೆಸಿಕೊಡುವರೆಂದು ಹೇಳಿದರು.

ಫೆ.22ರಂದು ಬೆಳಿಗ್ಗೆ ಶ್ರೀ ವಿಶ್ವಾರಾಧ್ಯರ ಗದ್ದುಗೆಗೆ ವಿಶೇಷ ರೂದ್ರಾಭಿಷೇಕವನ್ನು ನೇರವೇರಿಸಲಾಗುವುದು. ಸಂಜೆ 6:15 ಕ್ಕೆ ಶ್ರೀ ವಿಶ್ವಾರಾಧ್ಯರ ರಥೋತ್ಸವ ವೈಭವದಿಂದ ಜರುಗುವುದು. ತರುವಾಯ ರಾತ್ರಿ 8:00 ಗಂಟೆಗೆ ವಿಶಿಷ್ಟವಾದ ಮಾನವ ಧರ್ಮ ಸಮಾವೇಶ ನಡೆಯುವುದು. ಸಮಾವೇಶವನ್ನು ಕಾನೂನು ಮತ್ತು ಸಂಸದಿಯ ವ್ಯವಹಾರಗಳ ಸಚಿವರಾದ ಎಚ್.ಕೆ. ಪಾಟೀಲ್ ಮತ್ತು ಸಾರಿಗೆ ಸಚಿವ ರಾಮಲಿಂಗ ರೆಡ್ಡಿ ಉದ್ಘಾಟಿಸುವರು.



ಸಚಿವರುಗಳಾದ ಶರಣಬಸಪ್ಪ ಗೌಡ ದರ್ಶನಾಪೂರ, ಡಾ.ಶರಣ ಪ್ರಕಾಶ ಪಾಟೀಲ್, ಈಶ್ವರ ಖಂಡ್ರೆ , ಎನ್ .ಎಸ್, ಭೋಸ್ ರಾಜ್ ಮತ್ತು ಶಾಸಕರಾದ ಚನ್ನಾರೆಡ್ಡಿ ಪಾಟೀಲ್ ತುನ್ನೂರ, ಶರಣಗೌಡ ಕಂದಕೂರ ಸೇರಿದಂತೆ ಅನೇಕ ಶಾಸಕರು ಮುಖಂಡರು ಸಾಹಿತಿ ಕಲಾವಿದರು ಪಾಲ್ಗೊಳ್ಳುವರು ಎಂದು ತಿಳಿಸಿದರು.

ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರು, ವಿಶ್ವನಾಥ ರೆಡ್ಡಿ ಮಾ.ಪಾ, ಡಾ.ಸುಭಾಷ್ಚಂದ್ರ ಕೌಲಗಿ, ನರಸಣ್ಣ ಗೌಡ ರಾಯಚೂರು ಸೇರಿದಂತೆ ಇತರರು ಇದ್ದರು.